ಭಾನುವಾರ, ಡಿಸೆಂಬರ್ 31, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 361 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕೌದಿ ನೋಡಲು ಬಣ್ಣಬಣ್ಣ. ಅದನ್ನು ಹೊಲಿಯುವವರ ಸ್ಥಿತಿ ಮಾತ್ರ ಮಂಕು...

2023 ಮರೆಯುವ ಮುನ್ನ... 6
'ರಾಜ್ಯಪಾಲರ ಅಧಿಕಾರಕ್ಕೆ ನಿಯಮ' 9
ಆರು ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
700 ಕ್ವಿಂಟಲ್ ಪಡಿತರ ಅಕ್ಕಿ ವಶ 6
ಕರ್ನಾಟಕಕ್ಕೆ ಮೊದಲ 'ಅಮೃತ್' ರೈಲು 7

ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಅಯೋಧ್ಯೆಯಲ್ಲಿ ರೋಡ್ ಶೋ ನಡೆಸಿ ಜನರತ್ತ ಕೈಬೀಸಿದರು –ಪಿಟಿಐ ಚಿತ್ರ

ಅಯೋಧ್ಯೆ: ಹೊಸ ಶಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಅಯೋಧ್ಯೆ: ಹೂವಿನ ಹಾಸಿಗೆಯಂತೆ ಕಾಣಿಸುತ್ತಿದ್ದ ಅಯೋಧ್ಯೆಯಲ್ಲಿ ಶನಿವಾರ ಹಬ್ಬದ ಸಂಭ್ರಮ ಮನೆಮಾಡಿತ್ತು. ರಾಮಮಂದಿರದ ಉದ್ಘಾಟನೆಗೆ ಸಜ್ಜಾಗುತ್ತಿರುವ ಈ ನಗರದಲ್ಲಿ ಅಭಿವೃದ್ಧಿಯ ಹೊಸ ಪರ್ವಕ್ಕೆ ನಾಂದಿ ಹಾಡಲಿರುವ ವಿವಿಧ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದರು.

ಮರುಅಭಿವೃದ್ಧಿ ಆಗಿರುವ ರೈಲು ನಿಲ್ದಾಣ ಮತ್ತು ಹೊಸದಾಗಿ ನಿರ್ಮಿಸಿರುವ 'ಮಹರ್ಷಿ ವಾಲ್ಮೀಕಿ ವಿಮಾನ ನಿಲ್ದಾಣ' ಉದ್ಘಾಟಿಸಿದ ಪ್ರಧಾನಿ, ಭರ್ಜರಿ ರೋಡ್ ಶೋ ನಡೆಸಿದರು. ಮೋದಿ ಅವರ ಭೇಟಿ, ಜನವರಿ 22ರಂದು ನಡೆಯಲಿರುವ ರಾಮಮಂದಿರ ಉದ್ಘಾಟನಾ ಸಮಾರಂಭದ 'ಪೂರ್ವ-ತಯಾರಿ'ಯಂತೆ ಇತ್ತು.

> **ರಾಮಮಂದಿರ ಉದ್ಘಾಟನೆಯ ದಿನ ನಿಮ್ಮ ನಿಮ್ಮ ಮನೆಗಳಲ್ಲೇ ರಾಮಜ್ಯೋತಿ ಬೆಳಗಿ ದೀಪಾವಳಿ ಆಚರಿಸಿ. ಆ ಸಂಭ್ರಮದ ಕ್ಷಣಕ್ಕೆ ಇಡೀ ದೇಶ ಸಾಕ್ಷಿಯಾಗಬೇಕು**
> **ನರೇಂದ್ರ ಮೋದಿ,** ಪ್ರಧಾನಿ

5B ಪುಟ ನೋಡಿ
ಇನ್ನಷ್ಟು ಸುದ್ದಿಗಳು 7

ಒಳ ಪುಟ
ಮರ ಕಡಿದ ಪ್ರಕರಣ: ವಿಕ್ರಂ ಸಿಂಹ ಬಂಧನ 5B
ಐದು ವರ್ಷದ ಬಳಿಕ ಸಂಸದ ಅನಂತಕುಮಾರ 'ಪ್ರತ್ಯಕ್ಷ' 5

ಚಿನಕುರಳಿ

ಪ್ರಕಾಶ್ ಶೆಟ್ಟಿ

ಚೇತರಿಕೆಗೆ ಕಾಯುತ್ತಿದೆ ಹೆಂಚು

ಒಳನೋಟ

• ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು ಸಮೀಪದ ಕೈಕಂಬದಲ್ಲಿರುವ ಗಣೇಶ್ ಟೈಲ್ಸ್ ಕಾರ್ಖಾನೆಯಲ್ಲಿ ಹೆಂಚು ತಯಾರಿ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಮಂಗಳೂರು: 'ನಾನು ವಾಸವಾಗಿರುವ ಹೆಂಚಿನ ಮನೆ 40 ವರ್ಷಗಳಿಗೂ ಹಳೆಯದು. ಕೆಲ ವರ್ಷಗಳ ಹಿಂದೆ ಹೆಂಚಿನ ಮನೆಯನ್ನು ಕೆಡವಿ ಕಾಂಕ್ರೀಟ್ ಕಟ್ಟಡ ನಿರ್ಮಿಸಿರುವ ಅಕ್ಕಪಕ್ಕದ ಮನೆಯವರು ಈಗ ಸೆಖೆ ತಾಳಲಾಗದೇ ಪರಿತಪಿಸುತ್ತಿದ್ದಾರೆ. ಆರ್‌ಸಿಸಿ ಮನೆಗಳಿಗೆ ಹೋಲಿಸಿದರೆ, ಹೆಂಚಿನ ಮನೆಯೊಳಗೆ ತಾಪ ಬಹಳ ಕಡಿಮೆ.'

'ಚಾವಣಿ ದುರಸ್ತಿಗೆ ಕಾರ್ಮಿಕರು ಸಿಗುವುದಿಲ್ಲ ಎಂಬ ಕೊರತೆ ಬಿಟ್ಟರೆ, ಹೆಂಚಿನ ಮನೆಯೇ ಒಳ್ಳೆಯದು. ಹೊರಗಡೆ ಎಷ್ಟೇ ಉಷ್ಣಾಂಶ ಇದ್ದರೂ ಮನೆಯಲ್ಲಿ ಸದಾ ತಂಪಾಗಿರುಗುತ್ತದೆ...' ಮಂಗಳೂರಿನ ಗೋರಿಗುಡ್ಡೆ ನಿವಾಸಿ ವಿನಾಯಕ, ತಮ್ಮ ಹೆಂಚಿನ ಮನೆಯ ಅನುಕೂಲವನ್ನು ವಿವರಿಸಿದ್ದು ಹೀಗೆ.

ದೃಢತೆಯಲ್ಲಿ ಮಂಗಳೂರು ಹೆಂಚಿನದು ಒಂದು ಕೈ ಮೇಲೆ. ಇದಕ್ಕೆ ಕಾರಣ ಕರಾವಳಿಯಲ್ಲಿ ಲಭಿಸುವ ವಿಶೇಷ ಆವೆಮಣ್ಣು. ಈ ಮಣ್ಣಿನಲ್ಲಿ ಅಂಟಿನ ಅಂಶ ಜಾಸ್ತಿ ಮತ್ತು ಮರಳಿನ ಅಂಶ ಕಡಿಮೆ. ಈ ಮಣ್ಣನ್ನು ಚೆನ್ನಾಗಿ ಹದಗೊಳಿಸಿ ತಯಾರಿಸುವ ಹೆಂಚು ಎಳ್ಳಿನಿತೂ ನೀರನ್ನು ಒಳಗೆ ಬಿಟ್ಟುಕೊಳ್ಳುವುದಿಲ್ಲ. ಹೆಚ್ಚು ಬಾಳಿಕೆ ಬರುತ್ತದೆ ಎಂಬ ಕಾರಣಕ್ಕಾಗಿಯೇ 'ಮಂಗಳೂರು ಹೆಂಚು' ಹೆಸರುವಾಸಿ.

ದೇಶ ವಿದೇಶಗಳಲ್ಲಿ ಕಟ್ಟಡಗಳನ್ನು ತಂಪಾಗಿಡುತ್ತಾ, ಖ್ಯಾತಿಯ ಉತ್ತುಂಗದಲ್ಲಿದ್ದ 'ಮಂಗಳೂರು ಹೆಂಚು' ಉದ್ಯಮ ನಿಧಾನವಾಗಿ 'ನೆಲ'ಕಚ್ಚಿದೆ. ಒಂದೂವರೆ ಶತಮಾನಕ್ಕೂ ಹೆಚ್ಚು ಕಾಲ ಸೂರು ಸೋರದಂತೆ ಕಾಪಾಡುತ್ತಾ ಬಂದಿದ್ದ ಈ ಉದ್ದಿಮೆಯೇ ಈಗ ಸೊರಗಿದೆ.

ನಗರೀಕರಣ, ನಗರಗಳಲ್ಲಿ ಬಹುಮಹಡಿ ಕಟ್ಟಡ, ಅಪಾರ್ಟ್‌ಮೆಂಟ್ ಸಮುಚ್ಚಯದ ಸಂಸ್ಕೃತಿ ಹೆಚ್ಚುತ್ತಿದ್ದಂತೆ ಹೆಂಚು ಬಳಕೆ ಕಡಿಮೆಯಾಗುತ್ತಾಸಾಗಿದೆ. ಹಳ್ಳಿಯ ಜನರಲ್ಲೂ 'ಕಾಂಕ್ರೀಟ್' ಪ್ರೀತಿ ಹೆಚ್ಚಿದಂತೆ ಹೆಂಚಿನ ಬೇಡಿಕೆ ಮತ್ತಷ್ಟು ಕುಸಿಯಿತು. ಮೂರು ದಶಕಗಳ ಈಚೆಗೆ ವಿವಿಧ ಕಾರಣಗಳಿಂದಾಗಿ ಹೆಂಚಿನ ಕಾರ್ಖಾನೆಗಳು ಒಂದೊಂದಾಗಿ ಬಾಗಿಲು ಹಾಕಿವೆ. ಈ ಉದ್ದಿಮೆಯನ್ನೇ ನೆಚ್ಚಿಕೊಂಡಿದ್ದ ಸಾವಿರಾರು ಕಾರ್ಮಿಕರು ಬೇರೆ ಕೆಲಸಗಳತ್ತ ಮುಖ ಮಾಡಿದ್ದಾರೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 5, ಉಡುಪಿ ಜಿಲ್ಲೆಯಲ್ಲಿ 11 ಕಾರ್ಖಾನೆಗಳಷ್ಟೇ ಉಳಿದಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿದ್ದ 16 ಕಾರ್ಖಾನೆಗಳೂ ಮುಚ್ಚಿವೆ. ಬೆರಳೆಣಿಕೆಯಷ್ಟು ಮಾಲೀಕರು ಹೆಂಚಿನ ಜೊತೆಗೆ ಸುಟ್ಟ ಮಣ್ಣಿನ ನೆಲಹಾಸು ಮೊದಲಾದ ಉತ್ಪನ್ನಗಳನ್ನು ತಯಾರಿಸುವ ಮೂಲಕ ತಮ್ಮ ಕಾರ್ಖಾನೆಗಳನ್ನು ಉಳಿಸಿಕೊಂಡಿದ್ದಾರೆ.

> **ಹೆಂಚಿಗೆ ಈಗ ಮತ್ತೆ ಬೇಡಿಕೆ ಹೆಚ್ಚುತ್ತಿದೆ. ಆದರೆ ಕಾರ್ಮಿಕರ ಕೊರತೆ, ಆವೆಮಣ್ಣಿನ ಅಭಾವದಂತಹ ಬಿಕ್ಕಟ್ಟಿನಿಂದಾಗಿ ಕಾರ್ಖಾನೆ ಮುನ್ನಡೆಸುವುದು ಕಷ್ಟ**
> **ಗೋವರ್ಧನ ಶೆಟ್ಟಿ,** ಮಾಲೀಕರು, ಗಣೇಶ್ ಟೈಲ್ಸ್ ಫ್ಯಾಕ್ಟರಿ ಕೈಕಂಬ

8 ನೇ ಪುಟ ನೋಡಿ

BE WITH US GROW WITH US
MSCMCB
Estd. 1968

ದಿ ಮೈಸೂರು ಸಿಲ್ಕ್ ಕ್ಲಾತ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ.6, ಹಾಸ್ಪಿಟಲ್ ರಸ್ತೆ, ಬೆಂಗಳೂರು – 560 053. ದೂರವಾಣಿ: 2225 3389, 2226 8535
ಶಾಖೆ: ನಂ.730, 14ನೇ ಮುಖ್ಯ ರಸ್ತೆ, ಕುಮಾರಸ್ವಾಮಿ ಲೇಔಟ್, ಬೆಂಗಳೂರು–560 111. ದೂ. 2666 1253

ನೂತನ ಹೆಸರಿನ ಬದಲಾವಣೆಯೊಂದಿಗೆ

ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

VASAVI MSCM CO-OPERATIVE BANK LTD.,

GROW TOGETHER

Curtain Raiser Programme

ದಿನಾಂಕ: 31.12.2023, ಭಾನುವಾರ
ಸಮಯ: ಬೆಳಿಗ್ಗೆ 10:30ಕ್ಕೆ

ಸ್ಥಳ: ಸರ್ ಪುಟ್ಟಣ್ಣಚೆಟ್ಟಿ ಪುರಭವನ
ಜೆ.ಸಿ.ರಸ್ತೆ, ಬೆಂಗಳೂರು–560002

ವಾಸವಿ ಠೇವಣಿ ಯೋಜನೆ
9%* ನಿಯಮಿತ ಅವಧಿ ಮಾತ್ರ
*ಷರತ್ತುಗಳು ಅನ್ವಯ

ಘನ ಉಪಸ್ಥಿತರು

ದಿವ್ಯ ಸಾನಿಧ್ಯ :
ಶ್ರೀ ಶ್ರೀ ಶ್ರೀ ಪರಮಪೂಜ್ಯ
ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ
ಶ್ರೀ ವಾಸವಿ ಪೀಠಂ, ಮಲ್ಲೇಶ್ವರಂ, ಬೆಂಗಳೂರು

ಸನ್ಮಾನ್ಯ ಶ್ರೀ ರಾಮಲಿಂಗಾರೆಡ್ಡಿರವರು
ಮಾನ್ಯ ಸಾರಿಗೆ ಮತ್ತು
ಮುಜರಾಯಿ ಖಾತೆ ಸಚಿವರು, ಕರ್ನಾಟಕ ಸರ್ಕಾರ
ಬ್ಯಾಂಕಿನ ನೂತನ ಹೆಸರಿನ ಅನಾವರಣ

ಸನ್ಮಾನ್ಯ ಶ್ರೀ ಕೆ.ಎನ್.ರಾಜಣ್ಣರವರು
ಮಾನ್ಯ ಸಹಕಾರ ಸಚಿವರು
ಕರ್ನಾಟಕ ಸರ್ಕಾರ
ಬ್ಯಾಂಕಿನ ಲಾಂಛನ ಅನಾವರಣ



ಸನ್ಮಾನ್ಯ ಶ್ರೀ ಪಿ.ಸಿ.ಮೋಹನ್‌ರವರು
ಮಾನ್ಯ ಲೋಕಸಭಾ ಸದಸ್ಯರು
ಬೆಂಗಳೂರು ಕೇಂದ್ರ
ನೂತನ ಠೇವಣಿ ಯೋಜನೆ ಅನಾವರಣ

ಸನ್ಮಾನ್ಯ ಶ್ರೀ ತೇಜಸ್ವಿ ಸೂರ್ಯರವರು
ಮಾನ್ಯ ಲೋಕಸಭಾ ಸದಸ್ಯರು
ಬೆಂಗಳೂರು ದಕ್ಷಿಣ
ಮುಖ್ಯ ಅತಿಥಿಗಳು

ಸನ್ಮಾನ್ಯ ಶ್ರೀ ಡಿ.ಎಸ್.ಅರುಣ್‌ರವರು
ಮಾನ್ಯ ವಿಧಾನ ಪರಿಷತ್ ಸದಸ್ಯರು
ಮುಖ್ಯ ಆಹ್ವಾನಿತರು

ಬ್ಯಾಂಕಿನ ಆಡಳಿತ ಮಂಡಳಿ



ಶ್ರೀ ಎನ್.ಎಸ್. ಶ್ರೀನಿವಾಸಮೂರ್ತಿ
ಅಧ್ಯಕ್ಷರು

ಶ್ರೀ ಆರ್.ಪಿ. ರವಿಶಂಕರ್
ಉಪಾಧ್ಯಕ್ಷರು



ಶ್ರೀ ವೈ.ಎಲ್. ಪ್ರಸಾದ್
ನಿರ್ದೇಶಕರು

ಶ್ರೀ ಎನ್.ಆರ್. ಸುರೇಂದ್ರನಾಥ್
ನಿರ್ದೇಶಕರು

ಶ್ರೀ ಜಿ.ಕೆ. ಪ್ರಕಾಶ್
ನಿರ್ದೇಶಕರು

ಶ್ರೀ ಎನ್.ಜಿ. ಶ್ರೀನಿವಾಸ್
ನಿರ್ದೇಶಕರು

ಶ್ರೀ ಕೆ. ಪೋತಣ್ಣ ಶೆಟ್ಟಿ
ನಿರ್ದೇಶಕರು

ಶ್ರೀ ಎ. ವೆಂಕಟೇಶಯ್ಯ ಶೆಟ್ಟಿ
ನಿರ್ದೇಶಕರು

ಶ್ರೀ ಕೆ.ಆರ್. ನರಸಿಂಹಮೂರ್ತಿ
ನಿರ್ದೇಶಕರು

ಶ್ರೀಮತಿ ಸಿ.ಪಿ. ವಿಜಯ
ನಿರ್ದೇಶಕರು

ಶ್ರೀಮತಿ ಗೀತಾ ಮುರಳಿ
ನಿರ್ದೇಶಕರು

ಶ್ರೀ ಜೆ. ರಾಮಕೃಷ್ಣ
ನಿರ್ದೇಶಕರು

ಶ್ರೀ ಬಿ.ಎ. ಕೃಷ್ಣ ಭಗವಾನ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಶ್ರೀ ಸಿ. ಬಾಲಕೃಷ್ಣನ್
ಸಲಹೆಗಾರರು

ಶ್ರೀ ಆರ್.ಎನ್. ಅಶೋಕ್ ಕುಮಾರ್
ಹಿರಿಯ ವ್ಯವಸ್ಥಾಪಕರು

ಶ್ರೀಮತಿ ಬಿ.ಎಂ. ಸರಸ್ವತಿ
ವ್ಯವಸ್ಥಾಪಕರು

ಕಾರ್ಯಕ್ರಮದ ಯಶಸ್ಸಿಗೆ ಶುಭಕೋರುವವರು:

Jana Small Finance Bank
A SCHEDULED COMMERCIAL BANK

N.K. SUBBIAH SETTY & SONS
Renowned Perfumers Since 1932
Agarbathi Manufacturers
4th Floor, NKS PREMIER, 45, Mamulpet, Bengaluru-53

ADVAITH HYUNDAI
Caring for you...always
32, Residency Road, Bengaluru - 560 025

VASAVI CHARITABLE TRUST
Arakere, Bengaluru
K. Pothanna Setty, President | G Nageswara Rao, Secretary | Vasudevaiah Gupta, Treasurer

KSAMCS ESTD 1961
ಕರ್ನಾಟಕ ರಾಜ್ಯ ಅಗರಬತ್ತಿ ತಯಾರಕರ ಸಹಕಾರ ಸಂಘ ನಿ.,
18/3, 1ನೇ ಮುಖ್ಯ ರಸ್ತೆ (ಮಿಷನ್ ರಸ್ತೆ ಹತ್ತಿರ)
ಸಂಪಂಗಿರಾಮನಗರ, ಬೆಂಗಳೂರು–560 027
ದೂ.2222 1468, 4162 2723. e-mail: ksamcs@gmail.com

C.P. VIJAYA
Bhaskar Book Centre
Bhaskar Book Tech
Urban Edge Inc.

YADALAM SILKS
YADALAM SILKS
80/7, C.T. Street, Aruna Market, Bengaluru - 2
Shreyas Complex, 19, GR Lane, S.P. Road, Bengaluru - 560 002

KANDALAA HOUSE OF JEWELLERY
743, 33rd Cross,
10th Main, 4th Block,
Jayanagar,
Bengaluru - 560 011
080 - 41527999
kandalaajewellery@gmail.com

MANJUSHREE
Land Developer & Construction
No.65, Priyanka Apartments, 5th Floor, Devaki Appa Rao Layout,
Yerraianapalya Road, Ramamurthy Nagar, Bengaluru - 560 014
89716 61779 | 82960 60440, Email: ramamurthyr06@gmail.com

Sheshadri Developers
NO. 77, MANJUNATHA LAYOUT,
PHASE -1 RAMAMURTHY NAGAR,
BANGALORE – 560 016

TATTVAM United
Tattvam House 9/2-1, Madras Bank Road,
Opp. SBI Corporate Office, Gate 3, Bengaluru - 560001

MSCM(W) SILK
THE MYSORE SILK CLOTH MERCHANT'S ASSOCIATION (WHOLESALE)
#1, 1/1, 2, Sanjeev Naik Lane,
Avenue Road Cross, Bengaluru - 560 002. **M: 98440 27505**

Mob: 98440 90007 | 81970 90007
Off: 080 23349118/19
Arjun Souhardha Pathina Sahakari Niyamitha
No. 88, 1st Floor, Jeerige Building, 11th Cross
Malleswaram, Bengaluru - 560 003

BRIGADE SECURITY SERVICES
BRIGADE SECURITY SERVICES
9, 8th Cross, 8th Main Road, Malleshwaram, Bengaluru - 560 003
080 23349944, 99805 59796 | Email: brigadeservices@gmail.com

WONDR DIAMONDS
JAYANAGAR +91 93802 31473

SUBIKSHA
SUBIKSHA HABITAT . HALASURU . BANGALORE .
Phone : +918041320561 / +919880241000 . Email : contactus@subiksha.in
- Niche Builder with a tag "Reliable" over two decades
- Building designs with a Blend of Modern and Indian Designs
- Approach with Customer Satisfaction and Support
- A Promise of Quality and Timebound Delivery
- Values Ethical and Professional System

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ.)
ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು–560 009

ಶ್ರೀ ವಾಸವಿ ಎಜುಕೇಷನ್ ಕೋ-ಆಪರೇಟಿವ್ ಸೊಸೈಟಿ ಲಿ.,
ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು–560 009

ಸರ್ವರಿಗೂ ಆದರದ ಸ್ವಾಗತ

'ಕುವೆಂಪು, ರಾಜ್ ಕನ್ನಡದ ಅಸ್ಮಿತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುವೆಂಪು ಮತ್ತು ರಾಜ್‌ಕುಮಾರ್ ಅವರು ಕನ್ನಡದ ಅಸ್ಮಿತೆ' ಎಂದು ವಿಮರ್ಶಕ ಎನ್. ವಿದ್ಯಾಶಂಕರ್ ಹೇಳಿದರು.

ಪ್ರೀತಿ ಪುಸ್ತಕ ಪ್ರಕಾಶನ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿ.ವಿ. ಆನಂದಮೂರ್ತಿ ಅವರು ಸಂಪಾದಿಸಿದ 'ಡಾ.ರಾಜ್‌ಕುಮಾರ್ ನಾಡು ನುಡಿಯ ಅಸ್ಮಿತೆ' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕಥೆ, ಕಾದಂಬರಿ, ಕಾವ್ಯಗಳ ಮೂಲಕ ಕುವೆಂಪು ಅವರು ವಿಶ್ವಮಾನವ ಸಂದೇಶ ಸಾರಿದರೆ, ವರನಟ ರಾಜ್‌ಕುಮಾರ್ ಅವರು ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಕಾದಂಬರಿ ಆಧಾರಿತ ಚಿತ್ರಗಳಲ್ಲಿನ ನಟನೆ ಮೂಲಕ ಕನ್ನಡದ ಅಸ್ಮಿತೆಯನ್ನು ಪರದೆಯ ಮೂಲಕ ಪ್ರಸ್ತುತಪಡಿಸಿದ್ದಾರೆ. ಆದ್ದರಿಂದ, ರಾಜ್‌ಕುಮಾರ್ ಅವರ ಕನ್ನಡ ಅಸ್ಮಿತೆಯ ಬಗ್ಗೆ ಚರ್ಚೆ ಆಗಬೇಕು' ಎಂದರು.

'ಕನ್ನಡ ಮಣ್ಣಿಗೆ ಒಂದು ಉಪ ನಾಗರಿಕತೆ ಇದ್ದು, ಅದನ್ನು ರಾಜ್‌ಕುಮಾರ್ ಅವರು ಸಿನಿಮಾಗಳ ಮೂಲಕ ಪ್ರಸ್ತುತಪಡಿಸಿದ್ದಾರೆ. ವೈವಿಧ್ಯ ಸಿನಿಮಾಗಳಲ್ಲಿ ನಟಿಸುವ ಮೂಲಕ ರಾಜ್‌ಕುಮಾರ್ ಅವರು ಇಡೀ ಕನ್ನಡ ನಾಡಿನ ಚರಿತ್ರೆ ಕಟ್ಟಿಕೊಟ್ಟಿದ್ದಾರೆ. ರಣಧೀರ ಕಂಠೀರವ, ಬಬ್ರುವಾಹನ, ಭಕ್ತಕುಂಬಾರ, ಮಯೂರ ಸೇರಿದಂತೆ ಹಲವಾರು ಪೌರಾಣಿಕ ಮತ್ತು ಭಕ್ತಿ ಪಾತ್ರಗಳಲ್ಲಿ ನಟಿಸಿದ್ದಾರೆ. ಎಲ್ಲ ವರ್ಗದ ಜನರ ಮನಸ್ಸನ್ನು ಗೆದ್ದಿದ್ದಾರೆ' ಎಂದರು.

ಪ್ರೀತಿ ಪ್ರಕಾಶನದ ಬಿ.ಎಸ್. ಮಧುಮತಿ, ಚಿತ್ರ ನಿರ್ಮಾಪಕಿಯರು ಹಾಗೂ ರಾಜ್‌ಕುಮಾರ್ ಅವರ ಪುತ್ರಿಯರಾದ ಪೂರ್ಣಿಮಾ ರಾಮ್ ಕುಮಾರ್, ಲಕ್ಷ್ಮೀ ಗೋವಿಂದರಾಜು, ಭಾಷಾ ವಿಜ್ಞಾನಿ ಕೆ.ವಿ. ನಾರಾಯಣ, ಪುಸ್ತಕದ ಸಂಪಾದಕ ಜಿ.ವಿ. ಆನಂದಮೂರ್ತಿ ಭಾಗವಹಿಸಿದ್ದರು.

ಜಿ.ವಿ. ಆನಂದಮೂರ್ತಿ ಅವರು ಸಂಪಾದಿಸಿದ 'ಡಾ.ರಾಜ್‌ಕುಮಾರ್ ನಾಡು ನುಡಿಯ ಅಸ್ಮಿತೆ' ಪುಸ್ತಕವನ್ನು ಶನಿವಾರ ಬಿಡುಗಡೆಗೊಳಿಸಲಾಯಿತು. (ಎಡದಿಂದ) ಬಿ.ಎಸ್‌ ಮಧುಮತಿ, ಪೂರ್ಣಿಮಾ ರಾಮ್‌ಕುಮಾರ್‌, ಲಕ್ಷ್ಮೀ ಗೋವಿಂದರಾಜು, ಕೆ.ವಿ. ನಾರಾಯಣ, ಎನ್‌ ವಿದ್ಯಾಶಂಕರ್ ಭಾಗವಹಿಸಿದ್ದರು.

ಪುಸ್ತಕ ಪರಿಚಯ

ಪುಸ್ತಕ:	ಡಾ.ರಾಜ್‌ಕುಮಾರ್ ನಾಡು ನುಡಿಯ ಅಸ್ಮಿತೆ
ಸಂಪಾದಕ:	ಜಿ.ವಿ.ಆನಂದಮೂರ್ತಿ
ಪ್ರಕಾಶನ:	ಪ್ರೀತಿ ಪುಸ್ತಕ ಪ್ರಕಾಶನ
ಪುಟಗಳು:	348
ಬೆಲೆ:	₹400

RAMRAJ COTTON SHOWROOMS
BANGALORE : KG Road • Shivaji Nagar • Ulsoor • Gandhi Bazar • Malleshwaram • Jayanagar : 30th Cross Road SS Plaza,10th B Main Road • Koramangala • Rajaji Nagar • R.T. Nagar • Vijayanagar • Banashankari • Yeshwanthpur Yelachenahalli • Uttarahalli • HSR Layout • Ramamurthy Nagar • J.P. Nagar • RR Nagar • Marathahalli • KR Puram Kengeri • Hesaragatta • Yelhanka • Nelamangala • Devanahalli • Chintamani • Kanakapura • Ramnagara • Tumkur
Available at Ramraj Cotton Showrooms and All Leading Textile Shops | shop online @ www.ramrajcotton.in

ನಗರದಲ್ಲಿ ಇಂದು

ಸೂರ್ಯ ನಾದನಮನ: ಅತಿಥಿಗಳು: ಎಂ.ಎಸ್. ಶೀಲಾ, ಆರ್.ವಿ. ರಾಘವೇಂದ್ರ, ಆಯೋಜನೆ: ಸೂರ್ಯ ಗ್ಲೋಬಲ್ ಮ್ಯೂಸಿಕ್ ಅಕಾಡೆಮಿ, ಗಾಯನ: ಸಾರಂಗ್ ಭಾಗವತ್, ಪಿಟೀಲು: ಪ್ರಣವಿ ಗುರುಪ್ರಸನ್ನ, ಮೃದಂಗ: ಅಪ್ರಮೇಯ ಹೊಸಹಳ್ಳಿ, ಸ್ಥಳ: ಅಕ್ಷರಂ ಸಭಾಂಗಣ, ಸಂಸ್ಕೃತ ಭಾರತಿ, ಗಿರಿನಗರ, ಬೆಳಿಗ್ಗೆ 9ರಿಂದ

ಡಾ.ಕೆ.ಪಿ. ಪುತ್ತುರಾಯ ಅವರ 'ಪಾದ ಪಂಚಾಮೃತ' ಪುಸ್ತಕ ಬಿಡುಗಡೆ: ವಿಶ್ವೇಶ್ವರ್ ಭಟ್, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಬಸವರಾಜ ಹೊರಟ್ಟಿ, ಸಾನ್ನಿಧ್ಯ: ವಿದ್ಯಾಪ್ರಸನ್ನ ತೀರ್ಥ ಶ್ರೀಪಾದ ಸ್ವಾಮೀಜಿ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ರಸ್ತೆ, ಬೆಳಿಗ್ಗೆ 9.30


ಬಸವರಾಜ ಹೊರಟ್ಟಿ

'ಕಾವ್ಯಾನಂದ ಪುರಸ್ಕಾರ' ಪ್ರದಾನ: ಧರಣಿದೇವಿ ಮಾಲಗತ್ತಿ, ಪುರಸ್ಕೃತರು: ಜ.ನಾ. ತೇಜಶ್ರೀ, ಆಯೋಜನೆ: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ದಿನದರ್ಶಿಕೆ ಬಿಡುಗಡೆ, ಕುಂಚಿಟಿಗ ರತ್ನ, ಕುಂಚಶ್ರೀ, ಕುಂಚಿಟಿಗ ಶಿರೋಮಣಿ, ಕುಂಚಿಟಿಗ ಆದರ್ಶ ದಂಪತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮರಳೀಧರ್ ಹಾಲಪ್ಪ, ಅತಿಥಿಗಳು: ಕಸವನಹಳ್ಳಿ ರಮೇಶ್, ತುಂಗೋಟಿ ರಾಮಣ್ಣ, ಹನುಮಂತಯ್ಯ, ಆಯೋಜನೆ: ವಿಶ್ವ ಕುಂಚಿಟಿಗರ ಪರಿಷತ್, ಸ್ಥಳ: ಬಿ.ಎನ್.ಎಸ್. ಪಾರ್ಟಿ ಹಾಲ್, ಬಸವನಗುಡಿ, ಬೆಳಿಗ್ಗೆ 10.30

ಟಿ.ಎಸ್. ಶ್ರವಣಕುಮಾರಿ ಅವರ 'ಬೆಳಕು ಹರಿವ ಮುನ್ನ', ಗುರುರಾಜ ಶಾಸ್ತ್ರಿ ಅವರ 'ಬಾ ಗುರು ಪ್ರವಾಸ ಹೋಗೋಣ', ಕತೆ ಕೋಸಂಬರಿ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಗಜಾನನ ಶರ್ಮ, ಪುಸ್ತಕಗಳ ಪರಿಚಯ: ಜಿ.ವಿ. ಅರುಣ, ಎಂ.ಎಸ್. ನರಸಿಂಹಮೂರ್ತಿ, ಶಶಿಧರ ಹಾಲಾಡಿ, ಉಪಸ್ಥಿತಿ: ಪರಶಿವಪ್ಪ ಕೆ.ಬಿ., ಅಧ್ಯಕ್ಷತೆ: ಬೆಂ.ಶ್ರೀ ರವಿಂದ್ರ, ಆಯೋಜನೆ: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ವಾಸವಿ ಎಂಎಸ್‌ಸಿಎಂ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಉದ್ಘಾಟನೆ: ಸಾನ್ನಿಧ್ಯ: ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಬ್ಯಾಂಕ್ ಹೊಸ ಲಾಂಛನ ಬಿಡುಗಡೆ: ಕೆ.ಎನ್. ರಾಜಣ್ಣ, ಅತಿಥಿಗಳು: ಪಿ.ಸಿ. ಮೋಹನ್, ಡಿ.ಎಸ್. ಅರುಣ, ಅಧ್ಯಕ್ಷತೆ: ಎನ್.ಎಸ್. ಶ್ರೀನಿವಾಸಮೂರ್ತಿ, ಆಯೋಜನೆ: ದಿ ಮೈಸೂರು ಸಿಲ್ಕ್ ಕ್ಲಾತ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ: ಟೌನ್‌ಹಾಲ್, ಜೆ.ಸಿ. ರಸ್ತೆ, ಬೆಳಿಗ್ಗೆ 11.30

'ವರ್ಷದ ವ್ಯಕ್ತಿ, ವಿಶೇಷ ಪ್ರಶಸ್ತಿ ಹಾಗೂ ವಾರ್ಷಿಕ ಪ್ರಶಸ್ತಿ'ಗಳ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಶಸ್ತಿ ಪ್ರದಾನ: ಶಿವರಾಜ ಪಾಟೀಲ, ಅತಿಥಿ: ಜಮೀರ್ ಅಹಮದ್ ಖಾನ್, ವರ್ಷದ ವ್ಯಕ್ತಿ: ಡಿ.ಕೆ. ಶಿವಕುಮಾರ್, ವಿಶೇಷ ಪ್ರಶಸ್ತಿ ಪುರಸ್ಕೃತರು: ಶಾಮನೂರ ಶಿವಶಂಕರಪ್ಪ, ಆಯೋಜನೆ ಮತ್ತು ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ಭೀಮಾ ಕೋರೆಗಾಂವ್ ವಿಜಯೋತ್ಸವ–2024: ಉದ್ಘಾಟನೆ: ಜಿ. ಪರಮೇಶ್ವರ, ಅತಿಥಿಗಳು: ಎಲ್. ಹನುಮಂತಯ್ಯ, ಹೊನ್ನುಸಿದ್ಧಾರ್ಥ, ಜಿ.ಸಿ. ವೆಂಕಟರಮಣಪ್ಪ, ವಿಜಯಕುಮಾರ್, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, 'ಭೀಮಾ–ಕೋರೆಗಾಂವ್ ಯುದ್ಧ ವಿಜಯೋತ್ಸವ–ಚರಿತ್ರೆ ಒಂದು ಹಿನ್ನೋಟ'ದ ಗೋಷ್ಠಿ ಮಂಡನೆ: ಸುಬ್ಬು ಹೊಲೆಯಾರ್, ಅಧ್ಯಕ್ಷತೆ: ನರಸಿಂಹಪ್ಪ, ನಿರೂಪಣೆ: ಕಾಂತರಾಜು, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ನಾಗಸೇನಾ ವಿದ್ಯಾಲಯ ಮೈದಾನ, ಸದಾಶಿವನಗರ, ಮಧ್ಯಾಹ್ನ 12

ಪರಮೇಶ್ವರ

ಅಯ್ಯಪ್ಪಸ್ವಾಮಿಗೆ ಪಂಚಾಮೃತ ಅಭಿಷೇಕ: ಚಂಡೆ ಸೇವೆ, ನಾದಸ್ವರ ಸೇವೆ, ಮಹಾಮಂಗಳಾರತಿ ಬೆಳಿಗ್ಗೆ 11ಕ್ಕೆ, ಅನ್ನದಾನ ಮಧ್ಯಾಹ್ನ 12ಕ್ಕೆ, ಭಕ್ತಿಗೀತೆಗಳ ಸಂಗೀತ ಸಂಭ್ರಮ ಸಂಜೆ 6.30ಕ್ಕೆ, ಆಯೋಜನೆ: ಅಯ್ಯಪ್ಪಸ್ವಾಮಿ ಭಕ್ತ ಮಂಡಲಿ, ಸ್ಥಳ: ಮುಕ್ಕಡಶೆಟ್ಟಿ ರಾಮಣ್ಣಗಲ್ಲಿ, ಬಳೇಪೇಟೆ

'ಭಾವ ಲಹರಿ' ಸಂಗೀತ ಮತ್ತು ಹಾಸ್ಯ ಕಾರ್ಯಕ್ರಮ: ಗಾಯನ: ಸೀಮಾ ಕಸ್ತೂರಿ, ಹಾಸ್ಯ: ಕೃಷ್ಣೇಗೌಡ, ಆಯೋಜನೆ: ಪುಲಿಕೇಶಿ ಕಸ್ತೂರಿ, ಪ್ರಸನ್ನ ಕಸ್ತೂರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

'ಮುಳುಗದಿರಲಿ ಬದುಕು' ನಾಟಕ ಪ್ರದರ್ಶನ: ನಿರ್ದೇಶನ: ನಾಗೇಂದ್ರ ಪ್ರಸಾದ್, ಸಂಗೀತ: ಪ್ರವೀಣ್ ಕುಮಾರ್, ನಾಟಕದ ರೂಪಾಂತರ: ಕೃಷ್ಣಕುಮಾರ್ ಯಾದವ್, ಅತಿಥಿಗಳು: ಗಂಡಸಿ ಸದಾನಂದಸ್ವಾಮಿ, ರಾ.ಸು. ವೆಂಕಟೇಶ್, ಮಲ್ಲಿಕಾರ್ಜುನ್ ಮಹಾಮನೆ, ಲಕ್ಷ್ಮೀಭಟ್, ಆಯೋಜನೆ: ಉದ್ಭವ ಕಲಾವಿದರು, ಸ್ಥಳ: ಮಾತಿನ ಮನೆ, ಚಾಮರಾಜಪೇಟೆ, ಸಂಜೆ 5

'ಹೋಂ ರೂಲು' ನಾಟಕ, ಕೈಲಾಸಂ ಝಲಕ್ ಪ್ರದರ್ಶನ: ನಿರ್ದೇಶನ: ವೈ.ವಿ. ಗುಂಡೂರಾವ್, ಆಯೋಜನೆ: ಅಂತರಂಗ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

'ಮೂಕಜ್ಜಿಯ ಕನಸುಗಳು' ನಾಟಕ ಪ್ರದರ್ಶನ: ರಚನೆ: ಕೆ. ಶಿವರಾಮ ಕಾರಂತ, ರಂಗರೂಪ: ಎಸ್. ರಾಮಮೂರ್ತಿ, ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಮಧ್ಯಾಹ್ನ 3.30, ಸಂಜೆ 7.30

'ಸಾಹಿತ್ಯ ಬಂಧನ' ಆರು ಪುಸ್ತಕಗಳ ಬಿಡುಗಡೆ: ಅತಿಥಿಗಳು: ಲಕ್ಷ್ಮೀಶ ತೋಳ್ಪಾಡಿ, ಕುಂ. ವೀರಭದ್ರಪ್ಪ, ಸಾಹಿತ್ಯ ಸಂವಾದ: ಜೋಗಿ, ಗೌರೀಶ್ ಅಕ್ಕಿ, ಆಶಯ ನುಡಿ: ವೀರಕಪುತ್ರ ಶ್ರೀನಿವಾಸ, ಪುಸ್ತಕ ಪರಿಚಯ: ಅನಂತ ಕುಣಿಗಲ್, ಆಯೋಜನೆ: ವೀರಲೋಕ ಪುಸ್ತಕ, ಸ್ಥಳ: ಲಾ ಮಾರ್ವೆಲ್ಲಾ ಹೋಟೆಲ್, ಸೌತ್‌ಎಂಡ್ ಸರ್ಕಲ್, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಯಲಹಂಕದ ಮಾಲ್ ಆಫ್ ಏಷ್ಯಾ ಬಂದ್‌ಗೆ ಆದೇಶ

ಬೆಂಗಳೂರು: ಯಲಹಂಕ ಹೋಬಳಿ ಬ್ಯಾಟರಾಯನಪುರದ (ಬಳ್ಳಾರಿ ರಸ್ತೆ) ಮಾಲ್ ಆಫ್ ಏಷ್ಯಾವನ್ನು 16 ದಿನಗಳ ಬಂದ್ ಮಾಡುವಂತೆ ನಗರ ಪೊಲೀಸ್ ಕಮಿಷನರ್ ಆದೇಶಿಸಿದ್ದಾರೆ. ಡಿ.31ರಿಂದ ಜನವರಿ 15ರವರೆಗೆ ಸಾರ್ವಜನಿಕರಿಗೆ ಪ್ರವೇಶ ನಿಷೇಧಿಸಲಾಗಿದೆ.

ಇತ್ತೀಚೆಗಷ್ಟೇ ನಾಮಫಲಕದಲ್ಲಿ ಶೇ 60ರಷ್ಟು ಕನ್ನಡ ಅಕ್ಷರ ಬಳಸದ ಆರೋಪದ ಮೇಲೆ ಫೋನಿಕ್ಸ್ ಮಾಲ್ ಆಫ್ ಏಷ್ಯಾ ವಿರುದ್ಧ ಕರವೇ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು. ಮಾಲ್‌ಗೆ ನುಗ್ಗಿ ಗಲಾಟೆ ನಡೆಸಲಾಗಿತ್ತು. ಈ ಬೆನ್ನಲ್ಲೇ ಸಾರ್ವಜನಿಕ ಶಾಂತಿ ಕಾಪಾಡುವುದು ಹಾಗೂ ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಿಸುವ ದೃಷ್ಟಿಯಿಂದ ಮಾಲ್‌ನಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಈ ಆದೇಶ ಹೊರಡಿಸಿದ್ದಾರೆ.

ಮಾಲ್ ವಿರುದ್ಧ ದೂರು: ಅಲ್ಲದೇ ಮಾಲ್ ಆಫ್ ಏಷ್ಯಾ ವಿರುದ್ಧ ಕೆಲವು ದಿನಗಳ ಹಿಂದೆ ಸಾರ್ವಜನಿಕರು ಪ್ರತಿಭಟನೆ ನಡೆಸಿದ್ದರು. ಮಾಲ್‌ನಿಂದಾಗಿ ಈ ಭಾಗದಲ್ಲಿ ಸುಗಮ ಸಂಚಾರಕ್ಕೆ ಅವಕಾಶವಾಗುತ್ತಿಲ್ಲ ಅಲ್ಲದೆ, ಆಂಬುಲೆನ್ಸ್‌ಗಳ ಓಡಾಟಕ್ಕೂ ತೊಂದರೆಯಿದೆ. ವಿಮಾನ ನಿಲ್ದಾಣಕ್ಕೆ ಹೋಗುವವರಿಗೂ ತೊಂದರೆ ಯಾಗುತ್ತಿದೆ ಎಂದು ಹಲವು ದೂರುಗಳು ಬಂದಿದ್ದವು. ಈ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರು ಭೇಟಿ ನೀಡಿ ಪರಿಶೀಲಿಸಿದ್ದರು. ಆಗ ಮಾಲ್‌ನಲ್ಲಿ ಹಲವು ನ್ಯೂನತೆಗಳು ಕಂಡು ಬಂದಿದ್ದವು. ವಾಹನಗಳ ನಿಲುಗಡೆಗೆ ಸರಿಯಾದ ಕ್ರಮ ತೆಗೆದುಕೊಂಡಿರಲಿಲ್ಲ. ಸುರಕ್ಷತಾ ಕ್ರಮ ಸಹ ಇಲ್ಲದಿರುವುದು ಕಂಡುಬಂದಿತ್ತು.

ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ಹಾಕಲಾಗಿದೆ. ಆದರೆ, ಮಾಲ್ ಸಿಬ್ಬಂದಿ ಹಾಗೂ ವಾಣಿಜ್ಯ ಮಳಿಗೆಗಳ ಮಾಲೀಕರು ಹಾಗೂ ಕೆಲಸಗಾರರಿಗೆ ಮಾತ್ರ ಅವಕಾಶ ನೀಡಲಾಗಿದೆ. ಮುಂದಿನ 16 ದಿನಗಳ ಕಾಲ ಮಾಲ್‌ಗೆ ಪೊಲೀಸ್ ಭದ್ರತೆ ನಿಯೋಜಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಜ.22ಕ್ಕೆ ಮತದಾರರ ಅಂತಿಮ ಪಟ್ಟಿ

ಬೆಂಗಳೂರು: ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಅವಧಿ ವಿಸ್ತರಿಸಲಾಗಿದ್ದು, ಜನವರಿ 22ಕ್ಕೆ ಮತದಾರರ ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದ ಚುನಾವಣೆಯ ಅಂತಿಮ ಮತದಾರರ ಪಟ್ಟಿ ಪ್ರಕಟಣೆ ನಂತರ ರಾಜಕೀಯ ಪ್ರತಿನಿಧಿಗಳ ಜೊತೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

'ಮುಂಬರುವ ಲೋಕಸಭಾ ಚುನಾವಣೆ ಸಂಬಂಧಿಸಿದಂತೆ ನಮೂನೆಗಳನ್ನು ಸಲ್ಲಿಸಲು, ತಿದ್ದುಪಡಿ ಮಾಡುವ ಅವಧಿಯನ್ನು 2024ರ ಜನರಿ 12ಕ್ಕೆ ವಿಸ್ತರಿಸಲಾಗಿದೆ. ಈ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು' ಎಂದು ಜಿಲ್ಲಾ ಚುನಾವಣಾ ಅಧಿಕಾರಿ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚಿಸಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ಉಪಸ್ಥಿತರಿದ್ದರು.

Mfg.: Homoeo Laboratories, Pune.
Email : homoeolab@gmail.com
SS:B.R.Ent, Mumbai.
Mobile 8652756688 / 7219731618
Kolar Pharma, Kolar : 9449955077
Nagaraj Chik, Chikkaballapur : 8867863277
Adarsh Pharma, Ramdurga : 9448466111
Mahant Pharma, Ramdurga : 9845375065
Krishna Distributors, Tumur : 8162272616
Dels Enterprises, Mangalore : 9341622675
Deepa Enterprises, Udupi : 9448978941
Chetana Pharma, Chikmangalur : 8296987456
Manju Durg, Mandya : 9141470143
Deepak Pharma Agency, Mysore : 988672264
For Product information contact : Bhargavi Bhatt : 6363477044

ಪ್ರವಾಸಿ ತಾಣಗಳ ಪ್ರವೇಶ ನಿರ್ಬಂಧ

ದೇವನಹಳ್ಳಿ: ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಶಿವಗಂಗೆ, ಸಿದ್ದರಬೆಟ್ಟ, ಮಾಕಳಿದುರ್ಗ, ಆವತಿ ಬೆಟ್ಟ, ನಂದಿಬೆಟ್ಟಕ್ಕೆ ಜನವರಿ 1 ಮಧ್ಯರಾತ್ರಿ 12ರವರೆಗೆ ಪ್ರವೇಶ ನಿಷೇಧಿಸಲಾಗಿದೆ ಎಂದು ಬೆಂ.ಗ್ರಾ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

15ನೇ ವಾರ್ಷಿಕ ಚಿರಸ್ಮರಣೆ

ಶ್ರೀ ಕೆ ಬಿ ಜಯರಾಮ ರೆಡ್ಡಿ
(ಸ್ಥಾಪಕರು: ಜೆ.ಆರ್ ಗ್ರೂಪ್ ಆಫ್ ಕಂಪನೀಸ್)
23-03-1943 - 31-12-2008

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷವಾಯಿತು, ನಿಮ್ಮ ನೆನಪು ನಮ್ಮಲ್ಲಿ ಶಾಶ್ವತವಾಗಿದೆ, ನಿಮ್ಮ ಆಶೀರ್ವಾದವು ನಮ್ಮ ಜೀವನದ ದಾರಿದೀಪವಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುವ

ಧರ್ಮಪತ್ನಿ: ಶ್ರೀಮತಿ ರತ್ನಮ್ಮ,
ಡಾ|| ಕೆ ಜೆ ಪುರುಷೋತ್ತಮ ಮತ್ತು ಕುಟುಂಬದವರು,
ಡಾ|| ಕೆ ಜೆ ಚಂದ್ರಶೇಖರ್ ಮತ್ತು ಕುಟುಂಬದವರು,
ದಿ. ಡಾ|| ಎಸ್ ಆರ್ ನಾಗರಾಜ್ ಕುಟುಂಬದವರು,
ಬಂಧುಗಳು ಮತ್ತು ಸ್ನೇಹಿತರು

BLOCKBUSTER FAMILY ENTERTAINMENT



BOOK YOUR TICKETS NOW

PVR - INOX CINEMAS {DIRECTORS CUT, FORUM REX WALK | NEXUS FORUM MALL, KORMANGALA | ORION MALL, YESHWANTPUR | VAISHNAVI SAPPHIRE MALL, TUMKUR ROAD | VEGA CITY MALL | MSR REGALIA | PHOENIX MARKET CITY, K.R. PURAM | BHARTIYA CITY | GT WORLD MALL | AURA PARK SQUARE, WHITEFIELD ROAD | SPIRIT MALL | VR MALL, WHITEFIELD ROAD | GLOBAL MALL, NAYANDALLI | UPTOWN OMR MALL | SUPERPLEX FALCON CITY | MANTRI MALL | CENTRAL MALL, J.P.NAGAR | GARUDA MALL | SWAGATH MALL | FORUM NEIGHBOURHOOD MALL | BROOKFIELD MALL | LIDO | GALLERIA MALL, RMZ YELAHANKA, | GARUDA, YELAHANKA | SBR HORIZON, SEEGEHALLI} | CINEPOLIS CINEMAS {ROYAL MEENAKSHI MALL | ETA MALL, BINNY MILL | EAST ORION MALL | SHANTINIKETAN | SJR SPECTRUM MALL | LULU MALL (TRD) | LULU MALL (VIP)} | GOPALAN CINEMAS {ARCADE MALL | LEGACY MALL | GRAND MALL | SIGNATURE MALL | INNOVATION MALL} | INNOVATIVE {MARATHHALLI} | CINEPHILE {HSR LAYOUT} | ROCKLINE CINEMA MALL {JALAHALLI CROSS} | MIRAJ CINEMAS {SUNKADAKATTE} | CINE GALAXY {SURATKAL} | MOVIE TIME {DAVANGERE | BELLARY} | SWAGATH SHANKARNAG {M.G.RAOD} | AMRUTH THEATRE {LINGARAJPURAM} | GALAXY PARADISE {HONGASANDRA} | NETHRAVATHI THEATRE {BHADRAVATHI} | SMART MOVIES {CHITRADURGA} | R R THEATRE {BELLARY} | BALAJI THEATRE {TAVAREKERE} | SHARADA THEATRE {SP ROAD} | PVR - INOX CINEMAS {FIZA MALL, MANGALORE | FORUM MALL, MYSORE | GARUDA MALL, MYSORE | CENTRAL, MANIPAL | SATYAM MALL, MYSORE | S MALL, TUMKUR | CENTRO MALL MYSORE} | CINEPOLIS {CITY CENTRE MALL, MANGALORE} | BHARATH CINEMAS {MANGALORE | MANIPAL | KUNDAPUR | PADUBIDRE | PUTTUR | SHIMOGA} | DRC CINEMAS {MYSORE} | VISION CINEMAS {MYSORE}.

FARNAZ

ಬಿಎಂಟಿಸಿ 20 ಬಸ್‌ಗಳ ಪ್ರಾಯೋಗಿಕ ಸಂಚಾರ • ಎರಡು ಎಂಜಿನ್‌ಗಳು ಪ್ರಯೋಗ ಶಾಲೆಗೆ

ಮಿಥೆನಾಲ್ ಪ್ರಯೋಗ: ಕೇಂದ್ರಕ್ಕೆ ವರದಿ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ದೇಶದಲ್ಲಿಯೇ ಪ್ರಥಮ ಬಾರಿಗೆ ಬಿಎಂಟಿಸಿ ಬಸ್‌ಗಳಲ್ಲಿ ಮಿಥೆನಾಲ್ ಮಿಶ್ರಿತ ಇಂಧನವನ್ನು ಬಳಕೆ ಮಾಡಿದ ಪ್ರಯೋಗ ಯಶಸ್ವಿಯಾಗಿದೆ.

ಈ ಪ್ರಯೋಗದ ವರದಿಯನ್ನು ನೀತಿ ಆಯೋಗವು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯಕ್ಕೆ ಸಲ್ಲಿಸಿದೆ.

ಡೀಸೆಲ್‌ಗೆ ಇರುವ ಬೇಡಿಕೆಯನ್ನು ಕಡಿಮೆಗೊಳಿಸಲು, ವಾಯುಮಾಲಿನ್ಯವನ್ನು ತಡೆಯಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯದ ಸೂಚನೆಯಂತೆ 2016ರಲ್ಲಿ ನೀತಿ ಆಯೋಗವು ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗಕ್ಕೆ ಮುಂದಾಯಿತು. ಸತತ 7 ವರ್ಷ ವಿವಿಧ ವಾಹನಗಳಲ್ಲಿ ಪ್ರಯೋಗ ನಡೆಸಿತು. ಸಕಾರಾತ್ಮಕ ಫಲಿತಾಂಶ ಬಂದ ಬಳಿಕ ಸಾರಿಗೆ ವಾಹನಗಳಲ್ಲಿ ಈ ಪ್ರಯೋಗ ನಡೆಸಲು ನಿರ್ಧರಿಸಿತು. ಅದರಂತೆ ಬಿಎಂಟಿಸಿಯ 20 ಬಸ್‌ಗಳನ್ನು ಈ ಪ್ರಯೋಗಕ್ಕೆ ಆಯ್ಕೆ ಮಾಡಲಾಗಿತ್ತು.

'ಅಶೋಕ ಲೈಲ್ಯಾಂಡ್ ತಯಾರಿಸಿದ



ಬಿಎಂಟಿಸಿ ಬಸ್‌ಗಳಲ್ಲಿ ಮಿಥೆನಾಲ್ ಮಿಶ್ರಿತ ಇಂಧನ ಬಳಸುವ ಪ್ರಯೋಗಕ್ಕೆ 2023ರ ಮಾರ್ಚ್ ತಿಂಗಳಲ್ಲಿ ಚಾಲನೆ ನೀಡಲಾಗಿತ್ತು.

ಬಸ್‌ಗಳಲ್ಲಿ ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗಿಸುವ ಕಾರ್ಯ ಮಾರ್ಚ್ 12ರಂದು ಆರಂಭವಾಗಿತ್ತು. ನಾಲ್ಕು ತಿಂಗಳ ಪ್ರಯೋಗದಲ್ಲಿ ಬಸ್‌ಗಳು 3.2 ಲಕ್ಷ ಕಿ.ಮೀ. ಸಂಚರಿಸಿದ್ದವು. ಬಳಿಕ ಎರಡು ಬಸ್‌ಗಳ ಎಂಜಿನ್‌ಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಪ್ರಯೋಗಾಲಯದ ವರದಿ, ಸಂಚಾರದ ಸಮಯದ ಸ್ಥಿತಿಗತಿ ಎಲ್ಲ ಸೇರಿಸಿ ಸಾರಿಗೆ ಸಚಿವಾಲಯಕ್ಕೆ ವರದಿ ನೀಡಲಾಗಿದೆ. ಸಚಿವಾಲಯದಿಂದ ನಿರ್ದೇಶನ ಬಂದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಮಿಥೆನಾಲ್ ಕೋರ್ ಕಮಿಟಿ ಸದಸ್ಯ ಪ್ರಶಾಂತ್ ಶ್ರೀನಿವಾಸ್ ಮಾಹಿತಿ ನೀಡಿದರು.

'100 ದಿನಗಳ ಪ್ರಯೋಗ ಎಂದು ಆರಂಭದಲ್ಲಿ ನಿರ್ಧರಿಸಲಾಗಿತ್ತು. ಬಳಿಕ ಕೆಲವು ದಿನ ಹೆಚ್ಚಿಗೆ ನಡೆಯಿತು. ಮಿಥೆನಾಲ್ ಲೀಟರ್‌ಗೆ ₹25- ₹27 ದರ ಇದ್ದರೆ ಡೀಸೆಲ್ ಲೀಟರ್‌ಗೆ ₹ 87 ಇದೆ. ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗದ ಸಂದರ್ಭದಲ್ಲಿ ಪ್ರತಿ ಕಿಲೋಮೀಟರ್‌ಗೆ ಸುಮಾರು ₹10 ಉಳಿತಾಯವಾಗಿದೆ. ಡೀಸೆಲ್ ಎಂಜಿನ್ ವಾಹನಗಳನ್ನೇ ಇದಕ್ಕೆ ಬಳಸಲಾಗಿತ್ತು. ಸಣ್ಣ ಅವಧಿಯ ಪ್ರಯೋಗದ ಸಮಯದಲ್ಲಿ ದೊಡ್ಡ ಮಟ್ಟದ ಸಮಸ್ಯೆ ಕಾಣಿಸಿಕೊಂಡಿಲ್ಲ. ದೀರ್ಘ ಕಾಲ ಬಳಸಿದಾಗ ಪರಿಣಾಮ ಹೇಗಿರುತ್ತದೆ ಎಂಬುದು ಗೊತ್ತಾಗಿಲ್ಲ' ಎಂದು ಬಿಎಂಟಿಸಿ ಎಂಜಿನಿಯರ್ ಪ್ರತಿಕ್ರಿಯಿಸಿದರು. 'ಬಿಎಂಟಿಸಿ ಬಸ್‌ಗಳು ನಗರದಲ್ಲಿ ಮಾತ್ರ ಸಂಚರಿಸುವುದರಿಂದ ಕಡಿಮೆ ಕಿ.ಮೀ. ಸಂಚಾರದಲ್ಲಿ ಹೆಚ್ಚು ನಿಲುಗಡೆ ಹೊಂದಿರುತ್ತವೆ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯೋಗಿಸಿದ್ದರೆ ಬೆಂಗಳೂರಿನಿಂದ ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಬೀದರ್ ಸಹಿತ ವಿವಿಧ ಪ್ರದೇಶಗಳಿಗೆ ಒಂದೇ ದಿನದಲ್ಲಿ 300-400 ಕಿ.ಮೀ. ಸಂಚರಿಸುವುದರಿಂದ ಪ್ರಯೋಜನವೇನು? ಅಡ್ಡ ಪರಿಣಾಮ ಏನು? ಎಂಬುದು ಗೊತ್ತಾಗುತ್ತಿತ್ತು' ಎಂಬುದು ಅವರ ಅಭಿಪ್ರಾಯವಾಗಿದೆ.

ಮಿಶ್ರ ಇಂಧನದ ಪ್ರಮಾಣ

15% ಮಿಥೆನಾಲ್	12% ಕಪ್ಲರ್ಸ್
2% ಸಿಟೇನ್ ಇಂಪ್ರುವರ್	71% ಡೀಸೆಲ್

'ಕಡಿಮೆಯಾಗಲಿರುವ ಇಂಧನ ವೆಚ್ಚ'

ಸತ್ಯವತಿ

'ಬಿಎಂಟಿಸಿ ಅಂದಾಜು ತಿಂಗಳಿಗೆ ₹ 70 ಕೋಟಿಯನ್ನು ಡೀಸೆಲ್ ಖರೀದಿಗಾಗಿ ವೆಚ್ಚ ಮಾಡುತ್ತಿದೆ. ಮಿಥೆನಾಲ್ ಮಿಶ್ರಿತ ಡೀಸೆಲ್ ಬಳಸಿ 20 ಬಸ್‌ಗಳಲ್ಲಿ ಪ್ರಯೋಗವನ್ನು ನೀತಿ ಆಯೋಗದವರು ಮಾಡಿದ್ದಾರೆ. ಮುಂದೆ ಇದು ಯಶಸ್ವಿಯಾಗಿ ಜಾರಿಗೊಂಡರೆ ಬಿಎಂಟಿಸಿ ಮಾಡುತ್ತಿರುವ ಇಂಧನ ವೆಚ್ಚ ಕಡಿಮೆಯಾಗಲಿದೆ' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಹೇಳಿದರು.

ವಾಹನಗಳ ಮೈಲೇಜ್ ಶೇ 3ರಷ್ಟು ಹೆಚ್ಚಳ

'ಡೀಸೆಲ್‌ಗೆ ಮಿಥೆನಾಲ್ ಮಿಶ್ರಣ ಮಾಡಿದ ಇಂಧನ ಪ್ರಯೋಗಿಸಿದಾಗ ಯಾವುದೇ ತಾಂತ್ರಿಕ ತೊಂದರೆ ಕಂಡು ಬಂದಿಲ್ಲ. ಶೇ 3ರಷ್ಟು ಮೈಲೇಜ್ ಹೆಚ್ಚಳವಾಗಿತ್ತು' ಎಂದು ಮಿಥೆನಾಲ್ ಕೋರ್ ಕಮಿಟಿ ಸದಸ್ಯ ಪ್ರಶಾಂತ್ ಶ್ರೀನಿವಾಸ್ ತಿಳಿಸಿದರು. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮಿಥೆನಾಲ್ ಮಿಶ್ರಣ ಮಾಡಿ ಇಂಧನ ಒದಗಿಸಿತು. 80 ಸಾವಿರ ಲೀಟರ್ ಮಿಥೆನಾಲ್ ಮಿಶ್ರಣ ಇಂಧನ ಬಳಕೆ ಮಾಡಲಾಯಿತು ಎಂದು ವಿವರಿಸಿದರು.

ನಗರದಲ್ಲಿ ನಡೆದ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ (ಆರ್‌ಯುಎಎಸ್) 8ನೇ ಘಟಿಕೋತ್ಸವದಲ್ಲಿ ಆರ್‌ಯುಎಎಸ್ ಕುಲಸಚಿವ ಜಿ.ಎಸ್. ವೆಂಕಟೇಶ್, ಶಿಕ್ಷಣ ತಜ್ಞರಾದ ಮೇಧಾ ವೈ. ರಾವ್, ಸಹ ಕುಲಾಧಿಪತಿ ಇ. ಓಂಪ್ರಕಾಶ್ ಖರಬಂದ, ಕುಲಪತಿ ಎಂ.ಆರ್. ಜಯರಾಮ್, ಪ್ರಾಧ್ಯಾಪಕ ಜೆ.ಎನ್. ರೆಡ್ಡಿ, ಕುಲದೀಪ್ ಕುಮಾರ್ ರೈನಾ, ಅನಿತಾ ರಾಮಲಿಂಗಂ ಭಾಗವಹಿಸಿದ್ದರು.

ವಿಷ್ಣು ಸ್ಮಾರಕಕ್ಕೆ 10 ಗುಂಟೆ ಜಾಗ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಬೆಂಗಳೂರಿನ ಅಭಿಮಾನ್ ಸ್ಟುಡಿಯೊದಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣಕ್ಕಾಗಿ 10 ಗುಂಟೆ ಜಾಗ ನೀಡುವಂತೆ ಬಾಲಕೃಷ್ಣ ಅವರ ಕುಟುಂಬ ದವರಲ್ಲಿ ಮನವಿ ಮಾಡಿದ್ದೇವೆ' ಎಂದು ಚಲನಚಿತ್ರ ನಟ ಹಾಗೂ ವಿಷ್ಣುವರ್ಧನ್ ಅಳಿಯ ಅನಿರುದ್ಧ ತಿಳಿಸಿದರು.

ತಾಲ್ಲೂಕಿನ ಉದ್ಬೂರು ಗೇಟ್ ಸಮೀಪದಲ್ಲಿರುವ ವಿಷ್ಣುವರ್ಧನ್ ಸ್ಮಾರಕದಲ್ಲಿ ಶನಿವಾರ ನಡೆದ ಪುಣ್ಯಸ್ಮರಣೆ ಕಾರ್ಯಕ್ರಮದ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಅಭಿಮಾನಿಗಳ ಆಸೆ ಈಡೇರಿಸಲು ಅವಕಾಶ ನೀಡುವಂತೆ ಕೇಳಿಕೊಂಡಿದ್ದೇವೆ. ಸರ್ಕಾರವು ಈಗಾಗಲೇ ಸ್ಮಾರಕ ನಿರ್ಮಾಣ ಮಾಡಿರುವುದರಿಂದ ಮತ್ತೊಂದು ಸ್ಮಾರಕಕ್ಕೆ ಹಣ ವಿನಿಯೋಗಿಸಲಾಗುವುದಿಲ್ಲ. ಹೀಗಾಗಿ, ದುಡ್ಡಿನ ಅಪೇಕ್ಷೆ ಇಲ್ಲದೇ ಕಲಾ ದಿಗ್ಗಜನಿಗೆ ಗೌರವಾರ್ಥವಾಗಿ ಜಾಗ ಬಿಟ್ಟು ಕೊಡುವಂತೆ ಬಾಲಣ್ಣ ಕುಟುಂಬದವರನ್ನು ವೈಯಕ್ತಿಕವಾಗಿ ಕೋರಿರುವೆ' ಎಂದರು.

ಸಂತ ಸೇವಾಲಾಲ್ ಜಯಂತಿ ಫೆ. 15ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂಜಾರ (ಲಂಬಾಣಿ) ಜನ ಸೇವಾ ಸಂಘದ ವತಿಯಿಂದ 2024ರ ಫೆ. 15ರಂದು ಸಂತ ಸೇವಾಲಾಲ್ ಜಯಂತಿಯನ್ನು ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗ ಮಂದಿರದಲ್ಲಿ ಏರ್ಪಡಿಸಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ಆರ್. ಹನುಮಂತ ನಾಯ್ಕ, 'ಲಂಬಾಣಿ ಸಂಸ್ಕೃತಿಯ ಬಗ್ಗೆ ಅರಿವಿಲ್ಲದೇ ಬಹಳಷ್ಟು ಜನ ಬೇರೆ ಬೇರೆ ಧರ್ಮಗಳಿಗೆ ಮತಾಂತರ ಆಗುತ್ತಿದ್ದಾರೆ. ಇದನ್ನು ನಿಯಂತ್ರಿಸುವ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುವುದು. ಇದೇ ಸಂದರ್ಭದಲ್ಲಿ ರಾಷ್ಟ್ರ ಮಟ್ಟದಲ್ಲಿ ವಧು-ವರಾನ್ವೇಷಣೆ ಸಮಾವೇಶ ನಡೆಯಲಿದೆ' ಎಂದು ಅವರು ತಿಳಿಸಿದರು.

₹150 ಕೋಟಿ ಮೌಲ್ಯದ ಭೂಮಿ ಬಿಡಿಎ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಂತಿಮ ಅಧಿಸೂಚನೆ ಹೊರಡಿಸಿದ್ದ 2 ಎಕರೆ 20 ಗುಂಟೆ ಜಾಗದಲ್ಲಿನ ಒತ್ತುವರಿಯನ್ನು ಅಧಿಕಾರಿಗಳು ಶನಿವಾರ ತೆರವುಗೊಳಿಸಿದರು.

ನಗರದ ಎಚ್.ಬಿ.ಆರ್. ಬಡಾವಣೆಯ 1ನೇ ಹಂತ, ಕಾಚರಕನಹಳ್ಳಿ ಗ್ರಾಮದ ಸರ್ವೆ ನಂ. 181, 182 ಮತ್ತು 183ರಲ್ಲಿ ಬಿಡಿಎಗೆ ಸೇರಿರುವ ಜಾಗದಲ್ಲಿ ನಿರ್ಮಾಣವಾಗಿದ್ದ ಅನಧಿಕೃತ ಕಟ್ಟಡ, ಗ್ಯಾರೇಜ್‌ಗಳನ್ನು ಬಿಡಿಎ ಅಧಿಕಾರಿಗಳು ತೆರವುಗೊಳಿಸಿದರು. ಈ ಜಾಗದ ಮೌಲ್ಯ ಸುಮಾರು ₹150 ಕೋಟಿ ಎಂದು ಅಂದಾಜಿಸಲಾಗಿದೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿ' ಎಂದು ಕರ್ನಾಟಕ ರಾಜ್ಯ ಸರ್ಕಾರ 1985ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. 200 ಅಧಿಕಾರಿಗಳು ಸೇರಿದಂತೆ 100 ಜನ ಕಾರ್ಮಿಕರು ಹಾಗೂ ಬಿಡಿಎದ 15 ಅಧಿಕಾರಿಗಳ ಸಮ್ಮುಖದಲ್ಲಿ ಒತ್ತುವರಿಯನ್ನು ತೆರವುಗೊಳಿಸಿ ಜಾಗವನ್ನು ಪ್ರಾಧಿಕಾರದ ಸುಪರ್ದಿಗೆ ತೆಗೆದುಕೊಳ್ಳಲಾಯಿತು.

'ಬಿಡಿಎ ಆಯುಕ್ತ ಎನ್.ಜಯರಾಂ ಅವರು ಪ್ರಾಧಿಕಾರದ ಕಾನೂನು ಕೋಶದ ಅಧಿಕಾರಿಗಳೊಂದಿಗೆ ಚರ್ಚಿಸಿ, ಸಲಹೆಯನ್ನು ಪಡೆದು, ತೆರವು ಕಾರ್ಯಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

'ಬಿಡಿಎ ಈ ಹಿಂದೆಯೂ ಇದೇ ಜಾಗದಲ್ಲಿ ಒತ್ತುವರಿಯನ್ನು ತೆರವುಗೊಳಿಸಿತ್ತು. ಅದನ್ನು ಭದ್ರಪಡಿಸಿಕೊಳ್ಳದೆ ಇರುವುದರಿಂದ ಮತ್ತೆ ಒತ್ತುವರಿಯಾಗಿತ್ತು. ಈಗಲಾದರೂ ಬೇಲಿ ಹಾಕಿ ಬಿಡಿಎ ಉಳಿಸಿಕೊಳ್ಳಲಿ' ಎಂದು ಸ್ಥಳೀಯ ನಿವಾಸಿ ರಾಮ್‌ರಾಜ್ ರೆಡ್ಡಿ ಹೇಳಿದರು.

'ಹಲವು ವರ್ಷಗಳಿಂದ ನಾವು ಇಲ್ಲಿ ಶೆಡ್ ಹಾಕಿಕೊಂಡು, ಗ್ಯಾರೇಜ್ ನಡೆಸುತ್ತಿದ್ದೆವು. ಮಾಲೀಕರಿಗೆ ಬಾಡಿಗೆಯನ್ನೂ ನೀಡುತ್ತಿದ್ದೆವು. ನಮಗೆ ಒಂದು ನೋಟಿಸ್ ನೀಡದೆ ಎಲ್ಲವನ್ನೂ ತೆರವುಗೊಳಿಸಿದರು. ಇದರಿಂದ ನಮಗೆ ಅತ್ಯಂತ ನಷ್ಟವಾಗಿದೆ' ಎಂದು ಅಬ್ದುಲ್ ಸಾಹಿಲ್ ತಿಳಿಸಿದರು.

ಎಚ್‌ಬಿಆರ್ ಲೇಔಟ್ 1ನೇ ಹಂತ 2ನೇ ಬ್ಲಾಕ್ 1ನೇ ಮುಖ್ಯರಸ್ತೆಯಲ್ಲಿ ಅನಧಿಕೃತ ಕಟ್ಟಡ, ಗ್ಯಾರೇಜ್‌ಗಳನ್ನು ಬಿಡಿಎ ಸಿಬ್ಬಂದಿ ಶನಿವಾರ ತೆರವುಗೊಳಿಸಿದರು

ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ ಆಶಯ

'ರಾಮರಾಜ್ಯ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರು ರಾಮಮಂದಿರ ನಿರ್ಮಿಸಿದ ರೀತಿಯಲ್ಲಿ ರಾಮನ ತತ್ವಗಳನ್ನೂ ಪಾಲಿಸಿ, ರಾಮರಾಜ್ಯವನ್ನು ನಿರ್ಮಾಣ ಮಾಡಲಿ' ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ನಿಡುಮಾಮಿಡಿ ಮಠ ನಗರದಲ್ಲಿ ಶನಿವಾರ ಹಮ್ಮಿಕೊಂಡ ಜಚನಿ (ಚನ್ನಬಸವರಾಜ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ) ಅವರ 115ನೇ ಜಯಂತಿ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ, ಮಾತನಾಡಿದರು.

'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ಮಾಡಿದ್ದು ಶ್ರೇಷ್ಠವಾದ ಕೆಲಸ. ಕೋಟ್ಯಂತರ ಜನರ ಹೃದಯದಲ್ಲಿ ರಾಮ ಇದ್ದಾನೆ. ಗಾಂಧೀಜಿ ಅವರ ರಾಮ ಅಯೋಧ್ಯೆಯ ರಾಮನಾಗಿರದೆ, ಆತ್ಮಾರಾಮ ಆಗಿದ್ದಾನೆ. ನಾವು ರಾಮ ನನ್ನು ಆರಾಧಿಸಿದಷ್ಟೇ ರಾಮನ ತತ್ವ ಗಳನ್ನೂ ಪಾಲಿಸಬೇಕು' ಎಂದು ಹೇಳಿದರು.

'ಅಸ್ಪೃಶ್ಯತೆ ಹೋಗದಿದ್ದರೆ ಹಿಂದೂ ಧರ್ಮ, ಲಿಂಗಾಯತ ಧರ್ಮ ಉದ್ಧಾರ ಆಗುವುದಿಲ್ಲ. ಅಸ್ಪೃಶ್ಯತೆಯನ್ನು ಬಿಟ್ಟು, ಮನುಷ್ಯ ಧರ್ಮವನ್ನು ಪಾಲಿಸಬೇಕು. ವೀರಶೈವ ಲಿಂಗಾಯತ ಸಮುದಾಯದ ಮಠಗಳಲ್ಲಿ ಅಸ್ಪೃಶ್ಯತೆಯ ಆಚರಣೆಗೆ ಅವಕಾಶ ನೀಡಬಾರದು. ಈ ಬಗ್ಗೆ ವೀರಶೈವ ಮಹಾಸಭಾ ಕ್ರಮವಹಿಸಲಿ' ಎಂದು ತಿಳಿಸಿದರು.

ಮಠಗಳಿಂದ ಉಳಿದ ಸಂಸ್ಕೃತಿ: ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, 'ಭವ್ಯ ಭಾರತದ ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸವನ್ನು ಮಠಗಳು ಮಾಡುತ್ತಿವೆ. ಗ್ರಾಮೀಣ ಭಾಗಗಳಲ್ಲಿ ಅನ್ನ, ಆರೋಗ್ಯ, ಶಿಕ್ಷಣ ದಾಸೋಹದ ಮೂಲಕ ಬಡವರ ಬದುಕಿಗೆ ಆಶ್ರಯ ನೀಡುತ್ತಿವೆ. ನಿಡುಮಾಮಿಡಿ ಮಠವೂ ವಿದ್ಯಾಸಂಸ್ಥೆಗಳ ಮೂಲಕ ಬಡ ಹಾಗೂ ಹಿಂದುಳಿದ ವರ್ಗದ ಮಕ್ಕಳಿಗೆ ಶೈಕ್ಷಣಿಕ ಅವಶ್ಯಕತೆಯನ್ನು ಪೂರೈಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಸಾಹಿತಿ ಹಂ.ಪ. ನಾಗರಾಜಯ್ಯ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ ಅವರು ಚನ್ನಬಸವರಾಜ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಅವರ ಕೊಡುಗೆಗಳ ಬಗ್ಗೆ ಮಾತನಾಡಿದರು.



ಸಮಾರಂಭದಲ್ಲಿ ಸಿದ್ದರಾಮಯ್ಯ ಅವರು 'ಹೋರಾಟಕ್ಕೆ ಸಾವಿಲ್ಲ' ಮತ್ತು 'ಓಲೆ ಒಳದನಿ' ಪುಸ್ತಕಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಕಲಬುರಗಿಯ ಸುಲಫಲ ಮಠದ ಸಾರಂಗಧರ ದೇಶೀಕೇಂದ್ರ ಸ್ವಾಮೀಜಿ, ವಿಮರ್ಶಕ ನಟರಾಜ್ ಹುಳಿಯಾರ್, ಶರಣ ಸಂಸ್ಕೃತಿ ಚಿಂತಕ ರಂಜಾನ್ ದರ್ಗಾ, ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ ಮತ್ತು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

'ರಾಜಧರ್ಮ ಪಾಲಿಸಿದ ಬಿಎಸ್‌ವೈ'

'ರಾಜಕೀಯದಲ್ಲಿ ಅಪಾರ ಅನುಭವ ಹೊಂದಿರುವ ಯಡಿಯೂರಪ್ಪ ಅವರ ಮಾರ್ಗದರ್ಶನವನ್ನು ರಾಜ್ಯ ಬಿಜೆಪಿ ನಾಯಕರು ಹಾಗೂ ಕೇಂದ್ರದ ವರಿಷ್ಠರು ಪಡೆದುಕೊಳ್ಳಬೇಕು. ಅವರ ಪಕ್ಷದ ಸೈದ್ಧಾಂತಿಕ ವಿಚಾರಗಳನ್ನು ನಾನು ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ, ಅವರಿಗೆ ಅನ್ಯಾಯ ಆದಾಗ ನನಗೂ ಅವರ ಬಗ್ಗೆ ಸಹಾನುಭೂತಿ ಮೂಡಿತು. ಅವರು ರಾಜಧರ್ಮ ಪಾಲಿಸಿದ ನಾಯಕ. ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಒಂದೇ ಒಂದು ಕೋಮುಗಲಭೆ ನಡೆದಿಲ್ಲ' ಎಂದು ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ ತಿಳಿಸಿದರು.

'ಅಸಮಾನತೆ ತೊಲಗಲಿ'

ನಿಡುಮಾಮಿಡಿ ಶ್ರೀ ಪೀಠಾರೋಹಣ 33 ಕಾರ್ಯಕ್ರಮದಲ್ಲಿ 'ಹೋರಾಟಕ್ಕೆ ಸಾವಿಲ್ಲ' ಮತ್ತು 'ಓಲೆ ಒಳದನಿ' ಕೃತಿ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸಮಾಜದಲ್ಲಿನ ವೈರುಧ್ಯಗಳು, ಜಾತೀಯತೆ, ಅಸಮಾನತೆಗಳು ತೊಲಗಬೇಕು. ಆಗ ಮಾತ್ರ ಸಮಾಜ ಪರಿವರ್ತನೆಯಾಗಲು ಸಾಧ್ಯ. ಮನುಷ್ಯನ ಸ್ವಾರ್ಥದಿಂದ ಸಮಾಜದಲ್ಲಿ ಅಸಮಾನತೆ ಉಂಟಾಗಿದೆ' ಎಂದು ಹೇಳಿದರು. 'ನಿಡುಮಾಮಿಡಿ ಮಠವು ಧಾರ್ಮಿಕ ಚಟುವಟಿಕೆಗಳ ಜತೆಗೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಮಾನವ ಧರ್ಮ ಸ್ಥಾಪಿಸುವ ಮಠದ ಗುರಿ ಈಡೇರಿಕೆಗೆ ಸರ್ಕಾರ ಎಲ್ಲ ರೀತಿಯ ಸಹಕಾರವನ್ನು ನೀಡಲಿದೆ' ಎಂದು ಭರವಸೆ ನೀಡಿದರು.

PUBLIC NOTICE

It is hereby notified that, our client has agreed to purchase the Schedule Property from its Owner **SRI.K.N.SHAMANNA (KANAGAL NARASIMHA MURTHY SHAMANNA)** S/o late Sri.K.R.Narasimha Murthy, residing at PWW 4111, Tower 4 Prestige West Wood Apartments, Behind Minerva Mills Quarters, Gopalapura, Bengaluru-560023. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **5 (Five) days** from the date of publication of this notice. Objection/s received thereafter will not be binding on our client.

SCHEDULE

All that piece and parcel of the residential property bearing **Municipal No.15 (BDA Site No.15), PID No.54-89-15**, measuring East to West (15.1+15)/2 Mtrs and North to South 24 Mtrs, in all measuring 362.24 Sq.Mtrs, with a building thereon, situated at **100ft Ring Road, BSK 3rd Stage,** 3rd Phase, 6th Block, Bengaluru, within the administrative jurisdiction of BBMP Ward No.163 and bounded as follows:

East by : Property bearing No.16
West by : Property bearing No.14
North by : Property baring Nos.56 & 57
South by : 100ft Ring Road

Sd/- BAYYA REDDY. M
For ISHA LAW CHAMBERS LLP
Advocates & Solicitors,
No.101, 2nd Floor, Sri Manjunatha Complex, 22nd Main,
BSK 2nd Stage, Opp : Banashankari BDA Complex, Bengaluru-560070.

ನಗರಸಭಾ ಕಾರ್ಯಾಲಯ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ E-mail:itstaff_ulb_gouribidanur@yahoo.co.in
website: gowribidanurtown.gov.in
ನಂ.ನಸಗೌ:ಆ.ಶಾ:ಟೆಂಡರ್/ಸಿಆರ್-01/2023-24 ದಿನಾಂಕ: 26.12.2023

ಟೆಂಡರ್ ಪ್ರಕಟಣೆ

ಪೌರಾಯುಕ್ತರು ನಗರಸಭೆ ಗೌರಿಬಿದನೂರು ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2020-21ನೇ ಸಾಲಿನ 15ನೇ ಹಣಕಾಸು ಅನುದಾನ, ಸ್ವಚ್ಛ ಭಾರತ್ ಮಿಷನ್-01 ಉಳಿಕೆ ಅನುದಾನ ಹಾಗೂ ನಗರಸಭಾ ನಿಧಿ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅಧಿಕೃತ ಅರ್ಹ ದರ್ಜೆಯ ಸರಬರಾಜುದಾರರಿಂದ/ಕಂಪನಿಗಳಿಂದ/ಗುತ್ತಿಗೆದಾರರಿಂದ ಟೆಂಡರ್ ಅನ್ನು ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಈ ವೆಬ್‌ಸೈಟ್ **www.kppp.karnataka.gov.in** ಮೂಲಕ ಅರ್ಜಿ ಸಲ್ಲಿಸಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ **www.gouribidanurcity.gov.in** ನಲ್ಲಿ ಪರಿಶೀಲಿಸುವುದು. (1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 11.01.2024ರ ಸಂಜೆ: 5.00 ಗಂಟೆಯುವರೆಗೆ.** (2) ಟೆಂಡರ್ ತೆರೆಯುವ **ದಿನಾಂಕ: 12.01.2024ರ ಸಂಜೆ: 5.30 ಗಂಟೆಗೆ.**

ಕಾಮಗಾರಿ: ಸ್ವಚ್ಛ ಭಾರತ್ ಮಿಷನ್-01 ಉಳಿಕೆ ಅನುದಾನ: (1) ಮನೆ ಮನೆ ಕಸ ಸಂಗ್ರಹಣೆಗಾಗಿ **3.0 CuM** ಸಾಮರ್ಥ್ಯದ 5 ಸಂಖ್ಯೆ ಮಿನಿಟಿಪ್ಪರ್ ವಾಹನಗಳನ್ನು ಸರಬರಾಜು ಮಾಡುವುದು. **ಅಂದಾಜು ಮೊತ್ತ: ರೂ. 45.00 ಲಕ್ಷಗಳು.** (2) ಘನತ್ಯಾಜ್ಯ ನಿರ್ವಹಣೆಗಾಗಿ ಒಂದು ಫ್ರಂಟ್ ಎಂಡ್ ಲೋಡರ್ ವಿತ್ ಬ್ಯಾಕ್ ಹೋ ವಾಹನ ಸರಬರಾಜು ಮಾಡುವುದು. **ಅಂದಾಜು ಮೊತ್ತ: ರೂ. 37 ಲಕ್ಷಗಳು.** (3) ಗೌರಿಬಿದನೂರು ನಗರದ ಮುಖ್ಯ ರಸ್ತೆಗಳಲ್ಲಿ ಲಿಟ್ಟರ್ ಬಿನ್ನಗಳನ್ನು ಅಳವಡಿಸುವುದು. **ಅಂದಾಜು ಮೊತ್ತ: ರೂ. 4.00 ಲಕ್ಷಗಳು.**

2020-21ನೇ ಸಾಲಿನ 15ನೇ ಹಣಕಾಸು ಅನುದಾನ ಹಾಗೂ ನಗರಸಭಾ ನಿಧಿ: (4) ಮನೆ ಮನೆ ಕಸ ಸಂಗ್ರಹಣೆಗಾಗಿ 3 ಸಂಖ್ಯೆ ಆಟೋಟಿಪ್ಪರ್ ವಾಹನಗಳನ್ನು ಸರಬರಾಜು ಮಾಡುವುದು. **ಅಂದಾಜು ಮೊತ್ತ: ರೂ. 22.00 ಲಕ್ಷಗಳು.** (5) ಘನತ್ಯಾಜ್ಯ ನಿರ್ವಹಣೆಗಾಗಿ 02 ಸಂಖ್ಯೆ ಟ್ರಾಕ್ಟರ್ ಟ್ರೈಲರ್ ವಾಹನಗಳನ್ನು ಸರಬರಾಜು ಮಾಡುವುದು. **ಅಂದಾಜು ಮೊತ್ತ: ರೂ. 14.00 ಲಕ್ಷಗಳು.**

ನಗರಸಭಾ ನಿಧಿ: (6) ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ)ರ ಕಛೇರಿ ಕೆಲಸಗಳಿಗಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಕಾರು ಸರಬರಾಜು ಮಾಡುವುದು. **ಅಂದಾಜು ಮೊತ್ತ: ರೂ. 5.00 ಲಕ್ಷಗಳು.**

ಸಹಿ/- ಪೌರಾಯುಕ್ತರು, ನಗರಸಭೆ, ಗೌರಿಬಿದನೂರು
ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಗೌರಿಬಿದನೂರು
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:201/ಕೆಎಸ್‌ಎಂಸಿಎ/2023-24

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು - 562110
ದೂರವಾಣಿ: 080-29599998 e-mail : forest.brzp@gmail.com
ಸಂಖ್ಯೆ: ಎ3/ಬಿಯುಡಿ/ಟೆಂಡರ್/ಅ.ಭೂಜಲ್/ಸಿಆರ್-32/2022-23 ದಿನಾಂಕ: 29.12.2023

ಇ-ಟೆಂಡರ್ ಪ್ರಕಟಣೆ

2023-24ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ದೊಡ್ಡಬಳ್ಳಾಪುರ, ಹೊಸಕೋಟೆ ಮತ್ತು ನೆಲಮಂಗಲ ಸಾಮಾಜಿಕ ಅರಣ್ಯ ವಲಯಗಳಲ್ಲಿ ಅಟಲ್ ಭೂಜಲ್ ಯೋಜನೆಯಡಿ ಮಣ್ಣು ಮತ್ತು ತೇವಾಂಶ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲು ಈ ವಿಭಾಗದ ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ಕರ್ನಾಟಕ ಸರ್ಕಾರದ ಇ-ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 08.01.2024, ಸಂಜೆ 5.00 ಗಂಟೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 09.01.2024, ಸಂಜೆ 5.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳನ್ನು ಯಶಸ್ವಿಯಾಗಿ ಪೂರೈಸಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಸದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 10.01.2024 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: 15.01.2024ರ ಸಂಜೆ 5.00 ಗಂಟೆವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು. ತಾಂತ್ರಿಕ ಬಿಡ್‌ನ್ನು ದಿನಾಂಕ: 16.01.2024 ರಂದು ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 17.01.2024 ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ
ವಾಸಾಸಂಇ/ವಾಪ್ರ/2804/ಆಕಾರ್/2023-24

ಬಮೂಲ್ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಬೆಂಗಳೂರು ಡೇರಿ ಪ್ರಾಂಗಣ: ಡಾ|| ಎಂ.ಹೆಚ್.ಮರೀಗೌಡ ರಸ್ತೆ, ಡಿ. ಆರ್. ಕಾಲೇಜ್ ಅಂಚೆ, ಬೆಂಗಳೂರು-560029

ತಿದ್ದುಪಡಿ

ಈ ಮೂಲಕ ನಿಮಗೆ ತಿಳಿಸುವುದೇನೆಂದರೆ **ದಿನಾಂಕ: 30.12.2023 ರಂದು** ಇದೇ ದಿನಪತ್ರಿಕೆಯಲ್ಲಿ ಪ್ರಕಟವಾದ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಣೆ ಸಂಖ್ಯೆ IFT.NO:kmf:ಬಮೂಲ್:ಮಾರುಕಟ್ಟೆ(ಸಾರಿಗೆ):ಇ-ಟೆಂಡರ್:557:2023:24 ಕ್ಕೆ ಸಂಬಂಧಿಸಿದಂತೆ (Sl.No.1) ಇ-ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ ಕಾಲಂ ನಲ್ಲಿ ದಿನಾಂಕ: 30.12.2023 ರಿಂದ 6.01.2024ರ ಸಂಜೆ 6.00 ಘಂಟೆಯಿಂದ ಎಂದು ತಪ್ಪಾಗಿ ಪ್ರಕಟಿಸಲಾಗಿತ್ತು. ಇದನ್ನು **ದಿನಾಂಕ: 30.12.2023 ರಿಂದ 16.01.2024ರ ಸಂಜೆ 6.00 ಘಂಟೆಯಿಂದ** ಎಂದು ತಿದ್ದಿ ಓದಿಕೊಳ್ಳುವುದು. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.,
ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಇ- ಟೆಂಡರ್ ಆಹ್ವಾನ ಪ್ರಾಧಿಕಾರ

ನೈಋತ್ಯ ರೈಲ್ವೆ G20
ಪಾರ್ಸೆಲ್ ಸ್ಥಳ, ಪಾರ್ಕಿಂಗ್ ಮತ್ತು ಔಟ್ ಆಫ್ ಹೋಮ್ ಜಾಹೀರಾತು / ಪ್ರಚಾರದ ಗುತ್ತಿಗೆಗಾಗಿ ಇ-ಹರಾಜು
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ದಿನಾಂಕಗಳ ಇ-ಹರಾಜುಗಳಿಗಾಗಿ ಬಿಡ್ಡುದಾರರನ್ನು ಆಹ್ವಾನಿಸಿದ್ದಾರೆ.
1) ಊಟೋಪಹಾರ ಮತ್ತು ಎಂಪಿಎಸ್ : 02-01-2024, 09-01-2024, 10-01-2024, 11-01-2024, & 12-01-2024
2) ಪಾರ್ಸೆಲ್‌ಗಳು : 08-01-2024 & 22-01-2024
3) ಜಾಹೀರಾತು ಮತ್ತು ಎಟಿಎಂ ಗುತ್ತಿಗೆಗಳು : 18-01-2024, 19-01-2024, 24-01-2024 & 25-01-2024
4) ಪಾರ್ಕಿಂಗ್, ಪಾವತಿಸಿ ಮತ್ತು ಬಳಸಿ : 02-01-2024 & 08-01-2024
5) ವಿವಿಧ ಗುತ್ತಿಗೆಗಳು : 04-01-2024 & 12-01-2024
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/597/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ G20
ಪ್ರೊಫಾರ್ಮಾ 10-01
ಭಾರತೀಯ ರೈಲ್ವೆ
ಸಾರ್ವಜನಿಕ ಪ್ರಕಟಣೆ
ಭಾರತೀಯ ರೈಲ್ವೆಯು ಕೆಳಕಂಡ ಸೆಕ್ಷನ್‌ನ ಪೂರ್ಣಗೊಳಿಸಿದ ಸೆಕ್ಷನ್‌ನ ರೈಲ್ವೆ ಮಾರ್ಗಗಳು ಮತ್ತು ಆವರಣಗಳ ಬಳಕೆದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, 25000 ವೋಲ್ಟ್ಸ್, 50 ಹೆಚ್‌ಜೆಡ್ ಎಸಿ ಓವರ್‌ಹೆಡ್ ಟ್ರ್ಯಾಕ್ಷನ್ ತಂತಿಗಳನ್ನು ಸೆಕ್ಷನ್‌ನ ಮುಂದೆ ಸೂಚಿಸಿರುವ ದಿನಾಂಕಗಳಂದು ಅಥವಾ ತದನಂತರ ಶಕ್ತಿಯುತಗೊಳಿಸಲಾಗುತ್ತದೆ. ಆ ದಿನಾಂಕದಂದು ಮತ್ತು ನಂತರ ಓವರ್‌ಹೆಡ್ ಟ್ರ್ಯಾಕ್ಷನ್ ಮಾರ್ಗವನ್ನು ಎಲ್ಲಾ ಸಮಯಗಳಲ್ಲೂ "ಲೈವ್" ಎಂದು ಪರಿಗಣಿಸಲಾಗುತ್ತದೆ ಮತ್ತು ಅನಧಿಕೃತ ವ್ಯಕ್ತಿಗಳು ಸೂಚಿಸಿದ ಓವರ್‌ಹೆಡ್ ಮಾರ್ಗದ ಸಮೀಪಕ್ಕೆ ಬರಬಾರದು ಮತ್ತು ಅದರ ಸಮೀಪದಲ್ಲಿ ಕಾರ್ಯ ನಿರ್ವಹಿಸಬಾರದು.
ಸೆಕ್ಷನ್ : ಚೈನೇಜ್ **ಕಿ.ಮೀ.136/419 ನಿಂದ 137/292** ವರೆಗೆ ಮೈಸೂರು ಯಾರ್ಡ್ ಸ್ಟೇಬ್ಲಿಂಗ್ ಮಾರ್ಗ - 1, 2, 3 ಮತ್ತು 4.
ಶಕ್ತಿಯುತಗೊಳಿಸುವ ಸಂಭಾವ್ಯ ದಿನಾಂಕ : 31-01-2024.
ವಲಯ : ನೈಋತ್ಯ ರೈಲ್ವೆ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್, ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್, ನಿರ್ಮಾಣ, ಬೆಂಗಳೂರು ದಂಡು
ಸ್ಥಳ : ಬೆಂಗಳೂರು
ದಿನಾಂಕ : 27-12-2023
ಪಿಯುಬಿ/600/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24
South Western Railway - SWR | SWRRLY | SWRRLY

भारत सरकार

ಮೋದಿ ಸರ್ಕಾರದ ಗ್ಯಾರಂಟಿ, ಪಾರಂಪರಿಕ ಕೌಶಲ್ಯಗಳಿಗೆ ಹೊಸ ಮನ್ನಣೆ

ಈ ಯೋಜನೆಯು ಕುಶಲಕರ್ಮಿಗಳು ಮತ್ತು ಕರಕುಶಲಿಗಳ ಕೌಶಲ್ಯವನ್ನು ಹೆಚ್ಚಿಸುವುದು ಮಾತ್ರವಲ್ಲದೆ, ದೇಶಾದ್ಯಂತ ಅವರು ತಯಾರಿಸಿದ ಉತ್ಪನ್ನಗಳಿಗೆ ವಿಶ್ವದಲ್ಲಿ ಹೊಸ ಮನ್ನಣೆ ನೀಡುತ್ತದೆ.

– ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಪ್ರಧಾನಮಂತ್ರಿ ವಿಶ್ವಕರ್ಮ

ಯೋಜನೆಯ ಪ್ರಯೋಜನಗಳು

- ಪ್ರಧಾನಮಂತ್ರಿ ವಿಶ್ವಕರ್ಮ ಪ್ರಮಾಣಪತ್ರ ಮತ್ತು ಗುರುತಿನ ಚೀಟಿ
- ತರಬೇತಿ ಮತ್ತು ಕೌಶಲ್ಯ ಉನ್ನತೀಕರಣಕ್ಕಾಗಿ ದಿನಕ್ಕೆ 500 ರೂ ತರಬೇತಿ ಭತ್ಯೆ
- 15 ಸಾವಿರ ರೂ.ವರೆಗಿನ ಟೂಲ್‌ಕಿಟ್
- ವಿಶ್ವಕರ್ಮ ಸಹೋದರ, ಸಹೋದರಿಯರಿಗೆ 3 ಲಕ್ಷ ರೂ.ವರೆಗೆ ಖಾತರಿ ರಹಿತ ಸಾಲ
- ಡಿಜಿಟಲ್ ವಹಿವಾಟಿಗೆ ಪ್ರೋತ್ಸಾಹ
- ಉತ್ಪನ್ನಗಳಿಗೆ ಗುಣಮಟ್ಟದ ಪ್ರಮಾಣೀಕರಣ, ಬ್ರ್ಯಾಂಡಿಂಗ್ ಮತ್ತು ಜಾಹೀರಾತುಗಳ ಮೂಲಕ ಮಾರುಕಟ್ಟೆ ಬೆಂಬಲ

18 ವಿಧದ ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ಕರಕುಶಲಿಗಳು ಪ್ರಯೋಜನಗಳನ್ನು ಪಡೆಯುತ್ತಾರೆ

CBC 25101/13/0007/2324

ಯೋಜನೆಯಲ್ಲಿ ನೋಂದಾಯಿಸಿಕೊಳ್ಳಲು, ವಿಶ್ವಕರ್ಮ ಸಹೋದರರು, ಸಹೋದರಿಯರು ತಮ್ಮ ಹತ್ತಿರದ ಸಾಮಾನ್ಯ ಸೇವಾ ಕೇಂದ್ರಕ್ಕೆ ಭೇಟಿ ನೀಡಬಹುದು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

SALE BDA SITE Anjanapura 3rd A Block near Mangalya Appartment, 30x40 South, 10,250/-Sqft. Negotiable. 9740148870.

Intl Airport Road

30x40 Converted Plots @ 1,80,000/-
150/- per sq.ft, 90 minutes Journey from Yelahanka
Ready for Registration
9343510635

Arkavathi Layout

ARKAVATHI LAYOUT 20x30 BDA East Facing 2nd Block Sampegehalli, Genuine Buyers USR- 7019770736/ 8951614989.

Banashankari

BDA AUCTION SITE SALE BSK 6th Stage 4th Block 40x60 North, and East Facing Both side 40 feet Road, 100% cheque payment Close to RV Architect Engineer College. Genuine buyer Call: 9900561723/ 9880131050

BANASHANKARI 6TH STAGE BDA APPROVED SITE FOR SALE 40x60, NEAR KANAKAPURA ROAD METRO-STATION CALL:9606226222 9916086525.

Gnanabharathi

20X30 BDA SITE SALE GNANABHARATHI LAYOUT 1st Block, close to Nagadevanahalli Ring-Road, Rs.51 lakhs. 9742681666

HSR Layout

SALE 50X80 South Excellent Residential Plot HSR 3rd Sector Serious Buyers Contact Ramesh HK 9844104958

Indiranagar

INDIRANAGAR DEFENCE colony properties 8000, 7000 sq ft for sale Contact 9845003341/ 9008274600

J P Nagar

SALE. JP.NAGAR 2 phase N/W corner BDA 3145 sqft with house rate 17000/ per sqft full white payment. 9886425997

Koramangala

SALE 50X82 North Residential Plot Koramangala 1st Block, Serious Buyers Please Contact Ramesh HK: 9844104958

Magadi Road

35X30 CORNER Revenu Site Sale 40' Road Padar School Magadi Road Rate 4500/- Negotiable: 9731652042

Nagarabhavi

"NAGARABHAVI BDA Site Sale 40x60 North facing 60ft Road, 30x40 East facing Good Location. 9845862388"

Multiple Locations

3 PARTY Convention Hall for SALE, near Banashankari 15 Cr. Rent 45 Lakhs. and Banashankari 2nd Stage, Residential Site 77x100 Rs. 22000 /sft. East Facing and Bannerghatta Road 40x60 Building for Sale, 6.5 Cr. Rent 5.5 Lakhs. and Commercial Site for Sale, N/W Corner 60x60 JC Road Rs. 30000 /sft. Call: 9900399006, Agents Excuse

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

MUDA SITE 240 Sqft NE Corner Vijayanagar 19.75L. Suitable for Building Clinics Shops/ Office/ Studio Rooms. Raghavendra 9606866368

Rajarajeshwari Nagar

RAJARAJESHWARI NAGAR, BEML Layout, 5th Stage, 30x45 South Facing, Site for Sale. Contact: 9448810828

RR-NAGAR 66X40 EAST FACING A KHATA RESIDENCIAL SITE GOOD LOCATION. 200 MTRS FROM TANISHQ: 9448288522

SITE FOR SALE @ 9000/- GATTIGERE SUDARSHAN LAYOUT RAJA RAJESHWARI NAGAR CALL: 9900036544/ 9740252729

RMV

SALE RMV 2nd stage 50x80, 22,000/- Psft, R.T.Nagar 40x60 both (East facing) 20,000/- Psft. 9844092859.

Sadashiva Nagar

80X120 SITE For Sale In A 'Prestigious Location' Of Sadashivanagar, Genuine Prospective Buyers Call 9900001973

Vishweshwariah Layout

BDA SITES VISHWESHWARAIAH LAYOUT 30x40 1ST BLOCK SF, 2ND BLOCK 40X60 EF 60ft ROAD: 8217392686/ 9980433004

PLOT FOR SALE 40X60 NORTH FACING BBMP A KATHA VISHWESHWARAIAH LAYOUT Rs. 8000/- CONTACT: 9916826976

"VISHWESWARAIAH 1ST-BLOCK BDA Site Near 100 Feet Road 40x60 West Facing for Sale. Call: 9845268611"

"28X40 SOUTH/WEST Corner BDA Residential Site Sale Kanakashree Layout [1st Block Vishveshwaraiah Layout]- 9845143579"

DIRECT OWNER 40x60 E/F BDA #2194 Site Sale VISHVESWARAIAH LAYOUT 1st Block, 60ft-Road, Rs.10800/-. 9886634578

AVAILABLE BDA Site 20X30 Vishveshwariah Layout 2nd Block, Builder Location 47 Lacks Contact Buyers: 9844603127

AVAILABLE BDA Site 30X40 W/F 6th Block Vishveshwariah Layout 7500/- Psft Contact Only Buyers:9844603127

30X40 VISHVESHWARAIAH Layout North 2nd Block 100ft Road Parall 8000/- And 40X60 Site Sale 6th Block Direct Owner Near KLE Law College: 8550003509

SITE FOR sale 30x40 East facing at 1st Block Vishwesharaya Layout, Genuine Buyers, No Brokers. Contact: 9448368476/ 9448046937

Vidyaranyapura

SITE SALE BBMP A KATHA 20x30 SEMI COMMERCIAL SOUTH FACING THINDLU LAKE SHOW GARDEN: 8296895858

Bannerghatta

SALE-SITE 40X60 Vijaya Bank Layout Bannerghatta Road Behind IAM On 40feet Roads Excellent Location Contact: 9844134068 9066399102

Agricultural Land Converted

Nelamangala

2 ACRES 8 Gunta Industrially Converted Land with 25700 Sqft. Building and 35000 Sqft Unfinished Building NH4 Near T.Begur, Nelamangala: 9844522990

Commercial Land

Banashankari

"HOSAKEREHALLI 40X60- COMMERCIAL Property for Sale 100 feet Ring Road Banashankari 3rd Stage, 2nd Phase. 9845500019/ 7019314962"

Commerical

J P Nagar

J.P.NAGAR COMMERCIAL 40x60 & 60x90 North facing 100' Road, Residential 40x50 (South), Suraj Realtors -9845232711.

Flat

Banashankari

3BHK FLAT 1325 sqft, North facing, A khatha, 90 Lakhs, behind DG petrol bunk 7259296030

Koramangala

KORAMANGALA RAHEJA Residency 3 bed 3 bath 1845 sft. Call 9845077439

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

House

J P Nagar

SALE 30X40 RBI Layout With Duplex 4 BHK House With ample Car Park Excellent Location Call:9844134068 9066399102

Tumkur Road

RAVI_KIRLOSKAR Layout Tumkur Road 40x40 West`Facing, 3 BHK independent House`for`sale adjecent`to Prestige Jindal`and Metro-station 2,50,00,000/- 9986075122/ 8618922501.

Vidyaranyapura

60'X40'- BEL layout with 4 BHK Duplex Independent House, Garage, well, South face (3.4cr): 9844264852

REAL ESTATE BUYING

Commercial Building

Majestic And Around

WANTED QUICK Purchase Commercial Property at Bangalore Majestic Area range 10Cr. Call / WhatsApp 9845122271

Joint Development

Joint Venture

"URGENTLY REQUIRED Property any-dimensions in & around Bangalore for Builders (Joint Venture or Individual). genuine Parties-Call: 9019533999/ 9731379933"

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Vishweshwariah Layout

I AM looking to buy 30x40 E or N Facing BDA Site in SRMV Layout 1st Block to 8th Block Direct Owners only Call: 9880569429

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD Classifieds
More value, more impact
REAL ESTATE #1 ಪ್ರಜಾವಾಣಿ
PLACE YOUR AD HERE
The 1st thing to do when Selling/Buying your Property
www.dhclassifieds.com BOOK NOW
Book your ad with us now! For more details contact:
+91 9901641752 | +91 9886213331 |
+91 9845114560 | +91 9731810277 |
+91 9900428036 | 080- 45557163/164

WEEKEND CORNER ಕ್ಲಾಸಿಫೈಡ್ಸ್

ಯಲಹಂಕ
ಜಿಕೆವಿಕೆ ಹಿಂದಿನ ಗೇಟ್, ಅಟ್ಟೂರು, ವಿದ್ಯಾರಣ್ಯಪುರ
BBMP KHATA LAYOUT
Land Mark: 5mins from Yelahanka DMart
20 x 30 ನಿವೇಶನಗಳು @ 27 ಲಕ್ಷಗಳು
30 X 40 | 30 X 50 Sites Also available
ಬಾಗಲೂರು
SEZ Road
E KHATA LAYOUT
DC Conversion LAYOUT
20 x 40 ನಿವೇಶನಗಳು @ 30 ಲಕ್ಷಗಳು
30 x 40 ನಿವೇಶನಗಳು @ 45 ಲಕ್ಷಗಳು
Vidya Nagar Cross
Venkateswara Engineering College
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL
9880 149 159 | 9731 555 000

FOR SALE

Our client intends to sell their East Facing Industrial Plot measuring about 46440 Sq.Feets (4316 Sq. Mtrs), situated in a layout formed by K.I.A.D.B at Hirehalli Industrial Area, Hirehalli Village, Urdigere Hobli, Tumkur Taluk & District very close to National Highway, with clear title, nil encumbrance, surrounded by reputed industries. Genuine buyers contact us at :
M/s. PRO LEGAL, #524, 33rd Cross, IV Block, Jayanagar, Bengaluru-11.
Call : 93430 35076
email: mail@prolegal.co.in

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted. Contact: SAPTHAGIRI. 9900268073, 9448068073.



COMMERCIAL SPACE for rent, 1st floor 2000 sqft, opposite BDA complex Nagarbhavi. Contact. 6362884952.

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Flats

2/3 BHK new flats with interiors at
VARTHUR
Ready to move in
with rent of Rs.40/- per Sft negotiable.
Those interested for immediate occupation, may Contact :
99621 82221
97413 33222
email: vrsn@live.com
SAA

AVAILABLE 3 BHK Furnished Spacious Apartment Flat Mysore Road For Lease Rupees 25 Lakhs: 9738223432

Commercial

RENTAL TWO shops corner building Ground Floor 1) 10x10, 2) 20x14, Preferred for Bank ATMs. at Ashrama Road, Yelachenahalli, Near Yelachenahalli Metro station, off Kanakapura Main Road. Contact: 9449840159, 9742225649

OFFICE SPACE, GANGANAGAR, 1ST MAIN, 500 SFT, WEST FACING, 1ST FLOOR, TWO WHEELER PARKING, RENT 16000/- PH: 99023 41636

JOB OPPORTUNITIES

Accounts & Finance

WANTED ACCOUNTS Assistants. C.A, Office at Jayanagar. IT/G.S.T/Tally knowledge- 9743522111/ venkatkrishna46@gmail.com

Teachers/ Professors

ST. FRANCIS COLLEGE
Affiliated to Bengaluru City University
Approved by AICTE
P.B.No. 3417, 3rd Block, 8th Main, Koramangala, Bengaluru-560034. Tel: 080-25531037/38
Cell Ph: 8792265704, Website: www.stfranciscollege.edu.in
FACULTY RECRUITMENT
Applications are invited for the post of Professors/Associate/Assistant Professors, in the following Departments.
Management BBA / MBA | Computer Science BCA / MCA
Qualification: PG with NET/SET/Ph.D with minimum of 55% marks at PG level
Experience: Above 3 years
Job Location: Koramangala, Bengaluru
Interested and Eligible Candidates may send their resume along with recent passport size photograph, copies of qualification and experience certificate to the
Email-ID:
director@stfranciscollege.edu.in
admin@stfranciscollege.edu.in
by mentioning the post and department applying for in the subject line within 15 days.

Manager

WANTED MANAGER
Wanted Muslim Female/Male candidates who should be a graduate with Computer skills, from surrounding areas, Interested candidate may be contacted personally with testimonials during office hours between 10:30 AM to 2:30 PM and 3:30 PM to 7:30 PM at below mentioned address.
AL-FALAH MARRIAGE BUREAU
Office: #7, 2nd 'A' Cross, Manorayanapalya, Sultanpalya Main Raod, R.T. Nagar Post, Bangalore -560032.
Mobile: 96320 28897 99459 53077

Walk-in

PSN EICHER
WE ARE HIRING
PSN AUTOMOTIVE MARKETING PVT LTD.
One of the largest dealer of 'Volve Eicher Commercial Vehicle' requires the following candidates for its operation in 'Bangalore, Mysore & Hubli'
SALES OFFICERS (Bangalore & Hubli) Vehicle sales
SALES REPRESENTATIVE (Spare Parts-Mysore)
SALES REPRESENTATIVE (Lubricant Sales-Bangalore)
Minimum Experience : 2 years in the relevant field
WALK-IN Interview on : 2nd Jan to 5th Jan-2024
at PSN Automotive Marketing Pvt Ltd # 380, Ittina Center, 16th Main Road, 3rd Block, Koramangala, Bengaluru-34
Interested candidates can also forward the resumes to : hrdblr@psnauto.in
Mobile : 91+9686679471 91+9686603108
website: www.psn.in

Wanted

A well established Credit Cooperative requires
CEO (Secretary)
Banking experience in Commercial or Co-Operative banks / Souharda Credit Cooperative is essential with fluency in Kannada and English. Salary negotiable. Age Below 55 years.
Apply:
PRESIDENT
MAHESHWARI SOUHARDA CREDIT COOPERATIVE SOCIETY LTD
69, Sirsi Circle, Chamarajpet, Bangalore - 560018. Mail ID: mssctd2016@gmail.com

WANTED

AGRICULTURAL LAND (50 - 100 ACRES)

NEAR KORATAGERE VILLAGE with adequate water source

Genuine Owners or Agents can contact Secretary / President between 3 p.m. to 5.00 p.m. with relevant documents at:
THE IDEAL HOMES CO-OPERATIVE BUILDING SOCIETY LIMITED
(Reg. No. DYR 352 dt. 29.4.1964)
Ideal Homes Township, Mysore Road, Bangalore - 98.
E-mail: ihcbs.idealhomes@gmail.com Ph: 080-28600892

General

"WANTED BRANCH MANAGERS Female Telecallers Sales-Managers Sales Executives Freelancers Salary: ₹15k to-1Lakh Plus Incentives. 9071615300, 7829956789. Work Location: M.G.Road, RT.Nagar, Vasanthnagar, Mysore Road, Nagawara, Shivajinagar &.Yelahanka. hrjp365@gmail.com

WANTED
1) Senior Liaison officers required
2) Experience 8 years plus
3) Salery 60k to 80k
4) Experience in the field of Government office
5) Education Qualification prefer LLB or Any Degree or Masters
6) Language preferred Kanada English Hindi Reading writing and spoken
H R G Mane, House No. 94, F 9th, Cross, 10th Main, RMV Ext Sadashiva Nagar, Near Ramanarao Hospital, Bangalore-80
Kindly send your resume to gurudatthg@gmail.com
Contact- 9663366946

Drivers

WANTED EXPERINCE DRIVER (AUTO GARE) AUDI, JAGUAR, BENZ, NEAR RAJARAJESHWARI NAGAR CONTACT: 7019941116

Architects

WANTED 3D visualizer or Architects with 3d experience. Contact Montimers Architects, Koramangala. 9108281566

Hospital & Medical Jobs

HOSPITAL REQUIREMENT
Al Ameen Medical & Dental College
is a 39 year reputed and respected Institution, situated at excellent location in Vijayapur, Karnataka, urgently required for following Posts:
1. Principal (5 to 7 Years Experience)
2. Professors, Associate Professors, Asst. Professors of all Departments with Teaching Experience
3. Senior Residents with PG Qualification - MD/MS
4. Office Administrator (5 to 7 Years Experience)
5. Senior Accountant (3 to 5 Years Experience)
6. Human Resource Officer (5 Years Experience)
Attractive Salary with Accommodation arrangement will be given.
Contact: 9108292533/ 6361701108
Please send us your C.V.'s to ibc2@ibc.co.in OR ibc.accounts@gmail.com

PUBLIC NOTICE

PUBLIC NOTICE
This is to inform the General Public that our client intends to purchase the Property described in the Schedule herein below from its owner Mrs Nandini Rao, W/o. A Madhav Rao

SCHEDULE PROPERTY
All that piece and parcel of property called "Shelter" bearing Old Municipal No.31, New No.105/1-1, BBMP PID No.86-14-105/1-1situated at Wheeler Road BBMP Ward No.59 (Maruthisevanagar Ward), Bengaluru measuring 2594 Square Meters(24,780 Sq Feet) bounded on the:
East by: **Banaswadi Rd**
West by: **Wheeler Rd**
North by: **Property belonging to M/s. Prestige Estates and Properties.**
South by: **Banaswadi Rd**
Any person/s having valid objections to the same may contact the undersigned with all the relevant records within 7 days from today failing which no further claims would be entertained
Sd/-
Advocate
#18, Miller's Road, Benson Town, B"lore -46
8722800807

MATRIMONIAL

Brides Wanted

Hindu

BRIDE REQUIRED For MBBS Hindu Doctor 41 yr near Pune, Caste/ Language no bar. Ph: 8329865948, 8378050149

OTHERS

Furniture & Furnishings

HOUSEHOLD ITEMS sale carved teak wood sofa set sofa bed japan crystal glassware noritake dinner set

AUTOMOTIVE

Four Wheelers Selling

Benz

MERCEDES CLS250, 2018, Scratchless, Hardly Used 2700 KM, VIP Number: 0001, Showroom Condition For Sale. Contact: 09810162004

Maruti

SALE .MARUTI Super carry refrigerator (reefer) vehicle. With South Korean make Dongin refrigeration unit fitted in brand new condition.. very low usage. Bangalore. Mobile: 9886972374/ 99802 83865

PERSONAL

Change of Name

CHANGE IN NAME
I, **JAYANTHILAL R PATEL** S/o Ramji Patel, 54 year, R/a No.49-A, 324-C, Ideal Homes Layout, Rajarajeshwari Nagar, Bangalore-98, do hereby solemnly declare that, my name in Aadhar card, Driving license and other government issued documents is recorded as **JAYANTHILAL R PATEL** wherein it's mentioned as **JAYANTI LAL RAMJI** in my passport. Further I declare and affirm that both these names belong to me only and in future all the times I shall be called as **JAYANTHILAL. R. PATEL** only. Hence this affidavit sworn on 29/12/2023 before the Notary & Advocate C.Venkatapathy of Bangalore.

I, UMESH BABU. R.B Residing at No.2305, 9th Main D Block, 2nd Stage Rajajinagar, Bengaluru-10, have changed my daughter name from NIHARIKA U to NIHARIKA U ACHAR vide affidavit dated: 25/8/2022 Before Notary B.Chitra Bangalore.

ಲೋಕಸಭಾ ಚುನಾವಣೆಗೆ ಕಮಲ ಪಡೆ ಉತ್ಸಾಹ • ವಯಸ್ಸಿನ ಕಾರಣಕ್ಕಾಗಿ ಹಲವರು ನಿವೃತ್ತಿ

ಯುವ ಆಕಾಂಕ್ಷಿಗಳಲ್ಲಿ ಹೆಚ್ಚು ಉಮೇದು

ಪ್ರಜಾವಾಣಿ ವಾರ್ತೆ


ಸದಾನಂದ ಗೌಡ

ಸುಧಾಕರ್

ಶೋಭಾ ಕರಂದ್ಲಾಜೆ

ಯದುವೀರ ಒಡೆಯರ್

ಬೆಂಗಳೂರು: ಬಿಜೆಪಿಯ ಕೆಲವು ಸಂಸದರು ತಮ್ಮ ವಯಸ್ಸಿನ ಕಾರಣಕ್ಕಾಗಿ ಲೋಕಸಭಾ ಚುನಾವಣಾ ಕಣದಿಂದ ಹಿಂದಕ್ಕೆ ಸರಿಯುತ್ತಿರುವ ಬೆನ್ನಲ್ಲೇ ಆ ಕ್ಷೇತ್ರಗಳಲ್ಲಿ ಆಕಾಂಕ್ಷಿಗಳು ಹೆಚ್ಚುತ್ತಿದ್ದು, ಆ ಪೈಕಿ ಹೊಸ ತಲೆಮಾರಿನವರೇ ಹೆಚ್ಚು ಎಂಬುದು ವಿಶೇಷ.

ನಿವೃತ್ತಿ ಬಯಸಿದ್ದ ಕೆಲ ಹಿರಿಯರು, ಇತ್ತೀಚೆಗೆ ನಡೆದ ಐದು ರಾಜ್ಯಗಳ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ ಬೆನ್ನಲ್ಲೇ ಮತ್ತೆ ಕಣಕ್ಕೆ ಇಳಿಯುವ ಬಯಕೆ ವ್ಯಕ್ತಪಡಿಸಿದ್ದಾರೆ. ಆ ಪೈಕಿ ಬೆಂಗಳೂರು ಉತ್ತರ ಕ್ಷೇತ್ರದ ಡಿ.ವಿ. ಸದಾನಂದಗೌಡ ಮತ್ತು ದಾವಣಗೆರೆಯ ಜಿ.ಎಂ.ಸಿದ್ದೇಶ್ವರ ಪ್ರಮುಖರು.

ಈ ಬಾರಿ ಪ್ರಮುಖವಾಗಿ ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಮೈಸೂರು, ಚಾಮರಾಜನಗರ, ಮಂಗಳೂರು, ಉತ್ತರಕನ್ನಡ, ಉಡುಪಿ– ಚಿಕ್ಕಮಗಳೂರು, ಚಿತ್ರದುರ್ಗ, ಬಿಜಾಪುರ, ಬಳ್ಳಾರಿ, ಬೆಳಗಾವಿ, ಹಾವೇರಿ ಕ್ಷೇತ್ರಗಳಲ್ಲಿ ಆಕಾಂಕ್ಷಿಗಳು ಹುಟ್ಟಿಕೊಂಡಿದ್ದಾರೆ.

ಬಿ.ಎನ್.ಬಚ್ಚೇಗೌಡ ಪ್ರತಿನಿಧಿಸುತ್ತಿರುವ ಚಿಕ್ಕಬಳ್ಳಾಪುರ ಕ್ಷೇತ್ರದ ಮೇಲೆ ಡಾ.ಕೆ.ಸುಧಾಕರ್ ಕಣ್ಣಿಟ್ಟಿದ್ದಾರೆ. ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರು ಪುತ್ರ ಅಲೋಕ್ ಅವರನ್ನು ಕಣಕ್ಕೆ ಇಳಿಸಲು ತಯಾರಿ ನಡೆಸಿಕೊಂಡಿದ್ದಾರೆ. ತಮ್ಮ ಪುತ್ರನಿಗೆ ಒಂದು ಅವಕಾಶ ನೀಡಬೇಕು. ಕ್ಷೇತ್ರ ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ತಮ್ಮದು ಎಂದು ವಿಶ್ವನಾಥ್ ಪಕ್ಷದ ನಾಯಕರಿಗೆ ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಹಾಲಿ ಸಂಸದರಾದ ಡಿ.ವಿ.ಸದಾನಂದ ಗೌಡ ಈ ಬಾರಿ ಸ್ಪರ್ಧಿಸುವುದಿಲ್ಲ ಎಂಬ ಚರ್ಚೆ ನಡೆದಿತ್ತು. ಅದರ ಬೆನ್ನಲ್ಲೇ, ಈ ಕ್ಷೇತ್ರಗಳಿಗೆ ಶೋಭಾ ಕರಂದ್ಲಾಜೆ, ಸಿ.ಟಿ. ರವಿ ಹೆಸರುಗಳು ಮುನ್ನೆಲೆಗೆ ಬಂದಿವೆ. ಸಿ.ಟಿ.ರವಿ ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ಬಯಸಿದ್ದಾರೆ. ಶೋಭಾ ಬೆಂಗಳೂರು ಉತ್ತರಕ್ಕೆ ಬಂದರೆ ರವಿ ಉಡುಪಿಯಿಂದ ಸ್ಪರ್ಧಿಸಲಿದ್ದಾರೆ. ಈ ಹಿಂದೆ ನಿವೃತ್ತಿಯ ಮಾತು ಆಡಿದ್ದ ಡಿ.ವಿ. ಸದಾನಂದಗೌಡ ಅವರು ಮತ್ತೊಮ್ಮೆ ಸ್ಪರ್ಧಿಸಲು ಆಸಕ್ತಿ ತೋರಿಸಿದ್ದಾರೆ. ಈ ಆಸಕ್ತಿಯ ಹಿಂದೆ ಕೆಲವು ಹಿರಿಯರ 'ವಿಶೇಷ ಪ್ರಯತ್ನ'ವೂ ಇದೆ ಎಂದು ಮೂಲಗಳು ಹೇಳಿವೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ ಅವರ ಹೆಸರು ಮುಂಚೂಣಿಯಲ್ಲಿದೆ. ಮೈಸೂರು ಲೋಕಸಭಾ ಕ್ಷೇತ್ರದಿಂದ ಪ್ರತಾಪ ಸಿಂಹ ಅವರ ಜತೆಗೆ ರಾಜವಂಶಸ್ಥ ಯದುವೀರ ಒಡೆಯರ್ ಹೆಸರೂ ಮುನ್ನೆಲೆಗೆ ಬಂದಿದೆ. ಚಾಮರಾಜನಗರ ಕ್ಷೇತ್ರದಿಂದ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಅಳಿಯ ಮಾಜಿ ಶಾಸಕ ಬಿ.ಹರ್ಷವರ್ಧನ್ ಮತ್ತು ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ಅವರು ಕೂಡಾ ಪೈಪೋಟಿ ನಡೆಸಿದ್ದಾರೆ.

ಮಂಗಳೂರು ಕ್ಷೇತ್ರದಲ್ಲಿ ನಳಿನ್ ಕುಮಾರ್ ಕಟೀಲ್ ಅವರನ್ನೇ ಅಭ್ಯರ್ಥಿ ಮಾಡುವುದಾಗಿ ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಿ.ವೈ. ವಿಜಯೇಂದ್ರ ಹೇಳಿದ್ದರು. ಆದರೆ, ನಳಿನ್ ಅವರಿಗೆ ಟಿಕೆಟ್ ಸಿಗುವುದಿಲ್ಲ ಎಂಬ ಲೆಕ್ಕಾಚಾರದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಕ್ಯಾ. ಬ್ರಿಜೇಶ್ ಚೌಟ ಅವರು ಆಸಕ್ತಿ ತೋರಿದ್ದಾರೆ. ಬಳ್ಳಾರಿಯಿಂದ ಬಿ.ಶ್ರೀರಾಮುಲು ಮತ್ತು ಎಂ.ಎಸ್. ಸೋಮಲಿಂಗಪ್ಪ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ವೈ.ದೇವೇಂದ್ರಪ್ಪ ಹಾಲಿ ಸಂಸದರು.

ಈ ಬಾರಿ ಸ್ಪರ್ಧಿಸುವುದಿಲ್ಲ ಎಂದು ಅವರು ಕೆಲ ತಿಂಗಳುಗಳ ಹಿಂದೆ ಹೇಳಿದ್ದ ದಾವಣಗೆರೆ ಸಂಸದ ಜಿ.ಎಂ.ಸಿದ್ದೇಶ್ವರ ಮತ್ತೆ ಸ್ಪರ್ಧಿಸುವ ಉತ್ಸಾಹ ತೋರಿದ್ದಾರೆ. ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಇಲ್ಲಿ ಕಣಕ್ಕೆ ಇಳಿಯುವ ತವಕದಲ್ಲಿದ್ದಾರೆ.

ಬೆಳಗಾವಿಯಿಂದ ಸಂಸದೆ ಮಂಗಳಾ ಅಂಗಡಿ ಮತ್ತೆ ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದು, ವಿಧಾನ ಪರಿಷತ್‌ನ ಮಾಜಿ ಸದಸ್ಯ ಮಹಾಂತೇಶ ಕವಟಗಿಮಠ, ಮಾಜಿ ಶಾಸಕ ಅನಿಲ್ ಬೆನಕೆ, ಮಹಾಂತೇಶ ವಕ್ಕುಂದ, ಸಂಜಯ ಪಾಟೀಲ ಪೈಪೋಟಿಯಲ್ಲಿದ್ದಾರೆ. ಚಿಕ್ಕೋಡಿಗೆ ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಮತ್ತು ರಮೇಶ ಕತ್ತಿ ಅವರೂ ಆಕಾಂಕ್ಷಿಗಳಾಗಿದ್ದಾರೆ.

ಉತ್ತರ ಕನ್ನಡ (ಕೆನರಾ) ಕ್ಷೇತ್ರದ ಸಂಸದ ಅನಂತಕುಮಾರ್ ಹೆಗಡೆ ಮತ್ತೆ ಸ್ಪರ್ಧಿಸುವ ಬಗ್ಗೆ ಸ್ಪಷ್ಟ ನಿರ್ಧಾರ ಘೋಷಿಸಿಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಶಾಸಕರಾದ ವಿಶ್ವೇಶ್ವರ ಹೆಗಡೆ ಕಾಗೇರಿ, ಸುನಿಲ್ ಹೆಗಡೆ ಮತ್ತು ಯುವ ಬ್ರಿಗೇಡ್‌ನ ಚಕ್ರವರ್ತಿ ಸೂಲಿಬೆಲೆ ಅವರ ಹೆಸರು ಪ್ರಮುಖವಾಗಿವೆ.

ಹಾವೇರಿ- ಗದಗ ಕ್ಷೇತ್ರದ ಹಾಲಿ ಸಂಸದ ಶಿವಕುಮಾರ್ ಉದಾಸಿ ತಾವು ನಿವೃತ್ತರಾಗುವುದಾಗಿ ಹೇಳಿರುವುದರಿಂದ ಈ ಕ್ಷೇತ್ರಕ್ಕೆ ಕೆ.ಎಸ್.ಈಶ್ವರಪ್ಪ ಅವರ ಪುತ್ರ ಕೆ.ಇ.ಕಾಂತೇಶ, ಮಾಜಿ ಸಚಿವ ಬಿ.ಸಿ.ಪಾಟೀಲ, ಶರಣಬಸವ ಅಂಗಡಿ ಹೆಸರು ಚಾಲ್ತಿಗೆ ಬಂದಿವೆ.

ಬಾಗಲಕೋಟೆ ಕ್ಷೇತ್ರದಿಂದ ಹಾಲಿ ಸಂಸದ ಪಿ.ಸಿ.ಗದ್ದಿಗೌಡರ ಅಲ್ಲದೇ, ಮಾಜಿ ಸಚಿವ ಮುರುಗೇಶ ನಿರಾಣಿ ಮತ್ತು ಪ್ರಕಾಶ ಜೆ.ಪರಪ್ಪ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ. ವಿಜಯಪುರ ಮೀಸಲು ಕ್ಷೇತ್ರದಿಂದ ರಮೇಶ ಜಿಗಜಿಣಗಿ ಟಿಕೆಟ್ ಕೊಟ್ಟರೆ ಸ್ಪರ್ಧಿಸಲಿದ್ದಾರೆ. ಇಲ್ಲಿಂದ ಡಾ. ಬಾಬು ರಾಜೇಂದ್ರ ನಾಯಿಕ, ಮಹೇಂದ್ರ ನಾಯಿಕ ಆಕಾಂಕ್ಷಿಗಳಾಗಿದ್ದಾರೆ.

ಯುವ ಶಕ್ತಿಗೆ ಮಣೆ

ಬಿಜೆಪಿ ಪ್ರತಿನಿಧಿಸುತ್ತಿರುವ ಅನೇಕ ಸಂಸದರ ವಯಸ್ಸು 70 ದಾಟಿದ್ದು, 2024ರ ಚುನಾವಣೆಯಲ್ಲಿ ಈ ಯಾದಿಯಲ್ಲಿರುವ ಹಿರಿಯರಿಗೆ ಟಿಕೆಟ್ ಸಿಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

ರಮೇಶ ಜಿಗಜಿಣಗಿ, ಜಿ.ಎಸ್. ಬಸವರಾಜು, ಡಿ.ವಿ. ಸದಾನಂದಗೌಡ, ಜಿ.ಎಂ. ಸಿದ್ದೇಶ್ವರ, ಪಿ.ಸಿ. ಗದ್ದಿಗೌಡರ, ವಿ. ಶ್ರೀನಿವಾಸ ಪ್ರಸಾದ್ ಇವರೆಲ್ಲರೂ 70 ದಾಟಿದವರು. ಚಿಕ್ಕಬಳ್ಳಾಪುರ ಸಂಸದ ಬಿ.ಎನ್. ಬಚ್ಚೇಗೌಡ ಪುತ್ರ ಶರತ್ ಕಾಂಗ್ರೆಸ್ ಶಾಸಕರಾಗಿದ್ದಾರೆ. ಬಚ್ಚೇಗೌಡರು ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದಾರೆ. ತುಮಕೂರು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಸಾಧ್ಯತೆ ಹೆಚ್ಚಿದೆ. ಉಳಿದ ಕ್ಷೇತ್ರಗಳಲ್ಲಿ ಹೊಸಬರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ಶಿವಮೊಗ್ಗದ ಬಿ.ವೈ. ರಾಘವೇಂದ್ರ, ಬೆಂಗಳೂರು ದಕ್ಷಿಣದ ತೇಜಸ್ವಿ ಸೂರ್ಯ ಅವರಿಗೆ ಟಿಕೆಟ್ ಖಚಿತವಾಗಿದ್ದು ಅಲ್ಲಿ ಬದಲಾವಣೆಯಿಲ್ಲ. ಚಿತ್ರದುರ್ಗ ಸಂಸದ, ಕೇಂದ್ರ ಸಚಿವ ನಾರಾಯಣಸ್ವಾಮಿ, ರಾಜಕೀಯದಿಂದ ದೂರ ಉಳಿಯುವುದಾಗಿ ಘೋಷಿಸಿದ್ದಾರೆ. ಹೀಗಾಗಿ, ಅಲ್ಲಿಯೂ ಹೊಸ ನಾಯಕತ್ವಕ್ಕೆ ಅವಕಾಶ ಸಿಗುವ ಸಂಭವ ಇದೆ.

ಪ್ರಜ್ವಲ್ ಹೆಸರು ಘೋಷಣೆಗೆ ಪ್ರೀತಂ ಪರೋಕ್ಷ ಆಕ್ಷೇಪ


ಪ್ರಜ್ವಲ್ ರೇವಣ್ಣ

ಹಾಸನ: 'ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಹಾಸನ ಲೋಕಸಭಾ ಕ್ಷೇತ್ರದಿಂದ ಸಂಸದ ಪ್ರಜ್ವಲ್ ರೇವಣ್ಣ ಸ್ಪರ್ಧಿಸುವ ಬಗ್ಗೆ ಇನ್ನೂ ಅಂತಿಮ ನಿರ್ಧಾರವಾಗಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಜೆ. ಗೌಡ ತಿಳಿಸಿದರು.

ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜಕೀಯವಾಗಿ ಜೆಡಿಎಸ್ ಪಕ್ಷವು ಎನ್‌ಡಿಎ ಮೈತ್ರಿಕೂಟದ ಒಂದು ಭಾಗವಾಗಿ ಬಂದಿದೆ. ಬಿಜೆಪಿ ಕಾರ್ಯಕರ್ತರು ಟಿಕೆಟ್ ಕೇಳುತ್ತಿದ್ದಾರೆ. ಇದು ಸಹಜ. ಹಾಗಾಗಿ ಇನ್ನೂ ಟಿಕೆಟ್ ಹಂಚಿಕೆ ಅಂತಿಮವಾಗಿಲ್ಲ' ಎಂದರು.

'ಕಳೆದ ಬಾರಿ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಆಗಿದ್ದರೂ, ಜೆಡಿಎಸ್ -ಬಿಜೆಪಿ ಮಧ್ಯೆ ಪೈಪೋಟಿ ಇತ್ತು. ಈಗ ಪರಿಸ್ಥಿತಿ ಬದಲಾಗಿದೆ. ಇಬ್ಬರು ಬಿಜೆಪಿ ಶಾಸಕರಿದ್ದಾರೆ. ಒಳ್ಳೆಯ ವಾತಾವರಣವಿದೆ. ಹಾಸನ ಕ್ಷೇತ್ರವನ್ನು ಬಿಜೆಪಿಗೆ ಕೊಟ್ಟರೆ ಗೆಲುವಿನ ಅವಕಾಶ ಹೆಚ್ಚಿದೆ ಎನ್ನುವುದು ಮತದಾರರ ಭಾವನೆಯಾಗಿದೆ' ಎಂದರು. ಈ ಮೂಲಕ ಪ್ರಜ್ವಲ್ ಹೆಸರು ಘೋಷಣೆಗೆ ಪ್ರೀತಂ ಗೌಡ ಪರೋಕ್ಷ ಆಕ್ಷೇಪ ವ್ಯಕ್ತಪಡಿಸಿದರು.

ಐದು ವರ್ಷದ ಬಳಿಕ ಸಂಸದ ಅನಂತಕುಮಾರ 'ಪ್ರತ್ಯಕ್ಷ'

ಬಿಜೆಪಿ ನಾಯಕರು, ಕಾರ್ಯಕರ್ತರಲ್ಲೇ ಭಿನ್ನಾಭಿಪ್ರಾಯ

• ಗಣಪತಿ ಹೆಗಡೆ

ಸಂಸದ ಅನಂತಕುಮಾರ ಹೆಗಡೆ ಈಚೆಗೆ ಶಿರಸಿಯಲ್ಲಿರುವ ತಮ್ಮ ನಿವಾಸದ ಆವರಣದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಕಾರವಾರ: ಲೋಕಸಭೆ ಚುನಾವಣೆಯಲ್ಲಿ ಉತ್ತರ ಕನ್ನಡ ಲೋಕಸಭೆ ಕ್ಷೇತ್ರದಿಂದ ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಯಾರು ಸ್ಪರ್ಧಿಸುವರು ಎಂಬ ಬಗ್ಗೆ ವ್ಯಾಪಕ ಚರ್ಚೆ ನಡೆದಿದೆ. 'ಚುನಾವಣೆ ರಾಜಕೀಯದಿಂದ ನಿವೃತ್ತರಾಗುತ್ತಾರೆ' ಎಂಬುದು ಬರೀ ವದಂತಿ ಎಂಬಂತೆ ಹಾಲಿ ಸಂಸದ ಅನಂತಕುಮಾರ ಹೆಗಡೆ ಮತ್ತೆ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

2019ರಲ್ಲಿ ಆಯ್ಕೆಯಾದ ಆರಂಭದ ಕೆಲ ದಿನ ಹೊರತುಪಡಿಸಿದರೆ ಸಂಸದರು ಸಾರ್ವಜನಿಕವಾಗಿ ಕಾಣಿಸಿದ್ದು ಅಪರೂಪ. ಪಕ್ಷದ ಚಟುವಟಿಕೆಯಿಂದಲೂ ದೂರ ಸರಿದಿದ್ದ ಅವರು ಪ್ರಧಾನಿ ನರೇಂದ್ರ ಮೋದಿ ಅವರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಡೆದ ಸಮಾವೇಶದಲ್ಲೂ ಪಾಲ್ಗೊಂಡಿರಲಿಲ್ಲ.

ಆದರೆ, ಕೆಲ ದಿನಗಳಿಂದ ಸಂಸದರ ನಿವಾಸಕ್ಕೆ ವಿವಿಧ ತಾಲ್ಲೂಕುಗಳಿಂದ ಪ್ರತ್ಯೇಕವಾಗಿ ಕಾರ್ಯಕರ್ತರ ತಂಡವು ತೆರಳಿ ಮತ್ತೆ ಸ್ಪರ್ಧಿಸಲು ಒತ್ತಾಯಿಸುತ್ತಿದೆ. 'ಸ್ಪರ್ಧೆ ಕುರಿತು ನಿರ್ಧರಿಸಲು ಸಮಯ ನೀಡಿ' ಎಂದು ಅವರು ಕಾರ್ಯಕರ್ತರಿಗೆ ಮನವಿ ಮಾಡಿದ್ದಾರೆ. ಈ ಎಲ್ಲಾ ಬೆಳವಣಿಗೆಯು ಬಿಜೆಪಿಯಲ್ಲೇ ಪರ, ವಿರೋಧದ ಚರ್ಚೆಗೆ ಕಾರಣವಾಗಿದೆ.

'ಅಭಿವೃದ್ಧಿಗಿಂತ ಹಿಂದುತ್ವ ವಿಷಯವನ್ನೇ ಹೆಚ್ಚು ಪ್ರತಿಪಾದಿಸುತ್ತ ಐದು ಬಾರಿ ಗೆದ್ದಿರುವ ಅನಂತಕುಮಾರ ಇನ್ನೊಮ್ಮೆ ಸ್ಪರ್ಧಿಸಬೇಕು. ಬಿಜೆಪಿ ಗೆಲುವಿಗೆ ಹಿಂದುತ್ವವೇ ಮುಖ್ಯ ಅಸ್ತ್ರ. ಅದನ್ನು ಪ್ರಯೋಗಿಸಲು ಅನಂತಕುಮಾರ ಸೂಕ್ತ' ಎಂದು ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರು ಹೇಳುತ್ತಾರೆ.

ಆದರೆ, ಮತ್ತೊಂದೆಡೆ ಬಿಜೆಪಿಯ ಕೆಲ ನಾಯಕರು, 'ಪಕ್ಷದ ಸಕ್ರಿಯ ಚಟುವಟಿಕೆಯಿಂದ ದೂರವುಳಿದು, ಚುನಾವಣೆ ಸಮೀಪಿಸುತ್ತಿದ್ದಂತೆ ಅವರು ಈಗ ಬಂದಿದ್ದು ಸರಿಯಲ್ಲ. ಮೋದಿ ಜಿಲ್ಲೆಗೆ ಭೇಟಿ ನೀಡಿದ್ದಾಗಲೇ ಬಾರದಿದ್ದವರು ಈಗ ಮೋದಿ ಹೆಸರಿನಲ್ಲಿ ಸ್ಪರ್ಧೆಗೆ ಯತ್ನಿಸುತ್ತಿರುವುದು ಹಾಸ್ಯಾಸ್ಪದ' ಎಂದು ಹೇಳುತ್ತಾರೆ.

ಅನಂತಕುಮಾರ ಬದಲು ಈ ಬಾರಿ ಬೇರೊಬ್ಬರನ್ನು ಕಣಕ್ಕಿಳಿಸಲು ಬಿಜೆಪಿ ಯೋಚಿಸಿದೆ ಎಂದು ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ.

ಇದಕ್ಕೆ ಪೂರಕವಾಗಿ ವಿಧಾನಸಭೆ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ರೂಪಾಲಿ ನಾಯ್ಕ ಸ್ಪರ್ಧೆಗೆ ತಯಾರಿ ನಡೆಸಿದ್ದಾರೆ. ಚಕ್ರವರ್ತಿ ಸೂಲಿಬೆಲೆ ಹೆಸರೂ ಸಂಭಾವ್ಯರ ಪಟ್ಟಿಯಲ್ಲಿದೆ.

'ಕೈ' ಅಭ್ಯರ್ಥಿಗೆ ಮಾಹಿತಿ ಸಂಗ್ರಹಣೆ

ಕಾಂಗ್ರೆಸ್ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದಂತೆ ಉಸ್ತುವಾರಿ ಜವಾಬ್ದಾರಿ ಹೊತ್ತಿರುವ ಸಚಿವ ಎಚ್.ಕೆ.ಪಾಟೀಲ ಅವರು ಈಗಾಗಲೇ ಒಂದು ಸುತ್ತಿನ ಸಭೆ ನಡೆಸಿದ್ದಾರೆ. ಅಭಿಪ್ರಾಯ ಸಂಗ್ರಹ ನಡೆದಿದೆ. ಅರಣ್ಯ ಭೂಮಿ ಹಕ್ಕು ಹೋರಾಟಗಾರ ರವೀಂದ್ರ ನಾಯ್ಕ, ವಕೀಲ ಜಿ.ಟಿ.ನಾಯ್ಕ, ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಹೆಸರು ಮುಂಚೂಣಿಯಲ್ಲಿದೆ.

ಅಭ್ಯರ್ಥಿ ಯಾರಾಗಬೇಕು ಎಂಬುದರ ಕುರಿತು ವರಿಷ್ಠರು ನಿರ್ಧರಿಸುವರು. ಯಾರೇ ಅಭ್ಯರ್ಥಿ ಆದರೂ ಪಕ್ಷದ ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡಬೇಕು

ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭೆ ಮಾಜಿ ಅಧ್ಯಕ್ಷ

ಕಾಂಗ್ರೆಸ್ ನಾಯಕರು ಈಗಾಗಲೇ ಕೆಲವರನ್ನು ಗುರುತಿಸಿದ್ದು, ಅವರನ್ನು ಚುನಾವಣಾ ಕಣಕ್ಕೆ ಇಳಿಸುವರು. ಈ ಬಾರಿ ಉತ್ತರ ಕನ್ನಡ ಕ್ಷೇತ್ರ ನಮ್ಮ ತೆಕ್ಕೆಗೆ ಬರುವುದು ನಿಶ್ಚಿತ

ಮಂಕಾಳ ವೈದ್ಯ, ಜಿಲ್ಲಾ ಉಸ್ತುವಾರಿ ಸಚಿವ

ಸಿದ್ದರಾಮಯ್ಯಗೆ ಸಲಹೆಗಾರರೇಕೆ?

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಖಲೆಯ ಬಜೆಟ್ ಮಂಡಿಸಿದ ವಿಶ್ವದ ಶ್ರೇಷ್ಠ ಆರ್ಥಿಕ ತಜ್ಞ ಸಿದ್ದರಾಮಯ್ಯ ಅವರು ತಮಗೆ ಸಲಹೆ ಕೊಡಲು ಮತ್ತೊಬ್ಬ ಆರ್ಥಿಕ ಸಲಹೆಗಾರರನ್ನು ನೇಮಿಸಿಕೊಂಡಿರುವುದು ಹಾಸ್ಯಾಸ್ಪದ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಬಿಜೆಪಿ ಅವಧಿಯಲ್ಲಿ ಇದ್ದ ವಿದೇಶಿ ಬಂಡವಾಳ ಹೂಡಿಕೆ ಈಗ 2.5 ಶತಕೋಟಿ ಡಾಲರ್‌ನಷ್ಟು ಕುಸಿದಿದೆ. ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅಮೆರಿಕಕ್ಕೆ ಹೋಗಿ ತಂದ ಬಂಡವಾಳ ಇನ್ನೂ ವಿಮಾನದಲ್ಲೇ ಬರುತ್ತಿದೆ. ಈ ಬಾರಿಯ ಬಜೆಟ್ ಗಾತ್ರವನ್ನು ₹3.50 ಲಕ್ಷ ಕೋಟಿಗೆ ಏರಿಸುವ ಮಾತು ಆಡುತ್ತಿದ್ದಾರೆ. ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರದ ಬಳಿ ಹಣವಿಲ್ಲ. ಇದೆಲ್ಲದಕ್ಕೂ ಹೊಸ ಸಲಹೆಗಾರರು ನೆರವಾಗಬಹುದು ಎಂದು ಟೀಕಿಸಿದರು.

ಹಲವು ಬಾರಿ ಮಂತ್ರಿಯಾಗಿದ್ದ ದೇಶಪಾಂಡೆ ಅವರನ್ನು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮಾಡಿದ ವರ್ಗಾವಣೆ ದಂಧೆ, ಭ್ರಷ್ಟಾಚಾರದ ಸುಧಾರಣೆಗೆ ಈ ನೇಮಕ ನಡೆದಿದೆಯೇ ಎಂಬ ಅನುಮಾನ ಮೂಡುತ್ತಿದೆ. ಹಿಂದಿನ ಆಡಳಿತ ಸುಧಾರಣಾ ಆಯೋಗಗಳು ನೀಡಿದ ವರದಿಯನ್ನು ಏನು ಮಾಡಿದ್ದಾರೆ ಎಂಬ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿದರು. ರೈತರಿಗೆ ಬರ ಪರಿಹಾರ ಕೊಡಲು ಹಣವಿಲ್ಲ, ರಾಜಕೀಯ ಗಂಜಿ ಕೇಂದ್ರ ಸೃಷ್ಟಿಗೆ ಹಣವಿದೆಯೇ ಎಂದು ಪ್ರಶ್ನಿಸಿದರು.

ಖರ್ಗೆ ಅವರ ಕಾರಣಕ್ಕಾಗಿಯೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೇ 90ರಷ್ಟು ದಲಿತ ಸಮುದಾಯ ಕಾಂಗ್ರೆಸ್ ಪರ ನಿಂತಿತ್ತು. ಆದರೆ, ಅವರಿಗೆ ಇರುವ ಅವಕಾಶ ಹಾಳು ಮಾಡಿದ್ದವರೇ ಮತ್ತೆ ಮುಖ್ಯಮಂತ್ರಿ ಯಾದರು. ಈಗ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಮಲ್ಲಿಕಾರ್ಜುನ ಖರ್ಗೆ ಪ್ರಧಾನಿ ಅಭ್ಯರ್ಥಿಯಾಗಲಿ ಎಂದು ಹೇಳುತ್ತಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತ್ರ ರಾಹುಲ್ ಗಾಂಧಿ ಪ್ರಧಾನಿಯಾಗಲಿದ್ದಾರೆ ಎನ್ನುತ್ತಿದ್ದಾರೆ. ಇಂತಹ ಕುತಂತ್ರ ರಾಜಕಾರಣವನ್ನು ದಲಿತರೂ ಸೇರಿದಂತೆ ಅಹಿಂದ ಸಮುದಾಯ ಅರ್ಥಮಾಡಿಕೊಳ್ಳಬೇಕು ಎಂದರು.

ಪಠ್ಯಪುಸ್ತಕ ಮುದ್ರಣದಲ್ಲೂ ಕಮಿಷನ್

ಕರ್ನಾಟಕ ಪಠ್ಯಪುಸ್ತಕ ಸಂಘವು ಪಠ್ಯಪುಸ್ತಕ ಮುದ್ರಣದಲ್ಲೂ ಶೇ 15ರಷ್ಟು ಕಮಿಷನ್ ಪಡೆಯುತ್ತಿದೆ. ದಕ್ಷಿಣ ಭಾರತ ಮಟ್ಟದಲ್ಲಿ ಟೆಂಡರ್ ಕರೆದು ಕಮಿಷನ್ ಹೆಚ್ಚು ಕೊಡುವ ಮುದ್ರಕರಿಗೆ ಮುದ್ರಣದ ಅವಕಾಶ ಕೊಡಲಾಗುತ್ತಿದೆ. ಈ ಕುರಿತು ಪಠ್ಯಪುಸ್ತಕ ಮುದ್ರಕರ ಸಂಘಟನೆಯ ಮುಖಂಡರು ಮಾಹಿತಿ ನೀಡಿದ್ದಾರೆ ಎಂದು ಎಚ್‌.ಡಿ.ಕುಮಾರಸ್ವಾಮಿ ಹೇಳಿದರು. ಬ್ರ್ಯಾಂಡ್ ಬೆಂಗಳೂರು ನಿರ್ಮಾತೃಗಳೊಬ್ಬರು ಕಟ್ಟಡ ಗುತ್ತಿಗೆಗಾರರಿಂದಲೂ ಒಂದು ಚದರಡಿಗೆ ₹100 ಪಡೆಯುತ್ತಿದ್ದಾರೆ ಎಂಬ ದೂರುಗಳಿವೆ ಎಂದರು.

ಯತ್ನಾಳ ಅವರು ರಾಜಕೀಯ ಭಿನ್ನಾಭಿಪ್ರಾಯದಿಂದಾಗಿ ಹಿಂದಿನ ತಮ್ಮದೇ ಬಿಜೆಪಿ ಸರ್ಕಾರದ ಮೇಲೆ ₹40 ಸಾವಿರ ಕೋಟಿ ಅವ್ಯವಹಾರದ ಆರೋಪ ಮಾಡಿರಬಹುದು. ಕಾಂಗ್ರೆಸ್ ಅದನ್ನೇ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ.

ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಆಹಾರ ಮೇಳ... ಚಾಮರಾಜನಗರದ ಯೂನಿವರ್ಸ್ ಸ್ಕೂಲ್‌ನಲ್ಲಿ ಶನಿವಾರ ನಡೆದ ಆಹಾರ ಮೇಳದಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ಆಹಾರವನ್ನು ಶಿಕ್ಷಕರು ಸವಿದರು

ಪುಸ್ತಕ: ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಗಣರಾಜ್ಯೋತ್ಸವ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ಪ್ರಕಟಣೆಯ ಪುಸ್ತಕಗಳಿಗೆ ಜನವರಿ ಪೂರ್ತಿ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 704 ಶೀರ್ಷಿಕೆಗಳನ್ನು ಹೊರತಂದಿದೆ. ಇವುಗಳನ್ನು ಓದುಗರಿಗೆ ಕೈಗೆಟಕುವ ಬೆಲೆಯಲ್ಲಿ ತಲುಪಿಸುವುದು ಪ್ರಾಧಿಕಾರದ ಉದ್ದೇಶ. ಪ್ರಾಧಿಕಾರದ ಮಳಿಗೆಗಳು ಮತ್ತು ಜಾಲತಾಣ www.kannadapustakapradhikara.com ಮೂಲಕವೂ ಖರೀದಿಸಬಹುದು ಎಂದು ಹೇಳಿದ್ದಾರೆ.

ಕೆಎಸ್‌ಆರ್‌ಟಿಸಿ ಚಾಲಕರಿಗೆ ಥರ್ಮೋ ಫ್ಲಾಸ್ಕ್

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ರಾತ್ರಿ ಕರ್ತವ್ಯ ನಿರ್ವಹಿಸುವ 1,600 ಚಾಲಕರಿಗೆ ಅರ್ಧ ಲೀಟರ್‌ನ ಥರ್ಮೊ ಪ್ಲಾಸ್ಕ್ ವಿತರಣೆ ಮಾಡಿದೆ.

ಇತ್ತೀಚೆಗೆ ನಡೆಸಿದ ಅಧ್ಯಯನದ ಪ್ರಕಾರ ನಿಗಮದ ವಾಹನಗಳು ರಾತ್ರಿ ವೇಳೆ ಕಾರ್ಯಾಚರಣೆಯಲ್ಲಿದ್ದಾಗ ಬೆಳಿಗ್ಗಿನ ಜಾವ 3 ರಿಂದ 4 ಗಂಟೆಯ ಸಮಯದಲ್ಲಿ ಹೆಚ್ಚು ಅಪಘಾತ ಆಗಿರುವುದು ಕಂಡು ಬಂದಿದೆ. ಪ್ರಯಾಣಿಕರಿಗೆ ಸುರಕ್ಷಿತ ಸೇವೆ ಒದಗಿಸಲು ಚಾಲಕರ ಕಾರ್ಯಕ್ಷಮತೆ ಉತ್ತಮಪಡಿಸಲು ಆ ಅವಧಿಯಲ್ಲಿ ಕಾಫಿ, ಟೀ ಸೇವನೆಗೆ ಅನುಕೂಲ ಆಗಲು ಥರ್ಮೊ ಪ್ಲಾಸ್ಕ್ ಒದಗಿಸಲಾಗಿದೆ. ಹೋಟೆಲ್‌ಗಳಿಂದ ಕಾಫಿ, ಟೀಯನ್ನು ಪ್ಲಾಸ್ಕ್‌ನಲ್ಲಿ ತುಂಬಿಸಿಕೊಂಡು ಬೆಳಿಗ್ಗಿನ ಜಾವ ಸೇವಿಸಬಹುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪದವೀಧರ, ಶಿಕ್ಷಕರ ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿ ಪ್ರಕಟ

ಬೆಂಗಳೂರು: ಮೂರು ಪದವೀಧರ ಕ್ಷೇತ್ರ ಹಾಗೂ ನಾಲ್ಕು ಶಿಕ್ಷಕರ ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿಯನ್ನು ರಾಜ್ಯ ಚುನಾವಣೆ ಆಯೋಗ ಶನಿವಾರ ಪ್ರಕಟಿಸಿದೆ.

ಕೇಂದ್ರ ಚುನಾವಣೆ ಆಯೋಗದ ವೇಳಾಪಟ್ಟಿಯಂತೆ ಹೊಸದಾಗಿ ಮತದಾರರ ಪಟ್ಟಿಯನ್ನು ಸಿದ್ಧಗೊಳಿಸಲಾಗಿದೆ. ಈಶಾನ್ಯ, ನೈರುತ್ಯ, ಬೆಂಗಳೂರು ಪದವೀಧರರ ಕ್ಷೇತ್ರ ಹಾಗೂ ಆಗ್ನೇಯ, ನೈರುತ್ಯ ಶಿಕ್ಷಕರ ಕ್ಷೇತ್ರಗಳ ಸದಸ್ಯರ ಅವಧಿ 2024ರ ಜೂನ್ 6ರಂದು ಮುಗಿಯಲಿದೆ. ನೈರುತ್ಯ ಪದವೀಧರರ ಕ್ಷೇತ್ರದ ಸದಸ್ಯ ಆಯನೂರು ಮಂಜುನಾಥ ಅವರು ರಾಜೀನಾಮೆ ನೀಡಿರುವುದರಿಂದ ಸ್ಥಾನ ಏ.19ರಿಂದ ಖಾಲಿ ಉಳಿದಿದೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಸದಸ್ಯ ಪುಟ್ಟಣ್ಣ ಅವರು ರಾಜೀನಾಮೆ ನೀಡಿದ್ದರಿಂದ ಮಾರ್ಚ್ 16ರಿಂದ ಖಾಲಿ ಉಳಿದಿದೆ.

ಅಗ್ನಿಸ್ಪರ್ಶದ ಬದಲು ಹೂಳಲು ಸೂಚಿಸಿದ ಪೊಲೀಸರು

ಚಿತ್ರದುರ್ಗ: ಅಸ್ಥಿಪಂಜರಗಳ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ಕಾರಾಗೃಹ ರಸ್ತೆಯ ಪಾಳು ಮನೆಯೊಂದರಲ್ಲಿ ಪತ್ತೆಯಾಗಿದ್ದ ಐದು ಅಸ್ಥಿಪಂಜರಗಳ ಅಂತ್ಯಕ್ರಿಯೆ ಶನಿವಾರ ನಡೆಯಿತು.

ಗುರುವಾರ ರಾತ್ರಿ ಅಸ್ಥಿಪಂಜರಗಳು ಪತ್ತೆಯಾಗಿದ್ದವು. ಶುಕ್ರವಾರ ಅವುಗಳನ್ನು ಬಸವೇಶ್ವರ ವೈದ್ಯಕೀಯ ಮತ್ತು ಸಂಶೋಧನಾ ಕೇಂದ್ರಕ್ಕೆ ರವಾನಿಸಲಾಗಿತ್ತು. ಶನಿವಾರ ಮರಣೋತ್ತರ ಪರೀಕ್ಷೆ ನಡೆಸಿ, ದೊಡ್ಡ ಸಿದ್ದವ್ವನಹಳ್ಳಿಯಲ್ಲಿರುವ ಸಂಬಂಧಿಕರಿಗೆ ಹಸ್ತಾಂತರಿಸಲಾಯಿತು.

ಸಂಪ್ರದಾಯದಂತೆ ಅಸ್ಥಿಪಂಜರಗಳಿಗೆ ಅಗ್ನಿ ಸ್ಪರ್ಶ ಮಾಡಲು ಸಂಬಂಧಿಕರು ನಿರ್ಧರಿಸಿದ್ದರು. ಆದರೆ ದಾವಣಗೆರೆ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬರುವವರೆಗೂ ಅಗ್ನಿಸ್ಪರ್ಶಕ್ಕೆ ಅವಕಾಶವಿಲ್ಲ ಎಂದು ಪೊಲೀಸರು ತಿಳಿಸಿದ್ದರಿಂದ ಜೋಗಿಮಟ್ಟಿ ರಸ್ತೆಯ ವಿವೇಕಾನಂದ ನಗರ ಬಳಿಯ ಹಿಂದೂ ರುದ್ರಭೂಮಿಯಲ್ಲಿ ಹೂಳಲಾಯಿತು.

ಎನ್.ಕೆ.ಜಗನ್ನಾಥ ರೆಡ್ಡಿ (85), ಪತ್ನಿ ಪ್ರೇಮಲೀಲಾ (74), ಪುತ್ರಿ ಎನ್.ಜೆ.ತ್ರಿವೇಣಿ (56), ಎನ್.ಜೆ. ಕೃಷ್ಣ (53), ಎನ್.ಜೆ.ನರೇಂದ್ರ (51) ಅವರು ಮನೆಯಲ್ಲಿ ವಾಸವಿದ್ದರು. ಹೀಗಾಗಿ ಅಸ್ಥಿಪಂಜರಗಳು ಜಗನ್ನಾಥ ರೆಡ್ಡಿ ಕುಟುಂಬದ ಸದಸ್ಯರದ್ದೇ ಎಂಬ ನಂಬಿಕೆಯೊಂದಿಗೆ ಸಂಬಂಧಿಕರು ಅಂತ್ಯಕ್ರಿಯೆ ನೆರವೇರಿಸಿದರು.

'ಘಟನೆಯಿಂದ ದೊಡ್ಡಸಿದ್ದವ್ವನಹಳ್ಳಿಯ ನಾಡಿಗ ರೆಡ್ಡಿ ವಂಶದವರಿಗೆ ತುಂಬಾ ನೋವಾಗಿದೆ. ಮೂರನೇ ದಿನದ ವಿಧಿವಿಧಾನ ನಡೆಸಲು ನಿರ್ಧರಿಸಿದ್ದೇವೆ' ಎಂದು ಜಗನ್ನಾಥ ರೆಡ್ಡಿ ಅವರ ಸೊಸೆ ಕೊಲ್ಲಿ ಲಕ್ಷ್ಮಿ ತಿಳಿಸಿದರು.

ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರ ತಂಡ, ಉಡುಪು ಹಾಗೂ ಮೂಳೆಗಳ ರಚನೆಯ ಆಧಾರದಲ್ಲಿ ಶವಗಳು ಇಬ್ಬರು ಮಹಿಳೆಯರು ಹಾಗೂ ಮೂವರು ಪುರುಷರದ್ದು ಎಂದು ಗುರುತಿಸಿದೆ. ಇದರ ಆಧಾರದಲ್ಲಿ ಪ್ರತಿ ಅಸ್ಥಿಪಂಜರಕ್ಕೂ ನಿರ್ದಿಷ್ಟ ಗುರುತಿನ ಸಂಖ್ಯೆ ನೀಡಿ ಸಂಬಂಧಿಕರಿಗೆ ಒಪ್ಪಿಸಿದೆ.

'ಘಟನೆಗೆ ಕಾರಣ ತಿಳಿಯುವ ಸಲುವಾಗಿ, ಮೂಳೆ, ಬಟ್ಟೆ, ಒಂದು ಅಸ್ಥಿಪಂಜರದ ಮೇಲಿದ್ದ ಚರ್ಮದ ತುಣುಕನ್ನು ಸಂಗ್ರಹಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯ ವೇಣು ತಿಳಿಸಿದ್ದಾರೆ.

ಪೊಲೀಸರ ಸಮ್ಮುಖದಲ್ಲಿ ಅಂತ್ಯಕ್ರಿಯೆ ನಡೆಯಿತು. ಪಾಳು ಮನೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

2019ರ ಜನವರಿಯಲ್ಲಿ ಸಾವು?

ಮನೆಯಲ್ಲಿ ಅಸ್ಥಿಪಂಜರದ ರೀತಿಯಲ್ಲಿ ಪತ್ತೆಯಾದವರು 2019ರ ಜನವರಿಯಲ್ಲಿ ಮೃತಪಟ್ಟಿರುವ ಸಾಧ್ಯತೆ ಇದೆ ಎಂಬ ನಿರ್ಧಾರಕ್ಕೆ ಪೊಲೀಸರು ಬಂದಿದ್ದಾರೆ. ಇದರ ಆಧಾರದ ಮೇಲೆ ತನಿಖೆ ಕೈಗೆತ್ತಿಕೊಂಡಿದ್ದಾರೆ. 'ಮನೆಯ ಗೋಡೆಯ ಮೇಲಿದ್ದ ಕ್ಯಾಲೆಂಡರ್ 2019ರ ಜನವರಿ ತಿಂಗಳು ತೋರಿಸುತ್ತಿದೆ. ಮನೆಯ ವಿದ್ಯುತ್ ಬಿಲ್ ಕೂಡ ಅಂದಿನಿಂದಲೇ ಬಾಕಿ ಇದೆ ಎಂಬುದನ್ನು ತಜ್ಞರು ಪತ್ತೆ ಮಾಡಿದ್ದಾರೆ' ಎಂದು ಮೂಲಗಳು ಮಾಹಿತಿ ನೀಡಿವೆ.

ಹರಿದಾಡಿದ ವಿಡಿಯೊ

ಅಸ್ಥಿಪಂಜರ ಪತ್ತೆಯಾದ ಮನೆಯೊಳಗೆ ಕೆಲ ಯುವಕರು ಪ್ರವೇಶಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೆಂಪು ಟೀ ಶರ್ಟ್ ಹಾಕಿಕೊಂಡಿರುವ ಯುವಕರ ಗುಂಪು ಬೆಳಗಿನ ವೇಳೆಯಲ್ಲೇ ಮನೆ ಪ್ರವೇಶಿಸಿ ವಿಡಿಯೊ ಮಾಡಿದೆ. ಪ್ರತಿ ಕೊಠಡಿಗೆ ಹೋಗಿರುವ ಇವರು ಅಸ್ಥಿಪಂಜರಗಳನ್ನು ಎಣಿಕೆ ಮಾಡಿದ್ದಾರೆ. 'ಸುಮ್ಮನಿರಿ, ಹೆದರಿಕೆ ಆಗುತ್ತಿದೆ' ಎಂಬುದಾಗಿ ಯುವಕನೊಬ್ಬ ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಸುರಕ್ಷತೆಗಾಗಿ ಮೊಬೈಲ್ ಕಮಾಂಡೊ ವಾಹನ ಬಳಕೆ ಮಾಡಿಕೊಳ್ಳಲಾಗುತ್ತಿದೆ (ಮೊದಲ ಚಿತ್ರ). ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಿದ ಸಿಬ್ಬಂದಿ (ಮಧ್ಯದ ಚಿತ್ರ). ಯುವತಿಯರ ಸುರಕ್ಷತೆಗಾಗಿ ತಾತ್ಕಾಲಿಕ ಕೊಠಡಿಗಳನ್ನು ತೆರೆಯಲಾಗಿದೆ

ಪ್ರಜಾವಾಣಿ ಚಿತ್ರಗಳು

ಸಿಸಿಟಿವಿ ಕ್ಯಾಮೆರಾ ಕಣ್ಗಾವಲು, ಪಾನಮತ್ತ ಚಾಲಕರ ಪತ್ತೆಗೆ ವಿಶೇಷ ತಂಡ ರಚನೆ

ಹೊಸ ವರ್ಷ ಸ್ವಾಗತಿಸಲು ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷ–2024 ಅನ್ನು ಸ್ವಾಗತಿಸಲು ನಗರ ಸಜ್ಜಾಗಿದೆ. ಡಿ.31ರ ರಾತ್ರಿ 8ರ ಬಳಿಕ ಹಳೆ ವರ್ಷಕ್ಕೆ ವಿದಾಯ ಹೇಳಿ, ಹೊಸ ವರ್ಷ ಬರ ಮಾಡಿಕೊಳ್ಳುವ ಸಂಭ್ರಮಾಚರಣೆಗೆ ನಗರ ಸಾಕ್ಷಿಯಾಗಲಿದೆ.

ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗಲದಲ್ಲಿ ಹೊಸ ವರ್ಷಾಚರಣೆಗೆ ಹೆಚ್ಚಿನ ಜನರು ಸೇರುವ ನಿರೀಕ್ಷೆಯಿದ್ದು, ಪೊಲೀಸರು ಭದ್ರತೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ.

ಪ್ರಮುಖ ರಸ್ತೆಗಳಲ್ಲಿ ಹೆಚ್ಚುವರಿಯಾಗಿ 400 ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಮಾಡಲಾಗಿದೆ. ಅಲ್ಲಲ್ಲಿ ಪೊಲೀಸ್ ಬ್ಯಾರಿಕೇಡ್ ಹಾಕಲಾಗಿದೆ. ಡ್ರೋನ್ ಕ್ಯಾಮೆರಾ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪೊಲೀಸ್ ಕಣ್ಗಾವಲಿನಲ್ಲೇ ಸಂಭ್ರಮಾಚರಣೆ ನಡೆಯಲಿದೆ. ಸಂಭ್ರಮಾಚರಣೆ ನಡೆಯುವ ಪ್ರದೇಶದಲ್ಲಿ ಪೊಲೀಸರು ಶನಿವಾರ ರಾತ್ರಿಯೇ ಪರಿಶೀಲನೆ ನಡೆಸಿದರು. ಪಾನಮತ್ತ ಚಾಲಕರ ಪತ್ತೆಗೆ 48 ವಿಶೇಷ ತಂಡ ರಚಿಸಲಾಗಿದೆ.

'ಸಾರ್ವಜನಿಕ ಸ್ಥಳಗಳಲ್ಲಿ ಡಿ.31ರಂದು ರಾತ್ರಿ 1 ಗಂಟೆಯವರೆಗೆ ಮಾತ್ರ ಸಂಭ್ರಮಾಚರಣೆಗೆ ಅವಕಾಶವಿದೆ' ಎಂದು ಪೊಲೀಸ್ ಕಮಿಷನರ್‌ಬಿ. ದಯಾನಂದ್ ತಿಳಿಸಿದ್ದಾರೆ.

'ಮದ್ಯದ ಅಂಗಡಿಗಳ ವಹಿವಾಟಿಗೆ ರಾತ್ರಿ 11 ಗಂಟೆಯವರೆಗೂ ಅವಕಾಶವಿದೆ. ಬಾರ್ ಆ್ಯಂಡ್ ರೆಸ್ಟೋರೆಂಟ್, ಪಬ್, ಹೋಟೆಲ್ ಹಾಗೂ ಇತರೆ ವ್ಯಾಪಾರ ಸ್ಥಳಗಳನ್ನು ರಾತ್ರಿ 1 ಗಂಟೆಯೊಳಗೆ ಬಂದ್ ಮಾಡಬೇಕು. ನಿಯಮ ಮೀರಿದರೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಸಿದ್ದಾರೆ.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಇಂದಿರಾನಗರ, ಕೋರಮಂಗಲದಲ್ಲಿ ವೈದ್ಯರು, ಬೆಸ್ಕಾಂ ಸಿಬ್ಬಂದಿ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ಅಧಿಕಾರಿಗಳೂ ಪೊಲೀಸರ ಜೊತೆಗಿರಲಿದ್ದಾರೆ. ಸ್ಥಳದಲ್ಲಿ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ.

ಭದ್ರತೆಗೆ ಇಬ್ಬರು ಹೆಚ್ಚುವರಿ ಪೊಲೀಸ್ ಆಯುಕ್ತರು, 15 ಮಂದಿ ಡಿಸಿಪಿಗಳು, 45 ಎಸಿಪಿಗಳು, 160 ಇನ್‌ಸ್ಪೆಕ್ಟರ್‌ಗಳು, 600 ಸಬ್ ಇನ್‌ಸ್ಪೆಕ್ಟರ್‌ಗಳು, 600 ಎಎಸ್‌ಐ, 1,800 ಹೆಡ್ ಕಾನ್‌ಸ್ಟೆಬಲ್, 5,200 ಕಾನ್‌ಸ್ಟೆಬಲ್‌ಗಳನ್ನು ಭದ್ರತೆಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಎಂ.ಜಿ ರಸ್ತೆ ಸುತ್ತಮುತ್ತ 3 ಸಾವಿರ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುರಕ್ಷತಾ ದ್ವೀಪ ಸ್ಥಾಪನೆ: ಸಂಭ್ರಮಾಚರಣೆ ನಡೆಯುವ ಪ್ರದೇಶದಲ್ಲಿ ಮಹಿಳೆ ಸುರಕ್ಷತಾ ದ್ವೀಪ ತೆರೆಯಲಾಗಿದೆ. ಮಕ್ಕಳ ಕಾಣೆಯಾದರೆ ನೆರವು ನೀಡಲು ಅಲ್ಲಲ್ಲಿ ಸಹಾಯವಾಣಿ ಕೇಂದ್ರ ಸ್ಥಾಪಿಸಲಾಗಿದೆ. ವಾಚ್ ಟವರ್‌ಗಳ ನಿರ್ಮಾಣ ಮಾಡಲಾಗಿದೆ.

ಸಂಚಾರ ನಿರ್ಬಂಧ

ಹೆಣ್ಣೂರು, ಐ.ಟಿ.ಸಿ, ಬಾಣಸವಾಡಿ ಮುಖ್ಯರಸ್ತೆ, ಲಿಂಗರಾಜಪುರ, ಹೆಣ್ಣೂರು ಮುಖ್ಯರಸ್ತೆ ಮೇಲ್ಸೇತುವೆ, ಕಲ್ಲಳ್ಳಿ ರೈಲ್ವೆಗೇಟ್ ಮೇಲ್ಸೇತುವೆ, ದೊಮ್ಮಲೂರು ಮೇಲ್ಸೇತುವೆ, ನಾಗವಾರ, ಮೇಡಹಳ್ಳಿ, ಒ.ಎಂ. ರೋಡ್, ದೇವರಬೀಸನ ಹಳ್ಳಿ, ಮಹದೇವಪುರ, ದೊಡ್ಡನೆಕ್ಕುಂದಿ ಮೇಲ್ಸೇತುವೆಯಲ್ಲಿ ಭಾನುವಾರ ರಾತ್ರಿ 11ರಿಂದ ಸೋಮವಾರ ಬೆಳಿಗ್ಗೆ 6ರ ವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಮದ್ಯ ಸೇವಿಸಿ ವ್ಹೀಲೀ ನಡೆಸುವವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಮದ್ಯ ಸೇವಿಸಿ ರಸ್ತೆಗಳಲ್ಲಿ ವ್ಹೀಲೀ ನಡೆಸಿದರೆ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ರಾತ್ರಿ 11ರ ನಂತರ ಎಂ.ಜಿ ರಸ್ತೆ ಮೆಟ್ರೊ ನಿಲ್ದಾಣ ಬಂದ್

ಹೊಸ ವರ್ಷದ ಸಂಭ್ರಮಾಚರಣೆಗೆ ಬರುವವರಿಗೆ ಅನುಕೂಲ ಆಗುವಂತೆ ಡಿ.31ರಂದು ಮೆಟ್ರೊ ರೈಲು ಸಂಚಾರವನ್ನು ರಾತ್ರಿ 2 ಗಂಟೆವರೆಗೆ ವಿಸ್ತರಿ ಸಲಾಗಿದೆ. ಆದರೆ, ಈ ಹೆಚ್ಚುವರಿ ಅವಧಿಯಲ್ಲಿ ಎಂ.ಜಿ. ರಸ್ತೆ ನಿಲ್ದಾಣದಲ್ಲಿ ಪ್ರಯಾಣಿಕರು ಇಳಿಯುವುದಕ್ಕೆ ಹಾಗೂ ಮೆಟ್ರೊ ರೈಲು ಏರುವುದಕ್ಕೆ ಅವಕಾಶ ಇಲ್ಲ. ಪೊಲೀಸ್ ಇಲಾಖೆ ಸೂಚನೆ ಮೇರೆಗೆ ಭಾನುವಾರ ರಾತ್ರಿ 11ರ ಬಳಿಕ ಎಂ.ಜಿ ರಸ್ತೆ ಮೆಟ್ರೊ ನಿಲ್ದಾಣದ ಬಾಗಿಲುಗಳು ಬಂದ್ ಆಗಲಿವೆ.

ಪ್ರತಿ ದಿನ ರಾತ್ರಿ 11.30ಕ್ಕೆ ಇದ್ದ ಕೊನೆಯ ರೈಲು ಸೇವೆಯನ್ನು ಡಿ.31ರಂದು ರಾತ್ರಿ 2 ಗಂಟೆ ತನಕ ವಿಸ್ತರಿಸಲಾಗಿದೆ. ಈ ಸಂದರ್ಭದಲ್ಲಿ ಪ್ರತಿ 15 ನಿಮಿಷಕ್ಕೊಂದು ರೈಲು ಸಂಚರಿಸಲಿದೆ.

ಎಲ್ಲ ನಾಲ್ಕು ಟರ್ಮಿನಲ್‌ಗಳಿಂದ ರಾತ್ರಿ 1.30ಕ್ಕೆ ಕೊನೆಯ ಮೆಟ್ರೊ ರೈಲುಗಳು ಹೊರಡಲಿವೆ.

ನಾಡಪ್ರಭು ಕೆಂಪೇಗೌಡ ಮೆಜೆಸ್ಟಿಕ್ ನಿಲ್ದಾಣದಿಂದ ನಾಲ್ಕು ಟರ್ಮಿನಲ್‌ಗಳಿಗೆ 2.15ಕ್ಕೆ ಕೊನೇ ಮೆಟ್ರೊಗಳು ಹೊರಡಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಟ್ರಿನಿಟಿ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣಗಳಿಂದ ಪ್ರಯಾಣಿಸುವವರಿಗೆ ₹ 50 ಮೊತ್ತದ ಕಾಗದದ ಟಿಕೆಟ್ ವಿತರಿಸಲಾಗುವುದು. ಕಾಗದದ ಟಿಕೆಟ್‌ಗಳನ್ನು ಅಂದು ಮುಂಚಿತವಾಗಿಯೇ ಪಡೆಯಬೇಕು. ಮಧ್ಯರಾತ್ರಿ ಟಿಕೆಟ್ ವಿತರಣೆ ಇರುವುದಿಲ್ಲ. ಸ್ಮಾರ್ಟ್ ಕಾರ್ಡ್ ಮತ್ತು ಕ್ಯೂಆರ್ ಕೋಡ್ ಟಿಕೆಟ್ ಹೊಂದಿರುವ ಪ್ರಯಾಣಿಕರು ಎಂದಿನಂತೆ ರಿಯಾಯಿತಿ ದರದಲ್ಲಿ ಪ್ರಯಾಣಿಸಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ವಾಹನ ನಿಲುಗಡೆ ನಿರ್ಬಂಧ

ಮಹಾತ್ಮಗಾಂಧಿ ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ ಹಾಗೂ ಚರ್ಚ್ ರಸ್ತೆಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ನಡೆಯಲಿದ್ದು, ಡಿ.31ರಂದು ರಾತ್ರಿ 8ರಿಂದ ಮಧ್ಯರಾತ್ರಿ 1 ಗಂಟೆ ವರೆಗೆ ಹಲವು ರಸ್ತೆಗಳಲ್ಲಿ ವಾಹನ ಸಂಚಾರ ಹಾಗೂ ನಿಲುಗಡೆ ನಿರ್ಬಂಧಿಸಲಾಗಿದೆ.

ಎಂ.ಜಿ ರಸ್ತೆಯ ಅನಿಲ್ ಕುಂಬ್ಳೆ ವೃತ್ತದಿಂದ ಮೆಯೊ ಹಾಲ್ ಜಂಕ್ಷನ್ ವರೆಗೆ, ಬ್ರಿಗೇಡ್ ರಸ್ತೆಯಲ್ಲಿ ಕಾವೇರಿ ಎಂಪೋರಿಯಂನ ಜಂಕ್ಷನ್‌ನಿಂದ ಅಪೇರಾ ಜಂಕ್ಷನ್ ವರೆಗೆ, ಚರ್ಚ್ ಸ್ಟ್ರೀಟ್‌ನಲ್ಲಿ ಬ್ರಿಗೇಡ್ ರಸ್ತೆಯ ಜಂಕ್ಷನ್‌ನಿಂದ ಮ್ಯೂಸಿಯಂ ರಸ್ತೆ ಜಂಕ್ಷನ್ ವರೆಗೆ, ರೆಸ್ಟ್ ಹೌಸ್ ರಸ್ತೆಯಲ್ಲಿ ಮ್ಯೂಸಿಯಂ ರಸ್ತೆ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆ ಜಂಕ್ಷನ್ ವರೆಗೆ, ರೆಸಿಡೆನ್ಸಿ ಕ್ರಾಸ್ ರಸ್ತೆಯಲ್ಲಿ ರೆಸಿಡೆನ್ಸಿ ರಸ್ತೆ ಜಂಕ್ಷನ್‌ನಿಂದ ಮಹಾತ್ಮ ಗಾಂಧಿ ರಸ್ತೆಯ ಜಂಕ್ಷನ್ ವರೆಗೆ ವಾಹನ ನಿಲುಗಡೆ ಹಾಗೂ ಸಂಚಾರ ನಿರ್ಬಂಧಿಸಲಾಗಿದೆ.

ಭಾನುವಾರ ಸಂಜೆ 4ರಿಂದ ಸೋಮವಾರ ಬೆಳಿಗ್ಗೆ 6ರ ವರೆಗೆ ಸಂಚಾರ ಪೂರ್ವ ವಿಭಾಗದ ವ್ಯಾಪ್ತಿಯ ಹಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಹಳೇ ಮದ್ರಾಸ್ ರಸ್ತೆ ಜಂಕ್ಷನ್‌ನಿಂದ ದೊಮ್ಮಲೂರು ಮೇಲ್ಸೇತುವೆ ಜಂಕ್ಷನ್‌ವರೆಗೆ ವಾಹನ ನಿಲುಗಡೆ ನಿಷೇಧಿಸಲಾಗಿದೆ. ಓಲಾ ಹಾಗೂ ಊಬರ್‌ಗಳಿಗೆ ಪ್ರತ್ಯೇಕವಾಗಿ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಪೊಲೀಸರ ನೆರವಿಗೆ ಸಹಾಯವಾಣಿ ಸಂಖ್ಯೆ 112 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಟಿ.ಸಿ ಪರಿಶೀಲನೆ

ಬೆಂಗಳೂರು: ಹೊಸ ವರ್ಷ ಆಚರಣೆಗೆ ಸಜ್ಜಾಗಿರುವ ನಗರದ ಮುಖ್ಯ ಪ್ರದೇಶಗಳಾದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಹಾಗೂ ಕೋರಮಂಗಲ 60 ಅಡಿ ರಸ್ತೆ ಇಕ್ಕೆಲಗಳಲ್ಲಿರುವ ವಿದ್ಯುತ್ ಕಂಬಗಳು ಹಾಗೂ ಟ್ರಾನ್ಸ್‌ಫಾರ್ಮರ್‌ಗಳ ಕಾರ್ಯದಕ್ಷತೆಯನ್ನು ಬೆಸ್ಕಾಂ ಹಿರಿಯ ಅಧಿಕಾರಿಗಳು ಶನಿವಾರ ಪರಿಶೀಲಿಸಿದರು.

ಜೋತು ಬಿದ್ದಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸಲಾಯಿತು. ಹೊಸ ವರ್ಷ ಆಚರಣೆ ನಡೆಯುವ ಪ್ರದೇಶಗಳಲ್ಲಿ ಯಾವುದೇ ವಿದ್ಯುತ್ ಸಂಬಂಧಿತ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸಲು ಕಾವಲಿಗೆ ಬೆಸ್ಕಾಂ ಸಿಬ್ಬಂದಿಯನ್ನು ಭಾನುವಾರ ನಿಯೋಜಿಸಲಾಗುವುದು ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

'ಮಾಣಿಪ್ಪಾಡಿ ವರದಿ ಸತ್ಯಕ್ಕೆ ದೂರ'

ಶಿರಸಿ: 'ರಾಜ್ಯದಾದ್ಯಂತ ವಕ್ಫ್ ಆಸ್ತಿ ಕಬಳಿಕೆ ಕುರಿತು ಅನ್ವರ್ ಮಾಣಿಪ್ಪಾಡಿ ಸ್ವಯಂಪ್ರೇರಣೆಯಿಂದ ಸರ್ಕಾರಕ್ಕೆ ನೀಡಿದ್ದ ವರದಿಯು ಶೇ 99ರಷ್ಟು ವಾಸ್ತವಕ್ಕೆ ದೂರವಾದ ಅಂಶಗಳನ್ನು ಹೊಂದಿವೆ' ಎಂದು ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಕೆ.ಅನ್ವರ್ ಬಾಷಾ ಹೇಳಿದರು.

'ರಾಜ್ಯದಲ್ಲಿ ವಕ್ಫ್ ಆಸ್ತಿ ಒತ್ತುವರಿ ಬಗ್ಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನ್ವರ್ ಮಾಣಿಪ್ಪಾಡಿ 6 ಸಾವಿರ ಪುಟಗಳ ಸಮೀಕ್ಷಾ ವರದಿ ನೀಡಿದ್ದರು. ಅದರಲ್ಲಿ ಕಾಂಗ್ರೆಸ್ ನಾಯಕರ ಹೆಸರು ಕೇಳಿ ಬಂದಿದ್ದವು. ಆದರೆ ಈ ವರದಿ ಅನುಷ್ಠಾನದ ಬಗ್ಗೆ ಬಿಜೆಪಿ ಸರ್ಕಾರದಲ್ಲೇ ಸಹಮತ ಇರಲಿಲ್ಲ. ಮಾಣಿಪ್ಪಾಡಿ ಅವರು ಗಾಜಿನ ಮನೆಯಲ್ಲಿ ಕುಳಿತು ಈ ವರದಿ ಸಿದ್ಧಪಡಿಸಿದ್ದರು' ಎಂದು ಅವರು ಸುದ್ದಿಗಾರರಿಗೆ ಶನಿವಾರ ಹೇಳಿದರು.

'ಜಮೀರ್ ಅಹಮದ್, ಖಮರುಲ್ ಇಸ್ಲಾಂ, ನಜೀರ್ ಅಹ್ಮದ್ ಸೇರಿ ಯಾರೊಬ್ಬರು ವಕ್ಫ್ ಆಸ್ತಿ ಕಬಳಿಸಿರುವುದು ಗಮನಕ್ಕೆ ಬಂದಿಲ್ಲ' ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಯುವಕನಿಗೆ ಇರಿತ: ಬಂಧನ

ಬೆಂಗಳೂರು: ಯುವತಿ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಯುವಕನಿಗೆ ಚಾಕುವಿನಿಂದ ಇರಿದಿದ್ದ ಇಬ್ಬರು ಆರೋಪಿಗಳನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಯಂಡಹಳ್ಳಿ ನಿವಾಸಿಗಳಾದ ಧನುಷ್(20) ಹಾಗೂ ಶಾಬುದ್ದೀನ್(22) ಬಂಧಿತರು.

ಆರೋಪಿಗಳು, ಡಿ.21ರಂದು ನಾಯಂಡಹಳ್ಳಿ ಸಮೀಪದ ವಿನಾಯಕ ಲೇಔಟ್‌ನಲ್ಲಿ ಕಾರ್ತಿಕ್ ಎಂಬಾತನಿಗೆ ಚಾಕುವಿನಿಂದ ಇರಿದಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಧನುಷ್ ಪ್ರೇಯಸಿಯ ನಂಬರ್ ಪಡೆದಿದ್ದ ಕಾರ್ತಿಕ್, ಆಕೆಗೆ ಕರೆ ಮಾಡಿ ಮಾತಾಡಿದ್ದ. ಜತೆಗೆ ಆಕೆಯ ಹಿಂದೆ ಬಿದ್ದು ಪ್ರೀತಿಸುವಂತೆ ಪೀಡಿಸುತ್ತಿದ್ದ. ವಿಚಾರವನ್ನು ಧನುಷ್‌ಗೆ ಯುವತಿ ತಿಳಿಸಿದ್ದಳು. ವಿಚಾರ ಕೇಳಿ ಕುಪಿತಗೊಂಡಿದ್ದ ಧನುಷ್ ತನ್ನ ಸ್ನೇಹಿತ ಶಾಬುದ್ದೀನ್‌ಗೆ ತಿಳಿಸಿದ್ದ. ಕಾರ್ತಿಕ್ ಮೇಲೆ ಹಲ್ಲೆ ನಡೆಸಿ ಬುದ್ಧಿ ಕಲಿಸಲು ನಿರ್ಧರಿಸಿದ್ದರು. ಅದರಂತೆ ಡಿ.21ರ ಸಂಜೆ 6.30ಕ್ಕೆ ಕಾರ್ತಿಕ್‌ಗೆ ಕರೆ ಮಾಡಿದ ಧನುಷ್, ಮನೆಯಿಂದ ಹೊರ ಬರುವಂತೆ ಹೇಳಿದ್ದಾನೆ. ಮನೆಯಿಂದ 500 ಮೀಟರ್ ದೂರಕ್ಕೆ ಚಾಕುವಿನಿಂದ ಹಲ್ಲೆ ನಡೆಸಿ ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಚೇತರಿಕೆ: ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡಿದ್ದ ಕಾರ್ತಿಕ್ ತಾನೇ ಬೈಕ್ ಹತ್ತಿ ಆಸ್ಪತ್ರೆಗೆ ದಾಖಲಾಗಿದ್ದ. ಸದ್ಯ ಆತ ಚೇತರಿಸಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಪರ್ಸ್ ಹುಡುಕಲು ಬಾಂಬ್ ಬೆದರಿಕೆ: ಪ್ರಯಾಣಿಕ ವಶಕ್ಕೆ

ದೇವನಹಳ್ಳಿ: ವಿಮಾನದಲ್ಲಿ ಪ್ರಯಾಣಿಸುವಾಗ ಕಳೆದು ಹೋದ ಪರ್ಸ್ ಶೀಘ್ರ ಹುಡುಕಲು ಅದರಲ್ಲಿ ಬಾಂಬ್ ಇದೆ ಎಂದು ಬೆದರಿಕೆವೊಡ್ಡಿದ ಪ್ರಯಾಣಿಕನನ್ನು ವಿಮಾನ ನಿಲ್ದಾಣ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದೆಹಲಿಯಿಂದ ಸ್ಪೈಸ್ ಜೆಟ್ ವಿಮಾನ ಮೂಲಕ ಮಂಗಳವಾರ (ಡಿ.26) ಬಂದ ಶ್ರೇಯಸ್ ಚಾರ್ಮಿಯ ಪ್ರಯಾಣದ ವೇಳೆ ಪರ್ಸ್ ಕಳೆದುಕೊಂಡಿದ್ದರು.

'ಸ್ಪೈಸ್ ಜೆಟ್ ವಿಮಾನ ಗ್ರಾಹಕ ಸಹಾಯವಾಣಿಗೆ ಕರೆ ಮಾಡಿ ದೆಹಲಿಯಲ್ಲಿ ಪರ್ಸ್ ಕಳೆದುಕೊಂಡಿದ್ದೇನೆ. ಅದರಲ್ಲಿ ಬಾಂಬ್ ಇದೆ ಎಂದು ತಿಳಿಸಿದ್ದ'. ಪರ್ಸ್‌ಗಾಗಿ ತೀವ್ರ ಶೋಧ ನಡೆಸಿದಾಗ ಪ್ರಯಾಣ ಮಾಡಿದ ವಿಮಾನದಲ್ಲಿಯೇ ಕಳೆದು ಹೋದ ಪರ್ಸ್ ಪತ್ತೆಯಾಗಿದೆ.

ಬಾಂಬ್ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಪಾರ್ಟ್‌ಮೆಂಟ್‌ನಿಂದ ಬಿದ್ದು ಎಂಜಿನಿಯರ್ ಸಾವು

ಬೆಂಗಳೂರು: ಕೆ.ಆರ್. ಪುರ ಪೊಲೀಸ್ ಠಾಣೆ ವ್ಯಾಪ್ತಿಯ ಅಯ್ಯಪ್ಪ ನಗರದ ಕೊಡಿಗೇಹಳ್ಳಿಯ ಅಪಾರ್ಟ್‌ಮೆಂಟ್‌ನ 33ನೇ ಮಹಡಿಯಿಂದ ಸಾಫ್ಟ್‌ವೇರ್ ಎಂಜಿನಿಯರ್ ಬಿದ್ದು ಮೃತಪಟ್ಟಿದ್ದಾರೆ.

ದೀಪಾಂಶು ಶರ್ಮಾ (27) ಮೃತಪಟ್ಟವರು. 'ಪಶ್ಮಿನಾ ಅಪಾರ್ಟ್‌ಮೆಂಟ್ ಈ ಘಟನೆ ನಡೆದಿದೆ.

ದೀಪಾಂಶು ಶರ್ಮಾ

ದೀಪಾಂಶು ಶರ್ಮಾ ಅವರ ತಂದೆ, ನಿವೃತ್ತ ವಾಯುಸೇನಾ ಅಧಿಕಾರಿ ಚಮನ್ ಶರ್ಮಾ ಅವರು ದೂರು ನೀಡಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ದೀಪಾಂಶು ಅವರು ಪಿ.ಜಿಯಲ್ಲಿ ವಾಸವಾಗಿದ್ದರು. ಶುಕ್ರವಾರ ಬೆಳಿಗ್ಗೆ ತನ್ನ ಸ್ನೇಹಿತನ ಅಪಾರ್ಟ್‌ಮೆಂಟ್‌ನಲ್ಲಿದ್ದಾಗ ಈ ಘಟನೆ ಸಂಭವಿಸಿದೆ. ಬೆಳಿಗ್ಗೆ 6.45ರ ಸುಮಾರಿಗೆ ಬಾಲ್ಕನಿ ಬಳಿ ತೆರಳಿದ್ದಾಗ ಆಯತಪ್ಪಿ 33ನೇ ಮಹಡಿಯಿಂದ ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾರೆ' ಎಂದು ಮೂಲಗಳು ಹೇಳಿವೆ.

ನೇಮಕಾತಿ ವಿಭಾಗದಿಂದ ಪಂತ್ ವರ್ಗ

ಬೆಂಗಳೂರು: ಪೊಲೀಸ್ ನೇಮಕಾತಿ ವಿಭಾಗದ ಡಿಜಿಪಿಯಾಗಿದ್ದ ಕಮಲ್ ಪಂತ್ ಅವರನ್ನು ಅಗ್ನಿಶಾಮಕ ದಳಕ್ಕೆ ವರ್ಗಾವಣೆ ಮಾಡಲಾಗಿದೆ. ನೇಮಕಾತಿ ವಿಭಾಗದ ಹೆಚ್ಚುವರಿ ಹೊಣೆಯನ್ನು ಅವರಿಗೆ ವಹಿಸಲಾಗಿದೆ.

ಮಂಗಳೂರು ಪಶ್ಚಿಮ ವಲಯದ ಡಿಐಜಿ ಆಗಿದ್ದ ಡಾ. ಚಂದ್ರಗುಪ್ತ ಅವರನ್ನು ಅಪರಾಧ ವಿಭಾಗದ ಐಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ನಾಗರಿಕ ಹಕ್ಕು ಮತ್ತು ಜಾರಿ ನಿರ್ದೇಶನಾಲಯದ ಡಿಐಜಿಯಾಗಿದ್ದ ವೈ.ಎಸ್. ರವಿಕುಮಾರ್ ಅವರನ್ನು ಭದ್ರತೆ (ಗುಪ್ತಚರ) ವಿಭಾಗಕ್ಕೆ ವರ್ಗಾವಣೆ ಮಾಡಲಾಗಿದೆ.

ವರ್ಗಾವಣೆಯಾದವರು: ಸೀಮಂತ್ ಕುಮಾರ್ ಸಿಂಗ್–ಎಡಿಜಿಪಿ, ಬಿಎಂಟಿಎಫ್, ಅಲೋಕ್ ಕುಮಾರ್–ವಿಶೇಷ ಆಯುಕ್ತ, ಕರ್ನಾಟಕ ರಸ್ತೆ ಸುರಕ್ಷತಾ ಪ್ರಾಧಿಕಾರ. ಹರಿಶೇಖರನ್ –ಎಡಿಜಿಪಿ, ಗೃಹ ರಕ್ಷಕ ದಳ ಹಾಗೂ ನಾಗರಿಕ ಭದ್ರತೆ. ಎಂ.ನಂಜುಂಡಸ್ವಾಮಿ– ಎಡಿಜಿಪಿ, ಅಗ್ನಿಶಾಮಕ ದಳ ಹಾಗೂ ಎಸ್‌ಡಿಆರ್‌ಪಿ. ಡಾ.ಕೆ. ತ್ಯಾಗರಾಜನ್, ಐಜಿಪಿ, ಪೂರ್ವ ವಲಯ, ದಾವಣಗೆರೆ. ಅಮಿತ್ ಸಿಂಗ್ –ಡಿಐಜಿ, ಪಶ್ಚಿಮ ವಲಯ. ಶಂತನು ಸಿಂಹ-ಡಿಐಜಿ, ಕೇಂದ್ರ ಸೇವೆ. ಡಾ.ದಿವ್ಯಾ ವಿ. ಗೋಪಿನಾಥ್–ಡಿಐಜಿ, ಎಫ್‌ಎಸ್‌ಎಲ್ ವಿಭಾಗ. ಸುಧೀರ್ ಕುಮಾರ್ ರೆಡ್ಡಿ, ಡಿಐಜಿ, ಅರಣ್ಯ ಘಟಕ. ಆರ್.ಚೇತನ್ –ಡಿಐಜಿ –ಪೊಲೀಸ್ ಕಮಿಷನರ್, ಕಲಬುರಗಿ.

ವರ್ತಿಕಾ ಕಟಿಯಾರ್ –ಡಿಐಜಿ, ಆಂತರಿಕಾ ಭದ್ರತಾ ವಿಭಾಗ. ಕಾರ್ತಿಕ್ ರೆಡ್ಡಿ–ಎಸ್‌ಪಿ, ರಾಮನಗರ. ಕುಲದೀಪ್ ಕುಮಾರ್ ಆರ್. ಜೈನ್–ಸಂಚಾರ ಪೂರ್ವ ವಿಭಾಗ, ಬೆಂಗಳೂರು. ಕೆ.ಸಂತೋಷ್ ಬಾಬು– ಡಿಸಿಪಿ, ಆಡಳಿತ, ಬೆಂಗಳೂರು.

ಡಿ.ಆರ್.ಸಿರಿಗೌರಿ-ಡಿಸಿಪಿ, ಉತ್ತರ. ಎಂ.ಪುಟ್ಟಮಾದಯ್ಯ- ಎಸ್‌ಪಿ, ನಾಗರಿಕ ಹಕ್ಕು ಮತ್ತು ಜಾರಿ ನಿರ್ದೇಶನಾಲಯ. ಟಿ.ಶ್ರೀಧರ್-ಎಐಜಿಪಿ, ಪೊಲೀಸ್ ಪ್ರಧಾನ ಕಚೇರಿ. ಡಾ.ಸಂಜೀವ್ ಎಂ ಪಾಟೀಲ್-ಎಐಜಿಪಿ, ಪ್ರಧಾನ ಕಚೇರಿ. ಡಾ.ಸುಮನಾ ಡಿ. ಪೆನ್ನೇಕರ್-ಎಐಜಿಪಿ, ಹೆಡ್ ಕ್ವಾಟರ್ಸ್.

ಚಿತ್ರಾವಳಿ

ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ನಳಪಾಕ ನಾಟಕೂಟೋತ್ಸವ'ವನ್ನು ವಿಧಾನಪರಿಷತ್ ಸದಸ್ಯ ಟಿ.ಎ. ಶರವಣ ಉದ್ಘಾಟಿಸಿದರು. ಹೋಟೆಲ್ ನಳಪಾಕದ ಕವಿತಾ ಕಾಡದೇವರಮಠ, ಲಿಂಗಯ್ಯ ಕಾಡದೇವರಮಠ, ಸ್ವಸ್ತಿಕ ಸಂಸ್ಥೆಯ ಮನೋಜ ಜೈನ, 'ಅಮೀನಗಢ ವಿಜಯ ಕರದಂಟಿ'ನ ಸುನೀಲ ನಾಗಠಾಣ, ಬಿಜೆಪಿ ಮುಖಂಡೆ ಅನಿತಾ ಭಾರದ್ವಜ, ನಟಿ ಮಾಲತಿ ಸರದೇಶಪಾಂಡೆ ಮತ್ತು ನಿರ್ದೇಶಕ ಯಶವಂತ ಸರದೇಶಪಾಂಡೆ ಭಾಗವಹಿಸಿದ್ದರು

ಹಿಮವತ್ ಕೇದಾರ ಪೂಜಾ ಸಮಿತಿ ಆಯೋಜಿಸಿದ್ದ ಹಿಮವತ್ ಕೇದಾರ ಶ್ರೀಗಳ ಸಂಗೀತಯುಕ್ತ ಇಷ್ಟಲಿಂಗ ಮಹಾಪೂಜೆ ಮತ್ತು ಜನಜಾಗೃತಿ ಧರ್ಮ ಸಮಾರಂಭವನ್ನು ಮಾಜಿ ಮೇಯರ್ ಗಂಗಾಂಬಿಕ ಮಲ್ಲಿಕಾರ್ಜುನ್ ಉದ್ಘಾಟಿಸಿದರು. ಪೂಜಾ ಸಮಿತಿ ಅಧ್ಯಕ್ಷ ಪಿ. ಶಿವಪ್ರಕಾಶ್, ಪುರಿಗಾಲಿ ಮಠದ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಗುರುವಿನಪುರ ಮಠದ ಜಗದೀಶ ಶಿವಾಚಾರ್ಯ ಸ್ವಾಮೀಜಿ, ತಪೋ ಕ್ಷೇತ್ರ ಗವಿಮಠದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಉತ್ತರಖಂಡದ ಕೇದಾರ ಮಹಾಸಂಸ್ಥಾನ ಪೀಠಾಧ್ಯಕ್ಷ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ, ಕಾಂಗ್ರೆಸ್ ಮುಖಂಡ ಬಿ. ಮಲ್ಲಿಕಾರ್ಜುನ್ ಪಾಲ್ಗೊಂಡಿದ್ದರು

ಅಭಿಮಾನ್ ಸ್ಟುಡಿಯೊದಲ್ಲಿ ವಿಷ್ಣುವರ್ಧನ್ ಅವರ 14ನೇ ಪುಣ್ಯಸ್ಮರಣೆ ಆಚರಿಸಲಾಯಿತು. ಹಿತೈಷಿ ವಿಷ್ಣುವರ್ಧನ್ ಅಭಿಮಾನಿ ಬಳಗದ ಅಧ್ಯಕ್ಷ ಲೋಕೇಶ್ ಗೌಡ, ಕೆಂಗೇರಿ ಸಾಹಸ ಸಿಂಹ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಂಜೀವ್ ಕುಮಾರ್, ಶೃಂಗಾರ ಶಿಲ್ಪಿ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಅಧ್ಯಕ್ಷ ಶ್ರೀನಿವಾಸ್ ಭಾಗವಹಿಸಿದ್ದರು

ನಾಗಸಂದ್ರದ ವಿನಾಯಕ ನಗರ ಹಾಗೂ ವಿಕಾಸನಗರದಲ್ಲಿ ಕನಕದಾಸ ಮತ್ತು ಹನುಮ ಜಯಂತಿಯನ್ನು ಈಚೆಗೆ ಆಚರಿಸಲಾಯಿತು

₹60 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ರೈಲ್ವೆ ಪೊಲೀಸರ ವಿಶೇಷ ಕಾರ್ಯಾಚರಣೆ: ಹೊರ ರಾಜ್ಯದ 7 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ನಿತ್ಯಾನಾನದ್ | ರಾಜೇಶ್ | ಅಮರ್‌ಜಿತ್ | ನಿಕೇಶ್ | ಜಲಂಧರ್ | ಬೈಕುಂಟಾ | ಸಾಗರ್

ಬೆಂಗಳೂರು: ಹೊಸ ವರ್ಷದ ಪಾರ್ಟಿಗಳಿಗೆ ಪೂರೈಸಲು ಹೊರ ರಾಜ್ಯದಿಂದ ರೈಲುಗಳ ಮೂಲಕ ತರುತ್ತಿದ್ದ ಅಪಾರ ಪ್ರಮಾಣದ ಮಾದಕ ವಸ್ತುಗಳನ್ನು ರೈಲ್ವೆ ಪೊಲೀಸರು ಜಪ್ತಿ ಮಾಡಿ, ಏಳು ಮಂದಿಯನ್ನು ಬಂಧಿಸಿದ್ದಾರೆ.

ಉತ್ತರ ತ್ರಿಪುರದ ರಾಜೇಶ್ ದಾಸ್, ಬಿಹಾರದ ಅಮರ್‌ಜಿತ್ ಕುಮಾರ್, ಒಡಿಶಾದ ನಿತ್ಯಾನಾನದ್ ದಾಸ್, ನಿಕೇಶ್ ರಾಣ, ಜಲಂಧರ್ ಕನ್ಹರ್, ಬೋರೆಬೆಟ್ಟದ ಬೈಕುಂಟಾ ಕನ್ಹರ್ ಹಾಗೂ ಸಾಗರ್ ಕನ್ಹರ್ ಬಂಧಿತರು.

ಬಂಧಿತರಿಂದ ₹60ಲಕ್ಷ ಮೌಲ್ಯದ 60 ಕೆ.ಜಿ 965 ಗ್ರಾಂ ಮಾದಕ ವಸ್ತು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ರೈಲ್ವೆ ಪೊಲೀಸರು ತಿಳಿಸಿದ್ದಾರೆ.

'ಆರೋಪಿಗಳು ಪ್ರಶಾಂತಿ ಎಕ್ಸ್‌ಪ್ರೆಸ್, ಶೇಷಾದ್ರಿ ಎಕ್ಸ್‌ಪ್ರೆಸ್, ಶಾಲಿಮರ್ ವಾಸ್ಕೊ ಎಕ್ಸ್‌ಪ್ರೆಸ್‌ಗಳ ಮೂಲಕ ಬೆಂಗಳೂರು ಸೇರಿದಂತೆ ರಾಜ್ಯದ ಬೇರೆ ಜಿಲ್ಲೆಗಳ ಗ್ರಾಹಕರಿಗೆ ಪೂರೈಸಲು ಮಾದಕ ವಸ್ತುಗಳನ್ನು ತರುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ರೈಲುಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಯಿತು.

ಆರೋಪಿಗಳ ವಿರುದ್ಧ ಬೆಂಗಳೂರು ನಗರ ಪೊಲೀಸ್ ಠಾಣೆ, ಬೈಯಪನಹಳ್ಳಿ ಪೊಲೀಸ್ ಠಾಣೆ ಹಾಗೂ ಬೆಂಗಳೂರು ಗ್ರಾಮಾಂತರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದರು.

ಬೈಕ್ ಸವಾರ, ವಾಹನ ಚಾಲಕನಿಗೆ ಶಿಕ್ಷೆ

ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದಚಾರಿಗೆ ಬೈಕ್‌ನಿಂದ ಡಿಕ್ಕಿ ಹೊಡೆಸಿ, ಗಾಯಗೊಳಿಸಿದ್ದ ಸವಾರನಿಗೆ 2ನೇ ಎಂಎಂಟಿಸಿ ಸಂಚಾರ ನ್ಯಾಯಾಲಯ 6 ತಿಂಗಳು ಜೈಲು ಹಾಗೂ ₹1 ಸಾವಿರ ದಂಡ ವಿಧಿಸಿ ಆದೇಶಿಸಿದೆ. ಜಗದೀಶ್ (26) ಶಿಕ್ಷೆಗೆ ಒಳಗಾದ ಬೈಕ್ ಸವಾರ.

'ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಕೆ.ಜಿ. ರಸ್ತೆಯಲ್ಲಿ 2016ರ ಮಾರ್ಚ್ 14ರಂದು ರಾತ್ರಿ ಅಪಘಾತ ಸಂಭವಿಸಿತ್ತು. ಭಾವನಾ ಎಂ ರಾಜಪಾಲ್ ಎಂಬುವರು ರಸ್ತೆಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಆಗ ವೇಗವಾಗಿ ಬಂದ್ ಬೈಕ್‌ವೊಂದು ಅವರಿಗೆ ಡಿಕ್ಕಿ ಹೊಡೆದಿತ್ತು. ಭಾವನಾ ಅವರ ಎರಡು ಕಾಲುಗಳಿಗೆ ಗಾಯವಾಗಿತ್ತು. ಅಪಘಾತವಾದ ಮೇಲೆ ಬೈಕ್ ನಿಲ್ಲಿಸದೇ ಸವಾರ ತೆರಳಿದ್ದ. ಹತ್ತಿರದ ಪೊಲೀಸ್ ಠಾಣೆಗೂ ಮಾಹಿತಿ ನೀಡಿರಲಿಲ್ಲ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅಪರಾಧಿ ಬಳಿಯಿದ್ದ ವಾಹನಕ್ಕೆ ವಿಮೆ ಇಲ್ಲದಿರುವುದು ತನಿಖೆಯಿಂದ ದೃಢಪಟ್ಟಿತ್ತು.

1 ವರ್ಷ ಜೈಲು: ಗಾಂಧಿನಗರದಲ್ಲಿ 2010ರ ಆಗಸ್ಟ್ 19ರಂದು ನಡೆದಿದ್ದ ಅಪಘಾತ ಪ್ರಕರಣದಲ್ಲಿ ವಾಹನ ಚಾಲಕ ತಪ್ಪಿತಸ್ಥ ಎಂಬುದು ಸಾಬೀತಾಗಿದ್ದು ಆತನಿಗೆ 2ನೇ ಎಂಎಂಟಿಸಿ ಸಂಚಾರ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ಚಾಲಕ ನವೀನ್ ಕುಮಾರ್‌ಗೆ 1 ವರ್ಷ ಜೈಲು ಶಿಕ್ಷೆ, ₹ 5 ಸಾವಿರ ದಂಡ ವಿಧಿಸಿ ನ್ಯಾಯಾಲಯವು ಆದೇಶಿಸಿದೆ.

ಅತಿವೇಗ ಹಾಗೂ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿಕೊಂಡು ತೆರಳುತ್ತಿದ್ದ ನವೀನ್‌ಕುಮಾರ್, ಏಕಾಏಕಿ ವಾಹನವನ್ನು ಎಡಕ್ಕೆ ತಿರುಗಿಸಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆಸಿದ್ದ. ಘಟನೆಯಲ್ಲಿ ರಸ್ತೆಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಸಂಜಯ್ (11) ಹಾಗೂ ಶಿವಲೀಲಾ (47) ಅವರು ಮೃತಪಟ್ಟಿದ್ದರು. ಸರಸ್ವತಮ್ಮ (45), ಪಾರ್ಥ (12) ಹಾಗೂ ಅಭಿಲಾಷ್ (12) ಅವರು ಗಾಯಗೊಂಡಿದ್ದರು.

ವಾಹನಕ್ಕೆ ಎಫ್‌ಸಿ ಹಾಗೂ ಚಾಲಕನ ಬಳಿ ಡಿಎಲ್ ಇಲ್ಲದಿರುವುದು ಪೊಲೀಸ್ ತನಿಖೆ ವೇಳೆ ಗೊತ್ತಾಗಿತ್ತು.

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

'ಮಧು ವಿರುದ್ಧ ಖರ್ಗೆಗೆ ದೂರು'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಶಿಕ್ಷಣ ಸಚಿವ ಮಧು ಬಂಗಾರಪ್ಪ ಈಡಿಗ ಸಮಾಜದ ಭೂಮಿ ಕಬಳಿಸಿದ್ದಾರೆ. ಜನವರಿ 6ರಂದು ದೆಹಲಿಗೆ ತೆರಳಿ ಅವರ ವಿರುದ್ಧ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖಂಡ ರಾಹುಲ್ ಗಾಂಧಿಯವರಿಗೆ ದಾಖಲೆ ಸಮೇತ ದೂರು ಸಲ್ಲಿಸುತ್ತೇವೆ' ಎಂದು ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠದ ಪ್ರಣವಾನಂದ ಸ್ವಾಮೀಜಿ ಹೇಳಿದರು.

'ಬೆಂಗಳೂರಿನಲ್ಲಿ ಪ್ರದೇಶ ಈಡಿಗರ ಸಮಾವೇಶ ಆಯೋಜಿಸುವುದಕ್ಕೆ ನಾಲ್ವರು ಸಚಿವರಿಂದ ಹಣ ಪಡೆದಿದ್ದಾರೆ. ಬೇಕಾದರೆ ಧರ್ಮ ಸ್ಥಳಕ್ಕೆ ಹೋಗಿ ಗಂಟೆ ಹೊಡೆದು ಪ್ರಮಾಣ ಮಾಡುತ್ತೇನೆ. ಅವರು ಬಂದು ಹಣ ಪಡೆದಿಲ್ಲ ಎಂದು ಪ್ರಮಾಣ ಮಾಡಲಿ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಉತ್ತಮ ಸ್ಪಂದನೆಯ ಭರವಸೆ: ಸಂತೋಷ್ ಹೆಗ್ಡೆ

'ಗೆಲೋರ್ ಆಫ್ ಮಿಸ್ಟ್ರಿಸ್' ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮನ ಜೆ.ಕುಮಾರ್ ಅವರ ನಾಲ್ಕನೇ ಕೃತಿ 'ಗೆಲೋರ್ ಆಫ್ ಮಿಸ್ಟ್ರೀಸ್' ಅನ್ನು ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಬಿಡುಗಡೆ ಮಾಡಿದರು.

ಇದೊಂದು ಉತ್ತಮ ಕೃತಿಯಾಗಿದ್ದು, ಓದುಗರಿಂದ ಉತ್ತಮ ಸ್ಪಂದನೆ ದೊರೆಯುವ ವಿಶ್ವಾಸವಿದೆ ಎಂದು ಸಂತೋಷ್ ಹೆಗ್ಡೆ ತಿಳಿಸಿದರು.

ಬೆಂಗಳೂರಿನ ಬಿಷಪ್ ಕಾಟನ್ ಗರ್ಲ್ ಸ್ಕೂಲ್‌ನಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಮನ ಅವರು ಕೆಎಸ್‌ಆರ್‌ಟಿಸಿಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಲತಾ ಟಿ.ಎಸ್, ಕಿರು ಉದ್ಯಮಿ ಜೈವಂತ್ ಕುಮಾರ್ ಅವರ ಪುತ್ರಿ. ಅಮನ 6ನೇ ತರಗತಿಯಲ್ಲಿದ್ದಾಗಲೇ ಇಂಗ್ಲಿಷ್ ಕವನಗಳನ್ನು ಬರೆಯಲು ಪ್ರಾರಂಭಿಸಿದ್ದರು. 'ಇಕೋಸ್ ಆಫ್ ಸೋಲ್‌ಫುಲ್ ಪೊಯಮ್ಸ್' ಮತ್ತು 'ವರ್ಲ್ಡ್ ಅಮಿಡಿಸ್ಟ್ ದ ವರ್ಡ್' ಕ್ರಮವಾಗಿ ಮೊದಲ ಮತ್ತು ಎರಡನೇ ಇಂಗ್ಲಿಷ್ ಕವನ ಸಂಕಲನಗಳಾಗಿದ್ದವು. ಅವರ 'ಲಫ್‌ಝೋನ್ ಕಿ ಮುಫ್ಹಿಲ್' ಹಿಂದಿ ಕವನ ಸಂಕಲನ ಈಗಾಗಲೇ ಬಿಡುಗಡೆಯಾಗಿವೆ.

'ಗೆಲೋರ್ ಆಫ್ ಮಿಸ್ಟ್ರೀಸ್' ಕೃತಿಯು ಕವನ ಹಾಗೂ ಕಿರು ಕಥೆಗಳ ಸಂಗ್ರಹವಾಗಿದ್ದು, ರಹಸ್ಯಗಳ ಕೌತುಕಗಳನ್ನು ಸಾಹಸ, ನವಿರು ಹಾಸ್ಯ ಶೈಲಿಯಲ್ಲಿ ಬರೆದಿರುವ ಕೃತಿಯಾಗಿದೆ ಎಂದು ಪ್ರಕಾಶಕರು ತಿಳಿಸಿದ್ದಾರೆ.



ಅಮನ ಜೆ.ಕುಮಾರ್ ಅವರ 'ಗೆಲೋರ್ ಆಫ್ ಮಿಸ್ಟ್ರಿಸ್' ಕೃತಿಯನ್ನು ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಬಿಡುಗಡೆ ಮಾಡಿದರು

ಮುಖ್ಯಾಂಶಗಳು

- 4ನೇ ಕೃತಿ ಬಿಡುಗಡೆಗೊಳಿಸಿದ ಸಂತೋಷ್ ಹೆಗ್ಡೆ
- ಇಂಗ್ಲಿಷ್–ಹಿಂದಿಯಲ್ಲಿ ಕವನ ಸಂಕಲನ ರಚಿಸಿರುವ ಅಮನ
- ಕಿರು ಕಥೆಗಳ ಸಂಗ್ರಹ

ಭಕ್ತರಿಗೆ ಸಿಗದ ಸೌಲಭ್ಯ–ಟೀಕೆ

ಚಿಕ್ಕೋಡಿ: 'ಕೇರಳದ ಶಬರಿಮಲೈ ಕ್ಷೇತ್ರಕ್ಕೆ ವರ್ಷಕ್ಕೆ 5 ಕೋಟಿಗೂ ಹೆಚ್ಚು ಅಯ್ಯಪ್ಪಸ್ವಾಮಿ ಮಾಲಾಧಾರಿಗಳು ಭೇಟಿ ನೀಡುತ್ತಾರೆ. ಅಲ್ಲಿನ ಸರ್ಕಾರಕ್ಕೆ ಪ್ರತಿ ವರ್ಷ ₹3 ಸಾವಿರ ಕೋಟಿ ಆದಾಯ ಬರುತ್ತಿದೆ. ಆದರೆ, ಅಲ್ಲಿ ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸುತ್ತಿಲ್ಲ' ಎಂದು ಶ್ರೀರಾಮಸೇನೆ ಸಂಘಟನೆಯ ರಾಷ್ಟ್ರೀಯ ಘಟಕದ ಅಧ್ಯಕ್ಷ ಪ್ರಮೋದ ಮುತಾಲಿಕ ಆರೋಪಿಸಿದರು.

'ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಗೋವಾ, ತಮಿಳುನಾಡು, ಕೇರಳದಿಂದ 1 ಕೋಟಿ ವಾಹನಗಳು ಪ್ರತಿವರ್ಷ ಈ ಕ್ಷೇತ್ರಕ್ಕೆ ಹೋಗುತ್ತವೆ. ಕೇರಳ ಸರ್ಕಾರ ಪ್ರತಿ ವಾಹನದಿಂದ ₹40 ವಸೂಲಿ ಮಾಡುತ್ತದೆ. ಅಲ್ಲಿನ ಸರ್ಕಾರವು ದೇವಸ್ಥಾನ ಸಮಿತಿ ಮೇಲೆ ಒತ್ತಡ ಹೇರಿ, ಸೌಲಭ್ಯ ಕಲ್ಪಿಸುತ್ತಿಲ್ಲ. ಶಬರಿಮಲೈಗೆ ಹೋಗುವ ಭಕ್ತರಿಗೆ ಕರ್ನಾಟಕ ಸರ್ಕಾರವೂ ಸೌಲಭ್ಯ ಕಲ್ಪಿಸಬೇಕು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ನಗರದ ಪ್ರಮುಖ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಮೇಲೆ ಆರೋಪ

ನಿರ್ದೇಶಕರ ಹುದ್ದೆ ಮೇಲೆ ತೂಗುಗತ್ತಿ

• ವರುಣ ಹೆಗಡೆ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ರೋಗಿಗಳು ಚಿಕಿತ್ಸೆಗೆ ಅಲೆದಾಟ ನಡೆಸುತ್ತಿರುವುದು

ಬೆಂಗಳೂರು: ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳನ್ನು ಎದುರಿಸುತ್ತಿರುವ ನಗರದ ಪ್ರಮುಖ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ನಿರ್ದೇಶಕರು ಹುದ್ದೆ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ನೆಫ್ರೋ ಯುರಾಲಜಿ ಸಂಸ್ಥೆ ಹಾಗೂ ಅಟಲ್ ಬಿಹಾರಿ ವಾಜಪೇಯಿ ವೈದ್ಯ ಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಬಿವಿಎಂಸಿಆರ್ಐ) ನಿರ್ದೇಶಕರ ವಿರುದ್ಧ ಅಧಿಕಾರ ದುರ್ಬಳಕೆ ಸೇರಿ ವಿವಿಧ ಆರೋಪಗಳು ಕೇಳಿ ಬಂದಿದ್ದವು. ಈ ಬಗ್ಗೆ ಲೋಕಾಯುಕ್ತಕ್ಕೂ ದೂರುಗಳು ಸಲ್ಲಿಕೆಯಾಗಿವೆ. ಈಗಾಗಲೇ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ. ವಿ.ಲೋಕೇಶ್ ಅವರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿ ಅರುಂಧತಿ ಚಂದ್ರಶೇಖರ್ ಅಧ್ಯಕ್ಷತೆಯ ಸಮಿತಿ ತನಿಖೆ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಿದೆ. ನೆಫ್ರೋ ಯುರಾಲಜಿ ಸಂಸ್ಥೆ ಪ್ರಭಾರ ನಿರ್ದೇಶಕ ಡಾ. ಕೇಶವಮೂರ್ತಿ ಆರ್. ಅವರ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿ ಡಾ.ಕೆ.ವಿ. ತ್ರಿಲೋಕ್ ಚಂದ್ರ ಅಧ್ಯಕ್ಷತೆಯ ಸಮಿತಿ ತನಿಖೆ ನಡೆಸುತ್ತಿದೆ.

ಪ್ರಜಾವಾಣಿ ವಿಶೇಷ

ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಎಬಿವಿಎಂಸಿಆರ್ಐ ನಿರ್ದೇಶಕ ಡಾ. ಮನೋಜ್ ಕುಮಾರ್ ಎಚ್.ವಿ. ವಿರುದ್ಧ ಎನ್. ನಾಗೇಶ್ ಎಂಬುವವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದಾರೆ. 2022-23ನೇ ಸಾಲಿನ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದ್ದು, ಪ್ರಭಾವಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಈ ಆರೋಪವನ್ನು ಡಾ. ಮನೋಜ್ ಕುಮಾರ್ ಎಚ್.ವಿ. ಅಲ್ಲಗಳೆದಿದ್ದು, ನಿಯಮದ ಪ್ರಕಾರ ನೇಮಕ

> **ದೂರುಗಳ ಬಗ್ಗೆ ತನಿಖಾ ತಂಡಗಳನ್ನು ರಚಿಸಿ, ತನಿಖೆ ನಡೆಸಲಾಗುತ್ತಿದೆ. ವರದಿ ಬಂದ ಬಳಿಕ ಏನು ಮಾಡಬೇಕೆಂದು ನಿರ್ಧರಿಸಲಾಗುವುದು**
> **ಡಾ. ಶರಣ ಪ್ರಕಾಶ್ ಪಾಟೀಲ**
> ವೈದ್ಯಕೀಯ ಶಿಕ್ಷಣ ಸಚಿವ

ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಪ್ರಕರಣದ ತನಿಖೆ ಪ್ರಗತಿಯಲ್ಲಿದೆ.

200 ಪುಟಗಳ ವರದಿ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ನಿಯಮಬಾಹಿರ ನಡೆದಿದೆ ಎನ್ನಲಾದ ಟೆಂಡರ್, ಅನುದಾನದ ದುರ್ಬಳಕೆ ಸೇರಿ ವಿವಿಧ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ವೈದ್ಯಕೀಯ ಶಿಕ್ಷಣ ಇಲಾಖೆ ಕಳೆದ ಸೆ.20ರಂದು ಸಮಿತಿ ರಚಿಸಿ, ಆದೇಶಿಸಿತ್ತು. ತನಿಖಾ ವರದಿಯನ್ನು 15 ದಿನಗಳೊಳಗೆ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿತ್ತು. ಸಮಿತಿಯು 200 ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ ಎಂದು ಕಿದ್ವಾಯಿ ಮೂಲಗಳು ತಿಳಿಸಿವೆ. ಆದರೆ, ಸರ್ಕಾರ ಈ ವರದಿಯನ್ನು ಬಹಿರಂಗಪಡಿಸಿಲ್ಲ. ಸಂಸ್ಥೆಯ ನಿರ್ದೇಶಕರ ವಿರುದ್ಧ ಅಲ್ಲಿನ ವೈದ್ಯರೇ ವೈದ್ಯಕೀಯ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ್ದರು.

'ಕಿದ್ವಾಯಿ ಸಂಸ್ಥೆ ನಿರ್ದೇಶಕರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಸಮಿತಿ ತನಿಖೆ ನಡೆಸಿ ವರದಿ ಸಲ್ಲಿಸಿದರೂ ವರದಿಯನ್ನು ಸರ್ಕಾರ ಬಹಿರಂಗಪಡಿಸುತ್ತಿಲ್ಲ. ಈಗಾಗಲೇ ವರದಿಯ ಎರಡು ಪುಟಗಳು ಸೋರಿಕೆಯಾಗಿವೆ. ಅದರಲ್ಲಿ ತಜ್ಞರಲ್ಲದ ವೈದ್ಯರು ಹಾಗೂ ಸಿಬ್ಬಂದಿ ಪೆಟ್ ಸ್ಕ್ಯಾನ್ ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ. ಆದ್ದರಿಂದ ಪೂರ್ಣ ವರದಿ ಬಹಿರಂಗಪಡಿಸಿ, ಆರೋಪ ನಿಜವಾದಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಂಸ್ಥೆಯ ವೈದ್ಯರೊಬ್ಬರು ತಿಳಿಸಿದರು.

ಅವಧಿ ಮುಗಿದರೂ ವರದಿಯಿಲ್ಲ?

ನೆಫ್ರೋ ಯುರಾಲಜಿ ಸಂಸ್ಥೆಯಲ್ಲಿನ ಅವ್ಯವಸ್ಥೆ ಹಾಗೂ ಪ್ರಭಾರ ನಿರ್ದೇಶಕ ಡಾ. ಕೇಶವಮೂರ್ತಿ ಆರ್. ಅವರ ಕರ್ತವ್ಯ ಲೋಪದ ಬಗ್ಗೆ ಸೂಕ್ತ ತನಿಖೆ ನಡೆಸಿ, 15 ದಿನಗಳೊಳಗೆ ವರದಿ ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೆಪ್ಟೆಂಬರ್‌ನಲ್ಲಿಯೇ ಸೂಚಿಸಿದ್ದರು. ಅ.10ರಂದು ಸರ್ಕಾರ ತನಿಖಾ ತಂಡವನ್ನು ರಚಿಸಿತ್ತು. ಡಾ.ಕೆ.ವಿ. ತ್ರಿಲೋಕ್ ಚಂದ್ರ ಅಧ್ಯಕ್ಷತೆಯ ಸಮಿತಿ ತನಿಖಾ ವರದಿ ಸಲ್ಲಿಸಿಲ್ಲ ಎನ್ನುವುದು ಇಲಾಖೆ ಮೂಲಗಳಿಂದ ತಿಳಿದುಬಂದಿದೆ.

ಪ್ರಶ್ನೆ ಪತ್ರಿಕೆ ತಿದ್ದುಪಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ಡಾ.ಎಂ.ಆರ್. ನಿರಂಜನ್ ಗೌಡ ಅವರನ್ನು ಸರ್ಕಾರ ಆಗಸ್ಟ್‌ನಲ್ಲಿ ಅಮಾನತು ಮಾಡಿದೆ. ಫೆಲೋಶಿಪ್ ಹುದ್ದೆಗೆ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಫೆಲೋಶಿಪ್ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ವೈದ್ಯಕೀಯ ಶಿಕ್ಷಣ ಇಲಾಖೆಗೆ ದೂರು ನೀಡಿದ್ದರು. ಇಲಾಖೆ ನಡೆಸಿದ ತನಿಖೆಯಲ್ಲಿ ಆರೋಪ ಸಾಬೀತಾಗಿದ್ದರಿಂದ ಅವರ ಮೇಲೆ ಕ್ರಮಕೈಗೊಳ್ಳಲಾಗಿದೆ. ಇದರಿಂದಾಗಿ ಸಂಸ್ಥೆಗೆ ಈಗ ಪೂರ್ಣಾವಧಿ ನಿರ್ದೇಶಕರಿಲ್ಲ. ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಅವರೇ ಪ್ರಭಾರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರತಿಭಟನೆ

ನಾಮಫಲಕದಲ್ಲಿ ಕನ್ನಡ ಕಡ್ಡಾಯಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸಲು ಆಗ್ರಹಿಸಿ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು. ಸಾ.ರಾ. ಗೋವಿಂದು ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

ಮರ ಕಡಿದ ಪ್ರಕರಣ: ವಿಕ್ರಂ ಸಿಂಹ ಬಂಧನ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಬೇಲೂರು ತಾಲ್ಲೂಕಿನ ನಂದಗೋಡನಹಳ್ಳಿಯ ಸರ್ಕಾರಿ ಜಮೀನಿನಲ್ಲಿ 126 ಮರಗಳನ್ನು ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಸಂಸದ ಪ್ರತಾಪ ಸಿಂಹ ಅವರ ತಮ್ಮ ವಿಕ್ರಂ ಸಿಂಹ ಅವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ.

ವಿಕ್ರಂ ಸಿಂಹ ಬೆಂಗಳೂರಿನಲ್ಲಿದ್ದ ಬಗ್ಗೆ ಖಚಿತ ಮಾಹಿತಿ ಪಡೆದ ಹಾಸನ ಅರಣ್ಯಾಧಿಕಾರಿಗಳ ತಂಡ ಬೆಂಗಳೂರಿಗೆ ತೆರಳಿ, ಅಲ್ಲಿನ ಪೊಲೀಸರ ಸಹಾಯದಿಂದ ವಶಕ್ಕೆ ಪಡೆದಿದೆ. ನಂತರ ಬೆಂಗಳೂರಿನ ಜಾರುಬಂಡೆ ಕಾವಲ್‌ನಲ್ಲಿರುವ ಅರಣ್ಯ ಕೇಂದ್ರಕ್ಕೆ ಕರೆದೊಯ್ಯಲಾಗಿತ್ತು. ಅಲ್ಲಿ ಅಧಿಕೃತವಾಗಿ ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ನಂದಗೋಡನಹಳ್ಳಿಯ ಸರ್ವೆ ನಂಬರ್ 16/ಪಿ2 ದಲ್ಲಿ 3 ಎಕರೆ 17 ಗುಂಟೆ ಜಮೀನನ್ನು ಶುಂಠಿ ಬೆಳೆಯುವುದಕ್ಕಾಗಿ ವಿಕ್ರಂ ಸಿಂಹ ಲೀಸ್‌ಗೆ ಪಡೆದಿದ್ದರು. ನಂತರ 3 ಎಕರೆ 17 ಗುಂಟೆ ಜಮೀನು ಸೇರಿದಂತೆ ಸುತ್ತಲಿನ 10 ಎಕರೆ ಸರ್ಕಾರಿ ಗೋಮಾಳ ಜಾಗದಲ್ಲಿದ್ದ 126 ಮರಗಳನ್ನು ಕಡಿದು ಹಾಕಲಾಗಿತ್ತು. ವಿಕ್ರಂ ಸಿಂಹ ಅವರೇ ಈ ಮರಗಳನ್ನು ಕಡಿದು, ಸಾಗಿಸಲು ಯತ್ನಿಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.

ವಿಚಾರಣೆಗೆ ಹಾಜರಾಗುವಂತೆ ತನಿಖಾಧಿಕಾರಿಗಳು ವಿಕ್ರಂ ಸಿಂಹ ಅವರಿಗೆ ನೋಟಿಸ್ ಜಾರಿ ಮಾಡಿದ್ದರು. ತನಿಖಾಧಿಕಾರಿಗೆ ಸಿಗದೆ ವಿಕ್ರಂ ಸಿಂಹ ಪರಾರಿಯಾಗಿದ್ದರು.

ಉಪನಗರ ರೈಲು ಕಾರಿಡಾರ್ 4 ಎಲ್ ಆ್ಯಂಡ್ ಟಿ ಕಂಪನಿಗೆ ಗುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪನಗರ ರೈಲು ಯೋಜನೆಯ ಕಾರಿಡಾರ್–4 ನಿರ್ಮಾಣ ಕಾಮಗಾರಿಯ ಟೆಂಡರ್ ಎಲ್ ಆ್ಯಂಡ್ ಟಿ ಕಂಪನಿ ಪಡೆದಿದೆ. ₹ 1040.51 ಕೋಟಿಗೆ ಗುತ್ತಿಗೆ ಪಡೆದಿದ್ದು, 30 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅವಧಿ ನಿಗದಿ ಪಡಿಸಲಾಗಿದೆ.

ಹೀಲಲಿಗೆಯಿಂದ ರಾಜಾನುಕುಂಟೆಗೆ (ಕನಕ ಮಾರ್ಗ) ಸಂಪರ್ಕಿಸುವ ಕಾರಿಡಾರ್–4 48 ಕಿ.ಮೀ. ಉದ್ದವಿದೆ. 8.960 ಕಿ.ಮೀ ಎತ್ತರಿಸಿದ ಮಾರ್ಗ ಹಾಗೂ 37.920 ಕಿ.ಮೀ. (ನಿಲ್ದಾಣ ಕಟ್ಟಡಗಳನ್ನು ಹೊರತುಪಡಿಸಿ) ಸಮತಲ ಮಾರ್ಗಗಳನ್ನು ಒಳಗೊಂಡಿದೆ. ಈ ನಿರ್ಮಾಣ ಕಾಮಗಾರಿಯ ಒಪ್ಪಂದವು ಯಲಹಂಕದ ಬಳಿ ಕಾರಿಡಾರ್-1 ಮತ್ತು ಕಾರಿಡಾರ್-4ಕ್ಕಾಗಿ 1.2 ಕಿ.ಮೀ. ಉದ್ದದ ಡಬಲ್ ಡೆಕ್ಕರ್ ಜೋಡಣೆಯ ನಿರ್ಮಾಣ ಒಳಗೊಂಡಿದೆ.

ಬೆನ್ನಿಗಾನಹಳ್ಳಿ ಬಳಿ ಬಿಎಂಆರ್‌ಸಿಎಲ್ (ಮೆಟ್ರೊ) ವಯಡಕ್ಟ್ ಕೆಳಗೆ 500 ಮೀಟರ್ ಉದ್ದದ ಬಿಎಸ್‌ಆರ್‌ಪಿ ಎತ್ತರಿಸಿದ ಮಾರ್ಗ ನಿರ್ಮಿಸಲಿದೆ. ಬಿಎಸ್‌ಆರ್‌ಪಿ ಮತ್ತು ಬಿಎಂಆರ್‌ಸಿಎಲ್ ನಡುವೆ ಮಾರ್ಗ ಸಮಾನವಾಗಿ ಹಂಚಿಕೆಯಾಗಲಿದೆ. ಈ ಮಾದರಿಯ ಕಾಮಗಾರಿನಿರ್ಮಾಣವು ದೇಶದಲ್ಲಿಯೇ ಮೊದಲು ಎಂದು ಬಿಎಸ್‌ಆರ್‌ಪಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾರಿಡಾರ್-2 (ಚಿಕ್ಕಬಾಣಾವರ- ಬೈಯಪ್ಪನಹಳ್ಳಿ) ಕಾಮಗಾರಿಯನ್ನು ಕೂಡಾ ಲಾರ್ಸೆನ್ ಆ್ಯಂಡ್ ಟ್ಯೂಬ್ರೊ ಲಿಮಿಟೆಡ್ ಪಡೆದಿತ್ತು. ಈ ಕಾಮಗಾರಿ ಭರದಿಂದ ಸಾಗುತ್ತಿದೆ.

ಒಪ್ಪಂದ: ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಕರ್ನಾಟಕ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತವು (ಕೆ- ರೈಡ್) ಈಗಾಗಲೇ 50 ಕೋಟಿ ಯುರೊ ಸಾಲಕ್ಕೆ ಜರ್ಮನಿಯ ಪ್ರತಿಷ್ಠಿತ ಕೆಎಫ್‌ಡಬ್ಲ್ಯು ಡೆವಲಪ್‌ಮೆಂಟ್ ಬ್ಯಾಂಕ್‌ನೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಇದರ ಮುಂದುವರಿದ ಭಾಗವಾಗಿ, ಯುರೋಪಿಯನ್ ಹೂಡಿಕೆ ಬ್ಯಾಂಕ್‌ನೊಂದಿಗೆ (ಇಐಬಿ) 2024ರ ಮಾರ್ಚ್‌ನಲ್ಲಿ 30 ಕೋಟಿ ಯುರೊ ಸಾಲ ಒಪ್ಪಂದಕ್ಕೆ ಸಹಿ ಮಾಡಲು ತಯಾರಿ ನಡೆಸಲಾಗಿದೆ. ಕಾರಿಡಾರ್-1 ಮತ್ತು ಕಾರಿಡಾರ್ -3 ಟೆಂಡ ೯ಶೀಘ್ರದಲ್ಲೇ ಆಹ್ವಾನಿಸಲಾಗುವುದು. ಕಾರಿಡಾರ್-4 ಕಾಮಗಾರಿಗಾಗಿ 115 ಎಕರೆ ಭೂಮಿಯನ್ನು ನೈರುತ್ಯ ರೈಲ್ವೆ ಶೀಘ್ರ ಹಸ್ತಾಂತರಿಸಲಿದೆ ಎಂದು ಕೆ–ರೈಡ್ ಅಧಿಕಾರಿಗಳು ತಿಳಿಸಿದ್ದಾರೆ.

'ಕೆಐಎಡಿಬಿಗೆ ನಕ್ಷೆ ಮಂಜೂರು ಅಧಿಕಾರವಿಲ್ಲ'

ಆದೇಶ ವಾಪಸ್ ಪಡೆಯಲು ಬಿಬಿಎಂಪಿಯಿಂದ ರಾಜ್ಯ ಸರ್ಕಾರಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವ್ಯಾಪ್ತಿಯ ಕಟ್ಟಡಗಳಿಗೂ ನಕ್ಷೆ ಮಂಜೂರು ಅಧಿಕಾರ ಬಿಬಿಎಂಪಿಗೆ ಮಾತ್ರ ಇದ್ದು, ಇನ್ನು ಮುಂದೆ ಅದನ್ನು ಪಾಲಿಕೆಯೇ ನಿರ್ವಹಿಸಲು ಅನುವು ಮಾಡಿಕೊಡಬೇಕು ಎಂಬ ಪ್ರಸ್ತಾವ ಸರ್ಕಾರಕ್ಕೆ ಸಲ್ಲಿಕೆಯಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ, ಕರ್ನಾಟಕ ಮುನಿಸಿಪಲ್ ಕಾಯ್ದೆ (ಕೆಎಂಸಿ) ಪ್ರಕಾರ, ಆಯಾ ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ತಮ್ಮ ವ್ಯಾಪ್ತಿಯ ಎಲ್ಲ ಕಟ್ಟಡ ಹಾಗೂ ಬಡಾವಣೆಗಳಿಗೆ ನಕ್ಷೆ ಮಂಜೂರು ಮಾಡಬೇಕು. ಬಿಬಿಎಂಪಿ ಕಾಯ್ದೆ ಪ್ರಕಾರ, ಈ ಅಧಿಕಾರ ಪಾಲಿಕೆಗಿದೆ. ಆದರೆ, ಕೆಐಎಡಿಬಿಗೆ ಇಂತಹ ಕಾಯ್ದೆ ಅಥವಾ ಅಧಿಸೂಚನೆಯ ಮಾನ್ಯತೆ ಇಲ್ಲ. ಆದ್ದರಿಂದ ಬಿಬಿಎಂಪಿಯಿಂದಲೇ ನಕ್ಷೆ ಮಂಜೂರು ಪಡೆಯಬೇಕೆಂದು ಸೂಚಿಸಬೇಕು ಎಂದು ಪ್ರಸ್ತಾವದಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ನಗರಾಭಿವೃದ್ಧಿ ಇಲಾಖೆಗೆ ಬಿಬಿಎಂಪಿಯಿಂದ ಹತ್ತು ದಿನಗಳ ಹಿಂದೆ ಈ ಪ್ರಸ್ತಾವ ಸಲ್ಲಿಸಲಾಗಿದ್ದು, ಇದನ್ನು ಸರ್ಕಾರ ಮಾನ್ಯ ಮಾಡಿದರೆ ಪಾಲಿಕೆಗೆ ಕೋಟ್ಯಂತರ ವರಮಾನ ಸಂಗ್ರಹವಾಗಲಿದೆ ಎಂಬ ಲೆಕ್ಕಾಚಾರವಿದೆ.

'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಬೆಂಗಳೂರಿನಲ್ಲಿ ಕಟ್ಟಡ/ ಬಡಾವಣೆ ನಕ್ಷೆ ಮಂಜೂರಿನ ಸಕ್ಷಮ ಪ್ರಾಧಿಕಾರವಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರು ಅಧಿಕಾರವನ್ನು ಬಿಬಿಎಂಪಿಗೆ ಪ್ರತ್ಯಾಯೋಜಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಆದರೆ, ಕೆಐಎಡಿಬಿಗೆ ನಗರದಲ್ಲಿ ನಕ್ಷೆ ಮಂಜೂರು ಅಧಿಕಾರವನ್ನು ಆದೇಶದ ಮೂಲಕ ನೀಡಲಾಗಿದೆ. ಈ ಆದೇಶವನ್ನು ವಾಪಸ್ ಪಡೆದು, ಬಿಬಿಎಂಪಿಗೇ ನಕ್ಷೆ ಮಂಜೂರು ಅವಕಾಶವನ್ನು ಮುಂದುವರಿಸಬೇಕು ಎಂದು ಸರ್ಕಾರವನ್ನು ಕೋರಲಾಗಿದೆ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಗಳು ತಿಳಿಸಿದರು.

ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ, ಕೆಎಂಸಿ ಕಾಯ್ದೆ ಪ್ರಕಾರ, ಸೆಕ್ಷನ್ 15 ಹಾಗೂ ಬಿಬಿಎಂಪಿ ಕಾಯ್ದೆ ಪ್ರಕಾರ ಸೆಕ್ಷನ್ 240ರಲ್ಲಿ ಕಟ್ಟಡ ನಕ್ಷೆ ಅನುಮೋದನೆ ಪಡೆಯಬೇಕು. ಈ ಕಾಯ್ದೆಗಳಲ್ಲಿಲ್ಲದ ಇನ್ಯಾವ ಸಂಸ್ಥೆಯೂ ಕಟ್ಟಡ ಮಂಜೂರು ಮಾಡಲು ಶಾಸನಬದ್ಧ ಅಧಿಕಾರವನ್ನು ಹೊಂದಿಲ್ಲ.

ಸುಪ್ರೀಂ ಕೋರ್ಟ್‌ನ ಕೆಲವು ಆದೇಶಗಳನ್ನೂ ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದ್ದು, ಸ್ಥಳೀಯ ಸಂಸ್ಥೆ ಮಾತ್ರ ನಕ್ಷೆ ಮಂಜೂರು ಮಾಡಬಹುದು ಎಂಬ ಆದೇಶದಲ್ಲಿನ ಸ್ಪಷ್ಟ ಮಾಹಿತಿಯನ್ನು ವಿವರಿಸಲಾಗಿದೆ. ಕಾನೂನು ಪ್ರಕಾರ, ಕೆಐಎಡಿಬಿ ನಕ್ಷೆ ಮಂಜೂರು ಮಾಡುವ ಅಧಿಕಾರ ಹೊಂದಿಲ್ಲ ಎಂದು ಹಲವು ಉದಾಹರಣೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವದಲ್ಲಿ ಮಾಹಿತಿ ನೀಡಲಾಗಿದೆ.

156 ಪ್ರಾಧಿಕಾರಗಳಿಗೆ ಮಾತ್ರ ಅಧಿಕಾರ!

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ– 1961 ಪ್ರಕಾರ, ರಾಜ್ಯದಲ್ಲಿ 32 ನಗರಾಭಿವೃದ್ಧಿ ಪ್ರಾಧಿಕಾರ ಮತ್ತು 53 ನಗರ ಯೋಜನಾ ಪ್ರಾಧಿಕಾರಗಳಿವೆ. ಅಲ್ಲದೆ, 75 ಪುರಸಭೆ– ಪಟ್ಟಣ ಪಂಚಾಯಿತಿಗಳು ಯೋಜನಾ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–1976ರಡಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಇದರ ಜೊತೆಗೆ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ, ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ, ರಾಮನಗರ, ಕನಕಪುರ, ಚನ್ನಪಟ್ಟಣ, ಮಾಗಡಿ, ನೆಲಮಂಗಲ, ಹೊಸಕೋಟೆ, ಆನೇಕಲ್ ಮತ್ತು ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ಉಪನಗರ ವರ್ತುಲ ರಸ್ತೆ ಯೋಜನಾ ಪ್ರಾಧಿಕಾರಗಳಿವೆ.

'ರಾಜ್ಯದಲ್ಲಿ ಒಟ್ಟು 156 ಪ್ರಾಧಿಕಾರಗಳು ಮಾತ್ರ ಕಟ್ಟಡ ಹಾಗೂ ಬಡಾವಣೆಗಳ ನಕ್ಷೆ ಮಂಜೂರಿಗೆ ಶಾಸನಬದ್ಧ ಅಧಿಕಾರವನ್ನು ಹೊಂದಿವೆ. ಈ ಪಟ್ಟಿಯಲ್ಲಿ ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಇಲ್ಲ' ಎಂಬುದು ಬಿಬಿಎಂಪಿಯ ವಾದವಾಗಿದೆ.

ಅಯೋಧ್ಯೆ: ಹೊಸ ಶಕೆ

ಒಂದನೇ ಪುಟದಿಂದ...

ಇಡೀ ದಿನ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಪ್ರಧಾನಿ, ₹ 15,700 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು. ಇದರಲ್ಲಿ ₹ 11,100 ಕೋಟಿ ಮೊತ್ತದಯೋಜನೆಗಳು ಅಯೋಧ್ಯೆಗೆ ಮೀಸಲಾಗಿದ್ದರೆ, ಇನ್ನುಳಿದ ₹ 4,600 ಕೋಟಿ ಮೊತ್ತದ ಯೋಜನೆಗಳು ಉತ್ತರ ಪ್ರದೇಶದ ಇತರ ಭಾಗಗಳಿಗೆ ಸಂಬಂಧಿಸಿದ್ದಾಗಿವೆ.

ರೋಡ್ ಶೋ: ಬೆಳಿಗ್ಗೆ 11ರ ವೇಳೆಗೆ ಅಯೋಧ್ಯೆ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿ, ಅಲ್ಲಿಂದ ನೇರವಾಗಿ ರೈಲು ನಿಲ್ದಾಣ ಉದ್ಘಾಟನೆಗೆ ತೆರಳಿದರು. 15 ಕಿ.ಮೀ. ದೂರದ ಹಾದಿಯಲ್ಲಿ ರೋಡ್ ಶೋ ನಡೆಸಿದರು. ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ನೂರಾರು ಮಂದಿ ಪ್ರಧಾನಿ ಅವರಿದ್ದ ಕಾರಿಗೆ ಹೂಮಳೆಗರೆದರು. ಜನರತ್ತ ಕೈಬೀಸಿದ ಪ್ರಧಾನಿ, ವಿವಿಧ ಕಲಾ ತಂಡಗಳ ಪ್ರದರ್ಶನವನ್ನು ಕಣ್ತುಂಬಿಕೊಂಡರು. ಸುಮಾರು 1,400 ಕಲಾವಿದರು ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಮೆರುಗು ಹೆಚ್ಚಿಸಿದರು.

₹ 240 ಕೋಟಿ ವೆಚ್ಚದಲ್ಲಿ ನವೀಕರಣಗೊಂಡಿರುವ 'ಅಯೋಧ್ಯಾ ಧಾಮ್' ರೈಲು ನಿಲ್ದಾಣವನ್ನು ಪ್ರಧಾನಿ ಉದ್ಘಾಟಿಸಿದರು. ಲತಾ ಮಂಗೇಶ್ಕರ್ ಚೌಕ್‌ಗೆ ಭೇಟಿ ನೀಡಿ, ಅಲ್ಲಿ ಸ್ಥಾಪಿಸಿರುವ ವೀಣೆಯ ಬೃಹತ್ ಗಾತ್ರದ ಪ್ರತಿಕೃತಿ ಅನಾವರಣಗೊಳಿಸಿದರು. ₹ 1,450 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ವಿಮಾನ ನಿಲ್ದಾಣ ಉದ್ಘಾಟಿಸಿದ ಬಳಿಕ 'ಜನಸಭಾ' ರ್‍ಯಾಲಿ ಉದ್ದೇಶಿಸಿ ಮಾತನಾಡಿದರು.

'ಜ.22ರಂದು ಅಯೋಧ್ಯೆಗೆ ಬರಬೇಡಿ'

ಜನವರಿ 22ರಂದು ಅಯೋಧ್ಯೆಯಲ್ಲಿ ನಡೆಯಲಿರುವ ರಾಮಮಂದಿರ ಉದ್ಘಾಟನೆಯ ಐತಿಹಾಸಿಕ ಸಮಾರಂಭಕ್ಕೆ ಇಡೀ ಜಗತ್ತು ಕಾಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಮಂದಿರ ಉದ್ಘಾಟನೆಯ ದಿನ ಅಯೋಧ್ಯೆಗೆ ಭೇಟಿ ನೀಡದಂತೆಯೂ ಅವರು ಜನರಿಗೆ ಮನವಿ ಮಾಡಿದರು.

ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ 'ಜನಸಭಾ' ರ್‍ಯಾಲಿಯಲ್ಲಿ ಮಾತನಾಡಿದ ಅವರು, 'ವಿಕಾಸ' (ಅಭಿವೃದ್ಧಿ) ಮತ್ತು 'ವಿರಾಸತ್'ನ (ಪರಂಪರೆ) ಶಕ್ತಿಯು ದೇಶವನ್ನು ಮುನ್ನಡೆಸುತ್ತದೆ ಎಂದು ಪ್ರತಿಪಾದಿಸಿದರು.

ರಾಮಮಂದಿರದ ಉದ್ಘಾಟನೆಯ ದಿನದಂದೇ ಅಯೋಧ್ಯೆಗೆ ಭೇಟಿ ನೀಡಬೇಕೆಂಬ ಧಾವಂತ ಬೇಡ ಎಂದ ಅವರು, 'ಜ.22 ರಂದು ಅಯೋಧ್ಯೆಗೆ ಬರಬೇಕೆಂಬುದು ಪ್ರತಿಯೊಬ್ಬ ದೇಶವಾಸಿಯ ಬಯಕೆಯಾಗಿದೆ. ಆದರೆ ಆ ದಿನ ಕೆಲವು ಆಹ್ವಾನಿತರಿಗಷ್ಟೇ ಭೇಟಿಗೆ ಅವಕಾಶವಿದೆ. ರಾಮಮಂದಿರ ಇಲ್ಲಿ ಶಾಶ್ವತವಾಗಿ ಇರಲಿದೆ. ಆದ್ದರಿಂದ ಜ.23ರ ಬಳಿಕ ಭೇಟಿ ನೀಡಿ ಎಂದು ಕೈಮುಗಿದು ಬೇಡಿಕೊಳ್ಳುತ್ತೇನೆ' ಎಂದರು.

ಮಂದಿರ ಒಡೆಯುತ್ತೇವೆ ಎನ್ನುವುದು ವಿಕೃತ: ಪೇಜಾವರ ಸ್ವಾಮೀಜಿ

ಆನೇಕಲ್ : 'ಇತ್ತೀಚಿನ ದಿನಗಳಲ್ಲಿ ಸಣ್ಣಪುಟ್ಟ ಮಕ್ಕಳು ಸರ್ಕಾರ ಬದಲಾಗಲಿ, ಮಂದಿರವನ್ನು ಒಡೆಯುತ್ತೇವೆ ಎಂಬ ಮಾತುಗಳನ್ನು ಆಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಈ ಪ್ರವೃತ್ತಿಯು ಕೆಲವರ ವಿಕೃತಿ ಪ್ರತೀಕ' ಎಂದು ಪೇಜಾವರ ಮಠದ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು ತಿಳಿಸಿದರು.

ತಾಲೂಕಿನ ಬಿದರಗೆರೆಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮಕ್ಕಳಲ್ಲಿ, ಯುವಕರಲ್ಲಿ ವಿಕೃತಿ ಮನಸ್ಸು ಕಿತ್ತುಹಾಕಿ ಸಂಸ್ಕೃತಿ ಮೂಡಿಸುವ ಅವಶ್ಯ ಇದೆ. ಹಿಂದೂಗಳು ಜಾಗೃತಾರಾಗುವುದರಿಂದ ಮಾತ್ರ ಮಂದಿರಗಳ ರಕ್ಷಣೆ ಸಾಧ್ಯ. ಹಾಗಾಗಿ ಕೇಂದ್ರದಲ್ಲಿ ನರೇಂದ್ರ ಮೋದಿ ಅವರು ಮತ್ತೆ ಅಧಿಕಾರಕ್ಕೆ ಬರಬೇಕು' ಎಂದರು.

ನಿಗಮ: ಕಾರ್ಯಕರ್ತರಿಗೂ ಅವಕಾಶ – ಡಿಕೆಶಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕರಷ್ಟೇ ಸಂಖ್ಯೆಯಲ್ಲಿ ಕಾರ್ಯಕರ್ತರಿಗೂ ನಿಗಮ ಮಂಡಳಿಗಳಲ್ಲಿ ಸ್ಥಾನ ನೀಡಲಾಗುವುದು ಎಂದುಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ನೀಡುವುದಾಗಿ ಕೇಂದ್ರ ನಾಯಕರೂ ಭರವಸೆ ನೀಡಿದ್ದಾರೆ. ಎಲ್ಲರ ಜತೆ ಚರ್ಚಿಸಿದ ನಂತರ ಪಟ್ಟಿ ಅಂತಿಮಗೊಳಿಸಲಾಗುವುದು. ಸಂಕ್ರಾಂತಿ ವೇಳೆಗೆ ನೇಮಕವಾಗುವ ನಿರೀಕ್ಷೆ ಇದೆ ಎಂದರು.

'ಲೋಕಸಭೆ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಕುರಿತು ಆಯಾ ಜಿಲ್ಲೆಗಳ ಸಚಿವರು ವರದಿ ನೀಡಿದ್ದಾರೆ. ಅವರು ನೀಡಿದ ವರದಿ ಆಧಾರದಲ್ಲಿ ಪಕ್ಷ ಸಮೀಕ್ಷೆ ನಡೆಸಲಿದೆ. ಈ ವಿಚಾರವಾಗಿ ಚರ್ಚಿಸಲು ದೆಹಲಿಗೆ ಹೋಗುತ್ತಿದ್ದೇವೆ' ಎಂದು ಶಿವಕುಮಾರ್ ಹೇಳಿದರು.

ಯಾವ ನಿಗಮ, ಮಂಡಳಿಗೆ ಯಾವ ಶಾಸಕರನ್ನು ಅಧ್ಯಕ್ಷರಾಗಿ ನೇಮಕ ಮಾಡಬೇಕು ಎಂಬ ಪಟ್ಟಿಯನ್ನು ರಾಜ್ಯದ ನಾಯಕರು ಚರ್ಚಿಸಿ ಅಂತಿಮಗೊಳಿದ್ದರು. 35 ಶಾಸಕರಿಗೆ ಅವಕಾಶ ಸಿಗುವಂತೆ ಪಟ್ಟಿ ಸಿದ್ಧಪಡಿಸಲಾಗಿತ್ತು. ಮೊದಲ ಪಟ್ಟಿಯಲ್ಲಿ ಶಾಸಕರಿಗಷ್ಟೇ ಅವಕಾಶ ನೀಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒಲವು ಹೊಂದಿದ್ದರು. ಪಕ್ಷ ಅಧಿಕಾರಕ್ಕೆ ತರಲು ಕಾರಣರಾದ ಕಾರ್ಯಕರ್ತರಿಗೂ ಅವಕಾಶ ಸಿಗಬೇಕು ಎಂದು ಶಿವಕುಮಾರ್ ನಿಲುವು ತಾಳಿದ್ದರು. ಪಟ್ಟಿಯ ಜತೆ ದೆಹಲಿಗೆ ತೆರಳಿದ್ದ ಈ ಇಬ್ಬರೂ ವರಿಷ್ಠರ ಜತೆ ಚರ್ಚಿಸಿದ್ದರು. ಮೊದಲ ಪಟ್ಟಿಯಲ್ಲೇ ಕಾರ್ಯಕರ್ತರಿಗೂ ಅವಕಾಶ ಕೊಡಿ, ಅದಕ್ಕೆ ಅನುಗುಣವಾಗಿ ಪಟ್ಟಿಯನ್ನು ಮರುಪರಿಷ್ಕರಿಸಿ ಎಂದು ಪಕ್ಷದ ನಾಯಕ ರಾಹುಲ್ ಗಾಂಧಿ ಸೂಚಿಸಿದ್ದರು. ಹೀಗಾಗಿ, ಪಟ್ಟಿ ಪರಿಷ್ಕರಣೆ ನಡೆಸಲಾಗುತ್ತಿದೆ.

ಆರೋಗ್ಯ ಸಚಿವರ ಆಪ್ತ ಕಾರ್ಯದರ್ಶಿ ನಡೆ ಚರ್ಚೆಗೆ ಗ್ರಾಸ

ಅಧಿಕೃತ ಟಿ.ಪಿ: ಪಿ.ಎಸ್ 'ಪ್ರವಾಸ'

• ಆದಿತ್ಯ ಕೆ.ಎ.

ಹಿದಾಯತ್

ಬೆಂಗಳೂರು: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಆಪ್ತ ಕಾರ್ಯದರ್ಶಿ ಕೆ.ಎ.ಹಿದಾಯತ್ ಉಲ್ಲಾ ಅವರು ಸಚಿವರಂತೆಯೇ ಸರ್ಕಾರದ ಅಧಿಕೃತ ಪ್ರವಾಸ ಕಾರ್ಯಕ್ರಮದ (ಟಿ.ಪಿ) ವೇಳಾಪಟ್ಟಿ ಹಾಕಿಕೊಂಡು, ಪ್ರವಾಸ ಮಾಡುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಮುಖ್ಯಮಂತ್ರಿ, ಸಚಿವರು, ವಿರೋಧ ಪಕ್ಷದ ನಾಯಕರು, ಸಭಾಪತಿ, ಸಭಾಧ್ಯಕ್ಷರು ತಮ್ಮ ಪ್ರವಾಸದ ವೇಳಾಪಟ್ಟಿಯನ್ನು ಆಯಾ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಳುಹಿಸಿ, ಸಭೆ ನಡೆಸಲು ನಿಯಮದಲ್ಲಿ ಅವಕಾಶವಿದೆ. ಆದರೆ, ಸಚಿವರ ಆಪ್ತ ಕಾರ್ಯದರ್ಶಿ ಟಿ.ಪಿ ಹಾಕಿಕೊಂಡು ನಿಯಮಮೀರಿ ಪ್ರವಾಸ ನಡೆಸುತ್ತಿದ್ದಾರೆ.

ದಿನೇಶ್ ಗುಂಡೂರಾವ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರೂ ಹೌದು. ಹಿದಾಯತ್ ಉಲ್ಲಾ ಅವರ ಡಿ.27ರಿಂದ ಜನವರಿ 1ರ ತನಕದ ದಕ್ಷಿಣ ಕನ್ನಡ, ಚಿಕ್ಕಮಗಳೂರು ಪ್ರವಾಸ ಕಾರ್ಯಕ್ರಮದ ವೇಳಾಪಟ್ಟಿ ಹಾಗೂ ಟಿಪ್ಪಣಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಹಿದಾಯತ್ ಉಲ್ಲಾ ಅವರು ಸಚಿವಾಯದಲ್ಲಿ ಹೆಚ್ಚುವರಿ ಕಾರ್ಯದರ್ಶಿ ಆಗಿದ್ದರು. ದಿನೇಶ್ ಗುಂಡೂರಾವ್ ಅವರಿಗೆ ಸಚಿವ ಸ್ಥಾನ ಲಭಿಸಿದ ಬಳಿಕ ಆಪ್ತ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಹಿದಾಯತ್ ಉಲ್ಲಾ ಅವರ ಪ್ರವಾಸ ವೇಳಾಪಟ್ಟಿಯೂ ಸಚಿವರ ಪ್ರವಾಸದ ವೇಳಾಪಟ್ಟಿ ಮಾದರಿಯಲ್ಲೇ ಇದೆ. ಅದರಲ್ಲಿ ನಿರ್ಗಮನ, ಆಗಮನದ ಸಮಯ ನಮೂದಿಸಲಾಗುತ್ತಿದೆ. ಆರೋಗ್ಯ ಸಚಿವರ ವಿಶೇಷಾಧಿಕಾರಿ ಪರವಾಗಿ ಎಂಬ ಮುದ್ರೆ ಹಾಕಿ ಸಂಬಂಧಿಸಿದ ಅಧಿಕಾರಿಗಳಿಗೆ ಟಿ.ಪಿ ರವಾನೆ ಮಾಡಲಾಗುತ್ತಿದೆ.

ಡಿ.27ರಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಇಂಡಿಗೊ ವಿಮಾನದಲ್ಲಿ ಮಂಗಳೂರು ವಿಮಾನ ನಿಲ್ದಾಣಕ್ಕೆ ಪ್ರಯಾಣ, ಡಿ.28ರಂದು ಮಂಗಳೂರು ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಯಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕಾರ, ಅಂದೇ ಸಂಜೆ ಬೆಳ್ತಂಗಡಿ ಪ್ರವಾಸಿ ಮಂದಿರದಲ್ಲಿ ವಿಶ್ರಾಂತಿ, ಡಿ.30ರಂದು ಬೆಳ್ತಂಗಡಿಯಿಂದ ರಸ್ತೆ ಮಾರ್ಗವಾಗಿ ಚಿಕ್ಕಮಗಳೂರಿನ ದಿ ಸಿಲ್ವರ್ ಸ್ಕೈ ಹೋಟೆಲ್‌ಗೆ ಆಗಮನ, ಅಂದು ಹೋಟೆಲ್‌ನಲ್ಲಿ ವಿಶ್ರಾಂತಿ ಎಂದು ಟಿ.ಪಿಯಲ್ಲಿ ನಮೂದಿಸಲಾಗಿದೆ. ಡಿ.31ರಂದು ಇದೇ ಹೋಟೆಲ್‌ನಲ್ಲಿ ವಿಶ್ರಾಂತಿ-ಪಡೆಯುವುದಾಗಿ ನಮೂದಿಸಿ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

'ಸಚಿವರು ಸಭೆ ನಡೆಸಿ ಅಹವಾಲು ಸ್ವೀಕರಿಸಿದರೆ ಸಂಬಂಧಿಸಿದ ಅಧಿಕಾರಿ ಗಳಿಗೆ ಅರ್ಜಿ ನೀಡಿ ಸಮಸ್ಯೆ ಪರಿಹರಿಸಲು ಸಾಧ್ಯವಿದೆ. ಅದೇ ಆಪ್ತ ಕಾರ್ಯದರ್ಶಿ ಅಹವಾಲು ಸ್ವೀಕರಿಸಿ ಮಾಡುವುದಾದರೂ ಏನು? ಆರೋಗ್ಯ ಸಚಿವರು ಬೆಂಗಳೂರಿನಲ್ಲಿ ಕೋವಿಡ್ ಸಭೆ ನಡೆಸುತ್ತಿದ್ದರೆ ಪಿ.ಎಸ್ ಮಾತ್ರ ಜಿಲ್ಲಾ ಪ್ರವಾಸದಲ್ಲಿದ್ದಾರೆ. ಟಿ.ಪಿ ರವಾನೆ ಮಾಡಿದರೆ ಸ್ಥಳೀಯ ಅಧಿಕಾರಿಗಳು ಹೆದರಿ ಪ್ರವಾಸಕ್ಕೆ ವ್ಯವಸ್ಥೆ ಮಾಡುತ್ತಾರೆ. ಈ ರೀತಿ ಅಧಿಕೃತ ಟಿ.ಪಿಯಿಂದ ಪ್ರವಾಸದ ಖರ್ಚು ವೆಚ್ಚವನ್ನೂ ಸರ್ಕಾರದ ಲೆಕ್ಕಕ್ಕೆ ಹಾಕಬಹುದು ಎಂಬ ಉಪಾಯವಿದೆ' ಎಂದು ಅಧಿಕಾರಿಯೊಬ್ಬರು ಹೇಳುತ್ತಾರೆ.

ಮಂಡ್ಯ: ಚಿಕ್ಕಳಲೆಯಲ್ಲಿ ಪಂಚನಾಗ ಲಿಂಗ ಶಿಲ್ಪ ಪತ್ತೆ

ಪ್ರಜಾವಾಣಿ ವಾರ್ತೆ

ಕಿಕ್ಕೇರಿ (ಮಂಡ್ಯ): ಹೋಬಳಿಯ ಚಿಕ್ಕಳಲೆ ಗ್ರಾಮದ ಚಿಕ್ಕಳಮ್ಮ ದೇಗುಲದ ಬಳಿ ಇರುವ ಕಲ್ಯಾಣಿ ಸಮೀಪ ಅಪರೂಪದ ಪುರಾತನ ಕಾಲದ ಪಂಚ ನಾಗಲಿಂಗ ಶಿಲ್ಪ ಪತ್ತೆಯಾಗಿದೆ.

ಹವ್ಯಾಸಿ ಇತಿಹಾಸ ಸಂಶೋಧಕ ಶಿಕ್ಷಕ ಸಂತೆಬಾಚಹಳ್ಳಿ ರಂಗಸ್ವಾಮಿ ಈ ಶಿಲ್ಪವನ್ನು ಪತ್ತೆಹಚ್ಚಿದ್ದು, ದಕ್ಷಿಣ ಭಾರತ ಇತಿಹಾಸದಲ್ಲಿಯೇ ಅಪರೂಪದ ವಿಗ್ರಹ ಇದಾಗಿದೆ ಎನ್ನುತ್ತಾರೆ.

'ಕಲಬುರ್ಗಿ ಜಿಲ್ಲೆಯ ಸನ್ನತಿ ಗ್ರಾಮದಲ್ಲಿ ಅಶೋಕನ ಕಾಲದ ನಾಗಶಿಲ್ಪ ದೊರೆತಿದೆ. ಆದರೆ ನಾಗಲಿಂಗ ಶಿಲ್ಪ ಇದುವರೆಗೂ ಈ ರೀತಿಯ ವಿಗ್ರಹ ಪತ್ತೆಯಾಗಿಲ್ಲ' ಎಂದರು.

ಕಿಕ್ಕೇರಿ ಹೋಬಳಿಯ ಚಿಕ್ಕಳಲೆಯಲ್ಲಿ ಪತ್ತೆಯಾಗಿರುವ ಪಂನಾಗ ಲಿಂಗ ಶಿಲ್ಪ

'ನಿತ್ಯ ಕೊಳದ ಬಳಿ ಓಡಾಡುತ್ತಿದ್ದೆವು. ಯಾವುದೋ ಕಲ್ಲು ಎಂದು ಅರಿಯದೆ ಸುಮ್ಮನಿದ್ದೆವು. ಇದು ಗ್ರಾಮಕ್ಕೆ ಹೆಮ್ಮೆಯ ವಿಚಾರ' ಎಂದು ಚೌಡೇನಹಳ್ಳಿ ಮುಖಂಡ ದೇವರಾಜು ಸಂತಸ ವ್ಯಕ್ತಪಡಿಸಿದರು.

ಭರವಸೆಗಳಿಗೆ ತಿರಸ್ಕಾರ: ಅತಿಥಿ ಉಪನ್ಯಾಸಕರ ಮುಂದುವರಿದ ಹೋರಾಟ

ನಾಳೆಯಿಂದ ಪಾದಯಾತ್ರೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ನೀಡಿದ ಭರವಸೆಗಳನ್ನು ತಿರಸ್ಕರಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರು ಹೋರಾಟ ತೀವ್ರಗೊಳಿಸಲು ನಿರ್ಧರಿಸಿದ್ದು, ಜ.1ರಿಂದ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ.

ಸೇವಾ ಭದ್ರತೆಗೆ ಆಗ್ರಹಿಸಿ ತುಮಕೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಜ.1ರಂದು ಸಿದ್ಧಗಂಗಾ ಮಠದ ಆವರಣದಲ್ಲಿ ಸಿದ್ಧಗಂಗಾ ಶ್ರೀಗಳು ಚಾಲನೆ ನೀಡಲಿದ್ದಾರೆ. ಪ್ರತಿದಿನ 20 ಕಿ.ಮೀ. ಸಾಗಿದ ನಂತರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ದೊಡ್ಡಮಟ್ಟದಲ್ಲಿ ಪ್ರತಿಭಟಿಸಲು ನಿರ್ಧರಿಸಿದ್ದಾರೆ.

'ಉನ್ನತ ಶಿಕ್ಷಣ ಸಚಿವರು ನೀಡಿದ ನಾಲ್ಕೂ ಭರವಸೆಗಳು ಅತಿಥಿ ಉಪನ್ಯಾಸಕರ ಮೂಗಿಗೆ ತುಪ್ಪ ಸವರಿದಂತಿವೆ. ಸೇವಾ ಭದ್ರತೆ ಇಲ್ಲದ ಭರವಸೆಗಳಿಂದ ಯಾವ ಪ್ರಯೋಜನವೂ ಇಲ್ಲ. 60 ವರ್ಷಕ್ಕೆ ₹5 ಲಕ್ಷ ಧನಸಹಾಯದ ಭರವಸೆ ಇದೆ. ಆದರೆ, ಸಹಾಯಕ ಪ್ರಾಧ್ಯಾಪಕರ ನೇಮಕ, ವರ್ಗಾವಣೆ ಯಿಂದ ಕಾರ್ಯಭಾರ ಕಡಿಮೆಯಾಗುತ್ತಿದೆ,ಪ್ರತಿವರ್ಷ ನಡೆಸುವ ಕೌನ್ಸೆಲಿಂಗ್‌ನಿಂದ ಬಹಳಷ್ಟು ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳು ತ್ತಿದ್ದಾರೆ. ಸಹಾಯಧನ ನೀಡುವ ಮೊದಲು 60 ವರ್ಷದವರೆಗೆ ಸೇವಾಭದ್ರತೆಯ ಭರವಸೆ ನೀಡಬೇಕು' ಎಂದು ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಹನುಮಂತಗೌಡ ಕಲ್ಮನಿ ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯ ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕರಾಗಿದ್ದರು. ಅಂದು ಅತಿಥಿ ಉಪನ್ಯಾಸಕರನ್ನು ಕಾಯಂ ಮಾಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದರು. ಈಗ ಅವರೇ ಮುಖ್ಯಮಂತ್ರಿಯಾಗಿದ್ದಾರೆ. ಕಾಯಂ ಮಾಡಲು ಏಕೆ ಮೀನಮೇಷ ಎಂದು ಕಲ್ಮನಿ ಪ್ರಶ್ನಿಸಿದ್ದಾರೆ.

ವಾರ್ಷಿಕ ₹5 ಲಕ್ಷಗಳವರೆಗಿನ ಆರೋಗ್ಯವಿಮೆ ಸೌಲಭ್ಯ ಕಲ್ಪಿಸಲಾಗುತ್ತಿದೆ. ಅದಕ್ಕೆ ಪ್ರತಿ ತಿಂಗಳು ಅತಿಥಿ ಉಪನ್ಯಾಸಕರ ಗೌರವಧನದಲ್ಲಿ ₹400 ಕಡಿತ ಮಾಡಲಾಗುತ್ತದೆ. 10 ತಿಂಗಳು ಕೆಲಸ. ಇನ್ನೂ 2 ತಿಂಗಳು ಯಾರು ಕಟ್ಟುತ್ತಾರೆ? ತಿಂಗಳಿಗೆ ಒಂದು ರಜೆ ಸೌಲಭ್ಯ ಕಲ್ಪಿಸಲಾಗಿದೆ. ಅದರಲ್ಲೂ ಸ್ಪಷ್ಟತೆ ಇಲ್ಲ. ಬಹಳಷ್ಟು ಉಪನ್ಯಾಸಕರು ಮನೆ ಬಾಡಿಗೆ ಕಟ್ಟಲಾಗದೆ, ಮಕ್ಕಳ ಶಾಲಾ ಶುಲ್ಕ ಭರಿಸಲಾಗದೆ ಪರಿತಪಿಸುತ್ತಿದ್ದಾರೆ. ಇದಕ್ಕೆಲ್ಲ ಪರಿಹಾರ ಸೇವಾಭದ್ರತೆ ಎಂದು ಸಂಘಟನೆಯ ಮುಖಂಡರು ಒತ್ತಾಯಿಸಿದ್ದಾರೆ.

ಜ.1ರಿಂದ ಕೆಲಸಕ್ಕೆ ಮರಳಲು ಸೂಚನೆ

ಅತಿಥಿ ಉಪನ್ಯಾಸಕರು ಹೋರಾಟ ತೀವ್ರಗೊಳಿಸುವ ನಿರ್ಧಾರ ಪ್ರಕಟಿಸಿದ ಬೆನ್ನಲ್ಲೇ, ವಿದ್ಯಾರ್ಥಿಗಳ ದೃಷ್ಟಿಯಿಂದ ಜ.1ರಿಂದ ಕೆಲಸಕ್ಕೆ ಕಡ್ಡಾಯವಾಗಿ ಹಾಜರಾಗಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. 2023-24ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರಾಗಿ ಆಯ್ಕೆಯಾದವರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನ.23ರಿಂದ ಮುಷ್ಕರ ನಡೆಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಡಕಾಗಿದೆ. ಉನ್ನತ ಶಿಕ್ಷಣ ಸಚಿವರ ಸೂಚನೆಯಂತೆ ಜ.1ರಿಂದ ತರಗತಿಗಳನ್ನು ಆರಂಭಿಸಬೇಕು. ತರಗತಿ ತೆಗೆದುಕೊಳ್ಳದ ಉಪನ್ಯಾಸಕರ ಬದಲಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಹಾಗಾಗಿ, ಅತಿಥಿ ಉಪನ್ಯಾಸಕರು ತರಗತಿಗಳಿಗೆ ಹಾಜರಾಗಿರುವ ಕುರಿತು ಅಂದು ಮಧ್ಯಾಹ್ನ 2ರ ಒಳಗೆ ಆನ್‌ಲೈನ್ ಮೂಲಕ ವಿವರ ನೀಡುವಂತೆ ಎಲ್ಲ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

LIC
ಭಾರತೀಯ ಜೀವ ವಿಮಾ ನಿಗಮ
भारतीय जीवन बीमा निगम
LIFE INSURANCE CORPORATION OF INDIA

DIVISIONAL OFFICE-I, 2nd Floor, 'Jeevan Prakash', J.C.Road, Bangalore-560002. Ph. No.080-22966509, 080-22966510, 080-22966580

NOTICE FOR EMPANELMENT

Applications are invited from reputed firms for empanelment at Life Insurance Corporation of India, Divisional Office-I, 2nd Floor, "Jeevan Prakash", J.C.Road, Bangalore for the following services required by LIC of India, Bangalore Divisions I & II.

1) Office Tables (Iron & Computer), Chairs (S-type, Visitors, Revolving, Computer), Filing Cabinet) Almirahs, Iron Safes, Fire/Water Proof storage equipments, Racks, Angles Racks, etc. **2)** Bundle Note/ Loose Note Counting cum Fake Note Detector Machines & Maintenance. **3)** Printing & Stationery such as Forms, Pamphlets/Leaflets, Posters, Stickers Envelopes etc. **4)** Computer Continuous Stationery-Printed/Blank. **5)** CCTV Cameras Suppliers & Maintenance. **6)** Fire Alarm/Fire Extinguishers Suppliers and Maintenance. **7)** Table Stationery & Office Stationery etc. **8)** Transportation Services of Stationery items from Divisional Office to Other Offices. **9)** Identity Cards/ Visiting Cards/ Rubber Stamps/ Name Boards etc. **10)** Pest Control Services/Rodent treatment etc. **11)** Air Ticket Booking Agencies. **12)** Supply of IT Consumables, Ribbons, Cartridges, Inkbottles etc. **13)** Purchase & AMC of Water Purifier, EPABX/Telephone Network. **14)** Water Tank Cleaning at Bangalore DO Offices and Quarters. **15)** Repairs and Maintenance of Chairs, Tables, Locks, Almirahs, etc. **16)** Printing, supply and servicing of Glow sign Boards, Flex Banners & Hoardings, Fabric/Cloth Banner Printing, Fabric/Cloth Hoarding/ Signage Board/ Standees/ Wall Paintings. **17)** Courier Services & Local Tapal Services. **18)** Gardening/ Landscaping. **19)** Scrap Dealers. **20)** Laundry Services of Guest Houses. **21)** Advertising Agencies for News Paper Ads. **22)** Preparatory work for bulk Mailing of Letters, Articles (Cutting, Folding, Insertion, Pasting Sealing. **23)** Housekeeping Cleaning Materials. **24)** Gold & Silver Articles. **25)** Trophies, Medals, Shields (Acryclic, Gun Metal, Wooden, Glass, Steel, Bronze, White Metal). **26)** Wall Clock & Wrist Watches/ Wood Work Articles, Soaps, Perfumes/Crockery Items, Kitchenware, Glassware etc/ Travel Bags, Pouches, Laptop Bags, Backpack, Leather Items/Electric Items like Mixer, Iron Box, Fans, Emergency Lamps, Hot Plates/ Electronic Items like Mobile Handsets, Tabs, Laptops. **27)** Bed Sheets, towels, Suiting & Shirting etc. **28)** Mobile Van Services.

The details of empanelment are available in our website: www.licindia.com/tenders. Applications for empanelment are to be collected from Divisional Office-I, Bangalore, on payment of Rs.100/- in Cash/DD/Banker's Cheque at Divisional Office Cash Counter (or) can be downloaded from our website.

Last date for submitting the duly filled in applications is 5.00 PM on 16-01-2024.

Place: Bangalore **Sd/-**
Dated: 31-12-2023 **Senior Divisional Manager**

ರಾಜಕೀಯ ಪಲ್ಲಟಗಳಿಗೆ ಸಾಕ್ಷಿಯಾದ ವರ್ಷ

• ವಿ.ಎಸ್. ಸುಬ್ರಹ್ಮಣ್ಯ, ಚಂದ್ರಹಾಸ ಹಿರೇಮಳಲಿ, ಬಾಲಕೃಷ್ಣ ಪಿ. ಎಚ್

ಬೆಂಗಳೂರು: ಈ ವರ್ಷದ ಮೇ ತಿಂಗಳಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಮುನ್ನ ಮತ್ತು ನಂತರ ರಾಜ್ಯವು ಹಲವು ರಾಜಕೀಯ ಪಲ್ಲಟಗಳಿಗೆ ಸಾಕ್ಷಿಯಾಯಿತು. ಭರ್ಜರಿ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರದ ಗದ್ದುಗೆಗೇರಿದರೆ, ಹೀನಾಯ ಸೋಲಿನ ಹೊಡೆತದಿಂದ ತತ್ತರಿಸಿ ಹೋದ ಬಿಜೆಪಿ ಇನ್ನೂ ಮೊದಲಿನ ಸ್ಥಿತಿಗೆ ಮರಳಿಲ್ಲ. ಬಲಹೀನಗೊಂಡಿರುವ ಜೆಡಿಎಸ್ ಪಕ್ಷದ ನಾಯಕರು ಬಿಜೆಪಿಯ ಆಸರೆಯಲ್ಲಿ ಶಕ್ತಿ ಹೆಚ್ಚಿಸಿಕೊಳ್ಳುವ ಕಸರತ್ತಿನಲ್ಲೇ ಇದ್ದಾರೆ.

ವರ್ಷದ ಆರಂಭದಲ್ಲೇ ಶೇಕಡ 40ರಷ್ಟು ಕಮಿಷನ್ ಆರೋಪ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರವನ್ನು ಬಲವಾಗಿ ಸುತ್ತಿಕೊಂಡಿತ್ತು. ಪೇ ಸಿ.ಎಂ ಪೋಸ್ಟರ್‌ನಂತಹ ಹೊಸ ದಾಳಗಳನ್ನು ಉರುಳಿಸಿದ್ದ ಕಾಂಗ್ರೆಸ್, ಬಿಜೆಪಿಯನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿತ್ತು. ಅಳೆದು ತೂಗಿ ಟಿಕೆಟ್ ಹಂಚಿಕೆ ಮಾಡಿದ್ದ ಬಿಜೆಪಿ, ಜೆಡಿಎಸ್ ಜತೆಗೂಡಿ ಮೈತ್ರಿ ಸರ್ಕಾರವನ್ನಾದರೂ ರಚಿಸುವ ನಿರೀಕ್ಷೆಯಲ್ಲಿತ್ತು. ಪ್ರಧಾನಿ ನರೇಂದ್ರ ಮೋದಿ ಪದೇ ಪದೇ ಕರ್ನಾಟಕಕ್ಕೆ ಬಂದು ಚುನಾವಣಾ ಪ್ರಚಾರ ನಡೆಸಿದ್ದರು.

ಮೇ 13ಕ್ಕೆ ಚುನಾವಣಾ ಫಲಿತಾಂಶ ಪ್ರಕಟವಾದಾಗ, ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಹೀನಾಯ ಸೋಲಿನೊಂದಿಗೆ ಪತನಗೊಂಡಿತು. ಕಾಂಗ್ರೆಸ್ 135 ಸ್ಥಾನಗಳೊಂದಿಗೆ ಅಧಿಕಾರದ ಗದ್ದುಗೆ ಹಿಡಿದರೆ, ಬಿಜೆಪಿಯ ಶಾಸಕರ ಸಂಖ್ಯೆ 66ಕ್ಕೆ ಕುಸಿಯಿತು. ಗೋವಿಂದ ಕಾರಜೋಳ, ಮುರುಗೇಶ ನಿರಾಣಿ, ಡಾ.ಕೆ. ಸುಧಾಕರ್, ಸಿ.ಟಿ. ರವಿ ಸೇರಿದಂತೆ ಬಿಜೆಪಿಯ ಘಟಾನುಘಟಿಗಳು ಸೋಲು ಕಂಡರು. ಜೆಡಿಎಸ್‌ನ ಶಾಸಕರ ಸಂಖ್ಯೆ 2018ರ ಚುನಾವಣೆಗೆ ಹೋಲಿಸಿ ದರೆ ಅರ್ಧದಷ್ಟಕ್ಕೆ ಕುಸಿಯಿತು. ಅತಂತ್ರ ವಿಧಾನಸಭೆ ಸೃಷ್ಟಿಯಾಗಬಹುದೆಂಬ ಬಯಕೆಯಲ್ಲೇ ಅಧಿಕಾರದ ಗದ್ದುಗೆಯ ಕನಸು ಕಂಡಿದ್ದ ಜೆಡಿಎಸ್ ನಾಯಕರು, ತಮ್ಮ ಸಾಂಪ್ರದಾಯಿಕ ನೆಲೆಗಳಲ್ಲೇ ಬಲ ಕಳೆದುಕೊಂಡರು.

ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕವೂ ಕರ್ನಾಟಕ ನಾಟಕೀಯ ರಾಜಕೀಯ ಬೆಳವಣಿಗೆಗಳಿಗೆ ಸಾಕ್ಷಿಯಾಯಿತು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಗಾದಿಗಾಗಿ ನಡೆಸಿದ ಪೈಪೋಟಿ ಕಾಂಗ್ರೆಸ್ ನಾಯಕರನ್ನು ತುಸು ಇಕ್ಕಟ್ಟಿಗೆ ಸಿಲುಕಿಸಿತು. ಕಾಂಗ್ರೆಸ್ ಹೈಕಮಾಂಡ್‌ನ ಸಂಧಾನ ಸೂತ್ರದಂತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಕುರ್ಚಿ ಹಿಡಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಸಂಪುಟದಲ್ಲಿರುತ್ತಿದ್ದ ಆರ್.ವಿ. ದೇಶಪಾಂಡೆ ಸೇರಿದಂತೆ ಹಲವು ಹಿರಿಯರು ಈ ಬಾರಿ ಹೊರಗುಳಿದರು. ಆ ಮೂಲಕ ಹೊಸ ರಾಜಕೀಯ ಸಮೀಕರಣವೊಂದನ್ನು ಅನುಷ್ಠಾನಕ್ಕೆ ತರುವ ಕಸರತ್ತಿಗೆ ಕಾಂಗ್ರೆಸ್ ನಾಯಕರು ಕೈ ಹಾಕಿದರು. ಅಧಿಕಾರ ಸ್ವೀಕರಿಸಿದ ಮರು ಗಳಿಗೆಯಿಂದಲೇ 'ಗ್ಯಾರಂಟಿ'ಗಳ ಅನುಷ್ಠಾನಕ್ಕೆ ಚಾಲನೆ ನೀಡಿದ ಸಿದ್ದರಾಮಯ್ಯ, ಮತದಾರರಿಗೆ ಕೊಟ್ಟ ವಾಗ್ದಾನ ಉಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ನಾಲ್ಕು 'ಗ್ಯಾರಂಟಿ'ಗಳ ಅನುಷ್ಠಾನ ಆಗಿದ್ದು, 'ಯುವ ನಿಧಿ'ಗೆ ಹೊಸ ವರ್ಷದ ಆರಂಭದಲ್ಲೇ ಚಾಲನೆ ನೀಡಲು ಸಿದ್ಧತೆ ನಡೆಸಿದ್ದಾರೆ.

ಅಧಿಕಾರಕ್ಕೆ ಬಂದ ಆರು ತಿಂಗಳಲ್ಲೇ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧವೂ ಕಮಿಷನ್ ಆರೋಪ ಕೇಳಿಬಂದಿದೆ. ಕೆಲವು ಇಲಾಖೆಗಳಲ್ಲಿ ಮುಂದುವರಿದ ಕಮಿಷನ್ ಹಾವಳಿ ವಿರುದ್ಧ ಗುತ್ತಿಗೆದಾರರು ಧ್ವನಿ ಎತ್ತಿದ್ದಾರೆ.

ಡಿ.ಕೆ. ಶಿವಕುಮಾರ್ ಸಿದ್ದರಾಮಯ್ಯ

ಗ್ಯಾರಂಟಿ ಯೋಜನೆಗಳು

ಗೃಹಲಕ್ಷ್ಮಿ: 1.17 ಕೋಟಿ ಫಲಾನುಭವಿಗಳು ₹2,300 ಕೋಟಿ (ಮಾಸಿಕ) ವೆಚ್ಚ

ಗೃಹ ಜ್ಯೋತಿ: 1.62 ಕೋಟಿ ಫಲಾನುಭವಿಗಳು ₹800 ಕೋಟಿ (ಮಾಸಿಕ) ವೆಚ್ಚ

ಶಕ್ತಿ: 120 ಕೋಟಿ ಮಹಿಳೆಯರಿಗೆ ಉಚಿತ ಪ್ರಯಾಣ, ₹2,700 ಕೋಟಿ ವೆಚ್ಚ

ಅನ್ನ ಭಾಗ್ಯ: 1.28 ಕೋಟಿ ಪಡಿತರ ಚೀಟಿದಾರರು,₹ 656 ಕೋಟಿ ವೆಚ್ಚ(ಮಾಸಿಕ)

ಯುವನಿಧಿ; ₹1 ಸಾವಿರ ಕೋಟಿ ನಿಗದಿ

ಒಟ್ಟು 4.30 ಕೋಟಿ ಫಲಾನುಭವಿಗಳು,ಪ್ರಸಕ್ತ ವರ್ಷ ₹38 ಸಾವಿರ ಕೋಟಿ ವೆಚ್ಚ

'ನಾಯಕ'ರಿಗಾಗಿ ಹುಡುಕಾಡಿದ ಬಿಜೆಪಿ

ಚುನಾವಣೆ ಮುಗಿದು ಆರು ತಿಂಗಳವರೆಗೂ ಬಿಜೆಪಿಯು ವಿಧಾನಸಭೆ ಮತ್ತು ವಿಧಾನ ಪರಿಷತ್‌ಗಳ ವಿರೋಧ ಪಕ್ಷದ ನಾಯಕರನ್ನು ಆಯ್ಕೆ ಮಾಡಲಿಲ್ಲ. ಈ ಹುದ್ದೆಗಳ ಮೇಲೆ ಕಣ್ಣಿಟ್ಟಿದ್ದ ಹಲವರು ಪದೇ ಪದೇ ದೆಹಲಿ ಯಾತ್ರೆ ಮಾಡಿದರೂ ಪ್ರಯೋಜನವಾಗಿರಲಿಲ್ಲ.

ವಿಧಾನ ಮಂಡಲದ ಎರಡು ಅಧಿವೇಶನಗಳನ್ನು ವಿರೋಧ ಪಕ್ಷದ ನಾಯಕರಿಲ್ಲದೇ ಕಳೆದ ಬಿಜೆಪಿ, ಕಲಾಪದಲ್ಲೇ ಮುಜುಗರ ಎದುರಿಸಿತು. ವಿಧಾನಮಂಡಲದ ಬೆಳಗಾವಿ ಅಧಿವೇಶನದಲ್ಲಿ ಆರ್. ಅಶೋಕ ಅವರಿಗೆ ವಿಧಾನಸಭೆಯ ವಿರೋಧ ಪಕ್ಷದ ಸ್ಥಾನ ನೀಡಲಾಯಿತು. ವಿಧಾನ ಪರಿಷತ್‌ನಲ್ಲಿ ಮೂರನೇ ಅಧಿವೇಶನವೂ ವಿರೋಧ ಪಕ್ಷದ ನಾಯಕನಿಲ್ಲದೇ ಮುಗಿಯಿತು. ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಈಚೆಗೆ ಆ ಹುದ್ದೆಗೆ ನೇಮಿಸಲಾಗಿದೆ.


ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕವಾದ ಸಂದರ್ಭದಲ್ಲಿ ತಂದೆ ಯಡಿಯೂರಪ್ಪ ಜತೆ ವಿಜಯೇಂದ್ರ

ಸುದೀರ್ಘ ಕಸರತ್ತಿನ ಬಳಿಕ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಮಗ, ಶಿಕಾರಿಪುರ ಕ್ಷೇತ್ರದ ಶಾಸಕ ಬಿ.ವೈ. ವಿಜಯೇಂದ್ರ ಅವರಿಗೆ 'ಪಟ್ಟ' ಕಟ್ಟಿದ್ದಾರೆ.

ವಿಜಯೇಂದ್ರ ನೇಮಕ, ಅಶೋಕ ಆಯ್ಕೆಯ ಅಪಸ್ವರ ಪಕ್ಷದ ಒಡಲನ್ನು ಸುಡುತ್ತಲೇ ಇದೆ.

ಮೈತ್ರಿ ಮೊರೆಹೋದ ಜೆಡಿಎಸ್

ವಿಧಾನಸಭಾ ಚುನಾವಣೆಯಲ್ಲಿ ಬಲವಾದ ಪೆಟ್ಟು ತಿಂದಿರುವ ಜೆಡಿಎಸ್, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಜತೆ ಸಖ್ಯ ಬೆಳೆಸುವ ತೀರ್ಮಾನ ಕೈಗೊಂಡಿದೆ. ಬಿಜೆಪಿ ವಿರುದ್ಧ ಸೆಣಸಿ ಗೆದ್ದು ಬಂದ ಜೆಡಿಎಸ್‌ನ ಹಲವು ಶಾಸಕರು ಆರಂಭದಲ್ಲಿ ಮೈತ್ರಿಯನ್ನು ವಿರೋಧಿಸಿದ್ದರು. ಸ್ವತಃ ಅಖಾಡಕ್ಕಿಳಿದು ಎಲ್ಲರ ಮನವೊಲಿಸಿದ ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಮೈತ್ರಿಯ ನಿರ್ಧಾರ ಅಂತಿಮಗೊಳಿಸಿದರು.

ಜೆಡಿಎಸ್ ವರಿಷ್ಠ ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಭೇಟಿಯಾದ ಸಂದರ್ಭ

ಕಾಂಗ್ರೆಸ್‌ನಲ್ಲೂ ಇದೆ ಅತೃಪ್ತಿಯ ಹೊಗೆ

135 ಶಾಸಕರ ಬಲದ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಹೊಗೆ ತಣ್ಣಗಾಗಿಲ್ಲ. ತಮ್ಮ ಮಾತಿಗೆ ಕಿಮ್ಮತ್ತಿಲ್ಲ ಎಂಬ ಕಾರಣ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸಿಡಿಮಿಡಿಗೊಂಡಿದ್ದರು. ಅವರ ಅತೃಪ್ತಿಯನ್ನು ಶಮನ ಮಾಡುವ ಕೆಲಸ ಪೂರ್ಣಗೊಂಡಂತೆ ಕಾಣಿಸುತ್ತಿಲ್ಲ. ಬಿ.ಆರ್. ಪಾಟೀಲ, ಬಸವರಾಜ ರಾಯರಡ್ಡಿ ಅಂತಹ ಹಿರಿಯ ನಾಯಕರು ಆರಂಭದಲ್ಲೇ ತಮ್ಮ ಅಸಮಾಧಾನ ಹೊರಹಾಕಿದ್ದಾರೆ. ಪಾಟೀಲರಂತೂ ಪತ್ರ ಸಮರವನ್ನೇ ನಡೆಸಿದರು. ಬೆಂಗಳೂರಿನ ಪ್ರಭಾವಿ ಶಾಸಕ ಎಂ. ಕೃಷ್ಣಪ್ಪ, ಅವರ ಪುತ್ರ ಪ್ರಿಯಕೃಷ್ಣ ಪಕ್ಷದ ಚಟುವಟಿಕೆಯಿಂದ ದೂರವೇ ಉಳಿದಿದ್ದಾರೆ.

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಮಧ್ಯದ ಅಧಿಕಾರದ ಪೈಪೋಟಿ ಮುಗಿದಿಲ್ಲ; ಮುಗಿಯುವ ಲಕ್ಷಣವೂ ಕಾಣಿಸುತ್ತಿಲ್ಲ. ಲೋಕಸಭೆ ಚುನಾವಣೆ ಬಳಿಕ ಈ ಪೈಪೋಟಿ ಮತ್ತೊಂದು ಸುತ್ತಿನ ಅಂತರ್‌ಸಮರಕ್ಕೆ ಕಾರಣವಾದರೂ ಅಚ್ಚರಿಯಿಲ್ಲ.

ಪ್ರಮುಖ ನಿರ್ಣಯಗಳು

- ಕಾರ್ಖಾನೆಗಳಲ್ಲಿ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸುವ, ಮಹಿಳೆಯರಿಗೆ ರಾತ್ರಿಪಾಳಿ ಕೆಲಸಕ್ಕೆ ಅನುವು ಮಾಡಿಕೊಟ್ಟಿರುವ 'ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಮಸೂದೆ.
- ರಾಜ್ಯದಲ್ಲಿ ಕನ್ನಡಕ್ಕೆ ಅಗ್ರಸ್ಥಾನ, ಕನ್ನಡಿಗರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಉತ್ತಮ ಅವಕಾಶ ಕಲ್ಪಿಸಲು 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ.
- ಪರಿಶಿಷ್ಟ ಜಾತಿ/ ಪಂಗಡಗಳ ಭೂಮಿ ವರ್ಗಾವಣೆ ನಿಷೇಧ(ಪಿಟಿಸಿಎಲ್) ಮಸೂದೆ.
- ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಮತ್ತು ದೆಹಲಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿಯಾಗಿ ನೇಮಕಗೊಳ್ಳುವ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯರನ್ನು ಲಾಭದಾಯಕ ಹುದ್ದೆ ಹೊಂದಿದ ಆರೋಪದಡಿ ಅನರ್ಹತೆಯಿಂದ ರಕ್ಷಿಸುವ 'ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ.
- ಸಣ್ಣ ರೈತರು ಮತ್ತು ಆರ್ಥಿಕವಾಗಿ ದುರ್ಬಲರಾಗಿರುವವರು ದಾಖಲಿಸಿರುವ ಅಥವಾ ಪ್ರತಿವಾದಿಗಳಾಗಿರುವ ಪ್ರಕರಣಗಳನ್ನು ದಿನದ ವಿಚಾರಣಾ ಪಟ್ಟಿಯಲ್ಲಿ ಆದ್ಯತೆ ಮೇಲೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಮಸೂದೆ.
- ಕೃಷಿ ಜಮೀನನ್ನು ಸ್ವಯಂಘೋಷಣೆಯೊಂದಿಗೆ ಭೂ ಪರಿವರ್ತನೆ ಮಾಡಲು ಅವಕಾಶ ಕಲ್ಪಿಸುವ ಭೂ ಕಂದಾಯ ತಿದ್ದುಪಡಿ ಮಸೂದೆ.
- ಸರ್ಕಾರಿ ವ್ಯಾಜ್ಯಗಳ ನಿರ್ವಹಣೆಗೆ ಹೊಣೆಗಾರಿಕೆ ನಿಗದಿಪಡಿಸುವ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣೆ ಮಸೂದೆ.
- ಕರ್ನಾಟಕ ಅಗ್ನಿಶಾಮಕ ದಳ (ತಿದ್ದುಪಡಿ) ಮಸೂದೆ ಮತ್ತು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ (ತಿದ್ದುಪಡಿ) ಮಸೂದೆ.
- ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು, ಸಿಬ್ಬಂದಿಗೆ ಸೇವಾ ಭದ್ರತೆ ಕಲ್ಪಿಸುವ 'ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ.
- ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ, ಹಂಚಿಕೆ, ಮತ್ತು ಆರ್ಥಿಕ ಸಂಪನ್ಮೂಲಗಳ ಬಳಕೆ) ತಿದ್ದುಪಡಿ ಮಸೂದೆ.
- ₹ 20 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ವಿದ್ಯುತ್ ಚಾಲಿತ ವಾಹನಗಳಿಗೆ ತೆರಿಗೆ ರದ್ಧತಿಯ ತಿದ್ದುಪಡಿಯೊಂದಿಗೆ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಮಸೂದೆ.
- ₹ 10 ಲಕ್ಷದಿಂದ ₹ 15 ಲಕ್ಷದವರೆಗಿನ ಮೌಲ್ಯ ಹಾಗೂ 1.5 ಟನ್‌ನಿಂದ 12 ಟನ್‌ವರೆಗಿನ ತೂಕದ ಸರಕು ಸಾಗಣೆ ಮತ್ತು ಕ್ಯಾಬ್ ವಾಹನಗಳಿಗೆ ಜೀವಿತಾವಧಿ ತೆರಿಗೆ ವಿಧಿಸುವುದನ್ನು ಹಿಂಪಡೆದು, ಹಿಂದಿನಂತೆಯೇ ತ್ರೈಮಾಸಿಕವಾಗಿ ತೆರಿಗೆ ಸಂಗ್ರಹಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ಮಸೂದೆ.
- ವಕೀಲರು ಯಾವುದೇ ಭಯ, ಬಾಹ್ಯ ಪ್ರಭಾವಕ್ಕೆ ಒಳಗಾಗದೆ ವೃತ್ತಿಪರ ಸೇವೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲು ಮತ್ತು ಅವರ ಮೇಲಿನ ಹಿಂಸೆಯನ್ನು ನಿಷೇಧಿಸಲು ಹಾಗೂ ರಕ್ಷಣೆ ಒದಗಿಸಲು ಅವಕಾಶ ಕಲ್ಪಿಸುವ 2023ನೇ ಸಾಲಿನ 'ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ' ಮಸೂದೆ.
- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಕಾಯ್ದೆ.
- ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಸೂಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ಮಸೂದೆ, ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಮಸೂದೆ.
- ಹಂಪಿ ವಿಶ್ವಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಮಸೂದೆ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು ತಿದ್ದುಪಡಿ ಮಸೂದೆ.
- ರೇಣುಕಾ ಯಲ್ಲಮ್ಮ ಕ್ಷೇತ್ರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಮಸೂದೆ.
- ರಾಜ್ಯದಲ್ಲಿ ಎಂಬಿಬಿಎಸ್ ಮತ್ತು ಸ್ನಾತಕೋತ್ತರ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ಸೇವೆ ಸಲ್ಲಿಸಬೇಕು ಎಂಬ ನಿಯಮ ರದ್ದು ಮಾಡಲು ಅವಕಾಶ ಕಲ್ಪಿಸುವ 'ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ಮಸೂದೆ.
- ದತ್ತಕ ಪತ್ರ, ಬ್ಯಾಂಕ್ ಗ್ಯಾರಂಟಿ, ದೃಢೀಕರಣ ಪತ್ರ, ಒಪ್ಪಂದ ಪತ್ರ, ಲಿಖಿತಗಳ ರದ್ಧತಿ, ಒಡಂಬಡಿಕೆ ಪತ್ರ, ಹೀಗೆ 54 ವಿಷಯಗಳಿಗೆ ಸಂಬಂಧಿಸಿದಂತೆ ಮುದ್ರಾಂಕ ಶುಲ್ಕವನ್ನು ಹೆಚ್ಚಿಸಲು ಅವಕಾಶ ಕಲ್ಪಿಸುವ 'ಕರ್ನಾಟಕ ಸ್ಟಾಂಪು(ತಿದ್ದುಪಡಿ) ಮಸೂದೆ.
- ಕರಾವಳಿ ಅಭಿವೃದ್ಧಿ ಮಂಡಳಿ ಮಸೂದೆ.

ಮಹತ್ವದ ಆದೇಶಗಳು

- ಪರಿಶಿಷ್ಟ ಜಾತಿಗಳ ಮಧ್ಯೆ ಒಳಮೀಸಲಾತಿ ನಿಗದಿ.
- 2019ರಿಂದ 2023ರವರೆಗಿನ ಗುತ್ತಿಗೆ ಕಾಮಗಾರಿಗಳಲ್ಲಿ ನಡೆದಿರುವ ಅಕ್ರಮದ ಆರೋಪಗಳ ಕುರಿತು ವಿಚಾರಣೆ ನಡೆಸಲು ನ್ಯಾ.ನಾಗಮೋಹನ ದಾಸ್ ಅವರ ಏಕವ್ಯಕ್ತಿ ಆಯೋಗ ರಚನೆ.
- ಕೋವಿಡ್ ಅವಧಿಯ ಅಕ್ರಮಗಳ ತನಿಖೆಗೆ ನ್ಯಾ. ಮೈಕಲ್ ಕುನ್ಹ ಆಯೋಗ ರಚನೆ
- ಪಿಎಸ್‌ಐ ಅಕ್ರಮದ ತನಿಖೆಗೆ ನ್ಯಾ. ವೀರಪ್ಪ ನೇತೃತ್ವದ ಆಯೋಗ ರಚನೆ
- ಮೋಟಾರು ವಾಹನಗಳ ತೆರಿಗೆ ಪರಿಷ್ಕರಣೆ ಆದೇಶ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹472 ಕೋಟಿ ಹೆಚ್ಚುವರಿ ವರಮಾನ ಸಂಗ್ರಹದ ಗುರಿ.
- ಬಿಜೆಪಿ ಸರ್ಕಾರದ ಅವಧಿಯಲ್ಲಿ ತಂದಿದ್ದ ಪಠ್ಯಪುಸ್ತಕಗಳ ಪರಿಷ್ಕರಣೆ ರದ್ದು
- ಎಸ್‌ಇಪಿಗೆ ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಆಯೋಗ ರಚನೆ.

ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ತನ್ನ ಪ್ರಕಟಣೆಯ ಪುಸ್ತಕಗಳಿಗೆ ಜನವರಿ ತಿಂಗಳಲ್ಲಿ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಆನ್‌ಲೈನ್ ಮೂಲಕ ಕೂಡ ಪುಸ್ತಕಗಳ ಖರೀದಿಗೆ ಅವಕಾಶವಿದೆ. kuvempubhashabharathi.karnataka.gov.in ಮೂಲಕ ರಿಯಾಯಿತಿ ದರಲ್ಲಿ ಪುಸ್ತಕವನ್ನು ಒದಗಿಸಲಾಗುತ್ತದೆ ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

700 ಕ್ವಿಂಟಲ್ ಪಡಿತರ ಅಕ್ಕಿ ವಶ

ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಸಹೋದರನಿಗೆ ಸೇರಿದ ಗೋದಾಮು

ಪ್ರಜಾವಾಣಿ ವಾರ್ತೆ

ಯಾದಗಿರಿ: ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಸಹೋದರ ರಾಜು ರಾಠೋಡ್‌ಗೆ ಸೇರಿದ ಲಕ್ಷ್ಮೀವೆಂಕಟೇಶ್ವರ ರೈಸ್ ಮಿಲ್ ಗೋದಾಮು ಮೇಲೆ ಪೊಲೀಸರು ದಾಳಿ ಮಾಡಿ 700 ಕ್ವಿಂಟಲ್ ಪಡಿತರ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ಸುರಪುರದ ಡಿವೈಎಸ್‌ಪಿ ಜಾವೇದ್ ಇನಾಂದಾರ ನೇತೃತ್ವದಲ್ಲಿ ಕೆಂಭಾವಿ ಪಿಎಸ್‌ಐ ರಾಜಶೇಖರ ರಾಠೋಡ್, ಭೀಮರಾಯನಗುಡಿ ಪಿಎಸ್‌ಐ ಗಜಾನಂದ ಬಿರಾದಾರ ಹಾಗೂ ಪೊಲೀಸ್ ಸಿಬ್ಬಂದಿ ತಂಡದಿಂದ ಜಿಲ್ಲೆಯ ಗುರುಮಠಕಲ್ ಪಟ್ಟಣದಲ್ಲಿರುವ ಲಕ್ಷ್ಮೀವೆಂಕಟೇಶ್ವರ ರೈಸ್ ಮಿಲ್ ಮೇಲೆ ಶುಕ್ರವಾರ ಬೆಳಗಿನ ಜಾವ ದಾಳಿ ನಡೆಸಲಾಗಿತ್ತು.

ದಾಳಿ ವೇಳೆ ಮಿಲ್‌ನಲ್ಲಿ ಪಾಲಿಶ್ ಮತ್ತು ನುಚ್ಚು ಸೇರಿ 700 ಕ್ವಿಂಟಲ್ ಅಕ್ಕಿ ದೊರೆತಿದ್ದು, ರೈಸ್ ಮಿಲ್‌ಗೆ ಬೀಗಮುದ್ರೆ ಹಾಕಿದ್ದಾರೆ.

ನವೆಂಬರ್ 25ರಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಭೀಮರಾಯ ಮಸಾಲಿ ಅವರು ಶಹಾಪುರ ಠಾಣೆಯಲ್ಲಿ ಅಕ್ಕಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿದ್ದರು. ಬಂಧಿತ ಆರೋಪಿಗಳು ರಾಜು ರಾಠೋಡ್‌ಗೆ ಅಕ್ಕಿ ಮಾರಾಟ ಮಾಡಿರುವುದಾಗಿ ಮಾಹಿತಿ ನೀಡಿದ್ದರು. ಅದರ ಆಧಾರದ ಮೇಲೆ ದಾಳಿ ಮಾಡಿದ ಪೊಲೀಸರು, ಅಕ್ಕಿ ವಶಕ್ಕೆ ಪಡೆದಿದ್ದಾರೆ. ಆರೋಪಿ ರಾಜು ನರೇಂದ್ರ ರಾಠೋಡ್ ತಲೆಮರೆಸಿಕೊಂಡಿದ್ದಾರೆ.

ಯಾದಗಿರಿ ಜಿಲ್ಲೆಯ ಗುರುಮಠಕಲ್ ಪಟ್ಟಣದ ಲಕ್ಷ್ಮೀವೆಂಕಟೇಶ್ವರ ರೈಸ್ ಮಿಲ್

ಮೈಸೂರು–ಬೆಳಗಾವಿ ರೈಲು ವೇಗ ಹೆಚ್ಚಳ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು–ಬೆಳಗಾವಿ ಎಕ್ಸ್‌ಪ್ರೆಸ್ ರೈಲಿನ ವೇಗವನ್ನು ಜ.1ರಿಂದ ಹೆಚ್ಚಿಸಲಾಗಿದ್ದು, ಹಿಂದಿಗಿಂತ 45 ನಿಮಿಷ ಉಳಿತಾಯವಾಗಲಿದೆ.

ವಿವಿಧ ನಿಲ್ದಾಣಗಳ ಆಗಮನ-ನಿರ್ಗಮನದ ಪರಿಷ್ಕೃತ ವೇಳಾಪಟ್ಟಿಯನ್ನು ನೈರುತ್ಯ ರೈಲ್ವೆ ಮೈಸೂರು ವಿಭಾಗವು ಪ್ರಕಟಿಸಿದೆ.

ಮೈಸೂರಿನಿಂದ ರಾತ್ರಿ 8.45ರ ಬದಲಿಗೆ 9.30ಕ್ಕೆ ಹೊರಡುವ ಈ ರೈಲು ಮರು ದಿನ ಬೆಳಿಗ್ಗೆ 8.45ಕ್ಕೆ (ಹಿಂದಿನಂತೆಯೇ) ಬೆಳಗಾವಿಗೆ ತಲುಪಲಿದೆ.

ಪರಿಷ್ಕೃತ ವೇಳಾಪಟ್ಟಿ

ನಿಲ್ದಾಣ	ಆಗಮನ	ನಿರ್ಗಮನ
ಮೈಸೂರು	-	ರಾತ್ರಿ 9.30
ಕೆ.ಆರ್.ನಗರ	10.04	10.05
ಹೊಳೆ ನರಸೀಪುರ	10.56	10.57
ಹಾಸನ	11.30	11.32
ಅರಸೀಕೆರೆ	12.18	12.20
ಕಡೂರು	12.49	12.51
ಬೀರೂರು	12.57	12.58
ಚಿಕ್ಕಜಾಜೂರು	1.44	1.45
ದಾವಣಗೆರೆ	2.20	2.22
ಹರಿಹರ	2.36	2.38
ರಾಣೆಬೆನ್ನೂರು	2.58	3
ಬ್ಯಾಡಗಿ	3.19	3.20
ಹಾವೇರಿ	3.35	3.37
ಯಲವಿಗಿ	4.05	4.06
ಹುಬ್ಬಳ್ಳಿ	5.10	5.20
ಧಾರವಾಡ	5.48	5.53
ಅಳ್ನಾವರ	6.29	6.30
ಲೋಂಡಾ	7.12	7.14
ಖಾನಾಪುರ	7.38	7.40
ಬೆಳಗಾವಿ	ಬೆಳಿಗ್ಗೆ 8.45	-

ಮಂಗಳೂರು– ಮಡಗಾಂವ್: 'ವಂದೇ ಭಾರತ್'

ಪ್ರಜಾವಾಣಿ ವಾರ್ತೆ

ಮಂಗಳೂರು: ಪ್ರಮುಖ ನಗರಗಳನ್ನು ಜೋಡಿಸುವ ಸೆಮಿ ಹೈಸ್ಪೀಡ್ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಮಂಗಳೂರು ಸೆಂಟ್ರಲ್ ನಿಲ್ದಾಣದಿಂದ ಮಡಗಾಂವ್‌ಗೆ (ಗೋವಾ) ಶನಿವಾರ ಪ್ರಥಮ ಪ್ರಯಾಣ ಬೆಳೆಸಿತು.

ಮಂಗಳೂರು- ಮಡಗಾಂವ್ ಸೇರಿದಂತೆ ಆರು 'ವಂದೇ ಭಾರತ್' ಹಾಗೂ ಎರಡು 'ಅಮೃತ್ ಭಾರತ್' ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಮಾಧ್ಯಮದಲ್ಲಿ ಶುಕ್ರವಾರ ಚಾಲನೆ ನೀಡಿದರು.

ನಿಗದಿಯಂತೆ ಬೆಳಿಗ್ಗೆ 11 ಗಂಟೆಗೆ ಹೊರಡಬೇಕಾಗಿದ್ದ ರೈಲು 12.12ಕ್ಕೆ ಮಂಗಳೂರು ಸೆಂಟ್ರಲ್ ನಿಲ್ದಾಣದಿಂದ ಹೊರಟಿತು. ಮಂಗಳೂರಿನಿಂದ ಉಡುಪಿವರೆಗೆ ಪ್ರಯಾಣಿಸಿದ ಕೇಂದ್ರೀಯ ವಿದ್ಯಾಲಯದ ಮಕ್ಕಳು, ಗಾಜಿನ ಕಿಟಕಿಯಲ್ಲಿ ಪರಿಸರ ಸೌಂದರ್ಯ ವೀಕ್ಷಿಸಿ ಪುಳಕಗೊಂಡರು. ರೈಲ್ವೆ ಹೋರಾಟಗಾರರು, ಸಾರ್ವಜನಿಕರು, ಬಿಜೆಪಿ ಕಾರ್ಯಕರ್ತರು ಏಳು ಹವಾನಿಯಂತ್ರಿತ ಕೋಚ್‌ಗಳಿರುವ ಈ ರೈಲಿನಲ್ಲಿ ಪ್ರಯಾಣಿಸಿದರು.

'ವಂದೇ ಭಾರತ್ ರೈಲು ಮಡಗಾಂವ್ ತಲುಪಲು ತೆಗೆದುಕೊಳ್ಳುವ ಸಮಯ ನಾಲ್ಕೂವರೆ ತಾಸು. ಪ್ರವಾಸೋದ್ಯಮ ಮತ್ತು ಕರಾವಳಿ ನಗರಗಳ ಆರ್ಥಿಕತೆ ಚೇತರಿಕೆಗೆ ಈ ರೈಲಿನಿಂದ ಅನುಕೂಲವಾಗಲಿದೆ. ಗುರುವಾರ ಹೊರತುಪಡಿಸಿ, ವಾರದ ಎಲ್ಲ ದಿನಗಳಲ್ಲಿ ಈ ರೈಲು ಸಂಚರಿಸಲಿದೆ. ಮಂಗಳೂರು–ಬೆಂಗಳೂರು ನಡುವೆ ಏಪ್ರಿಲ್‌ನಿಂದ ವಂದೇ ಭಾರತ್ ಸಂಚಾರ ನಡೆಸಲಿದೆ' ಎಂದು ಇದೇ ರೈಲಿನಲ್ಲಿ ಮಡಗಾಂವ್ ವರೆಗೆ ಪ್ರಯಾಣಿಸಿದ ಸಂಸದ ನಳಿನ್ ಕುಮಾರ್ ಕಟೀಲ್ ತಿಳಿಸಿದರು. ಪಾಲ್‌ಘಾಟ್ ರೈಲ್ವೆ ವಿಭಾಗದ ಡಿಆರ್‌ಎಂ ಅರುಣ್ ಕುಮಾರ್ ಚತುರ್ವೇದಿ, ಎಡಿಆರ್‌ಎಂ ಜಯಕೃಷ್ಣನ್ ಇದ್ದರು.

ಕೋವಿಡ್ ಅವ್ಯವಹಾರ ಪ್ರಕರಣ ತನಿಖೆಯಾಗಲಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಕೋವಿಡ್ ಹೆಸರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಅವ್ಯವಹಾರ ನಡೆದಿದೆಯೆಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದ್ದು, ರಾಜ್ಯ ಸರ್ಕಾರ ತನಿಖೆ ನಡೆಸಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

'ಬಿ.ಎಸ್.ಯಡಿಯೂರಪ್ಪ ಅವರ ವಿರುದ್ಧವೂ ಆರೋಪವಿದ್ದರೆ, ರಾಜ್ಯ ಸರ್ಕಾರ ಅನುಕಂಪ ತೋರಿಸುವುದು ಅಗತ್ಯವಿಲ್ಲ. ಸಂಬಂಧಪಟ್ಟವರಿಂದ ದಾಖಲೆ ಪಡೆದು ತನಿಖೆ ನಡೆಸಲಿ. ನಾವು ಯಾವುದೇ ಕಾರಣಕ್ಕೂ ಭಯಪಡುವುದಿಲ್ಲ' ಎಂದು ಅವರು ಸುದ್ದಿಗಾರರಿಗೆ ಶನಿವಾರ ತಿಳಿಸಿದರು.

'ಕೇಂದ್ರ ಸರ್ಕಾರದ ಬಳಿ ನಾನು ಅಥವಾ ಪಕ್ಷದ ಮುಖಂಡರು ಚಾಡಿ, ದೂರುಗಳನ್ನು ಹೇಳಿಲ್ಲ. ಅದರ ಅವಶ್ಯಕತೆಯೂ ನಮಗಿಲ್ಲ. ಭವಿಷ್ಯದಲ್ಲಿ ಪರಿಸ್ಥಿತಿ ಬಂದಂತೆ ಕೇಂದ್ರದಲ್ಲಿ ವರಿಷ್ಠರು ತೀರ್ಮಾನಿಸಿ, ಅಗತ್ಯ ಕ್ರಮ ತೆಗೆದುಕೊಳ್ಳುತ್ತಾರೆ. ರಾಜ್ಯ ಸರ್ಕಾರದ ಆದ್ಯತೆ ಅಲ್ಪಸಂಖ್ಯಾತರು ಆಗಿದ್ದಾರೆಯೇ ಹೊರತು ರೈತರಲ್ಲ. ಅಲ್ಪಸಂಖ್ಯಾತರ ತುಷ್ಟೀಕರಣದ ನೀತಿಗಳು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮುಳುವಾಗಲಿವೆ' ಎಂದರು.

ಯಾವುದೇ ಕ್ಷಣ ವಿಧಾನಸಭಾ ಚುನಾವಣೆ: ಇದಕ್ಕೂ ಮುನ್ನ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಬಿ.ವೈ. ವಿಜಯೇಂದ್ರ ಮಾತನಾಡಿ, ರಾಜ್ಯದಲ್ಲಿ ಯಾವುದೇ ಕ್ಷಣ ವಿಧಾನಸಭೆ ಚುನಾವಣೆ ಎದುರಾಗಲಿದ್ದು, ಕಾರ್ಯಕರ್ತರು ಸನ್ನದ್ಧರಾಗಿಬೇಕು. ಯಾವಾಗ ಚುನಾವಣೆ ನಡೆದರೂ ಬಿಜೆಪಿ 140 ಸ್ಥಾನಗಳನ್ನು ಗೆಲ್ಲಲಿದೆ' ಎಂದರು.

ಮೈಸೂರು: 'ಏಕಲವ್ಯ' ಶಾಲೆಗಳ ರಾಷ್ಟ್ರೀಯ ಕ್ರೀಡಾಕೂಟ 8ರಿಂದ

ಪ್ರಜಾವಾಣಿ ವಾರ್ತೆ

ಮೈಸೂರು: 'ಏಕಲವ್ಯ ಮಾದರಿ ವಸತಿ ಶಾಲೆಗಳ ರಾಷ್ಟ್ರೀಯ ಕ್ರೀಡಾಕೂಟವನ್ನು ನಗರದಲ್ಲಿ ಜ.8ರಿಂದ 12ರವರೆಗೆ ಆಯೋಜಿಸಲಾಗಿದೆ' ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕ್ರೀಡಾ ಹಾಗೂ ಯುವ ಸಬಲೀಕರಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ತಿಳಿಸಿದರು.

ಇಲ್ಲಿ ಶನಿವಾರ ನಡೆದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಜ.7ರಂದು ಕೇಂದ್ರ ಸಚಿವ ಅರ್ಜುನ್ ಉದ್ಘಾಟಿಸಲಿದ್ದಾರೆ. ದೇಶದ ವಿವಿಧ ರಾಜ್ಯಗಳಿಂದ 4,500 ಕ್ರೀಡಾಪಟುಗಳು, 1,500 ಶಿಕ್ಷಕರು ಪಾಲ್ಗೊಳ್ಳಲಿದ್ದಾರೆ' ಎಂದು ಹೇಳಿದರು.

'₹20 ಕೋಟಿ ಅನುದಾನದಲ್ಲಿ ಆಯೋಜಿಸಲಾಗುತ್ತಿದೆ. ವಿವಿಧ ಐದು ಕ್ರೀಡಾಂಗಣಗಳಲ್ಲಿ ಏಕಕಾಲದಲ್ಲಿ ಕ್ರೀಡಾ ಸ್ಪರ್ಧೆಗಳು ನಡೆಯಲಿವೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸಕಲ ಸಿದ್ಧತೆಗಳನ್ನು ಅಧಿಕಾರಿಗಳು ಮಾಡಿಕೊಳ್ಳಬೇಕು. ಕ್ರೀಡಾಪಟುಗಳ ಸಂಚಾರಕ್ಕೆ ವಾಹನಗಳನ್ನು ಒದಗಿಸುವುದು, ಕ್ರೀಡಾಂಗಣಗಳಲ್ಲಿ ಸ್ವಚ್ಛತೆ, ಊಟ, ಶೌಚಾಲಯ, ವೈದ್ಯಕೀಯ ಸೇವೆ, ಕುಡಿಯುವ ನೀರು, ಆಂಬುಲೆನ್ಸ್‌ಗಳ ವ್ಯವಸ್ಥೆ ಹಾಗೂ ಪೊಲೀಸ್ ಬಂದೋಬಸ್ತ್ ಸೇರಿದಂತೆ ಎಲ್ಲ ಸೌಕರ್ಯ ಕಲ್ಪಿಸಬೇಕು' ಎಂದರು.

'ಮೈಸೂರಿಗೆ ಆಗಮಿಸುವ ಕ್ರೀಡಾಪಟುಗಳಿಗೆ ಇಲ್ಲಿನ ಸಂಸ್ಕೃತಿ–ಪರಂಪರೆಯನ್ನು ಪರಿಚಯಿಸಬೇಕು. ಅರಮನೆ ದೀಪಾಲಂಕಾರ ವೀಕ್ಷಣೆಗೆ ಹಾಗೂ ಚಾಮುಂಡಿ ಬೆಟ್ಟ ವೀಕ್ಷಣೆಗೆ ವ್ಯವಸ್ಥೆ ಮಾಡಬೇಕು' ಎಂದು ನಿರ್ದೇಶನ ನೀಡಿದರು.

ಕ್ರೀಡಾ ಇಲಾಖೆಯ ಉಪ ನಿರ್ದೇಶಕ ಜಿತೇಂದ್ರ ಶೆಟ್ಟಿ ಮಾತನಾಡಿ, 'ಕ್ರೀಡಾಕೂಟದಲ್ಲಿ 10 ಗುಂಪು ಹಾಗೂ 18 ಅಥ್ಲೆಟಿಕ್ಸ್ ಸ್ಪರ್ಧೆಗಳಿರಲಿವೆ. 3,500 ಮಕ್ಕಳಿಗೆ ಈಗಾಗಲೇ ವಿಮೆ ಮಾಡಿಸಲಾಗಿದೆ. ಕೋವಿಡ್ ಮಾರ್ಗಸೂಚಿ ಪಾಲಿಸಲಾಗುವುದು. ಪ್ರತಿ ರಾಜ್ಯಕ್ಕೊಬ್ಬ ನೋಡಲ್ ಅಧಿಕಾರಿ ನಿಯೋಜಿಸಲಾಗುವುದು' ಎಂದು ತಿಳಿಸಿದರು.

ಪ್ರಧಾನಿ ಜೊತೆ ಸಂವಾದ 15ರಂದು

'ಜ.15ರಂದು ನೈಜ ದುರ್ಬಲ ಬುಡಕಟ್ಟು (ಜೇನು ಕುರುಬ ಮತ್ತು ಕೊರಗ) ಜನಾಂಗದವರ ಜೊತೆ ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಸಂವಾದ ಕಾರ್ಯಕ್ರಮವೂ ನಡೆಯಲಿದೆ. 50ರಿಂದ 75 ಮಂದಿಗೆ ಪಾಲ್ಗೊಳ್ಳಲು ಅವಕಾಶವಿದೆ. ಇದಕ್ಕೂ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಸೂಚಿಸಿದರು.

'ಆದಿವಾಸಿ ದುರ್ಬಲ ಬುಡಕಟ್ಟು ಜನಾಂಗದ ಅಭಿವೃದ್ಧಿ ಯೋಜನೆಯಡಿ ₹24ಸಾವಿರ ಕೋಟಿ ಅನುದಾನವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿದೆ. ಈ ಯೋಜನೆಯಲ್ಲಿ ಆದಿವಾಸಿಗಳ ಮನೆ ಕಟ್ಟಿಸಿಕೊಡುವುದು, ಅಂಗನವಾಡಿ ಕೇಂದ್ರ ಹಾಗೂ ಸಮುದಾಯ ಭವನ ನಿರ್ಮಾಣ ಮೊದಲಾದ ಸೌಲಭ್ಯಗಳನ್ನು ಒದಗಿಸಲಾಗುವುದು' ಎಂದು ಮಾಹಿತಿ ನೀಡಿದರು.

ಹುಬ್ಬಳ್ಳಿಯಲ್ಲಿ ಮಾದಿಗ ಮುನ್ನಡೆ ಸಮಾವೇಶ

ಸಿ.ಎಂ ಸಿದ್ದರಾಮಯ್ಯ ಹೆಸರೆತ್ತಿದ್ದಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ರಾಜ್ಯದ ಎಲ್ಲೆಡೆ ಮಾದಿಗ ಮುನ್ನಡೆ' ಸಮಾವೇಶದಲ್ಲಿ ಘಟನೆ
- ಕಾರ್ಯಕ್ರಮದುದ್ದಕ್ಕೂ ಮುಖ್ಯಮಂತ್ರಿಯ ಟೀಕೆ
- ಅರ್ಧಕ್ಕೇ ಭಾಷಣ ಮೊಟಕು

ಹುಬ್ಬಳ್ಳಿ: ಮಾದಿಗ ಸಮುದಾಯದವರು ಇಲ್ಲಿನ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ಶನಿವಾರ ಆಯೋಜಿಸಿದ್ದ 'ರಾಜ್ಯದ ಎಲ್ಲೆಡೆ ಮಾದಿಗ ಮುನ್ನಡೆ' ಸಮಾವೇಶದಲ್ಲಿ ಕಾರ್ಯಕ್ರಮ ನಿರೂಪಕರೊಬ್ಬರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ನೀಡಿದ ಹೇಳಿಕೆ ಹಾಗೂ ಅವರ ಕುರಿತಾದ ವಿಡಿಯೊ ಪ್ರಸಾರ ಮಾಡಿದ್ದಕ್ಕೆ ಅದೇ ಸಮಾಜದ ಕೆಲ ಮುಖಂಡರು ವೇದಿಕೆಯಲ್ಲೇ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಮಾದಿಗ ಮೀಸಲಾತಿಯ ಹಿನ್ನೆಲೆ ಕುರಿತು ಒಳಮೀಸಲಾತಿ ಹೋರಾಟಗಾರ ಈರಣ್ಣ ಮೌರ್ಯ ಮಾತನಾಡಿ, 'ಒಳಮೀಸಲಾತಿ ನೀಡಲು ಕಾಂಗ್ರೆಸ್ ಸರ್ಕಾರಕ್ಕೆ ಒಲವು ಇಲ್ಲ. 2013–18ರ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ ಅವರು ಒಳಮೀಸಲಾತಿ ಬಗ್ಗೆ ಏನೂ ಕ್ರಮಕೈಗೊಳ್ಳಲಿಲ್ಲ' ಎಂದು ಟೀಕಿಸಿದರು. ಇದಕ್ಕೆ ಪೂರಕವಾಗಿ ಸಿದ್ದರಾಮಯ್ಯ ಅವರ ದೃಶ್ಯಾವಳಿ ಪ್ರದರ್ಶಿಸಿದರು. ಇದಕ್ಕೂ ಮುಂಚೆ ತಮ್ಮ ಭಾಷಣದುದ್ದಕ್ಕೂ ಕಾಂಗ್ರೆಸ್ ಮತ್ತು ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಟೀಕಿಸಿದ್ದರು.

ವೇದಿಕೆ ಮೇಲಿದ್ದ ಮಾದಿಗ ಸಮುದಾಯದ ಹೋರಾಟಗಾರರಾದ ವೆಂಕಟೇಶ ಸಗಬಾಲ ಹಾಗೂ ಅಶೋಕ ದೊಡಮನಿ ಅವರು ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 'ಟೀಕಿಸುವುದು ಮುಖ್ಯವಲ್ಲ. ಒಳಮೀಸಲಾತಿ ಪಡೆಯಲು ಮುಂದೆ ಏನು ಮಾಡಬೇಕು ಎಂಬುದನ್ನು ಹೇಳಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂತರ ವೇದಿಕೆಯಿಂದ ಕೆಳಗಿಳಿದು, ಬಾಗಿಲಿನತ್ತ ಹೊರಟರು.

ವೇದಿಕೆ ಮೇಲಿದ್ದ ಶಾಸಕ ಅರವಿಂದ ಬೆಲ್ಲದ ಅವರು ತಕ್ಷಣ ಬಾಗಿಲು ಬಳಿ ತೆರಳಿ, ಅವರನ್ನು ತಡೆದು ವಾಪಸ್ ಕರೆತಂದರು.

ತಾಳ್ಮೆ ವಹಿಸುವಂತೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮನವಿ ಮಾಡಿದರು. ಮಾಜಿ ಶಾಸಕ ಗೋವಿಂದ ಕಾರಜೋಳ ಹಾಗೂ ವೀರಭದ್ರಪ್ಪ ಹಾಲಹರವಿ ಅವರು ಪರಿಸ್ಥಿತಿ ತಿಳಿಗೊಳಿಸಿದರು. ಮೌರ್ಯ ಅವರ ಭಾಷಣವನ್ನು ಅರ್ಧಕ್ಕೆ ಮೊಟಕುಗೊಳಿಸಲಾಯಿತು.

ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾಮಂದಿರದಲ್ಲಿ ಶನಿವಾರ ನಡೆದ 'ರಾಜ್ಯದ ಎಲ್ಲೆಡೆ ಮಾದಿಗ ಮುನ್ನಡೆ' ಸಮಾವೇಶದಲ್ಲಿ ನಿರೂಪಕರೊಬ್ಬರ ಮಾತಿಗೆ ಕೆಲಮುಖಂಡರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು

ಆರು ವಂದೇ ಭಾರತ್ ರೈಲುಗಳಿಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ

ಕರ್ನಾಟಕಕ್ಕೆ ಮೊದಲ 'ಅಮೃತ್' ರೈಲು

• ಸುದೇಶ ದೊಡ್ಡಪಾಳ್ಯ

ಮರುಅಭಿವೃದ್ಧಿಗೊಂಡಿರುವ ಅಯೋಧ್ಯಾ ಧಾಮ್ ಜಂಕ್ಷನ್ ರೈಲು ನಿಲ್ದಾಣ ಶನಿವಾರ ರಾತ್ರಿ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸಿತು —ಪಿಟಿಐ ಚಿತ್ರ

ಅಯೋಧ್ಯೆ: ಮೊದಲ ಬಾರಿಗೆ ದೇಶದಲ್ಲಿ ಸಂಚಾರ ಆರಂಭಿಸಿದ ಅಮೃತ್ ಭಾರತ್‌ನ ಎರಡು ರೈಲುಗಳು ಹಾಗೂ ಆರು ವಂದೇ ಭಾರತ್ ರೈಲುಗಳಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶನಿವಾರ ಹಸಿರು ನಿಶಾನೆ ತೋರಿಸಿದರು.

ಇಲ್ಲಿ ಮರುಅಭಿವೃದ್ಧಿಗೊಂಡಿರುವ ಅಯೋಧ್ಯಾ ಧಾಮ್ ಜಂಕ್ಷನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೊಸ ರೈಲುಗಳ ಸಂಚಾರಕ್ಕೆ ಚಾಲನೆ ನೀಡಿದರು.

ಇದರಿಂದಾಗಿ, ಕರ್ನಾಟಕಕ್ಕೆ ಹೊಸದಾಗಿ ಮೂರು ರೈಲುಗಳ ಸೇವೆ ಲಭ್ಯವಾಗಿದೆ. ಪಶ್ಚಿಮ ಬಂಗಾಳದ ಮಾಲ್ಡಾದಿಂದ ಬೆಂಗಳೂರು (ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್) ನಡುವೆ ಅಮೃತ್ ಭಾರತ್ ರೈಲು ಸಂಚರಿಸಲಿದೆ. ಕೊಯಮತ್ತೂರು - ಬೆಂಗಳೂರು ಕಂಟೋನ್ಮೆಂಟ್ ಹಾಗೂ ಮಂಗಳೂರು-ಮಡಗಾಂವ್ ನಡುವೆ ವಂದೇ ಭಾರತ್ ರೈಲುಗಳು ಓಡಾಡಲಿವೆ.

ದರ್ಭಾಂಗ್ - ಅಯೋಧ್ಯಾ ಧಾಮ್ ಜಂಕ್ಷನ್- ದೆಹಲಿ (ಆನಂದ ವಿಹಾರ್ ಟರ್ಮಿನಲ್) ನಡುವೆ ಮತ್ತೊಂದು ಅಮೃತ್ ಭಾರತ್ ರೈಲು ಸಂಚರಿಸಲಿದೆ. ಶ್ರೀಮಾತಾ ವೈಷ್ಣೋದೇವಿ- ಕಾಟ್ರಾ, ಅಮೃತಸರ-ದೆಹಲಿ, ಜಲ್ನಾ-ಮುಂಬೈ, ಅಯೋಧ್ಯಾ ಧಾಮ್ ಜಂಕ್ಷನ್- ದೆಹಲಿ (ಆನಂದ ವಿಹಾರ್) ನಡುವೆ ವಂದೇ ಭಾರತ್ ರೈಲುಗಳು ಸಂಚರಿಸಲಿವೆ.

ಹೊಸದಾಗಿ ವಿನ್ಯಾಸಗೊಂಡಿರುವ ಕೇಸರಿ ಬಣ್ಣದ ಅಮೃತ್ ಭಾರತ್ ರೈಲುಗಳನ್ನು ಸಾಮಾನ್ಯ ವರ್ಗದ ಆರಾಮದಾಯಕ ಪ್ರಯಾಣವನ್ನು ಗಮನದಲ್ಲಿ ಇರಿಸಿಕೊಂಡು ನಿರ್ಮಿಸಲಾಗಿದೆ. ಪ್ರತಿ ರೈಲು 22 ಕೋಚ್ ಹೊಂದಿದ್ದು, 1834 ಪ್ರಯಾಣಿಕರ ಸಾಮರ್ಥ್ಯ ಹೊಂದಿದೆ. ಇದು ಗಂಟೆಗೆ 130 ಕಿ.ಮೀ ವೇಗದಲ್ಲಿ ಚಲಿಸಲಿದೆ. ಕವಚ್ ತಂತ್ರಜ್ಞಾನದೊಂದಿಗೆ ಆಕರ್ಷಕ ಒಳ ವಿನ್ಯಾಸ, ಉತ್ತಮ ಎಲ್‌ಇಡಿ ಬೆಳಕು, ಸಿಸಿಟಿವಿ, ವಿವಿಧ ಬಗೆಯ ಮೊಬೈಲ್ ಫೋನ್ ಚಾರ್ಜಿಂಗ್ ಪಾಯಿಂಟ್, ಉನ್ನತೀಕರಿಸಿದ ಶೌಚಾಲಯ ಸೇರಿದಂತೆ ಹಲವು ಆಧುನಿಕ ಸೌಲಭ್ಯಗಳು ಇವೆ. ವೇಗದ ಪಿಕಪ್‌ಗಾಗಿ ಮುಂಭಾಗ ಮತ್ತು ಹಿಂಭಾಗದಲ್ಲಿ ಎಂಜಿನ್‌ಗಳಿವೆ.

ಪ್ರಧಾನಿ ಮೋದಿ ಅವರು ಅಮೃತ್ ಭಾರತ್ ರೈಲಿನಲ್ಲಿದ್ದ ವಿದ್ಯಾರ್ಥಿಗಳ ಜೊತೆ ಮಾತನಾಡಿದರು.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಉತ್ತರ ಪ್ರದೇಶದ ರಾಜ್ಯಪಾಲರಾದ ಆನಂದಿಬೆನ್ ಪಟೇಲ್, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಡಿಸಿಎಂ ಕೇಶವ ಪ್ರಸಾದ್ ಮೌರ್ಯ ಇದ್ದರು.

ಮಾದರಿ ರೈಲು ನಿಲ್ದಾಣ

- ಅಯೋಧ್ಯಾ ಧಾಮ್ ಜಂಕ್ಷನ್ ಅನ್ನು ₹241 ಕೋಟಿ ವೆಚ್ಚದಲ್ಲಿ ಮೊದಲ ಹಂತದಲ್ಲಿ ವಿಮಾನ ನಿಲ್ದಾಣ ಮಾದರಿಯಲ್ಲಿ ಮರುಅಭಿವೃದ್ಧಿಗೊಳಿಸಲಾಗಿದೆ.
- ನಿಲ್ದಾಣವನ್ನು ಆಧ್ಯಾತ್ಮ ಪರಂಪರೆ ದೃಷ್ಟಿಯಲ್ಲಿ ರೂಪಿಸಲಾಗಿದೆ.
- ಫುಡ್ ಪ್ಲಾಜಾ, ಪೂಜಾ ಸಾಮಗ್ರಿಗಳ ಮಳಿಗೆ, ಲಿಫ್ಟ್, ಎಸ್ಕಲೇಟರ್, ಮಕ್ಕಳ ಕಾಳಜಿ ಕೊಠಡಿ, ಆಧುನಿಕ ನಿರೀಕ್ಷಣಾ ಕೊಠಡಿ, ಅಂಗವಿಕಲ ಸ್ನೇಹಿ ಸೌಲಭ್ಯಗಳು, ಪ್ರಯಾಣಿಕರ ಅನುಕೂಲಕ್ಕಾಗಿ ಪ್ರವೇಶ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ದ್ವಾರಗಳು ಇವೆ. ಇದು ಪರಿಸರಸ್ನೇಹಿ ಕಟ್ಟಡವಾಗಿದೆ.

ಫಲಾನುಭವಿ ಮನೆಯಲ್ಲಿ ಚಹಾ ಸೇವನೆ

ಉಜ್ವಲ ಯೋಜನೆಯ ಫಲಾನುಭವಿ ಅಯೋಧ್ಯೆಯ ಮೀರಾ ಅವರ ಮನೆಯಲ್ಲಿ ಶನಿವಾರ ಚಹಾ ಕುಡಿದ ಪ್ರಧಾನಿ ನರೇಂದ್ರ ಮೋದಿ ಪಿಟಿಐ ಚಿತ್ರ

ಅಯೋಧ್ಯೆ (ಪಿಟಿಐ): ಪ್ರಧಾನಿ ಮೋದಿ ಅವರು ಅಯೋಧ್ಯೆಯಲ್ಲಿ 'ಪ್ರಧಾನ ಮಂತ್ರಿ ಉಜ್ವಲ ಯೋಜನೆ'ಯ ಫಲಾನುಭವಿಯೊಬ್ಬರ ಮನೆಗೆ ಭೇಟಿ ನೀಡಿ, ಚಹಾ ಸೇವಿಸಿದರು.

ಉಜ್ವಲ ಯೋಜನೆಯ ಫಲಾನುಭವಿಗಳ ಸಂಖ್ಯೆ 10 ಕೋಟಿ ದಾಟಿದೆ. ಅಯೋಧ್ಯೆಯ ಮೀರಾ ಅವರು ಈ ಯೋಜನೆಗೆ ಸೇರಿದಾಗ ಫಲಾನುಭವಿಗಳ ಸಂಖ್ಯೆ 10 ಕೋಟಿ ಮೈಲಿಗಲ್ಲು ತಲುಪಿತ್ತು. ಅವರ ಮನೆಗೆ ಪ್ರಧಾನಿ ಶನಿವಾರ ಭೇಟಿ ನೀಡಿ, ಕುಟುಂಬ ಸದಸ್ಯರೊಂದಿಗೆ ಕುಶಲೋಪರಿ ನಡೆಸಿದರು.

'ಚಹಾ ಚೆನ್ನಾಗಿದೆ, ಆದರೆ ಸಿಹಿ ಸ್ವಲ್ಪ ಹೆಚ್ಚಿದೆ' ಎನ್ನುತ್ತಾ ಪ್ರಧಾನಿ ನಗು ಬೀರಿದರು. ಕೇಂದ್ರ ಸರ್ಕಾರದ ಯೋಜನೆಯಿಂದಾಗಿ ಮನೆ ಹಾಗೂ ಅಡುಗೆ ಅನಿಲ ಸಂಪರ್ಕ ಪಡೆದೆ ಎಂದು ಮೀರಾ ಅವರು ಪ್ರಧಾನಿಗೆ ತಿಳಿಸಿದರು.

ಹೂಮಳೆ ಸುರಿಸಿದ ಇಕ್ಬಾಲ್ ಅನ್ಸಾರಿ: ರೋಡ್ ಶೋ ವೇಳೆ ಪ್ರಧಾನಿ ಮೋದಿ ಅವರ ವಾಹನದತ್ತ ಹೂಮಳೆ ಸುರಿಸಿದವರಲ್ಲಿ ಇಕ್ಬಾಲ್ ಅನ್ಸಾರಿ ಕೂಡಾ ಇದ್ದರು.

ರಾಮಜನ್ಮಭೂಮಿ– ಬಾಬರಿ ಮಸೀದಿ ನಿವೇಶನ ವಿವಾದದ ಅರ್ಜಿದಾರರಲ್ಲಿ ಇಕ್ಬಾಲ್ ಒಬ್ಬರಾಗಿದ್ದರು. 'ಅವರು (ಮೋದಿ) ನಾವಿರುವ ಸ್ಥಳಕ್ಕೆ ಬಂದಿದ್ದಾರೆ. ಅವರು ನಮ್ಮ ಅತಿಥಿ' ಎಂದು ಅನ್ಸಾರಿ ಹೇಳಿದರು. ರೋಡ್ ಶೋ, ಪಾಂಜಿ ತೊಲಾ ಎಂಬಲ್ಲಿಗೆ ತಲುಪಿದಾಗ ಅನ್ಸಾರಿ ಅವರು ಹೂವಿನ ಪಕಳೆಗಳನ್ನು ಎಸೆದು ಸ್ವಾಗತ ಕೋರಿದರು.

ಇಕ್ಬಾಲ್ ಅವರು ನಿವೇಶನ ವಿವಾದ ಪ್ರಕರಣದ ಅತಿ ಹಳೆಯ ಅರ್ಜಿದಾರ ಹಾಶಿಂ ಅನ್ಸಾರಿಯ ಮಗ.

ವಾರ್ಷಿಕ 10 ಲಕ್ಷ ಪ್ರಯಾಣಿಕರ ನಿರೀಕ್ಷೆ

ರಾಮಮಂದಿರ ನಿರ್ಮಾಣ ಪೂರ್ಣಗೊಂಡ ಬಳಿಕ ಅಯೋಧ್ಯೆಗೆ ಭೇಟಿ ನೀಡುವ ಭಕ್ತಾದಿಗಳು ಮತ್ತು ಪ್ರವಾಸಿಗರ ಸಂಖ್ಯೆ ಏರಿಕೆಯಾಗುವ ಸಾಧ್ಯತೆಯಿದೆ. ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲು ₹1,450 ಕೋಟಿ ವೆಚ್ಚದಲ್ಲಿ 'ಮಹರ್ಷಿ ವಾಲ್ಮೀಕಿ ವಿಮಾನ ನಿಲ್ದಾಣ' ನಿರ್ಮಿಸಲಾಗಿದೆ.

ವಿಮಾನದ ಟರ್ಮಿನಲ್ 6,500 ಚ. ಮೀ. ವಿಸ್ತೀರ್ಣ ಹೊಂದಿದ್ದು, ವಾರ್ಷಿಕವಾಗಿ 10 ಲಕ್ಷ ಪ್ರಯಾಣಿಕರು ಸಂಚರಿಸುವ ನಿರೀಕ್ಷೆಯಿದೆ.

ದೆಹಲಿಯಿಂದ ಬಂದ ಮೊದಲ ವಿಮಾನ ಶನಿವಾರ ಮಧ್ಯಾಹ್ನ ಮಹರ್ಷಿ ವಾಲ್ಮೀಕಿ ನಿಲ್ದಾಣದಲ್ಲಿ ಇಳಿಯಿತು. ಇಂಡಿಗೊ ಏರ್‌ಲೈನ್ಸ್‌ಗೆ ಸೇರಿದ ಈ ವಿಮಾನದ ಪೈಲಟ್, ಟೇಕಾಫ್ ವೇಳೆ 'ಜೈಶ್ರೀರಾಂ' ಎನ್ನುತ್ತಾ ಪ್ರಯಾಣಿಕರನ್ನು ಸ್ವಾಗತಿಸಿದರು. ಒಂದು ಗಂಟೆಯ ಪ್ರಯಾಣದುದ್ದಕ್ಕೂ ಕೆಲವು ಪ್ರಯಾಣಿಕರು ಮಂತ್ರ, ಹನುಮಾನ್ ಚಾಲೀಸ ಪಠಿಸಿದರು.

ಸಂಭ್ರಮ... ಅಯೋಧ್ಯೆಯಲ್ಲಿ ಪುನರ್ ಅಭಿವೃದ್ಧಿಪಡಿಸಿರುವ ರೈಲು ನಿಲ್ದಾಣ, ನೂತನ ವಿಮಾನ ನಿಲ್ದಾಣ ಉದ್ಘಾಟನೆಯ ಸಮಾರಂಭದ ವೇಳೆ ಶನಿವಾರ ಪಾಲ್ಗೊಂಡಿದ್ದ ರಾಮಭಕ್ತರು ಸಂಭ್ರಮಿಸಿದ ಕ್ಷಣ ಪಿಟಿಐ ಚಿತ್ರ

ಮೂರ್ತಿ ಪ್ರತಿಷ್ಠಾಪನೆ ಏಳಿಗೆಯ ಸಂಕೇತ: ಶಾ

ಅಹಮದಾಬಾದ್ (ಪಿಟಿಐ): ಜನವರಿ 22ರಂದು ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮ ಮೂರ್ತಿ ಪ್ರತಿಷ್ಠಾಪನೆ ಆಗುತ್ತಿರುವುದು ಮತ್ತು ದೇಶದ ಅಮೃತ ಕಾಲ ಆರಂಭ ಆಗಿರುವುದು ಕೇವಲ ಕಾಕತಾಳೀಯ ಅಲ್ಲ. ಬದಲಾಗಿ, ದೇಶವು ಮುಂದಿನ 25 ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಧಾನ ಸ್ಥಾನ ಪಡೆಯುತ್ತದೆ ಎಂಬುದರ ಸೂಚನೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶನಿವಾರ ಹೇಳಿದರು.

'ಇಲ್ಲಿಯ ಸ್ವಾಮಿನಾರಾಯಣ್ ಗುರುಕುಲ ವಿಶ್ವವಿದ್ಯಾಪೀಠ ಪ್ರತಿಷ್ಠಾನಂ ಆಯೋಜಿಸಿದ್ದ ಶ್ರೀ ಪುರಾನಿ ಸ್ವಾಮಿ ಸ್ಮೃತಿ ಮಹೋತ್ಸವ ಕಾರ್ಯಕ್ರಮದಲ್ಲಿ' ಅವರು ಮಾತನಾಡಿದರು. ಶ್ರೀ ರಾಮನ ಜನ್ಮಸ್ಥಳವಾದ ಅಯೋಧ್ಯೆಯಲ್ಲಿದ್ದ ರಾಮಮಂದಿರವನ್ನು ಸುಮಾರು 550 ವರ್ಷಗಳ ಕೆಳಗೆ ಕೆಡವಲಾಗಿತ್ತು. ಇಲ್ಲಿಯವರೆಗೂ ಅದನ್ನು ಮರು ನಿರ್ಮಿಸಲು ಸಾಧ್ಯವಾಗಿರಲಿಲ್ಲ ಎಂದರು.

'ರಾಮಮಂದಿರ ನಿರ್ಮಾಣಕ್ಕೆ ಸಂಬಂಧಿಸಿದ ಮೊಕದ್ದಮೆಗಳನ್ನು ಜಟಿಲಗೊಳಿಸಿ, ಪ್ರಕರಣ ಇತ್ಯರ್ಥಗೊಳಿಸುವುದನ್ನು ಮುಂದೂಡಲಾಗುತ್ತಿತ್ತು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ರಚನೆಯಾಯಿತು. ಸಂತರ ಆಶೀರ್ವಾದ ಮತ್ತು ಪ್ರೇರಣೆಯಿಂದ ಮಂದಿರ ನಿರ್ಮಾಣದ ಎಲ್ಲಾ ಮಾರ್ಗಗಳೂ ಸಲೀಸಾದವು' ಎಂದರು.

ನೈವೇದ್ಯಕ್ಕಾಗಿ ಛತ್ತೀಸಗಢದಿಂದ ಅಕ್ಕಿ

ರಾಯಪುರ (ಪಿಟಿಐ): ಅಯೋಧ್ಯೆಯ ರಾಮಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆ ಸಮಾರಂಭಕ್ಕಾಗಿ 300 ಟನ್ ಸುವಾಸನೆಯುಕ್ತ ಅಕ್ಕಿಯನ್ನು ಛತ್ತೀಸಗಢದಿಂದ ಶನಿವಾರ ಕಳಿಸಲಾಗಿದೆ.

ಛತ್ತೀಸಗಢ ಪ್ರದೇಶ ಅಕ್ಕಿ ಗಿರಣಿಗಳ ಸಹಯೋಗವು ಇಲ್ಲಿಯ ವಿಐಪಿ ರಸ್ತೆಯಲ್ಲಿಯ ಶ್ರೀರಾಮ ಮಂದಿರದಲ್ಲಿ 'ಸುಗಂಧಿತ ಅಕ್ಕಿ ಅರ್ಪಣಾ ಸಮಾರಂಭ'ವನ್ನು ಏರ್ಪಡಿಸಿತ್ತು.

ರಾಜ್ಯದ ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ಮತ್ತು ಅವರ ಸಂಪುಟದ ಕೆಲವು ಸದಸ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಅಕ್ಕಿ ಮೂಟೆಗಳನ್ನು ಅಯೋಧ್ಯೆ ಸಾಗಿಸಲು ಸಜ್ಜಾಗಿದ್ದ 11 ಟ್ರಕ್‌ಗಳಿಗೆ ಸಾಯ್ ಅವರು ಕೇಸರಿ ಧ್ವಜ ತೋರಿಸಿ ನಿಶಾನೆ ನೀಡಿದರು ಎಂದು ಪ್ರಕಟಣೆ ತಿಳಿಸಿದೆ.

ಮೂರ್ತಿ ಪ್ರತಿಷ್ಠಾಪನೆ ಸಮಾರಂಭದಲ್ಲಿ ಪ್ರಸಾದ ತಯಾರಿಸಲು ಅಕ್ಕಿಯನ್ನು ಅರ್ಪಿಸಲಾಗಿದೆ. ಛತ್ತೀಸಗಢವನ್ನು ಶ್ರೀರಾಮನ ತಾಯಿಯ ತವರು ಎಂದು ಪರಿಗಣಿಸಲಾಗುತ್ತದೆ.

ಧಾರ್ಮಿಕ ಶ್ರದ್ಧೆಗೆ ಅಪಮಾನ: ಶೋಭಾ

ಉಡುಪಿ: 'ಅಯೋಧ್ಯೆಯ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪಕ್ಷಭೇದ ಮರೆತು, ಎಲ್ಲ ರಾಜಕೀಯ ಪಕ್ಷಗಳ ನಾಯಕರಿಗೆ ಆಮಂತ್ರಣ ನೀಡಲಾಗಿದೆ. ಕಾಂಗ್ರೆಸ್ ನಾಯಕರು ಭಾಗವಹಿಸದಿದ್ದರೆ ಅದು ದೇಶದ ಧಾರ್ಮಿಕ ಶ್ರದ್ಧೆಗೆ ಮಾಡುವ ಅಪಮಾನ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಇಂದ್ರಾಳಿ ರೈಲು ನಿಲ್ದಾಣದಲ್ಲಿ ಮಂಗಳೂರು–ಮಡಗಾಂವ್ ವಂದೇ ಭಾರತ್ ರೈಲಿಗೆ ಸ್ವಾಗತ ಕೋರಿ ಮಾತನಾಡಿದ ಅವರು, 'ರಾಮಮಂದಿರ ನಿರ್ಮಾಣವಾದರೆ ಜಾತ್ಯತೀತತೆಗೆ ಧಕ್ಕೆಯಾಗುತ್ತದೆ, ಅಲ್ಪಸಂಖ್ಯಾತರಿಗೆ ನೋವಾಗುತ್ತದೆ ಎಂಬ ನಿಲುವನ್ನು ಕಾಂಗ್ರೆಸ್ ಹೊಂದಿತ್ತು. ನ್ಯಾಯಾಲಯದಲ್ಲಿ ರಾಮಮಂದಿರ ನಿರ್ಮಾಣಕ್ಕಿದ್ದ ಅಡೆತಡೆಗಳು ನಿವಾರಣೆಗೊಂಡು, ಭವ್ಯ ರಾಮಮಂದಿರ ನಿರ್ಮಾಣ ಮಾಡಲಾಗಿದ್ದು ಜ.22ರಂದು ಲೋಕಾರ್ಪಣೆಗೊಳ್ಳುತ್ತಿದೆ. ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕರು ಸಹಿತ ಎಲ್ಲ ಪಕ್ಷಗಳ ಮುಖಂಡರು ಭಾಗವಹಿಸುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

ಆಹ್ವಾನ; ಕಾಂಗ್ರೆಸ್‌ಗೆ ಇಕ್ಕಟ್ಟು

ಹುಬ್ಬಳ್ಳಿ: 'ಮತ ಬ್ಯಾಂಕ್ ಆಸೆಗಾಗಿ ರಾಮನ ಅಸ್ತಿತ್ವ ಪ್ರಶ್ನಿಸಿದ ಕಾಂಗ್ರೆಸ್ ನಾಯಕರಿಗೆ ಅಯೋಧ್ಯೆಯಲ್ಲಿ ನಡೆಯುವ ರಾಮ ಮಂದಿರ ಉದ್ಘಾಟನೆಗೆ ಹೋದರೂ ಕಷ್ಟ, ಹೋಗದಿದ್ದರೂ ಕಷ್ಟ ಎಂಬ ಸ್ಥಿತಿಯಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಉದ್ಘಾಟನೆಗೆ ಹೋದರೆ ಅಲ್ಪಸಂಖ್ಯಾತರ ಮತಗಳು ಬಿಟ್ಟು ಹೋಗುತ್ತವೆ ಎಂಬ ಭಯವಿದೆ. ಹೋಗದಿದ್ದರೆ, ಹಿಂದೂಗಳ ಮತಗಳು ಕೈಬಿಟ್ಟು ಹೋಗುತ್ತವೆ ಎಂಬ ಭೀತಿಯಿದೆ. ಒಟ್ಟಾರೆ ಕಾಂಗ್ರೆಸ್ ಇಕ್ಕಟ್ಟಿನಲ್ಲಿದೆ' ಎಂದರು.

'ಕೇರಳ ಮುಸ್ಲಿಮರ ಭಾವನೆಗೆ ಧಕ್ಕೆ ಇಲ್ಲ'

ತಿರುವನಂತಪುರ (ಪಿಟಿಐ): 'ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆ ಸಮಾರಂಭದಲ್ಲಿ ಯಾರೇ ಭಾಗವಹಿಸಿದರೂ ಕೇರಳ ಮುಸ್ಲಿಮರ ಭಾವನೆಗಳಿಗೆ ಧಕ್ಕೆಯಾಗುವುದಿಲ್ಲ' ಎಂದು ಸುನ್ನಿ ವಿದ್ವಾಂಸರ ಸಂಘ ಸಮಸ್ತ ಕೇರಳ ಜೆಮ್-ಇಯ್ಯತ್‌ಉಲ್ ಉಲೆಮಾ ಶನಿವಾರ ಸ್ಪಷ್ಟಪಡಿಸಿದೆ.

ಜ.22 ರಂದು ನಡೆಯುವ ಸಮಾರಂಭದ ಆಹ್ವಾನ ಸ್ವೀಕರಿಸಿರುವ ಕಾಂಗ್ರೆಸ್ ಪಕ್ಷವನ್ನು ಟೀಕಿಸಿ, ಸಮಸ್ತದ ಮುಖವಾಣಿ 'ಸುಪ್ರಭಾತಂ' ಸಂಪಾದಕೀಯದಲ್ಲಿ 'ಕಾಂಗ್ರೆಸ್ ಮೃದು ಹಿಂದುತ್ವ ಧೋರಣೆ ಹೊಂದಿದೆ' ಎಂದು ಆರೋಪಿಸಲಾಗಿದೆ. ಈ ಸಂಪಾದಕೀಯದ ಬಗ್ಗೆ ರಾಜ್ಯದಲ್ಲಿ ಎದ್ದಿರುವ ಕೋಲಾಹಲದ ಬೆನ್ನಲ್ಲೇ ಸಮಸ್ತ ಈ ಸ್ಪಷ್ಟನೆಯನ್ನು ನೀಡಿದೆ.

ಕೋಯಿಕ್ಕೋಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಮಸ್ತದ ಮುಖ್ಯಸ್ಥ ಜಿಫ್ರಿ ಮುತ್ತುಕೋಯ ತಂಗಲ್, 'ಪ್ರತಿ ರಾಜಕೀಯ ಪಕ್ಷವು ಅವರ ರಾಜಕೀಯ ನೀತಿಗೆ ಅನುಗುಣವಾಗಿ ಆಹ್ವಾನವನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು. ರಾಮಮಂದಿರ ಉದ್ಘಾಟನೆಯಲ್ಲಿ ಯಾರು ಭಾಗವಹಿಸಿದರೂ ಅದು ಕಾಂಗ್ರೆಸ್ ಆಗಿದ್ದರೂ ಸಹ ಸಮುದಾಯದ ಭಾವನೆಗಳಿಗೆ ಯಾವುದೇ ಧಕ್ಕೆಯಾಗದು. ನಾವು ನಮ್ಮ ಸಮುದಾಯದ ಭಾವನೆಗಳ ಬಗ್ಗೆ ಕಾಳಜಿ ಹೊಂದಿದ್ದೇವೆ' ಎಂದು ಹೇಳಿದ್ದಾರೆ.

'ಮಾಧ್ಯಮಗಳ ವಿರುದ್ಧ ಪ್ರಕರಣ ದಾಖಲಿಸುವೆ'

ಪಟ್ನಾ (ಪಿಟಿಐ): ತಮ್ಮ ವಿರುದ್ಧ ಸುಳ್ಳು ವರದಿ ಪ್ರಕಟಿಸಿರುವ ಮಾಧ್ಯಮ ಸಂಸ್ಥೆಗಳ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಜೆಡಿಯು ಮಾಜಿ ಅಧ್ಯಕ್ಷ ರಾಜೀವ್ ರಾಜನ್ ಸಿಂಗ್ ಲಲನ್ (ಲಲನ್ ಸಿಂಗ್) ಶನಿವಾರ ಹೇಳಿದ್ದಾರೆ.

'ಬಿಹಾರ ಉಪ ಮುಖ್ಯಮಂತ್ರಿ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರಿಗೆ ಅನುಕೂಲ ಮಾಡಿಕೊಡಲು ಲಲನ್ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಬಂಡಾಯವೇಳಲು ಸಂಚು ರೂಪಿಸುತ್ತಿದ್ದಾರೆ ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ. ಅಂಥ ಮಾಧ್ಯಮಗಳಿಗೆ ನಾನು ಕಾನೂನು ನೋಟಿಸ್ ನೀಡುತ್ತೇನೆ ಮತ್ತು ಅವುಗಳ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಜೆಡಿಯು ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಮರುದಿನವೇ ಅವರು ಈ ಹೇಳಿಕೆ ನೀಡಿದ್ದಾರೆ.

'ಒಂದು ಪ್ರಮುಖ ಸುದ್ದಿಪತ್ರಿಕೆ ಮತ್ತು ಕೆಲವು ವಾಹಿನಿಗಳು ಸುಳ್ಳು ಸುದ್ದಿ ಪ್ರಕಟಿಸಿವೆ. ಈ ವರದಿಗಳು ಹಾದಿ ತಪ್ಪಿಸುವಂತಿವೆ, ಸತ್ಯಕ್ಕೆ ದೂರವಾಗಿವೆ, ನನ್ನ ಹೆಸರು ಕೆಡಿಸುವ ಮತ್ತು ನನ್ನ ಮತ್ತು ನಿತೀಶ್ ನಡುವಣ 37 ವರ್ಷಗಳ ಸ್ನೇಹದ ಬಗ್ಗೆ ಪ್ರಶ್ನೆ ಮೂಡುವಂತೆ ಮಾಡುವ ಉದ್ದೇಶ ಹೊಂದಿವೆ' ಎಂದಿದ್ದಾರೆ.

ಕಾಶ್ಮೀರಿ ಪಂಡಿತರ ನಿರ್ಲಕ್ಷ್ಯ: ಕೌಲ್ ವಿಷಾದ

ಎಸ್‌.ಕೆ ಕೌಲ್

ನವದೆಹಲಿ (ಪಿಟಿಐ): ಪ್ರತ್ಯೇಕತಾವಾದ, ಭಯೋತ್ಪಾದನೆ ಶುರುವಾದ ನಂತರ 4.5 ಲಕ್ಷ ಕಾಶ್ಮೀರಿ ಪಂಡಿತರು ಕಣಿವೆ ತೊರೆದಿದ್ದಾರೆ. ರಾಜಕೀಯವಾಗಿ ಪ್ರಭಾವ ಬೀರುವಷ್ಟು ದೊಡ್ಡ ಸಂಖ್ಯೆಯ ಮತದಾರರಾಗಿಲ್ಲದ ಕಾರಣಕ್ಕೆ ಅವರನ್ನು ಕಡೆಗಣಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಹೇಳಿದ್ದಾರೆ.

'ಪಿಟಿಐ'ಗೆ ನೀಡಿದ ಸಂದರ್ಶನದಲ್ಲಿ, 'ಮುಸ್ಲಿಮರು ಬಹುಸಂಖ್ಯಾತರಿರುವ ರಾಜ್ಯದಲ್ಲಿ ಅಲ್ಪಸಂಖ್ಯಾತ ಕಾಶ್ಮೀರಿ ಪಂಡಿತರ ಸಮುದಾಯದವರು ಸ್ಥಳಾಂತರಗೊಂಡ ವಿಷಯದ ಸುತ್ತ ಮೌನ ಆವರಿಸಿದೆ' ಎಂದು ಅವರು ವಿಷಾದಿಸಿದರು.

'ಮೊದಲು ಭದ್ರತೆ ನಿಜವಾಗಿಯೂ ಸಮಸ್ಯೆಯಾಗಿರಲಿಲ್ಲ. ಆದರೆ, ನಂತರದಲ್ಲಿ ಒಂದು ಸಮುದಾಯದ ನಾಲ್ಕೂವರೆ ಲಕ್ಷಕ್ಕೂ ಹೆಚ್ಚು ಜನರು ಅವರ ಸ್ವಂತ ದೇಶದಿಂದ, ತಮ್ಮ ಸ್ಥಳದಿಂದ ಸ್ಥಳಾಂತರಗೊಂಡರು. ಇದರಿಂದ ಅವನತಿಯು ಒಂದು ಹಂತ ತಲುಪಿತು. ಕಣಿವೆಯ ಪರಿಸ್ಥಿತಿ ಹದಗೆಟ್ಟದ್ದರಿಂದ ದೇಶದ ಪ್ರಾದೇಶಿಕ ಸಮಗ್ರತೆಗೆ ಅಪಾಯ ಎದುರಾಗಿದ್ದರಿಂದ ಸೇನೆ ಕರೆಸಿಕೊಳ್ಳಲಾಯಿತು. ಸ್ವಂತ ನೆಲೆ ತೊರೆದವರು ರಾಜಕೀಯವಾಗಿ ಪ್ರಭಾವ ಬೀರುವಷ್ಟು ದೊಡ್ಡ ಸಮುದಾಯದ ಮತದಾರರು ಆಗಿಲ್ಲದೇ ಇರುವ ಕಾರಣಕ್ಕೆ ಕಾಶ್ಮೀರಿ ಪಂಡಿತರನ್ನು ಕಡೆಗಣಿಸಲಾಯಿತು. ಅವರ ಸಮಸ್ಯೆ ಬಗ್ಗೆ ಹೆಚ್ಚು ಗಮನವನ್ನೇ ಕೊಡಲಿಲ್ಲ' ಎಂದರು.

'ಸತ್ಯಶೋಧನಾ ಮತ್ತು ಸಾಮರಸ್ಯ ಆಯೋಗ' ರಚಿಸಬೇಕೆಂಬ ತಮ್ಮ ಶಿಫಾರಸಿನ ಕುರಿತು, ಕೌಲ್ ಅವರು, 'ಕೆಲವು ತಪ್ಪು ಸಂಭವಿಸಿದೆ ಎಂದು ಒಪ್ಪಿಕೊಳ್ಳುವುದು ಉತ್ತಮ ವಿಧಾನ. ಒಳ್ಳೆಯ ದಿನಗಳನ್ನೇ ನೋಡದ ಇಡೀ ಪೀಳಿಗೆಯ ಜನರು ಈ ಪ್ರದೇಶದಲ್ಲಿದ್ದಾರೆ' ಎನ್ನುವ ಮೂಲಕ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕೆನ್ನುವುದನ್ನು ಸೂಚ್ಯವಾಗಿ ಹೇಳಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370 ನೇ ವಿಧಿಯಡಿ ಕಲ್ಪಿಸಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸುವ ಕೇಂದ್ರದ ನಿರ್ಧಾರ ಎತ್ತಿಹಿಡಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಸರ್ವಾನುಮತದ ತೀರ್ಪಿನ ಬಗ್ಗೆ ಈ ಪೀಠದ ಭಾಗವಾಗಿದ್ದ ನ್ಯಾ. ಕೌಲ್ ಅವರು ಸಂದರ್ಶನದಲ್ಲಿ ಮಾತನಾಡಿದರು.

'ಇದು ಸರ್ವಾನುಮತದ ತೀರ್ಪು ಎಂದ ಮೇಲೆ ನಾವೆಲ್ಲರೂ ಅನುಸರಿಸಲು ಇದು ಸರಿಯಾದ ಮಾರ್ಗವೆಂದೇ ಭಾವಿಸಿರಬೇಕು. ಸಹಜವಾಗಿ, ಪ್ರತಿ ತೀರ್ಪು, ವಿಶೇಷವಾಗಿ ಪ್ರತಿ ಪ್ರಮುಖ ತೀರ್ಪು ಚರ್ಚೆಗಳನ್ನು ಹುಟ್ಟುಹಾಕುತ್ತದೆ. ತೀರ್ಪಿಗೆ ವಿರುದ್ಧ ಅಭಿಪ್ರಾಯವನ್ನು ಹೊಂದಿರುವ ಜನರು ಇದ್ದೇ ಇರುತ್ತಾರೆ. ಇದು ನಿಜವಾಗಿಯೂ ನನ್ನ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಏಕೆಂದರೆ ಒಂದು ತೀರ್ಪು ಸನ್ನಿವೇಶ ಆಧರಿಸಿದ ಅಭಿಪ್ರಾಯ. ಆ ಬಗ್ಗೆ ನಾವು ಹೆಚ್ಚು ತಲೆಕೆಡಿಸಿಕೊಳ್ಳಬಾರದು' ಎಂದರು.

ಜಮ್ಮು ಮತ್ತು ಕಾಶ್ಮೀರದಲ್ಲಿ 1980ರ ನಂತರದಲ್ಲಿ ಪ್ರಭುತ್ವದ ಕಡೆಯಿಂದ ಹಾಗೂ ಸರ್ಕಾರೇತರ ಶಕ್ತಿಗಳಿಂದ ನಡೆದಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ನಿಷ್ಪಕ್ಷಪಾತದಿಂದ ಕೂಡಿದ 'ಸತ್ಯಶೋಧನಾ ಮತ್ತು ಸಾಮರಸ್ಯ ಸಮಿತಿ' ರಚಿಸಬೇಕು ಎಂದು ನ್ಯಾ. ಕೌಲ್ ಅವರು ತಮ್ಮ ಪ್ರತ್ಯೇಕ ತೀರ್ಪಿನಲ್ಲಿ ಶಿಫಾರಸು ಮಾಡಿದ್ದರು. ಸ್ವತಃ ಕಾಶ್ಮೀರಿ ಪಂಡಿತರಾದ ಕೌಲ್ ಅವರು, 30 ವರ್ಷ ಅನಿಯಂತ್ರಿತ ಹಿಂಸಾಚಾರದ ನಂತರ ಜನರು ಮುಂದೆ ಸಾಗುವ ಸಮಯ ಬಂದಿದೆ ಎಂದಿದ್ದರು.

ರಾಜ್ಯ ಘಟಕಗಳ ಜೊತೆ ಸಭೆ ನಡೆಸಿದ ಕಾಂಗ್ರೆಸ್ ಎನ್‌ಎಸಿ

ನವದೆಹಲಿ (ಪಿಟಿಐ): ಕಾಂಗ್ರೆಸ್‌ನ 'ರಾಷ್ಟ್ರೀಯ ಮೈತ್ರಿ ಸಮಿತಿ'ಯು (ಎನ್‌ಎಸಿ) ಪಕ್ಷದ ರಾಜ್ಯ ಘಟಕಗಳ ಜೊತೆ ಶುಕ್ರವಾರ ಮತ್ತು ಶನಿವಾರ ಸಭೆ ನಡೆಸಿದೆ. 'ಇಂಡಿಯಾ' ಮೈತ್ರಿಕೂಟದ ಸಹವರ್ತಿ ಪಕ್ಷಗಳ ಜೊತೆ ಲೋಕಸಭೆ ಚುನಾವಣೆಗಾಗಿ ಸ್ಥಾನ ಹಂಚಿಕೆ ಮಾಡಿಕೊಳ್ಳುವ ಕುರಿತು ಮಾತುಕತೆ ಆರಂಭಿಸುವ ಪೂರ್ವಭಾವಿಯಾಗಿ ಈ ಸಭೆ ನಡೆದಿದೆ.

ಬಹುತೇಕ ರಾಜ್ಯಗಳ ಕಾಂಗ್ರೆಸ್ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಪಂಜಾಬ್ ಮತ್ತು ಇತರ ಕೆಲ ರಾಜ್ಯಗಳ ನಾಯಕರ ಜೊತೆಗೆ ಇನ್ನಷ್ಟೇ ಮಾತುಕತೆ ನಡೆಸಬೇಕಿದೆ ಎಂದು ಮೈತ್ರಿ ಸಮಿತಿ ಸದಸ್ಯರೊಬ್ಬರು ತಿಳಿಸಿದ್ದಾರೆ.

'ಕಾರ್ಯಕರ್ತರು ಮತ್ತು ನಾಯಕರಿಂದ ಅಭಿಪ್ರಾಯ ಪಡೆದು, ಮುಂದಿನ ದಿನಗಳಲ್ಲಿ ನಮ್ಮ ಕಾರ್ಯವೈಖರಿ ಹೇಗಿರಬೇಕು ಎಂದು ನಿರ್ಧರಿಸುವುದು ನಮ್ಮ ಕೆಲಸವಾಗಿತ್ತು' ಎಂದು ಅವರು ತಿಳಿಸಿದ್ದಾರೆ.

ರಾಜ್ಯಗಳ ನಾಯಕರು ನೀಡಿರುವ ಮಾಹಿತಿ ಮತ್ತು ಸಮಿತಿ ನಡೆಸಿರುವ ಮೌಲ್ಯಮಾಪನದ ಕುರಿತು ಪಕ್ಷದ ಉನ್ನತ ನಾಯಕತ್ವಕ್ಕೆ ವರದಿ ನೀಡಲಾಗುವುದು ಎಂದಿದ್ದಾರೆ.

'ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಹಿರಿಯ ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರ ಜೊತೆ ಸಮಿತಿ ಸದಸ್ಯರು ಜನವರಿ 4ರಂದು ಸಭೆ ನಡೆಸುವರು. ಆಗ ಸಮಿತಿಯು ಈ ಸಭೆಯ ವರದಿ ಸಲ್ಲಿಸಲಿದೆ. ಉನ್ನತ ನಾಯಕತ್ವ ಯಾವ ನಿರ್ಧಾರ ತೆಗೆದುಕೊಳ್ಳುತ್ತದೆಯೋ ಅದರಂತೆ ಪಕ್ಷವು ಕೆಲಸ ಮಾಡಲಿದೆ' ಎಂದು ಮೈತ್ರಿ ಸಮಿತಿ ಸಭೆ ಬಳಿಕ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅವಿನಾಶ್ ಪಾಂಡೆ ಹೇಳಿದ್ದಾರೆ.

ಸಮಿತಿಯು ವರದಿ ನೀಡಿದ ಬಳಿಕ, ಸ್ಥಾನ ಹಂಚಿಕೆ ಕುರಿತು ಮಿತ್ರ ಪಕ್ಷಗಳ ಜೊತೆ ಕಾಂಗ್ರೆಸ್ ಪಕ್ಷವು ಮುಂದಿನ ವಾರದಿಂದಲೇ ಮಾತುಕತೆ ಆರಂಭಿಸಲಿದೆ ಎಂದು ಮೂಲಗಳು ತಿಳಿಸಿವೆ.

ಮುಕುಲ್ ವಾಸ್ನಿಕ್ ನೇತೃತ್ವದ ಐವರು ಸದಸ್ಯರ ರಾಷ್ಟ್ರೀಯ ಮೈತ್ರಿ ಸಮಿತಿಯನ್ನು ಕಳೆದ ವಾರ ರಚಿಸಲಾಗಿದೆ. ನಾಯಕರಾದ ಅಶೋಕ್ ಗೆಹಲೋತ್, ಭೂಪೇಶ್ ಬಘೇಲ್, ಸಲ್ಮಾನ್ ಖುರ್ಷಿದ್ ಮತ್ತು ಮೋಹನ್ ಪ್ರಕಾಶ್ ಸಮಿತಿಯ ಇತರ ಸದಸ್ಯರು.

ಹೆದ್ದಾರಿಯಲ್ಲೇ ಮುಫ್ತಿ ಧರಣಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಇಲ್ಲಿನ ಪೂಂಛ್‌ಗೆ ಭೇಟಿ ನೀಡಲು ಅನುಮತಿ ನಿರಾಕರಿಸಿದ ಕಾರಣ, ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಶನಿವಾರ ರಜೌರಿ–ಪೂಂಛ್ ಹೆದ್ದಾರಿಯಲ್ಲಿಯೇ ಧರಣಿ ಕುಳಿತರು. ಇತ್ತೀಚೆಗೆ ಸೇನೆಯ ವಶದಲ್ಲಿದ್ದಾಗ ಮೃತಪಟ್ಟರು ಎನ್ನಲಾದ ಮೂವರು ನಾಗರಿಕರ ಕುಟುಂಬವನ್ನು ಭೇಟಿ ಮಾಡಲು ಅಲ್ಲಿಗೆ ತೆರಳುತ್ತಿದ್ದರು.

'ರಾತ್ರಿ ಇಡೀ ಹೆದ್ದಾರಿಯಲ್ಲಿ ಕುಳಿತರೂ ಅವರು ಪ್ರತಿಭಟನೆ ಯನ್ನು ಕೈಬಿಡುವುದಿಲ್ಲ' ಎಂದು ಅವರೊಂದಿಗೆ ಇರುವ ಪಕ್ಷದ ಕಾರ್ಯಕರ್ತರು ಹೇಳಿದರು.

'ಆಡಳಿತವು ನನಗೇಕೆ ಇಷ್ಟು ಹೆದರುತ್ತಿದೆ ಎಂದು ತಿಳಿಯುತ್ತಿಲ್ಲ. ಭದ್ರತೆಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿಲ್ಲ. ಆದರೂ ನನಗೆ ಅವಕಾಶ ನೀಡುತ್ತಿಲ್ಲ' ಎಂದು ದೂರಿದರು.

ರಾಜಸ್ಥಾನ: ಕಿರೋಡಿ ಲಾಲ್, ರಾಜ್ಯವರ್ಧನ್ ಸಂಪುಟಕ್ಕೆ

ಸಚಿವರಾಗಿ 22 ಶಾಸಕರ ಪ್ರಮಾಣವಚನ

ಪಿಟಿಐ/ಪ್ರಜಾವಾಣಿ ವಾರ್ತೆ

ರಾಜಸ್ಥಾನ ಜೈಪುರದ ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೊಸದಾಗಿ ನೇಮಕ ಆದ ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಕಲ್‌ರಾಜ್ ಮಿಶ್ರಾ ಅವರು ಪ್ರಮಾಣ ವಚನ ಬೋಧಿಸಿದರು ಪಿಟಿಐ ಚಿತ್ರ

ಜೈಪುರ: ಬಿಜೆಪಿಯ ಹಿರಿಯ ನಾಯಕ ಕಿರೋಡಿ ಲಾಲ್ ಮೀಣಾ, ಮಾಜಿ ಕೇಂದ್ರ ಸಚಿವ ರಾಜ್ಯವರ್ಧನ್ ಸಿಂಗ್ ರಾಥೋಡ್ ಸೇರಿ ಪಕ್ಷದ 22 ಶಾಸಕರು ರಾಜಸ್ಥಾನ ಸಚಿವರಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು. ಇವರಲ್ಲಿ 17 ಮಂದಿ ಇದೇ ಮೊದಲ ಬಾರಿಗೆ ಸಚಿವರಾಗಿದ್ದಾರೆ.

ಇಲ್ಲಿನ ರಾಜಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಕಲ್‌ರಾಜ್ ಮಿಶ್ರಾ ಅವರು ನೂತನ ಸಚಿವರಿಗೆ ಪ್ರಮಾಣ ವಚನ ಬೋಧಿಸಿದರು. 22 ಮಂದಿ ಶಾಸಕರಲ್ಲಿ 12 ಶಾಸಕರು ಸಂಪುಟ ದರ್ಜೆ ಸಚಿವರಾಗಿ, ಐವರು ಶಾಸಕರು ರಾಜ್ಯ ಸಚಿವರಾಗಿ (ಸ್ವತಂತ್ರ) ಮತ್ತು ಐವರು ರಾಜ್ಯ ಸಚಿವರಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಹಿರಿಯ ಮತ್ತು ಅನುಭವಿ ನಾಯಕರಿಗೆ ಭಜನ್ ಲಾಲ್ ಶರ್ಮ ಅವರ ಸಂಪುಟದಲ್ಲಿ ಸ್ಥಾನ ನೀಡಲಾಗಿದೆ. ಆರು ಅವಧಿಗೆ ಶಾಸಕರು, ಎರಡು ಅವಧಿಗೆ ಲೋಕಸಭಾ ಸಂಸದ ಮತ್ತು ಒಂದು ಅವಧಿಗೆ ರಾಜ್ಯಸಭಾ ಸಂಸದರಾಗಿದ್ದ ಕಿರೋಡಿ ಲಾಲ್ ಮೀಣಾ ಅವರು ಸಂಪುಟ ದರ್ಜೆ ಸಚಿವರಾಗಿದ್ದಾರೆ.

ಇವರೊಂದಿಗೆ, ನಾಲ್ಕು ಬಾರಿ ಶಾಸಕರಾಗಿರುವ ಗಜೇಂದ್ರ ಸಿಂಗ್ ಖಿಮ್‌ಸಾರ್ ಮತ್ತು ಬಾಬುಲಾಲ್ ಕರಾಡಿ, ಎರಡು ಅವಧಿಗೆ ಸಂಸದರಾಗಿದ್ದ ರಾಜ್ಯವರ್ಧನ್ ಸಿಂಗ್ ರಾಥೋಡ್, ಆರು ಬಾರಿ ಶಾಸಕರಾಗಿರುವ ಹಾಗೂ ರಾಜಸ್ಥಾನ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ ಮದನ್ ದಿಲಾವರ್ ಅವರು ಸಂಪುಟ ದರ್ಜೆಯಲ್ಲಿ ಸ್ಥಾನ ಪಡೆದಿರುವ ಪ್ರಮುಖ ಶಾಸಕರು.

ವಸುಂಧರಾ ರಾಜೇ ಅವರ ಆಪ್ತರಿಗೆ ಸಂಪುಟದಲ್ಲಿ ಸ್ಥಾನ ದೊರಕಿಲ್ಲ. ಮಹಿಳೆಯರ ಪೈಕಿ ಉಪಮುಖ್ಯ ಮಂತ್ರಿ ದಿಯಾ ಕುಮಾರಿ ಹೊರತುಪಡಿಸಿ ಜಯಾಲ್ ಕ್ಷೇತ್ರದಿಂದ ಗೆದ್ದಿರುವ ಡಾ. ಮಂಜು ಬಾಗ್ಮಾರ್ ಮಾತ್ರ ರಾಜ್ಯ ಸಚಿವರಾಗಿ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ.

ಕರಣ್‌ಪುರ ಬಿಜೆಪಿ ಅಭ್ಯರ್ಥಿ ಸಚಿವರಾಗಿ ಸಂಪುಟಕ್ಕೆ ಸೇರ್ಪಡೆ

ರಾಜಸ್ಥಾನದ ಕರಣ್‌ಪುರ ವಿಧಾನಸಭೆ ಕ್ಷೇತ್ರಕ್ಕೆ ಜನವರಿ 5ರಂದು ಚುನಾವಣೆ ನಡೆಯಲಿದೆ. ಬಿಜೆಪಿಯಿಂದ ಕಣಕ್ಕಿಳಿದಿರುವ ಸುರೇಂದ್ರ ಪಾಲ್ ಸಿಂಗ್ ಅವರನ್ನೂ ರಾಜ್ಯ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ. ಅವರು ರಾಜ್ಯ ಸಚಿವರಾಗಿ (ಸ್ವತಂತ್ರ) ಪ್ರಮಾಣ ವಚನ ಸ್ವೀಕರಿಸಿದರು.

ಈ ನಡೆಯನ್ನು ವಿರೋಧಿಸಿರುವ ಕಾಂಗ್ರೆಸ್, ಆಡಳಿತಾರೂಢ ಪಕ್ಷವು ನೀತಿ ಸಂಹಿತೆಯನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದೆ.

'ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ನೀಡಿ, ಕ್ರಮ ಕೈಗೊಳ್ಳುವಂತೆ ಆಗ್ರಹಿಸುತ್ತೇವೆ' ಎಂದು ರಾಜ್ಯ ಕಾಂಗ್ರೆಸ್ ಘಟಕದ ಮುಖ್ಯಸ್ಥ ಗೋವಿಂದ್ ಸಿಂಗ್ ಡೊಟಾಸ್ರ ಹೇಳಿದ್ದಾರೆ.

ಕರಣ್‌ಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೃತಪಟ್ಟ ಕಾರಣ ಈ ಕ್ಷೇತ್ರದ ಚುನಾವಣೆಯನ್ನು ಮುಂದೂಡಲಾಗಿತ್ತು.

'ಶುಕ್ರಿಯಾ ಮೋದಿ ಭಾಯಿಜಾನ್' ಅಭಿಯಾನ 2ರಿಂದ

ಲಖನೌ (ಪಿಟಿಐ): ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಮುಸ್ಲಿಂ ಮಹಿಳೆಯರನ್ನು ಪಕ್ಷದತ್ತ ಸೆಳೆಯಲು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾವು ಮುಂದಿನ ವಾರ ಉತ್ತರ ಪ್ರದೇಶದಲ್ಲಿ 'ಶುಕ್ರಿಯಾ ಮೋದಿ ಭಾಯಿಜಾನ್' ಅಭಿಯಾನವನ್ನು ಆರಂಭಿಸಲಿದೆ.

'ನಮ್ಮ ನಡುವೆ ಅಂತರವಿಲ್ಲ, ನಮ್ಮ ನಡುವೆ ಕಂದಕವಿಲ್ಲ, ಮೋದಿ ನಮ್ಮ ಸಹೋದರ' ಎಂಬ ಘೋಷವಾಕ್ಯದೊಂದಿಗೆ ಕನಿಷ್ಠ ಸಾವಿರ ಮಹಿಳೆಯರನ್ನು ಪಕ್ಷದತ್ತ ಸೆಳೆಯುವ ಉದ್ದೇಶವನ್ನು ಬಿಜೆಪಿ ಹೊಂದಿದೆ.

'ಜನವರಿ 2ರಿಂದ ಜನವರಿ 20ರವರೆಗೆ ನಡೆಯಲಿರುವ ಅಭಿಯಾನದಲ್ಲಿ ನರೇಂದ್ರ ಮೋದಿ ಸರ್ಕಾರ ಮುಸ್ಲಿಂ ಮಹಿಳೆಯರಿಗೆ ನೀಡಿರುವ ಸವಲತ್ತುಗಳ ಬಗ್ಗೆ ತಿಳಿಸಿ, ಬಿಜೆಪಿಗೆ ಮತ ನೀಡುವಂತೆ ಪ್ರೇರೇಪಿಸಲಾಗುವುದು' ಎಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಕುನ್ವರ್ ಬಸಿತ್ ತಿಳಿಸಿದರು.

ಮಣಿಪುರ: ಕಮಾಂಡೊ ವಾಹನದ ಮೇಲೆ ಗುಂಡಿನ ದಾಳಿ

ಚುರಚಂದಾಪುರ (ಪಿಟಿಐ): ಮಣಿಪುರದ ತೆಂಗ್‌ನೊಪಲ್ ಜಿಲ್ಲೆಯ ಮೋರೆ ಸಮೀಪ ಅಪರಿಚಿತ ಬಂದೂಕುಧಾರಿಗಳು ಮತ್ತು ಪೊಲೀಸ್ ಕಮಾಂಡೊಗಳ ನಡುವೆ ಶನಿವಾರ ಭಾರಿ ಗುಂಡಿನ ಚಕಮಕಿ ನಡೆದಿದೆ.

ಮೋರೆ ಸನಿಹದಲ್ಲಿರುವ ಪ್ರಮುಖ ಸ್ಥಳಕ್ಕೆ ಕಮಾಂಡೊಗಳನ್ನು ಪೊಲೀಸ್ ವಾಹನದಲ್ಲಿ ಕರೆದೊಯ್ಯುವಾಗ ಬಂದೂಕುಧಾರಿಗಳು ಚಿಕಿಮ್ ವೆಂಗ್ ಬಳಿ ವಾಹನಗಳ ಮೇಲೆ ಗುಂಡಿನ ಸುರಿಮಳೆಗರೆದಿದ್ದಾರೆ. ಬಾಂಬ್‌ಗಳನ್ನು ಎಸೆದಿದ್ದಾರೆ.

'ಎಂ ಚಹ್ನೌ ಗ್ರಾಮ ವ್ಯಾಪ್ತಿಯಲ್ಲಿನ ಇಂಫಾಲ್–ಮೋರೆ ರಸ್ತೆಯಲ್ಲಿ ವಾಹನಗಳು ಚಲಿಸುತ್ತಿದ್ದಾಗ ಅಪರಿಚಿತ ಬಂದೂಕುಧಾರಿಗಳು ನಡೆಸಿದ ದಾಳಿಗೆ ಕಮಾಂಡೊ ಒಬ್ಬರು ಗಾಯಗೊಂಡಿದ್ದು, ಅಸ್ಸಾಂ ರೈಫಲ್ಸ್‌ನ ಶಿಬಿರದಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಹೊಸ ಮೋರೆಯ ಪ್ರವೇಶ ದ್ವಾರದ ಸಮೀಪ ಮತ್ತು ಎಂ ಚಹ್ನೌ ಗ್ರಾಮದಲ್ಲಿ ಬಂದೂಕುಧಾರಿಗಳು ಸುಮಾರು 300ರಿಂದ 400 ಸುತ್ತು ಗುಂಡು ಹಾರಿಸಿದ್ದಾರೆ. ಎರಡು ಬಾಂಬ್‌ಗಳನ್ನು ಸ್ಫೋಟಿಸಿದ್ದಾರೆ. ಮೋರೆ ಪಟ್ಟಣದಲ್ಲಿ ಎರಡು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಿಜೋರಾಂಗೆ 151 ಮ್ಯಾನ್ಮಾರ್ ಸೈನಿಕರು'

ಐಜ್ವಾಲ್ (ಪಿಟಿಐ): ಮ್ಯಾನ್ಮಾರ್‌ನ ಸೇನಾ ಶಿಬಿರಗಳ ಮೇಲೆ ಆ ದೇಶದ ಬುಡಕಟ್ಟು ಜನಾಂಗ ಶಸ್ತ್ರಸಜ್ಜಿತವಾಗಿ ಆಕ್ರಮಣ ಮಾಡಿದ್ದರಿಂದಾಗಿ ಸುಮಾರು 150 ಯೋಧರು ಶುಕ್ರವಾರ ಮಿಜೋರಾಂನ ಲೌಂಗಲಾಯ್ ಜಿಲ್ಲೆಗೆ ಪಲಾಯನ ಮಾಡಿದ್ದಾರೆ ಎಂದು ಅಸ್ಸಾಂ ರೈಫಲ್ಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮ್ಯಾನ್ಮಾರ್‌ನ ಅರಾಕನ್ ಸೇನೆಯು ಗಡಿ ಭಾಗದಲ್ಲಿರುವ ಸೇನಾ ಶಿಬಿರಗಳ ಮೇಲೆ ದಾಳಿ ನಡೆಸುತ್ತಿದೆ. ಅಲ್ಲದೆ, ಮ್ಯಾನ್ಮಾರ್ ಸೇನೆ ಮತ್ತು ಅರಾಕನ್ ಸೇನಾ ಯೋಧರ ಮಧ್ಯೆ ಗುಂಡಿನ ಕಾಳಗವೂ ನಡೆಯುತ್ತಿದೆ. ಮಿಜೋರಾಂಗೆ ಬಂದ ಯೋಧರ ಪೈಕಿ ಕೆಲವರು ಗಾಯಗೊಂಡಿದ್ದು, ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು ಎಂದರು.

ಚೇತರಿಕೆಗೆ ಕಾಯುತ್ತಿದೆ ಹೆಂಚು

ಮಂಗಳೂರು ಸಮೀಪದ ಕೈಕಂಬದಲ್ಲಿರುವ ಗಣೇಶ್ ಟೈಲ್ಸ್ ಕಾರ್ಖಾನೆಯಲ್ಲಿ ಆವೆಮಣ್ಣಿನ ಇಟ್ಟಿಗೆ ತಯಾರಿ

ಒಂದನೇ ಪುಟದಿಂದ...

ಕರಾವಳಿಗೂ, ಹೆಂಚು ತಯಾರಿಕೆಗೂ 500 ವರ್ಷಗಳಿಗೂ ಹಿಂದಿನ ನಂಟು ಇದೆ. 1500–1531ರ ನಡುವೆ ಮಲಬಾರ್ ಕರಾವಳಿ ತೀರಕ್ಕೆ ಭೇಟಿ ನೀಡಿದ್ದ ಪೋರ್ಚುಗೀಸ್ ಪ್ರವಾಸಿಗ ಡ್ಯೂರೆಟ್ ಬರ್ಬೋಸಾ, 'ಆವೆಮಣ್ಣನ್ನು ಸುಟ್ಟು ಹೆಂಚು ತಯಾರಿಸುವುದು ಇಲ್ಲಿನ ಜನರ ಮುಖ್ಯ ಉದ್ಯೋಗ' ಎಂದು ಉಲ್ಲೇಖಿಸಿದ್ದರು. ಹೆಂಚು ತಯಾರಿಕೆಗೆ ಇಲ್ಲಿ ಕೈಗಾರಿಕೆಯ ಸ್ಪರ್ಶ ನೀಡಿದ್ದು ಜರ್ಮನಿಯ ಬಾಸೆಲ್ ಮಿಷನ್. ಆವೆಮಣ್ಣಿನಿಂದ ಹೆಂಚು ತಯಾರಿಸುವ ತರಬೇತಿ ಪಡೆದಿದ್ದ ಜರ್ಮನಿಯ ಮಿಷನರಿ ಸಿ.ಜಿ. ಆಂಡ್ರ್ಯೂ ಪ್ಲೆಬ್ಸ್ ಮಂಗಳೂರಿನ ಮಣ್ಣು ಹೆಂಚು ತಯಾರಿಗೆ ಸೂಕ್ತ ಎಂದು ಮನಗಂಡಿದ್ದರು. 1864ರಲ್ಲಿ ಇಲ್ಲಿನ ಬಲ್ಮಠದಲ್ಲಿ ಬಾಸೆಲ್ ಮಿಷನ್ ವತಿಯಿಂದ ಅಚ್ಚಿನಲ್ಲಿ ಹೆಂಚನ್ನು ತಯಾರಿಸಿದರು. 1865ರಲ್ಲಿ ಮಂಗಳೂರಿನ ಜಪ್ಪುವಿನಲ್ಲಿ ಬಾಸೆಲ್ ಮಿಷನ್ ಹೆಂಚಿನ ಕಾರ್ಖಾನೆಯನ್ನು ಆರಂಭಿಸಿತು. 12 ಕಾರ್ಮಿಕರೊಂದಿಗೆ ಆರಂಭವಾದ ಈ ಕಾರ್ಖಾನೆ 1880ರಲ್ಲಿ ವರ್ಷಕ್ಕೆ 10 ಲಕ್ಷಕ್ಕೂ ಹೆಚ್ಚು ಹೆಂಚು ತಯಾರಿಸುವ ಮಟ್ಟಕ್ಕೆ ಬೆಳೆದಿತ್ತು.

1882ರಲ್ಲಿ ಕುದ್ರೋಳಿಯಲ್ಲಿ ಬಾಸೆಲ್ ಮಿಷನ್ ಎರಡನೇ ಹೆಂಚಿನ ಕಾರ್ಖಾನೆಯನ್ನು, 1886ರಲ್ಲಿ ಉಡುಪಿಯ ಮಲ್ಪೆಯಲ್ಲಿ ಮೂರನೇ ಕಾರ್ಖಾನೆಯನ್ನು ಆರಂಭಿಸಿತು. ಆನಂತರ ರಾಜ್ಯದ ಕರಾವಳಿಯುದ್ದಕ್ಕೂ ಅನೇಕ ಹೆಂಚಿನ ಕಾರ್ಖಾನೆಗಳು ಸ್ಥಾಪನೆಯಾದವು. ಈ ಎಲ್ಲ ಕಾರ್ಖಾನೆಗಳ ಹೆಂಚುಗಳೂ 'ಮಂಗಳೂರು ಟೈಲ್ಸ್' ಎಂದೇ ಖ್ಯಾತವಾದವು. 1914ರ ಮೊದಲ ಜಾಗತಿಕ ಯುದ್ಧದ ಸಂದರ್ಭದಲ್ಲಿ ಬಾಸೆಲ್ ಮಿಷನ್‌ಗೆ ನಿರ್ಬಂಧ ಹೇರಿದಾಗ ಈ ಕಾರ್ಖಾನೆಗಳು 'ಕಾಮನ್ವೆಲ್ತ್ ಟ್ರಸ್ಟ್ ಲಿಮಿಟೆಡ್'ಗೆ ಹಸ್ತಾಂತರವಾದವು ಎಂಬುದನ್ನು 'ಭಾರತದಲ್ಲಿ ಬಾಸೆಲ್ ಮಿಷನ್' ಕೃತಿಯಲ್ಲಿ ಪೀಟರ್ ವಿಲ್ಸನ್ ಪ್ರಭಾಕರ್ ಉಲ್ಲೇಖಿಸಿದ್ದಾರೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಮಂಗಳೂರು ಹೆಂಚಿನ ಉದ್ಯಮ ಜನಪ್ರಿಯತೆಯ ಉತ್ತುಂಗದಲ್ಲಿತ್ತು. ಆಗ ಹೆಂಚು ತಯಾರಿಸುವ ಮತ್ತಷ್ಟು ಕಾರ್ಖಾನೆಗಳು ಕರಾವಳಿಯುದ್ದಕ್ಕೂ ಹುಟ್ಟಿಕೊಂಡವು. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 90ಕ್ಕೂ ಹೆಚ್ಚು ಹೆಂಚಿನ ಕಾರ್ಖಾನೆಗಳು ಅಸ್ತಿತ್ವದಲ್ಲಿದ್ದವು. ಈ ಉದ್ದಿಮೆ ಕರಾವಳಿಯ ಜನಜೀವನದ ಜೀವನಾಡಿಯಾಗಿ ಬೆಳೆದಿತ್ತು.

ನಮ್ಮ ದೇಶದ ವಿವಿಧ ರಾಜ್ಯಗಳಿಗೆ ಮಾತ್ರವಲ್ಲ, ಮ್ಯಾನ್ಮಾರ್, ಇಂಡೋನೇಷ್ಯಾ, ಆಸ್ಟ್ರೇಲಿಯಾ, ಫಿಜಿ, ಆಫ್ರಿಕಾ ಖಂಡದ ವಿವಿಧ ರಾಷ್ಟ್ರಗಳು ಮತ್ತು ಕೊಲ್ಲಿ ರಾಷ್ಟ್ರಗಳಿಗೂ ಮಂಗಳೂರು ಹೆಂಚು ಭಾರಿ ಪ್ರಮಾಣದಲ್ಲಿ ರಫ್ತಾಗುತ್ತಿತ್ತು. ಇದು ಕರಾವಳಿಯ ಆರ್ಥಿಕತೆಗೂ ಶಕ್ತಿ ತುಂಬಿತ್ತು.

1880ರ ದಶಕದಲ್ಲಿ ಮಂಗಳೂರಿನಲ್ಲಿ ಆರಂಭವಾದ ಹೆಂಚು ಉದ್ದಿಮೆ ಕ್ರಮೇಣ ಕರಾವಳಿಯುದ್ದಕ್ಕೂ ವಿಸ್ತರಿಸಿತ್ತು. ಕಾರವಾರದಿಂದ ಕಾಸರಗೋಡಿನವರೆಗೆ ಅಲ್ಲಲ್ಲಿ ಹೆಂಚಿನ ಕಾರ್ಖಾನೆಗಳು ತಲೆಎತ್ತಿದ್ದವು. ಇವುಗಳಲ್ಲಿ ತಯಾರಾಗುತ್ತಿದ್ದ 'ಮಂಗಳೂರು ಹೆಂಚು' ಕರಾವಳಿಯಲ್ಲಷ್ಟೇ ಅಲ್ಲ, ದೇಶ ವಿದೇಶಗಳಲ್ಲಿ ಮನೆ ಮಾತಾಗಿತ್ತು.

ಕುಲುಮೆಯಲ್ಲಿ 30 ಗಂಟೆ ಬೇಯುವ ಹೆಂಚು: ಹೆಂಚು ತಯಾರಿಸುವ ಆವೆಮಣ್ಣನ್ನು ಕೊಳೆಯಿಸಲಾಗುತ್ತದೆ. ನಂತರ ಅದನ್ನು ಮಿಶ್ರಣ ಮಾಡಿ ಹದಗೊಳಿಸುವ ಯಂತ್ರದಲ್ಲಿ ಹಾಕಲಾಗುತ್ತದೆ. ಕಸ-ಕಶ್ಮಲ ಹಾಗೂ ಇತರ ಘನ ಪದಾರ್ಥಗಳನ್ನು ಬೇರ್ಪಡಿಸಲಾಗುತ್ತದೆ. ನಂತರ ಪಗ್ ಮಿಲ್ ಮೂಲಕ ಹಾಯಿಸಿ ಮಣ್ಣಿನಲ್ಲಿರುವ ನೀರಿನಂಶವನ್ನು ಹೀರಿ ತೆಗೆಯಲಾಗುತ್ತದೆ. ನಂತರ ಅದಕ್ಕೆ ತೈಲವನ್ನು ಸೇರಿಸಲಾಗುತ್ತದೆ. ಹೀಗೆ ಹದಗೊಂಡ ಮಣ್ಣನ್ನು ಅಚ್ಚಿಗೆ ಹಾಕಿ ಹೆಂಚನ್ನು ತಯಾರಿಸಲಾಗುತ್ತದೆ. ಬಳಿಕ ಹೆಂಚನ್ನು ಒಣಗಿಸಿ, ಕುಲುಮೆಯಲ್ಲಿ ಬೇಯಿಸಲಾಗುತ್ತದೆ ಎಂದು ವಿವರಿಸುತ್ತಾರೆ ಮಂಗಳೂರು ಸಮೀಪದ ಕೈಕಂಬದ 'ಗಣೇಶ್ ಟೈಲ್ಸ್' ಕಾರ್ಖಾನೆ ಮಾಲೀಕ ಗೋವರ್ಧನ ಶೆಟ್ಟಿ.

'ಒಂದೊಂದು ಕುಲುಮೆಯಲ್ಲೂ ನಾಲ್ಕು ಗೂಡು (ಛೇಂಬರ್)ಗಳಿರುತ್ತವೆ. ಅವುಗಳಲ್ಲಿ ಏಕಕಾಲದಲ್ಲಿ 10 ಸಾವಿರಕ್ಕೂ ಹೆಚ್ಚು ಹೆಂಚುಗಳನ್ನು ಬೇಯಿಸಬಹುದು. ಅವು ಸರಿಸುಮಾರು 30 ಗಂಟೆ ಕುಲುಮೆಯಲ್ಲಿ 800ರಿಂದ 900 ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಬೇಯುತ್ತವೆ. ಅವು ಒಂದು ವಾರ ಗೂಡಿನ ಒಳಗೆ ಇರುತ್ತವೆ. ಬಿಸಿ ಆರಿದ ಬಳಿಕ ಅವುಗಳನ್ನು ಹೊರತೆಗೆಯಲಾಗುತ್ತದೆ. ಈ ರೀತಿ ಸಿದ್ಧಗೊಳ್ಳುವ ಹಂಚು ನೂರಾರು ವರ್ಷಗಳ ಬಳಿಕವೂ ಗಟ್ಟಿಮುಟ್ಟಾಗಿಯೇ ಇರುತ್ತದೆ' ಎನ್ನುತ್ತಾರೆ ಅವರು.

ಆವೆಮಣ್ಣು- ಆಡಳಿತ ಯಂತ್ರದ ಕೆಂಗಣ್ಣು: ಕರಾವಳಿಯ ಅಳಿವೆ ಪ್ರದೇಶಗಳಲ್ಲಿ ಹೆಂಚು ತಯಾರಿಸಲು ಬೇಕಾಗುವ ಆವೆಮಣ್ಣು ಈ ಹಿಂದೆ ಯಥೇಚ್ಛವಾಗಿ ಸಿಗುತ್ತಿತ್ತು. ಹಾಗಾಗಿ ಹೆಂಚಿನ ಉದ್ಯಮಕ್ಕೆ ಮಣ್ಣನ್ನು ಹೊಂದಿಸುವುದು ಹೊರೆ ಎನಿಸುತ್ತಿರಲಿಲ್ಲ. ಆದರೆ ಈಗ ಪರಿಸ್ಥಿತಿ ಹಾಗಿಲ್ಲ. ಆವೆಮಣ್ಣಿರುವ ಗದ್ದೆಗಳನ್ನು ಹುಡುಕಿಕೊಂಡು ಹೋಗಬೇಕಾದ ಸ್ಥಿತಿ ಇದೆ. ಮಣ್ಣು ಸಿಕ್ಕರೂ, ಅದನ್ನು ಬಳಸುವುದಕ್ಕೆ ಅಧಿಕಾರಿಗಳ ಕಿರಿಕಿರಿ ಎಂದು ದೂರುತ್ತಾರೆ ಹೆಂಚಿನ ಕಾರ್ಖಾನೆ ಮಾಲೀಕರು.

'ನಾವು ಸರ್ಕಾರದ ಜಾಗದಲ್ಲಿ ಮಣ್ಣು ತೆಗೆಯುತ್ತಿಲ್ಲ. ಜಾಗದ ಮಾಲೀಕರಿಗೆ ದುಡ್ಡು ಕೊಟ್ಟು ಆವೆಮಣ್ಣು ಖರೀದಿಸುತ್ತೇವೆ. ಅದನ್ನೂ ತೆಗೆಯಲು ಪರವಾನಗಿ ಪಡೆಯಬೇಕು ಎಂದು ಅಧಿಕಾರಿಗಳು ಹೇಳುತ್ತಾರೆ. ಆವೆಮಣ್ಣಿನ ಸಾಗಾಟಕ್ಕೂ ಅಡ್ಡಿಪಡಿಸುತ್ತಾರೆ. ಅವರ 'ಕೈ ಬಿಸಿ' ಮಾಡದಿದ್ದರೆ ಕಾರ್ಖಾನೆಯಲ್ಲಿ ದಾಸ್ತಾನು ಮಾಡಿದ ಆವೆಮಣ್ಣಿಗೂ ದಂಡ ವಿಧಿಸುತ್ತಾರೆ. ಬಳ್ಳಾರಿ ಗಣಿಗಾರಿಕೆಗೆ ಸಂಬಂಧಿಸಿದ ವಿವಾದದ ಬಳಿಕ ಈ ಸಮಸ್ಯೆ ಶುರುವಾಗಿದೆ. ಪ್ರತಿ ಕಾರ್ಖಾನೆಗೆ ವರ್ಷಕ್ಕೆ 250ಕ್ಕೂ ಹೆಚ್ಚು ಲೋಡ್ ಮಣ್ಣು ಬೇಕು. ಇದನ್ನು ಹೊಂದಿಸುವುದೇ ಕಷ್ಟವಾಗಿದೆ' ಎಂದು ಹೆಂಚಿನ ಕಾರ್ಖಾನೆ ಮಾಲೀಕರೊಬ್ಬರು ಅಲವತ್ತುಕೊಂಡರು.

'ನೆಲಮಟ್ಟದಿಂದ ನಾಲ್ಕೈದು ಅಡಿಗಿಂತ ಕೆಳಗಿರುವ ಮಣ್ಣು ಸರ್ಕಾರದ ಸ್ವತ್ತು ಎಂಬುದು ಅಧಿಕಾರಿಗಳ ವಾದ. ಅದಕ್ಕೆ ರಾಯಧನ ನಿಗದಿಪಡಿಸಿ ಎಂದರೆ, ಅದನ್ನೂ ಮಾಡುವುದಿಲ್ಲ. ಆವೆಮಣ್ಣನ್ನು ತೆಗೆಯುವುದನ್ನು ಗಣಿಗಾರಿಕೆ ಎಂದು ಪರಿಗಣಿಸಬಾರದು. ಆವೆಮಣ್ಣು ಬಳಕೆಗೆ ಸರ್ಕಾರ ಸ್ಪಷ್ಟ ನೀತಿ ರೂಪಿಸಬೇಕು. ಹೆಂಚು ತಯಾರಿಸಲು ಆವೆಮಣ್ಣಿನ ಕೊರತೆ ಆಗದಂತೆ ಸರ್ಕಾರ ಕ್ರಮವಹಿಸಬೇಕು' ಎಂದು ಒತ್ತಾಯಿಸುತ್ತಾರೆ ಕುಂದಾಪುರದ ಹೆಂಚಿನ ಕಾರ್ಖಾನೆ ಮಾಲೀಕರ ಸಂಘದ ಅಧ್ಯಕ್ಷರಾಗಿರುವ 'ಪ್ರಭಾಕರ್ ಟೈಲ್ಸ್' ಕಾರ್ಖಾನೆಯ ಪ್ರಕಾಶ್ ಟಿ.ಸೋನ್ಸ್.

ಪರಿಸರಸ್ನೇಹಿ ಹೆಂಚು– ಹಲವು ರೂಪಾಂತರ

ಜನರ ಬದಲಾದ ಅಭಿರುಚಿಗಳಿಗೆ ಅನುಗುಣವಾಗಿ ಸಾಂಪ್ರದಾಯಿಕ ಹೆಂಚು ಈಚಿನ ದಶಕಗಳಲ್ಲಿ ಹೊಸರೂಪಗಳನ್ನು ಪಡೆದಿದೆ. ಚಾವಣಿಗೆ ಬಳಸುವ ಹೆಂಚಿನ ಆಕಾರ, ಗಾತ್ರದಲ್ಲಿ ಹೆಚ್ಚೇನೂ ವ್ಯತ್ಯಾಸವಾಗಿಲ್ಲ. ನೋಡಲು ಆಕರ್ಷಕವಾಗಿ ಕಾಣಿಸುವ ಪುಟ್ಟ ಹೆಂಚುಗಳೂ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಆವೆಮಣ್ಣಿನ ಹೂದಾನಿ, ಹೂಕುಂಡ, ಕೆಲವು ಗೃಹಾಲಂಕಾರ ಆಕೃತಿಗಳನ್ನು ಹಾಗೂ 'ಹಾಲೊ ಬ್ಲಾಕ್'ಗಳನ್ನೂ ಕೆಲವು ಹೆಂಚಿನ ಕಾರ್ಖಾನೆಗಳು ತಯಾರಿಸುತ್ತಿವೆ.

ಹೆಚ್ಚುತ್ತಿರುವ ತಾಪಮಾನ, ಜನರು ಪರಿಸರ ಸ್ನೇಹಿ ಕಟ್ಟಡ ಶೈಲಿಯನ್ನು ಹೆಚ್ಚು ಇಷ್ಟಪಡುತ್ತಿದ್ದಾರೆ. ಹೊರಗೆಷ್ಟೇ ಬಿಸಿಲಿದ್ದರೂ ಕಟ್ಟಡವನ್ನು ತಂಪಾಗಿಡಬಲ್ಲ ಹೆಂಚನ್ನು ಕಾಂಕ್ರೀಟ್ ಚಾವಣಿಗಳಿಗೂ ಹೊದಿಸಲು ಜನ ಬಯಸುತ್ತಿದ್ದಾರೆ. ಇದು ಹೆಂಚಿನ ಉದ್ಯಮಕ್ಕೆ ಮತ್ತೆ ಚೇತರಿಕೆಯ ಅವಕಾಶವನ್ನು ಒದಗಿಸಿದೆ.

ಉಷ್ಣಾಂಶ 3 ಡಿಗ್ರಿಗಳಷ್ಟು ಇಳಿಕೆ: 'ಆರ್‌ಸಿಸಿ ಬದಲು ಹೆಂಚಿನ ಛಾವಣಿ ನಿರ್ಮಿಸಿದರೆ ಕಟ್ಟಡದೊಳಗಿನ ಉಷ್ಣಾಂಶ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆಯಾಗಬಲ್ಲುದು. ಹೆಂಚಿನ ಉಷ್ಣ ನಿರೋಧಕ ಗುಣ ಇದಕ್ಕೆ ಕಾರಣ. ಹೆಂಚಿನ ಚಾವಣಿಯಲ್ಲಿ ಪಕ್ಕಾಸಿನ ಕೆಳಗಡೆ ಗಾಳಿಯಾಡಲು ಅವಕಾಶವಿರುತ್ತದೆ. ಇದು ಕೂಡಾ ತಾಪ ಕಡಿಮೆಗೊಳಿಸಲು ಸಹಕಾರಿ. ಹೆಂಚಿನ ಸೀಲಿಂಗ್ ಹಾಗೂ ಫಾಲ್ಸ್ ಸೀಲಿಂಗ್ ಎರಡನ್ನೂ ಅಳವಡಿಸಿದರೆ ಕಟ್ಟಡದ ಉಷ್ಣಾಂಶ ಮತ್ತಷ್ಟು ಕಡಿಮೆಯಾಗುತ್ತದೆ. ಹೆಂಚಿನ ಚಾವಣಿ ಮತ್ತು ಕಾಂಕ್ರೀಟ್ ಚಾವಣಿಗಳ ನಿರ್ಮಾಣ ವೆಚ್ಚದಲ್ಲಿ ಹೆಚ್ಚೇನೂ ವ್ಯತ್ಯಾಸವಿಲ್ಲ' ಎನ್ನುತ್ತಾರೆ ವಾಸ್ತುಶಿಲ್ಪಿ ಸತೀಶ್ ರಾವ್ ಇಡ್ಯಾ.

ಮಂಗಳೂರು ಸಮೀಪದ ಕೈಕಂಬದಲ್ಲಿರುವ ಗಣೇಶ್ ಟೈಲ್ಸ್ ಕಾರ್ಖಾನೆ

ಆರ್‌ಸಿಸಿ ಚಾವಣಿಗೆ ಹೆಂಚು ಹೊದಿಸಿದರೆ ಕಟ್ಟಡದೊಳಗಿನ ಉಷ್ಣಾಂಶ 3ರಿಂದ 4 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಕಡಿಮೆಯಾಗುತ್ತದೆ. ಇದು ವೈಜ್ಞಾನಿಕವಾಗಿಯೂ ದೃಢಪಟ್ಟಿದೆ

ರಾಜೇಂದ್ರ ಕಲ್ಬಾವಿ, ದಕ್ಷಿಣ ಕನ್ನಡ ಜಿಲ್ಲೆಯ ನಿರ್ಮಿತಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ



ಆರ್‌ಸಿಸಿ ಚಾವಣಿಯ ಕಟ್ಟಡಗಳಿಗೆ ಹೆಂಚು ಹೊದಿಸಬೇಕು. ಇದರಿಂದ ಕಟ್ಟಡದ ಅಂದ ಹೆಚ್ಚುತ್ತದೆ. ಉಷ್ಣಾಂಶವೂ ತಗ್ಗುತ್ತದೆ. ಹೆಂಚು ತಯಾರಿಗೂ ಉತ್ತೇಜನ ಸಿಗುತ್ತದೆ

ಪ್ರಕಾಶ್ ಟಿ.ಸೋನ್ಸ್, ಕುಂದಾಪುರ ಹೆಂಚಿನ ಕಾರ್ಖಾನೆ ಮಾಲೀಕರ ಸಂಘ ಅಧ್ಯಕ್ಷ

'ಈಗ ಬಹುತೇಕ ಹೆಂಚಿನ ಕಾರ್ಖಾನೆಗಳು ಮುಚ್ಚಿವೆ. ಕಾಲದ ಅಗತ್ಯಕ್ಕೆ ಅನುಗುಣವಾಗಿ ಕಾರ್ಖಾನೆಗಳ ಯಾಂತ್ರೀಕರಣ ಮಾಡದಿರುವುದು ಇದಕ್ಕೆ ಕಾರಣ. ಯಾಂತ್ರೀಕರಣಕ್ಕೆ ಒತ್ತು ನೀಡಿದ್ದರಿಂದ ಕುಂದಾಪುರದಲ್ಲಿ 10 ಕಾರ್ಖಾನೆಗಳು ಉಳಿದಿವೆ. ಮಧ್ಯಪ್ರದೇಶ, ಒಡಿಶಾದಲ್ಲೂ ಹೆಂಚು ಉತ್ಪಾದನೆ ಬಹುತೇಕ ಸ್ಥಗಿತವಾಗಿದೆ. ಕೋವಿಡ್‌ಗೆ ಮುಂಚೆ ನೆಲಕಚ್ಚಿದ್ದ ಹೆಂಚಿಗೆ ನಂತರ ಬೇಡಿಕೆ ಕುದುರಿದೆ. ಯಾವುದೇ ಉದ್ದಿಮೆ ಯಶಸ್ವಿಯಾಗಬೇಕಾದರೆ ಉತ್ಪನ್ನದ ಮೊತ್ತದ ಶೇ 25ಕ್ಕಿಂತ ಹೆಚ್ಚು ಪಾಲು ಕಾರ್ಮಿಕರ ಸಂಬಳಕ್ಕೆ ವಿನಿಯೋಗವಾಗಬಾರದು. ಆದರೆ ಹೆಂಚಿನ ಉದ್ದಿಮೆಯಲ್ಲಿ ಉತ್ಪನ್ನದ ಶೇ 60ಕ್ಕೂ ಹೆಚ್ಚು ಮೊತ್ತ ಕಾರ್ಮಿಕರ ಸಂಬಳಕ್ಕೆ ಬಳಕೆಯಾಗುತ್ತದೆ. ಸರ್ಕಾರದ ವಿಶೇಷ ನೆರವಿಲ್ಲದೇ ಈ ಉದ್ದಿಮೆಯನ್ನು ಮುಂದುವರಿಸುವುದು ಕಷ್ಟ' ಎನ್ನುತ್ತಾರೆ ಅವರು.

ಜಿಎಸ್‌ಟಿಯ ಬರೆ: 'ಮೊದಲೇ ನಷ್ಟದ ಹಾದಿ ಹಿಡಿದಿದ್ದ ಹೆಂಚಿನ ಉದ್ದಿಮೆಗೆ ಸರ್ಕಾರ ಜಿಎಸ್‌ಟಿಯ ಬರೆ ಹಾಕಿದೆ. ಆರಂಭದಲ್ಲಿ ಶೇ 5ರಷ್ಟು ಜಿಎಸ್‌ಟಿ ಇತ್ತು. ಮೂರು ವರ್ಷಗಳ ಹಿಂದೆ ಅದನ್ನು ಶೇ 12ಕ್ಕೆ ಹೆಚ್ಚಿಸಲಾಗಿದೆ. ಇದು ಕಾರ್ಖಾನೆಗಳಿಗೆ ಮತ್ತಷ್ಟು ಹೊರೆಯಾಗಿದೆ. ಜಿಎಸ್‌ಟಿಯಿಂದ ವಿನಾಯಿತಿ ನೀಡಿದರೆ ಈ ಉದ್ದಿಮೆ ತಕ್ಕಮಟ್ಟಿಗೆ ಚೇತರಿಸಿಕೊಳ್ಳಲಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರೂ ಸ್ಪಂದನೆ ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ ಕುಂದಾಪುರದಲ್ಲಿರುವ 'ಮಂಗಳೂರು ಟೈಲ್ಸ್' ಫ್ಯಾಕ್ಟರಿಯ ಮಾಲೀಕ ಕೆ.ಸೀತಾರಾಮ ನಕ್ಕಿತ್ತಾಯ.

'ಹೆಂಚು ತಯಾರಿಸುವ ಮಣ್ಣಿಗೆ ಸೀಮೆ ಎಣ್ಣೆಯನ್ನು ಮಿಶ್ರಣ ಮಾಡಬೇಕಾಗುತ್ತದೆ. ಹಿಂದೆ ಸೀಮೆ ಎಣ್ಣೆ ಅಗ್ಗವಾಗಿ ಹಾಗೂ ಯಥೇಚ್ಛ ಸಿಗುತ್ತಿತ್ತು. ಈಗಂತೂ ಕರಾವಳಿಯಲ್ಲಿ ಎಲ್ಲೂ ಸೀಮೆ ಎಣ್ಣೆಯೇ ಸಿಗದ ಸ್ಥಿತಿ ಇದೆ. ಬಿಳಿ ಸೀಮೆ ಎಣ್ಣೆ ಸಿಕ್ಕಿದರೂ ಅದಕ್ಕೆ ಲೀಟರ್‌ಗೆ ₹70 ವರೆಗೂ ದರ ಇದೆ' ಎಂದು ಅವರು ಅಲವತ್ತುಕೊಂಡರು.

ನುರಿತ ಕಾರ್ಮಿಕರ ಕೊರತೆ: 'ಹೆಂಚು ಉದ್ದಿಮೆಗೆ ಕೌಶಲಯುಕ್ತ ಕಾರ್ಮಿಕರು ಬೇಕು. ಆದರೆ ಇತ್ತೀಚೆಗೆ ನುರಿತ ಕಾರ್ಮಿಕರು ಸಿಗುತ್ತಿಲ್ಲ. ಈಗಿನ ತಲೆಮಾರಿನ ಸ್ಥಳೀಯ ಯುವಜನರು ಹೆಂಚಿನ ಕಾರ್ಖಾನೆಗೆ ಕೆಲಸಕ್ಕೆ ಬರಲು ಆಸಕ್ತಿ ತೋರಿಸುತ್ತಿಲ್ಲ. ಹಿರಿಯ ಕಾರ್ಮಿಕರು ನಿವೃತ್ತಿಯಾದ ಬಳಿಕ ಉತ್ತರ ಭಾರತದ ಕೆಲವು ಕಾರ್ಮಿಕರನ್ನು ಕೆಲಸಕ್ಕೆ ಹಾಕಿಕೊಂಡೆವು. ಆದರೆ ಅವರು ಊರಿಗೆ ಹೋದರೆ ಮತ್ತೆ ಕೆಲಸಕ್ಕೆ ಮರಳುತ್ತಾರೆ ಎಂಬ ಖಾತರಿ ಇಲ್ಲ' ಎಂದು ಗೋವರ್ಧನ ಶೆಟ್ಟಿ ತಿಳಿಸಿದರು.

ನಂದಾದೀಪದಂತೆ ಬೆಳಗುತ್ತಿದ್ದ ಕರಾವಳಿಯ ಹೆಂಚು ಉದ್ಯಮ, ನಿಧಾನವಾಗಿ ಆರುವ ಸ್ಥಿತಿ ತಲುಪಿದೆ. ಕಾರ್ಮಿಕ ಸಮಸ್ಯೆ, ಸೀಮೆಎಣ್ಣೆಯ ಅಲಭ್ಯತೆ, ಸಿಗದ ಆವೆಮಣ್ಣು ಮುಂತಾದ ಸಮಸ್ಯೆಗಳಿಗೆ ಪರಿಹಾರ ಸಿಗದಿದ್ದರೆ ಉದ್ಯಮ ಮಾಯವಾಗುವುದಂತು ಖಚಿತ.

ಅಲ್ಪಸಂಖ್ಯಾತರ ತುಷ್ಟೀಕರಣದಲ್ಲಿ ಮುಳುಗಿದ ಸರ್ಕಾರ: ಅಶೋಕ

ಪ್ರಜಾವಾಣಿ ವಾರ್ತೆ

ಆರ್.ಅಶೋಕ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದೂ–ಮುಸ್ಲಿಮರನ್ನು ವಿಭಜಿಸಲು ಹೊರಟಿದ್ದಾರೆ. ಇದಕ್ಕಾಗಿಯೇ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ₹1,000 ಕೋಟಿ ಅನುದಾನ ಘೋಷಿಸಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ₹2,000 ಪರಿಹಾರ ಪಾವತಿಸುವ ಯೋಗ್ಯತೆ ರಾಜ್ಯ ಸರ್ಕಾರಕ್ಕೆ ಇಲ್ಲ. ಆದರೆ, ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿ ಘೋಷಿಸಿ ಲಜ್ಜೆಗೇಡಿಗಳಂತೆ ವರ್ತಿಸುತ್ತಿದ್ದಾರೆ' ಎಂದರು.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅಲ್ಪಸಂಖ್ಯಾತರ ತುಷ್ಟೀಕರಣ ನಿರಂತರವಾಗಿ ನಡೆಯುತ್ತಿದೆ. ಹಿಂದೂಗಳನ್ನು ಎರಡನೇ ದರ್ಜೆ ನಾಗರಿಕರಂತೆ ರಾಜ್ಯ ಸರ್ಕಾರ ನಡೆಸಿಕೊಳ್ಳುತ್ತಿದೆ ಎಂದು ದೂರಿದರು.

'ಸಿದ್ದರಾಮಯ್ಯ ತುಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಲೋಕಸಭಾ ಚುನಾವಣೆಗಾಗಿ ಮುಸ್ಲಿಮರನ್ನು ಓಲೈಸುವ ಕೆಲಸ ಮಾಡುತ್ತಿದ್ದಾರೆ. ಅಭಿವೃದ್ಧಿ ಯೋಜನೆಗಳ ಬಗ್ಗೆ ಆಸಕ್ತಿ ಬಿಟ್ಟು, ಟಿಪ್ಪು ಸುಲ್ತಾನ್ ಸಂಸ್ಕೃತಿ ಹೇರಲು ಹೊರಟಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

'ಅಲ್ಪಸಂಖ್ಯಾತರ ಹೆಸರಿನಲ್ಲೂ ಕೊಳ್ಳೆ'

'ಅಲ್ಪಸಂಖ್ಯಾತ ಕಾಲೋನಿ ಅಭಿವೃದ್ಧಿಗೆ ಸಾವಿರ ಕೋಟಿ ಅನುದಾನದ ಮೀಸಲಿಡುವುದು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಅಲ್ಲ. ಕಮಿಷನ್ ಹೊಡೆಯಲು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

'ದಂಧೆಗೆ ಅನುಕೂಲ ಆಗುತ್ತದೆ ಎನ್ನುವ ಕಾರಣಕ್ಕೆ ಈ ಅನುದಾನದ ನಾಟಕವಷ್ಟೇ. ಅವರಿಗೆ ಪರ್ಸಂಟೇಜ್ ಎಷ್ಟು ಬರುತ್ತೆ ಎಂಬುದು ಜಗಜ್ಜಾಹೀರಾಗಿದೆ. ಅವರನ್ನು ಓಲೈಸಿಕೊಳ್ಳಲು ಹಾಗೂ ಅವರ ಹಿಂದೆ ನಿಂತುಕೊಳ್ಳುವವರ ಸಂತೃಪ್ತಿಗಾಗಿ ಈ ಹಣ ಮೀಸಲಿಟ್ಟಿದ್ದಾರೆಯೇ ಹೊರತು ಸಮುದಾಯದ ಅಭಿವೃದ್ಧಿಗಾಗಿ ಅಲ್ಲ' ಎಂದು ಟೀಕಿಸಿದರು.

'ಕೆಲವರನ್ನು ಖುಷಿಪಡಿಸಲು, ತಾತ್ಕಾಲಿಕವಾಗಿ ಈ ರೀತಿಯ ಘೋಷಣೆ ಮಾಡುತ್ತಾರೆ. ಅದು ಯಾವುದೂ ಜಾರಿಗೆ ಬರುವುದಿಲ್ಲ. ಹಿಜಾಬ್ ವಿಚಾರವಾಗಿ ಮೈಸೂರಿನಲ್ಲಿ ಹೇಳಿಕೆ ನೀಡಿ ವಾಪಸ್ ಪಡೆದರು. ಹುಬ್ಬಳ್ಳಿಯಲ್ಲಿ ಮುಸ್ಲಿಮರಿಗೆ ₹10,000 ಕೋಟಿ ಅನುದಾನ ಘೋಷಿಸಿದರು. ಅವರ ಬಳಿ ಹಣ ಎಲ್ಲಿದೆ? ಅವರ ಹಿಂದೆ ಇರುವವರನ್ನು ಉದ್ಧಾರ ಮಾಡಲು ಹಣ ಕೊಡುತ್ತಿದ್ದಾರೆ ಅಷ್ಟೆ' ಎಂದರು.

ಕೋವಿಡ್: ರಾಜ್ಯದಲ್ಲಿ 200ರ ಗಡಿ ದಾಟಿದ ಹೊಸ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳು ಏರಿಕೆಯಾಗಿದ್ದು, ಶನಿವಾರ 201 ಮಂದಿ ಕೊರೊನಾ ಸೋಂಕಿತರಾಗಿರುವುದು ದೃಢಪಟ್ಟಿದೆ.

24 ಗಂಟೆಗಳಲ್ಲಿ 7,060 ಪರೀಕ್ಷೆಗಳನ್ನು ನಡೆಸಲಾಗಿದೆ. ಶೇ 2.84ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 833ಕ್ಕೆ ಏರಿಕೆಯಾಗಿದೆ. ಈ ಪ್ರಕರಣಗಳಲ್ಲಿ 783 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. 15 ಮಂದಿ ತೀವ್ರ ನಿಗಾ ಘಟಕ ಹಾಗೂ 35 ಮಂದಿ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಂಕಿತರಲ್ಲಿ 60 ಮಂದಿ ಚೇತರಿಸಿಕೊಂಡಿದ್ದಾರೆ.

ಸೋಂಕಿತರಲ್ಲಿ ಮೈಸೂರಿನಲ್ಲಿ 74 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಉಸಿರಾಟ ಸಂಬಂಧಿ ಸಮಸ್ಯೆ ಕಾರಣ ಡಿ.23ರಂದು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು, ಡಿ.28ರಂದು ಮರಣ ಹೊಂದಿದ್ದಾರೆ. ಅವರು ಹೃದಯ ಹಾಗೂ ಶ್ವಾಸಕೋಶ ಸಂಬಂಧಿ ಸಮಸ್ಯೆಗಳನ್ನೂ ಎದುರಿಸುತ್ತಿದ್ದರು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

27 ಜಿಲ್ಲೆಗಳಲ್ಲಿ ಹೊಸದಾಗಿ ಕೋವಿಡ್ ಪ್ರಕರಣಗಳು ದೃಢಪಟ್ಟಿವೆ.

ವಾರ್ಡ್ ಕಾಯ್ದಿರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುವ ಸಾಧ್ಯತೆ ಇರುವುದರಿಂದ ಆಯ್ದ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಾರ್ಡ್ ಹಾಗೂ ಹಾಸಿಗೆಗಳನ್ನು ಕಾಯ್ದಿರಿಸಬೇಕು ಎಂದು ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸೂಚಿಸಿದ್ದಾರೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಅವರು, ಸಚಿವ ಸಂಪುಟ ಉಪಸಮಿತಿಯ ಸಭೆಯ ನಿರ್ದೇಶನದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕಿದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಎಚ್ ಬ್ಲಾಕ್, ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ, ಸಿ.ವಿ. ರಾಮನ್ ಆಸ್ಪತ್ರೆ ಹಾಗೂ ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯಲ್ಲಿ ಪ್ರತ್ಯೇಕ ವಾರ್ಡ್‌ಗಳನ್ನು ಕಾಯ್ದಿರಿಸಬೇಕು ಎಂದು ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ಆಯುಕ್ತರಿಗೆ ತಿಳಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 31-12-1998

● ನೌಕಾಪಡೆ ಮುಖ್ಯಸ್ಥ ಭಾಗವತ್ ಸೇವೆಯಿಂದ ವಜಾ

ನವದೆಹಲಿ, ಡಿ.30(ಪಿಟಿಐ)– ಭಾರತ ರಕ್ಷಣಾ ಸೇವೆಯ ಚರಿತ್ರೆಯಲ್ಲಿಯೇ ಇದೇ ಮೊದಲ ಬಾರಿಗೆ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಜನರಲ್ ವಿಷ್ಣು ಭಾಗವತ್ ಅವರನ್ನು ಸರ್ಕಾರ ಇಂದು ಸೇವೆಯಿಂದ ವಜಾ ಮಾಡಿತು.

ನೌಕಾ ಪಡೆಯ ಉಪಮುಖ್ಯಸ್ಥರ ನೇಮಕ ವಿಷಯದಲ್ಲಿ ಸರ್ಕಾರದೊಂದಿಗೆ ಬಹಿರಂಗ ಸಂಘರ್ಷಕ್ಕೆ ಇಳಿದಿದ್ದ ಭಾಗವತ್ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾ ಮಾಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

50 ವರ್ಷಗಳ ಹಿಂದೆ

ಸೋಮವಾರ, 31-12-1973

● ಇಸ್ರೇಲ್‌ಗೆ ಸಿರಿಯಾ ದಾಳಿ ಭೀತಿ, ಸೈನಿಕರಿಗೆ ಮುನ್ನೆಚ್ಚರಿಕೆ

ಟೆಲ್‌ಅವಿವ್, ಡಿ.30– ಪರಮಾವಧಿ ವಹಿಸಿ ಜಾಗೃತರಾಗಿರಬೇಕೆಂದು ಈಜಿಪ್ಟ್ ಮತ್ತು ಸಿರಿಯಾ ವಲಯಗಳ ತನ್ನ ಸೈನಿಕರಿಗೆ ಇಸ್ರೇಲ್ ಇಂದು ಆಜ್ಞೆ ಮಾಡಿತು.

ಜಿನೀವಾ ಮಾತುಕತೆಗಳನ್ನು ಮುರಿಯುವ ಸಂಚಿನಿಂದ ಸಿರಿಯಾ ಮೇಲೆ ಬೀಳುವ ಸಂಭವವಿದೆಯೆಂದು ಇಸ್ರೇಲಿನ ಮಿಲಿಟರಿ ಮೂಲಗಳು ತಿಳಿಸಿವೆ.

ಈಜಿಪ್ಟ್ ಪಡೆಗಳು ಕೂಡಾ ಮತ್ತೆ ಮತ್ತೆ ಕದನ ವಿರಾಮವನ್ನು ಉಲ್ಲಂಘಿಸುತ್ತಿರುವುದು ಗೊತ್ತಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಡಿಸೆಂಬರ್ 31, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಚತುರ್ಥಿ ಗಂ. 11-56 ನಕ್ಷತ್ರ: ಮಘಾ ಅಹೋರಾತ್ರ ಯೋಗ: ಪ್ರೀತಿ ಗಂ 27-40 ಕರಣ: ಬಾಲವ ಗಂ. 11-56, ಧನು ಮಾಸದ 15 ನೇ ದಿನ,

ಮಳೆನಕ್ಷತ್ರ: ಪೂರ್ವಾಷಾಢ 1. ರಾಹುಕಾಲ : ಬೆಳಿಗ್ಗೆ 09-00 – 10-30

ಸೂರ್ಯೋದಯ : 06-56 ಸೂರ್ಯಾಸ್ತ : 06-10

ಮುಸ್ಲಿಂ ದಿನಾಂಕ : 17 ಜುಮಾದುಸ್ಸಾನಿ

ದಿನ ವಿಶೇಷ : ಕ್ರಿಶ್ಚಿಯನ್ ಹೊಸಾ ವರ್ಷದ ಹಿಂದಿನ ದಿನ ಅದೃಷ್ಟ ಸಂಖ್ಯೆ : 12, 5

ಮೇಷ: ಸೋಮಾರಿತನವೇ ನಿಮಗೆ ಶತ್ರುವಾಗಿ ಪರಿಣಾಮ ಬೀರುವುದು. ಮಕ್ಕಳ ಆಸೆಗೆ ಅಡ್ಡಗಾಲು ಹಾಕಿ ಮನಸ್ಸನ್ನು ನೋವು ಉಂಟು ಮಾಡದಿರಿ. ದೇವಿ ಕೃಪಾಕಟಾಕ್ಷದಿಂದ ಕಾರ್ಯದಲ್ಲಿ ತೊಂದರೆ ಇರುವುದಿಲ್ಲ.

ವೃಷಭ: ಇನ್ನೊಬ್ಬರಿಂದ ಹೇಳಿಸಿಕೊಂಡ ವಿಚಾರವನ್ನು ಅಗೌರವವೆಂದು ಭಾವಿಸಬೇಡಿ. ತಪ್ಪನ್ನು ತಿದ್ದಿಕೊಳ್ಳುವ ಅವಕಾಶ ಸಿಗುತ್ತದೆ. ಮುಂದಿನ ಯೋಜನೆಗಳ ಬಗ್ಗೆ ಈ ದಿನದಿಂದಲೇ ಕಾರ್ಯಾಚರಣೆ ಪ್ರಾರಂಭಿಸುವಿರಿ.

ಮಿಥುನ: ಸೂಕ್ಷ್ಮ ಮನಸ್ಸಿನ ನಿಮಗೆ ಹೆಚ್ಚಿನ ಜವಾಬ್ದಾರಿ ಜೊತೆಗೆ ರಹಸ್ಯ ಭೇದಿಸುವ ಹುದ್ದೆಗೆ ವರ್ಗವಾಗಲಿದೆ. ಸ್ಥಾನ ಬದಲಾವಣೆಯಿಂದ ನೆಮ್ಮದಿಯ ವಾತಾವರಣ. ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ.

ಕರ್ಕಾಟಕ: ವ್ಯವಹಾರಕ್ಕೆ ದೀರ್ಘಕಾಲದಿಂದ ನಿರೀಕ್ಷಿಸುತ್ತಿರುವ ಉತ್ತೇಜನ ದೊರೆಯುತ್ತದೆ. ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ. ಸ್ವ ಸಾಮರ್ಥ್ಯದಿಂದ ಗುರಿ ಸಾಧಿಸಿದ ಹೆಮ್ಮೆ ಲಭಿಸಲಿದೆ.

ಸಿಂಹ: ಸ್ವಂತ ಹೂಡಿಕೆಯಿಂದ ಧನಾರ್ಜನೆಯಲ್ಲಿ ಸಮತೋಲನ ಸಾಧಿಸಬಹುದು. ತಂತ್ರಜ್ಞಾನಕ್ಕೆ ಸಂಬಂಧಿಸಿದ ಉದ್ಯೋಗದಲ್ಲಿ ಹಿನ್ನಡೆಯ ಅನುಭವ ತೋರಿಬರಲಿದೆ. ಕ್ರೀಡಾಪಟುಗಳಿಗೆ ಅದೃಷ್ಟದ ಜಯ ಸಿಗಲಿದೆ.

ಕನ್ಯಾ: ಎತ್ತರದ ಸ್ಥಾನ ತಲುಪಬೇಕೆಂಬ ನಿಮ್ಮ ಮಹತ್ವಾಕಾಂಕ್ಷೆ ಸಾಕಾರವಾಗುವ ಪ್ರಸಂಗ ನಡೆಯಲಿದೆ. ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ. ಹತ್ತಿ ಬೆಳೆಗಾರರಿಗೆ ಉತ್ತಮ ಲಾಭ ಪಡೆಯುವಂತಾಗಲಿದೆ.

ತುಲಾ: ಏಕಕಾಲದಲ್ಲಿ ಸಾಕಷ್ಟು ಕೆಲಸಗಳನ್ನು ಗಮನಿಸಬೇಕಾದ ಅನಿವಾರ್ಯತೆ ಎದುರಾಗುವುದು. ಸಿಹಿ ತಿಂಡಿಗಳ ತಯಾರಕರಿಗೆ ಬೇಡಿಕೆ ಹೆಚ್ಚುವುದು. ಔಷಧಿ ವ್ಯಾಪಾರಿಗಳಿಗೆ ಇಂದು ಅಧಿಕ ಲಾಭ ಉಂಟಾಗುವುದು.

ವೃಶ್ಚಿಕ: ಕೆಲವು ದಿನಗಳಿಂದ ಮುಂದೂಡಿದ್ದ ವಿದೇಶ ಪ್ರಯಾಣವನ್ನು ಮತ್ತೆ ಕೈಗೊಳ್ಳುವ ಬಗ್ಗೆ ಯೋಚನೆ ಬರುವುದು. ವಿರೋಧಿಗಳು ನಿಮ್ಮನ್ನು ಏನೂ ಮಾಡಲಾರರು. ವಸ್ತ್ರ ವ್ಯಾಪಾರಿಗಳಿಗೆ ಈ ದಿನ ಉತ್ತಮ ವ್ಯಾಪಾರ ಇರಲಿದೆ.

ಧನು: ಸ್ನೇಹಿತರೊಂದಿಗಿನ ಪ್ರವಾಸ ಮುಂದೂಡುವುದು ಉತ್ತಮವೆನಿಸಲಿದೆ. ವೃತ್ತಿ ವಿಷಯಗಳು ಮತ್ತು ಹೊಸ ಅವಕಾಶಗಳಿಗೆ ನಿಮ್ಮ ಮುಂದೆ ಸರಿಯಾದ ಹಾದಿ ಇದೆ. ತಂತ್ರಜ್ಞಾನದ ವಿಚಾರದಲ್ಲಿ ಸಿದ್ಧ ಹಸ್ತರಾಗುವಿರಿ.

ಮಕರ: ಕುಟುಂಬದ ಗೊಂದಲವನ್ನು ಪರಿಹರಿಸುವ ಹೊಣೆಗಾರಿಕೆಯನ್ನು ಸ್ವಪ್ರೇರಣೆಯಿಂದ ನೀವು ತೆಗೆದುಕೊಳ್ಳುವುದು ಸರಿಯಲ್ಲ. ನಿಮ್ಮ ಪ್ರಾಮಾಣಿಕತೆಯನ್ನು ದುರುಪಯೋಗಪಡಿಸಿಕೊಳ್ಳುವರು ಜಾಗೃತರಾಗಿರಿ.

ಕುಂಭ: ಕೆಲಸದ ನಿಮಿತ್ತ ದೂರ ಪ್ರಯಾಣ ಉಚಿತವಲ್ಲ, ಅನಿವಾರ್ಯವಾದಲ್ಲಿ ಸ್ನೇಹಿತರೊಂದಿಗೆ ಪ್ರಯಾಣ ಕೈಗೊಳ್ಳಿರಿ. ಕಾರ್ಯ ನಿಮಿತ್ತವಾಗಿ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ ಇರಲಿ.

ಮೀನ: ಸಂಘ ಸಂಸ್ಥೆಯಲ್ಲಿ ನಿಮ್ಮ ಜವಾಬ್ದಾರಿಯೂ ಈ ದಿನ ಹೆಚ್ಚಲಿದೆ. ನಿಮ್ಮಿಂದ ನಡೆಯದೇ ಇರುವ ತಪ್ಪುಗಳ ಅಪವಾದವನ್ನು ನೀವು ಹೊರಬೇಕಾಗಬಹುದು. ಬಣ್ಣ ಮಾರಾಟಗಾರರಿಗೆ ಉತ್ತಮ ವ್ಯಾಪಾರವಿದೆ.

ಪದಬಂಧ 5546

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕನ್ನಡಿಗನು ಧರಿಸಿರುವ ಚಾಳೀಸು (4)
3.ಅನ್ವೇಷಣೆಯನ್ನು ಹೀಗೆನ್ನಿ (4)
5.ಕರುವಿಗೆ ತೋರಿದ ದಯೆ (3)
6.ತೆಳ್ಳನೆಯ ಉದರದವಳು (4)
8.ಗಂಡುಕುರಿ ಇಲ್ಲಿಗೆ ಬಂದಿದೆ (3)
10.ಪೂಜಾ ಸಮಯದಲ್ಲಿ ನೀರು ತುಂಬಿರುವ ಚೆಂಬು (3)
12.ವೃಕ್ಷದ ಹತ್ತಿರವಿರುವ ಹಸಿರು ಮಣಿ (4)
15.ಮನದೊಳಗೇ ಚಿಂತಿಸುವಿಕೆ (3)
16.ನೆಮ್ಮದಿ ಹೀಗೆ ಬಂದಿದೆ (4)
17.ವಿಮಾನದಲ್ಲಿ ತಿಳಿದಿರುವ ವಸ್ತುಸ್ಥಿತಿ! (4)

ಮೇಲಿಂದ ಕೆಳಕ್ಕೆ

1.ಕಡಿಮೆ ಮಾಡಿದ್ದನ್ನು ಹೀಗೆ ಹೇಳಿ (3)
2.ಕರಿಯ ಮರಿ ಬಿದ್ದಿರುವ ಪ್ರಪಾತ (3)
3.ಕಟಕಟೆಯನ್ನೇರುವಾಗ ಉಮ್ಮಳಿಸಿದ ವ್ಯಥೆ (3)
4.ನೆನಪಲ್ಲೇ ಇರುವ ಕಾರಣ (2)
7.ಅಯಸ್ಕಾಂತ ಇಲ್ಲಿದೆ (5)
9.ದುಃಖಾಂತವಾದ ನಾಟಕ (5)
11.ರೋಗ ಇತ್ಯಾದಿಗಳನ್ನು ಗುಣಪಡಿಸುವಿಕೆ (3)
12.ಮನ ಬಿಚ್ಚಿ ಮಾಡಿಕೊಂಡಿರುವ ಅರಿಕೆ (3)
13.ತನಯ ಈ ರೀತಿ ಮಗ್ನ (3)
14.ಸಮೋಸ ಕೊಟ್ಟು ಮಾಡಿದ ವಂಚನೆ! (2)



5545ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಫಲಕ 3.ಅಗಸ 5.ಪಾತರಗಿತ್ತಿ 6.ಶವ 8.ಜನ 9.ಮರ 10.ಕಸ 14.ನಯವಂಚಕ 15.ರಿಕಾಪು 16.ಜಗತಿ

ಮೇಲಿಂದ ಕೆಳಕ್ಕೆ:

1.ಫಲಿತಾಂಶ 2.ಕಪಾಲ 3.ಅತ್ತಿಗೆ 4.ಸನಾತನ 7.ವಠಾರ 8.ಜನಕ 9.ಮಧುಕರಿ 11.ಸರಸ್ವತಿ 12.ಒನಪು 13.ಪಂಕಜ

ಸುಡೊಕು 5931

9			3		8		2	4
8		6				5		
	5		4		6		7	
			1		2		4	
		9		3				
6			8		9	2		5
	8		6		1		9	
7		2		8		3		1
	6		2		3		5	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5930 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಸೂದೆಗಳಿಗೆ ಅನುಮೋದನೆ ಬಾಕಿ: ಕೇರಳ ಸರ್ಕಾರದಿಂದ ಸುಪ್ರೀಂಕೋರ್ಟ್‌ಗೆ ಅರ್ಜಿ

‘ರಾಜ್ಯಪಾಲರ ಅಧಿಕಾರಕ್ಕೆ ನಿಯಮ’

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಗಳ ಶಾಸನಸಭೆಯು ಅಂಗೀಕರಿಸಿದ ಮಸೂದೆಗಳಿಗೆ ಅನುಮೋದನೆ ನೀಡುವ ಸಂಬಂಧ ರಾಜ್ಯಪಾಲರ ಅಧಿಕಾರ ವ್ಯಾಪ್ತಿಯನ್ನು ಕುರಿತು ನಿಯಮಗಳನ್ನು ರೂಪಿಸಬೇಕು ಎಂದು ಕೇರಳ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಈ ಕುರಿತು ಸಲ್ಲಿಸಿರುವ ಅರ್ಜಿಯಲ್ಲಿ, ‘ಶಾಸನಸಭೆಯು ಅಂಗೀಕರಿಸಿದ ಮಸೂದೆಯನ್ನು ಕಾಯ್ದಿಟ್ಟುಕೊಳ್ಳುವ ಅಧಿಕಾರವಾಗಿ, ಅನುಮೋದನೆ ನೀಡದೆ ಸಂದೇಶದೊಂದಿಗೆ ಸರ್ಕಾರಕ್ಕೆ ಹಿಂದಿರುಗಿಸುವ ಕುರಿತಂತೆ ನಿಯಮವನ್ನು ರೂಪಿಸಬೇಕು’ ಎಂದು ಕೋರಿದೆ.

ಕೇರಳ ಸರ್ಕಾರವು ಈ ಹಿಂದೆ ಸಲ್ಲಿಸಿದ್ದ ಅರ್ಜಿಯಲ್ಲಿ, ಎಂಟು ಮಸೂದೆಗಳಿಗೆ ಅನುಮೋದನೆ ನೀಡದ ರಾಜ್ಯಪಾಲರ ನಿಷ್ಕ್ರಿಯತೆಯನ್ನು ಪ್ರಶ್ನಿಸಿತ್ತು. ವಿಳಂಬ ಕುರಿತ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ 2023ರ ನವೆಂಬರ್ 20ರಂದು ನೋಟಿಸ್ ಜಾರಿ ಮಾಡಿತ್ತು.

ನೋಟಿಸ್ ಜಾರಿ ಬಳಿಕ ರಾಜ್ಯಪಾಲರು ಎಂಟರಲ್ಲಿ ಏಳು ಮಸೂದೆಗಳನ್ನು ರಾಷ್ಟ್ರಪತಿ ಅವರ ಪರಿಶೀಲನೆಗೆ ಕಾಯ್ದಿರಿಸಿದ್ದರು. ಮಸೂದೆಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿರಲಿಲ್ಲ ಹಾಗೂ ಅನುಮೋದನೆ ನೀಡದೇ ಬಾಕಿ ಉಳಿಸಲು ಕಾರಣವನ್ನೂ ನೀಡಿರಲಿಲ್ಲ.

ಇವುಗಳಲ್ಲಿ ಮೂರು ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ, ಮೂರಕ್ಕೂ ಹೆಚ್ಚು ಮಸೂದೆಗಳು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಅನುಮೋದನೆಗೆ ಬಾಕಿ ಉಳಿದಿದ್ದವು.

‘ರಾಜ್ಯಪಾಲರು ಸಂವಿಧಾನದ ವಿಧಿ 200ರ ಅನ್ವಯ ತಮಗೆ ದತ್ತವಾಗಿರುವ ಅಧಿಕಾರದನ್ವಯ ಮಸೂದೆಗಳಿಗೆ ಅನುಮೋದನೆಯನ್ನು ನೀಡದೇ ಸುದೀರ್ಘ ಅವಧಿಗೆ ಬಾಕಿ ಉಳಿಸುವ ಕಾರಣದಿಂದ ಹಲವು ರಾಜ್ಯಗಳು ಸಮಸ್ಯೆಯನ್ನು ಎದುರಿಸುತ್ತಿವೆ. ಕೆಲವು ಬಾರಿ ಶಾಸನಸಭೆಗಳು ಪರಿಣಾಮ ಕಾರಿಯಾಗಿ ಕೆಲಸ ಮಾಡಲೂ ಆಗುತ್ತಿಲ್ಲ’ ಎಂದು ಕೇರಳ ಸರ್ಕಾರ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಮುಂದುವರಿದು, ಎಂಟು ಮಸೂದೆಗಳಲ್ಲಿ (ಹಣಕಾಸು ಮಸೂದೆ ಒಳಗೊಂಡು) ರಾಜ್ಯ ಶಾಸನಸಭೆಯು ಆಗಸ್ಟ್–ಸೆಪ್ಟೆಂಬರ್ 2023ರಲ್ಲಿ ಅಂಗೀಕರಿಸಿದೆ. ಇವು ಕೂಡಾ ರಾಜ್ಯಪಾಲರ ಅನುಮೋದನೆಗಾಗಿ ಬಾಕಿ ಉಳಿದಿವೆ. ಹೀಗಾಗಿ, ಸುಪ್ರೀಂ ಕೋರ್ಟ್‌ನ ಅನುಮತಿ ಅಗತ್ಯವಾಗಿದೆ ಎಂದು ಹೇಳಿದೆ.

ರಾಜ್ಯಪಾಲರ ಅಧಿಕಾರ ವ್ಯಾಪ್ತಿಯು ಸೀಮಿತವಾಗಿದೆ. ಅವರು ಮನಸೋ ಇಚ್ಛೆಯಿಂದ ಕಾರ್ಯನಿರ್ವಹಿಸಲಾಗದು. ಸಂವಿಧಾನದ ವಿಧಿ 200ರ ಅನುಸಾರ ಕರ್ತವ್ಯ ನಿಭಾಯಿಸುವಾಗ ಅವರು ಕಾರಣಗಳನ್ನು ನೀಡುವುದು ಅಗತ್ಯವಾಗಿದೆ ಎಂದು ಸರ್ಕಾರ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ತಮಿಳುನಾಡು ಸಿ.ಎಂ, ರಾಜ್ಯಪಾಲರ ಭೇಟಿ

ತಮಿಳುನಾಡು ಸಿ.ಎಂ ಎಂ.ಕೆ.ಸ್ಟಾಲಿನ್ ಅವರು ಶನಿವಾರ ರಾಜಭವನದಲ್ಲಿ ರಾಜ್ಯಪಾಲ ಆರ್.ಎನ್.ರವಿ ಅವರನ್ನು ಭೇಟಿಯಾದರು – ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮತ್ತು ರಾಜ್ಯಪಾಲ ಆರ್.ಎನ್.ರವಿ ಅವರು ರಾಜಭವನದಲ್ಲಿ ಶನಿವಾರ ‘ಸೌಹಾರ್ದ’ವಾಗಿ ಭೇಟಿ ಮಾಡಿದರು. ಬಾಕಿ ಮಸೂದೆಗಳ ಸ್ಥಿತಿಗತಿ ಕುರಿತು ಚರ್ಚಿಸಿದರು.

‘ಪರಸ್ಪರ ಭೇಟಿ ಮಾಡಿ, ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳಿ’ ಎಂದು ಸುಪ್ರೀಂ ಕೋರ್ಟ್ ಈಚೆಗೆ ರಾಜ್ಯಪಾಲರಿಗೆ ನೀಡಿದ್ದ ಸಲಹೆಯ ಹಿನ್ನೆಲೆಯಲ್ಲಿ ಈ ಭೇಟಿ ನಡೆಯಿತು.

‘ಭೇಟಿ ಸೌಹಾರ್ದವಾಗಿತ್ತು. ಅನುಮೋದನೆಗೆ ಬಾಕಿ ಇದ್ದ 10 ಮಸೂದೆಗಳಲ್ಲಿ 9 ಮಸೂದೆಗಳನ್ನು ರಾಷ್ಟ್ರಪತಿಯವರಿಗೆ ಅಂಕಿತಕ್ಕಾಗಿ ಕಳುಹಿಸಲಾಗಿದೆ ಎಂದು ರಾಜ್ಯಪಾಲರು ಒಪ್ಪಿದ್ದಾರೆ’ ಎಂದು ಕಾನೂನು ಸಚಿವ ಎಸ್.ರಘುಪತಿ ತಿಳಿಸಿದರು.

ಮಸೂದೆಗಳಲ್ಲದೆ ಎಐಎಡಿಎಂಕೆ ಇಬ್ಬರು ಮಾಜಿ ಸಚಿವರ ವಿರುದ್ಧ ವಿಚಾರಣೆ ಹಾಗೂ ಮಾಜಿ ಮುಖ್ಯಮಂತ್ರಿ ಸಿ.ಎನ್.ಅಣ್ಣಾದೊರೈ ಜನ್ಮದಿನ ನಿಮಿತ್ತ 112 ಕೈದಿಗಳ ಬಿಡುಗಡೆಗೆ ಅನುಮತಿ ಕೋರಿ ಸರ್ಕಾರ ಪ್ರಸ್ತಾವ ಕಳುಹಿಸಿತ್ತು.

ರಾಜ್ಯಪಾಲರ ಅನುಮೋದನೆ ದೊರೆಯದೆ ಇದು ನನೆಗುದಿಗೆ ಬಿದ್ದಿದ್ದ ವಿಷಯ ಆಡಳಿತರೂಢ ಡಿಎಂಕೆ ಸರ್ಕಾರ ಹಾಗೂ ರಾಜ್ಯಪಾಲರ ನಡುವೆ ಹಲವು ತಿಂಗಳಿಂದ ಸಂಘರ್ಷಕ್ಕೆ ಕಾರಣವಾಗಿದ್ದು, ಅನಿಶ್ಚಿತತೆ ಮೂಡಿತ್ತು.

ತಮಿಳುನಾಡು ಸರ್ಕಾರವು ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಮಸೂದೆಗಳ ಕುರಿತು ರಾಜ್ಯಪಾಲರು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿತ್ತು.

ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಅನಿಶ್ಚಿತತೆ ಕೊನೆಗಾಣಿಸಲು ಮುಖ್ಯಮಂತ್ರಿ ಅವರ ಜೊತೆಗೆ ಸಭೆ ನಡೆಸಬೇಕು ಎಂದು ರಾಜ್ಯಪಾಲರಿಗೆ ತಿಳಿಸಿತ್ತು. ಈ ಹಿನ್ನೆಲೆಯಲ್ಲಿ ಸ್ಟಾಲಿನ್ ಅವರು ಶನಿವಾರ ರಾಜಭವನಕ್ಕೆ ತೆರಳಿದ್ದರು. ಇಬ್ಬರು ಪರಸ್ಪರರನ್ನು ಶಾಲು ಹೊದಿಸಿ ಗೌರವಿಸಿದ್ದು, ಚರ್ಚಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ದೊರೈಮುರುಗನ್, ತಂಗಂತೆನ್ನರಸು, ಆರ್.ಎಸ್.ರಾಜಕಣ್ಣಪ್ಪನ್, ಎಸ್. ರಘುಪತಿ, ಮುಖ್ಯ ಕಾರ್ಯದರ್ಶಿ ಶಿವದಾಸ್ ಮೀನಾ ಅವರು ಉಪಸ್ಥಿತರಿದ್ದರು.

ಕಾದ ಕಬ್ಬಿಣದಿಂದ ಬರೆ: ಹಸುಗೂಸು ಸಾವು

ಶಹಡೋಲ್ (ಪಿಟಿಐ): ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಒಂದೂವರೆ ತಿಂಗಳ ಹಸುಳೆಗೆ ಕಾದ ಕಬ್ಬಿಣದ ಸಲಾಕೆಯಿಂದ ಬರೆ ಹಾಕಿದ್ದರಿಂದ ಮೃತಪಟ್ಟಿದೆ. ಮಧ್ಯ ಪ್ರದೇಶದ ಶಹಡೋಲ್ ಜಿಲ್ಲೆಯಲ್ಲಿ ಈ ಹೃದಯ ವಿದ್ರಾವಕ ಘಟನೆ ನಡೆದಿದೆ. ಉಸಿರಾಟದಿಂದ ಬಳಲುವ ಮಕ್ಕಳಿಗೆ ಬರೆ ಹಾಕುವ ಆಚರಣೆಯ ಭಾಗವಾಗಿ ಬಂಧ್ವಾ ಗ್ರಾಮದಲ್ಲಿ ಮಗುವಿಗೆ ಬರೆ ಹಾಕಲಾಗಿತ್ತು.

ಮಕರವಿಳಕ್ಕು: ಶಬರಿಮಲೆ ಸಜ್ಜು

ಶಬರಿಮಲೆ (ಪಿಟಿಐ): ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ನಡೆಯುವ ಮಕರವಿಳಕ್ಕು ಉತ್ಸವಕ್ಕೆ ಶಬರಿಮಲೆ ಸಜ್ಜಾಗಿದ್ದು, ಶನಿವಾರ ಸಂಜೆ ದೇಗುಲದ ಬಾಗಿಲನ್ನು ತೆರೆಯಲಾಯಿತು.

ಮುಖ್ಯ ಅರ್ಚಕ ಪಿ.ಎನ್.ಮಹೇಶ್ ನಂಬೂದಿರಿ, ತಂತ್ರಿ ಕಂಡರಾರು ಮಹೇಶ್ ಮೋಹನರಾರು ಅವರ ಉಪಸ್ಥಿತಿಯಲ್ಲಿ ದೇವಾಲಯದ ಗರ್ಭಗುಡಿಯ ಬಾಗಿಲನ್ನು ತೆರೆದರು. ಡಿಸೆಂಬರ್ 27ರಂದು ಮಂಡಲ ಪೂಜೆ ಬಳಿಕ ದೇಗುಲದ ಬಾಗಿಲನ್ನು ಮುಚ್ಚಲಾಗಿತ್ತು.

ಜ.15ಕ್ಕೆ ನಡೆಯುವ ಮಕರವಿಳಕ್ಕು ಅಂಗವಾಗಿ ‘ಪ್ರಸಾದ ಶುದ್ಧ ಕ್ರಿಯೆ’ ಮತ್ತು ‘ಬಿಂಬ ಶುದ್ಧ ಕ್ರಿಯೆ’ ಮೊದಲಾದ ಧಾರ್ಮಿಕ ವಿಧಿಗಳು ಜನವರಿ 13 ಮತ್ತು 14ರಂದು ನಡೆಯಲಿವೆ ಎಂದು ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಹೇಳಿಕೆಯಲ್ಲಿ ತಿಳಿಸಿದೆ.

ಮಕರವಿಳಕ್ಕು ದಿನದಂದು ‘ತಿರುವಾಭರಣ’ ಸ್ವೀಕಾರ, ದೀಪಾರಾಧನೆ ನಡೆಯಲಿದೆ. ಮಕರವಿಳಕ್ಕು ದರ್ಶನದ ಬಳಿಕವೂ ಜನವರಿ 20 ರವರೆಗೆ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶ ನೀಡಲಾಗುವುದು ಎಂದು ಹೇಳಿದೆ.

ಅಂಗವಿಕಲರಿಗೆ ಸೌಲಭ್ಯ: ಕರಡು ಮಾರ್ಗಸೂಚಿ

ನವದೆಹಲಿ (ಪಿಟಿಐ): ರೈಲು ನಿಲ್ದಾಣಗಳಲ್ಲಿ ಮತ್ತು ರೈಲುಗಳಲ್ಲಿ ಅಂಗವಿಕಲರಿಗೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಕರಡು ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಪಠ್ಯದಿಂದ ಧ್ವನಿ (ಟೆಕ್ಸ್ಟ್ ಟು ಸ್ಪೀಚ್) ಮತ್ತು ಬಳಕೆದಾರ ಸ್ನೇಹಿ ಪಿಕ್ಟೊಗ್ರಾಂ (ಚಿತ್ರ ಸಂಕೇತ) ತಂತ್ರಜ್ಞಾನಗಳನ್ನು ಅಳವಡಿಸುವ ಅಗತ್ಯತೆಯನ್ನು ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ. ಪ್ರಸ್ತಾವಿತ ಮಾರ್ಗಸೂಚಿಯ ಕುರಿತು ಸಾರ್ವಜನಿಕರು ಆಕ್ಷೇಪಣೆ ಮತ್ತು ಸಲಹೆಗಳನ್ನು ಜನವರಿ 29ರೊಳಗೆ ಸಲ್ಲಿಸಬಹುದು ಎಂದು ಅಂಗವಿಕಲರ ಸಬಲೀಕರಣ ಇಲಾಖೆ ಹೇಳಿದೆ.

ಅಂಗವಿಕಲರ ಬಳಕೆಗೆ ಅನುಕೂಲವಾಗುವ ವೆಬ್‌ಸೈಟ್‌ನ ಅಗತ್ಯವನ್ನೂ ಒತ್ತಿ ಹೇಳಲಾಗಿದೆ. ಸೌಲಭ್ಯಗಳನ್ನು ತಿಳಿಸುವ ವಿಶೇಷ ಮೊಬೈಲ್ ಆ್ಯಪ್ ಪರಿಚಯಿಸಲಾಗಿದೆ. ಬ್ರೈಲ್ ಲಿಪಿಯ ಸಂಕೇತಗಳನ್ನು ಎಲ್ಲಾ ರೈಲು ನಿಲ್ದಾಣಗಳಲ್ಲೂ ಅಳವಡಿಸುವ ಅಗತ್ಯ ಇದೆ. ಟಿಕೆಟ್ ಕೌಂಟರ್‌ಗಳ ಎತ್ತರವನ್ನು ತಗ್ಗಿಸಬೇಕು, ರೈಲು ನಿಲ್ದಾಣದ ಆಗಮನ ಮತ್ತು ನಿರ್ಗಮನ ದ್ವಾರದ ಬಳಿ ಅಂಗವಿಲರಿಗೆ ಅನುಕೂಲವಾಗುವ ಸಲಕರಣೆ ಗಳನ್ನು ಇರಿಸಬೇಕು ಎಂದೂ ಕರಡು ಮಾರ್ಗಸೂಚಿಯಲ್ಲಿ ಪ್ರಸ್ತಾಪಿಸಲಾಗಿದೆ.

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.

ಸಂಖ್ಯೆ: ಆಇ 02 ಬಿಎಂಬಿ 2023 ದಿನಾಂಕ: 30.12.2023

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: **ಎಫ್.ಡಿ.02 ಬಿಎಂಬಿ 2013, ದಿನಾಂಕ: 24ನೇ ಜನವರಿ 2014** ನಿಬಂಧನೆಯ ಮೇರೆಗೆ ಹೊರಡಿಸಲಾದ **9.41% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024, (9.41% Karnataka SDL 2024) ದಿನಾಂಕ: 29ನೇ ಜನವರಿ 2024 ದಿನಾಂಕವೂ** ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, **ದಿನಾಂಕ: 30ನೇ ಜನವರಿ 2024ರಂದು** ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **30ನೇ ಜನವರಿ 2024ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು: 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ. ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ. ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಅದಾಗ್ಯೂ ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **9.41% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024, (9.41% Karnataka SDL 2024)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

“ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ”

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು. ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/– (ಡಾ. ಪಿ. ಸಿ. ಜಾಫರ್), ಸರ್ಕಾರದ ಕಾರ್ಯದರ್ಶಿ
(ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ

DIPR/CP/RO2797/AAPL/2023-24

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಕವಿಪ್ರನಿನಿ/ಬಿ16/21723/2021–22 ದಿನಾಂಕ: 30.12.2023

ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ದಿನಾಂಕ: 01.02.2022 ರ ಉದ್ಯೋಗ ಪ್ರಕಟಣೆಗನುಗುಣವಾಗಿ ಆಪ್ಟಿಟ್ಯೂಡ್ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇರೆಗೆ **ಸಹಾಯಕ ಇಂಜಿನಿಯರ್**(ಸಿವಿಲ್) (ಕೆ.ಕೆ/ಎನ್.ಕೆ.ಕೆ) ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಕಟ್–ಆಫ್ (Cut-Off) ಅಂಕಗಳೊಂದಿಗೆ ಅಂತರ್ಜಾಲ **https://kptcl.karnataka.gov.in** ನಲ್ಲಿ ಪ್ರಕಟಿಸಲಾಗಿದೆ.

ಸಹಿ/–, ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ–ಪೂರ್ವ)
5ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560 009.

ಸಂಖ್ಯೆ:ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/542/2023–24 ದಿನಾಂಕ: 30–12–2023

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ **ಚುಂಚಘಟ್ಟದ ಆಂಜನೇಯ ಸ್ವಾಮಿ ದೇವಸ್ಥಾನ ಮುಖ್ಯರಸ್ತೆಯಿಂದ ಜೆ.ಪಿ.ನಗರದ ಸಾರಕ್ಕಿ ಕೆರೆ ಏರಿವರೆಗೆ 900 ಮಿಮೀ ವ್ಯಾಸದ ಆರ್.ಸಿ.ಸಿ. ಎನ್.ಪಿ–3 ದರ್ಜೆಯ ಒಳಚರಂಡಿ ಕೊಳವೆ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿಗಾಗಿ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಆಹ್ವಾನಿಸಿದೆ.**

ಟೆಂಡರ್‌ಗೆ ಇಟ್ಟ ಮೊತ್ತ : **ರೂ.302.50 ಲಕ್ಷಗಳು.** ಇಎಂಡಿ: **ರೂ.5.35 ಲಕ್ಷಗಳು.**
ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ವೇಳೆ: **30–01–2024 ರ ಸಂಜೆ 5:30** ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **01–02–2024ರ ಸಂಜೆ 4:00 ಗಂಟೆಗೆ.** ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ತ್ಯಾಜ್ಯ ನೀರು ನಿರ್ವಹಣೆ–ಪೂರ್ವ).

DIPR/CP/AAPL/RO2810/23-24

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ರಾಮನಗರ ಜಿಲ್ಲೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,
ರಾಮನಗರ – 562 159 ದೂರವಾಣಿ : 080–2727 3094,
ಇ–ಮೇಲ್ : dhoramanagaram@gmail.com

ಸಂಖ್ಯೆ : ಎನ್.ಹೆಚ್.ಎಂ/ಆರ್.ಸಿ.ಹೆಚ್/ಡಿ.ಹೆಚ್.ಎಸ್/ವಾಹನ/18/2023–24/ಕರೆ–3
ದಿನಾಂಕ : 29–12–2023

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯುವ ಬಗ್ಗೆ.

2023–24 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಮನಗರ ಜಿಲ್ಲೆಗೆ ವಿವಿಧ ಕಾರ್ಯಕ್ರಮಗಳಿಗೆ **ಚಾಲಕ ಸಹಿತ ಹಳದಿ ಬೋರ್ಡ್‌ನ್ನು ಹೊಂದಿದ ನಾಲ್ಕು ಚಕ್ರದ ವಾಹನಗಳನ್ನು** ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇಲೆ ಪಡೆಯಲು **ಎನ್.ಹೆಚ್.ಎಂ.** ಮಾರ್ಗಸೂಚಿ ಹಾಗೂ ಕೆ.ಪಿ.ಪಿ.ಪಿ. ಕಾಯ್ದೆ 1999 ರ ನಿಯಮಗಳು ಹಾಗೂ ಪ್ರಕಾರ 2000 ರಂತೆ **ದಿನಾಂಕ : 29–12–2023** ರಂದು ನಿಯಮನುಸಾರ ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

ವಿವರಗಳು : 1) ಟೆಂಡರ್ ಪ್ರಾರಂಭದ ದಿನಾಂಕ : 29–12–2023, 2) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ : 06–01–2024 ರಂದು ಸಂಜೆ 5.00 ಗಂಟೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : 08–01–2024 ಬೆಳಿಗ್ಗೆ 11.00 ಗಂಟೆಗೆ, 4) ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ : 11–01–2024 ಮಧ್ಯಾಹ್ನ 2.00 ಗಂಟೆಗೆ, 5) ಅಂದಾಜು ಟೆಂಡರ್ ಮೊತ್ತ : ರೂ. 52,92,000/–, 6) ಇ.ಎಂ.ಡಿ ಮೊತ್ತ : ರೂ. 1,32,200/–.

ಹೆಚ್ಚಿನ ವಿವರಗಳನ್ನು **https://kppp.karnataka.gov.in** ಹಾಗೂ ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

ಸಹಿ/– ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳು,
ರಾಮನಗರ ಜಿಲ್ಲೆ.

ಡಿಐಪಿಆರ್/ರಾಮನಗರ/380/ಮಣಿಪಾಲ್/2023–24

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಬೆಂಗಳೂರು – 560 027
ಸಂಚಾರ (ವಾಣಿಜ್ಯ) ಇಲಾಖೆ

ಸಂ: ಕರಾಸಾ/ಕೇಕ/ಸಂ/ವಾ–3/1888/2023–24 ದಿನಾಂಕ:30.12.2023

ಟೆಂಡರ್ ಪ್ರಕಟಣೆ ಸಂ: KSRTC/TRF/COM/03/2023-24
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿನ 33 ಖಾಲಿ ನಿವೇಶನಗಳಲ್ಲಿ ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ತೆರೆಯುವ ಸಂಬಂಧ ಸರ್ಕಾರಿ ಸ್ವಾಮ್ಯದ ಕಂಪನಿಗಳನ್ನು ಪರವಾನಗಿದಾರರನ್ನಾಗಿ ಆಯ್ಕೆ ಮಾಡಲು ಕ.ರ.ರಾ.ಸಾ. ನಿಗಮ, ಕೇಂದ್ರ ಕಛೇರಿ, ಸಂಚಾರ (ವಾಣಿಜ್ಯ) ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ

ಟೆಂಡರ್ ವಿವರ : 1) ಪ್ರಿ–ಬಿಡ್ ಸಭೆ ದಿನಾಂಕ : **08.01.2024 ರಂದು 15:00 ಗಂಟೆಗೆ.** 2) ಬಿಡ್ ಸಲ್ಲಿಸಲು ಅಂತಿಮ ದಿನಾಂಕ : **06.02.2024 ರ 17:30 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **09.02.2024 ರ 11:00 ಗಂಟೆಗೆ.** 4) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : **14.02.2024 ರ 11:00 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ) – 7760990010, ವಿಭಾಗೀಯ ಸಂಚಾರ ಅಧಿಕಾರಿ (ವಾ) – 7760992737, ಇ–ಪ್ರೊಕ್ಯೂರ್‌ಮೆಂಟ್ ಸೆಲ್ ಸಂಖ್ಯೆ – 080– 46010000 / 68948777, ಇ–ಮೇಲ್ : ctmcom@ksrtc.org, support@ eprochelpdesk.com, ವೆಬ್‌ಸೈಟ್: https://kppp.karnataka. gov.in

ಸಹಿ/–
ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)
ಕೇಂದ್ರ ಕಛೇರಿ, ಶಾಂತಿನಗರ

ವಾಸಾಸಂಇ/ವಾಪ್ರ/ಜೆಎ/2796/2023–24

ನಮೂನೆ ಸಂ. INC-26
[ಕಂಪನಿ(ನೋಂದಣಿ) ನಿಯಮಗಳು, 2014ರ ನಿಯಮ 30ರ ಅನುಸಾರ]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸ್ಥಳಾಂತರಿಸಲು ವೃತ್ತಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವ ಬಗ್ಗೆ,
ಕೇಂದ್ರ ಸರ್ಕಾರದ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ಪ್ರದೇಶ, ಹೈದರಾಬಾದ್ ಇವರ ಸಮ್ಮುಖದಲ್ಲಿ
ಕಂಪನಿಗಳ ಕಾಯಿದೆ, 2013ರ ವಿಭಾಗ 13 ಉಪ-ವಿಭಾಗ (4) ಮತ್ತು ಕಂಪನಿಗಳ (ನೋಂದಣಿ) ನಿಯಮಗಳು, 2014ರ ನಿಯಮ 30ರ ಉಪ-ನಿಯಮ (5)ರ ಷರತ್ತು (ಎ) ಈ ಕುರಿತು,
ಮತ್ತು
ಇಂಟರ್ ಗ್ಯಾಲಕ್ಟರಿ ಫೌಂಡ್ರಿ ಪ್ರೈವೇಟ್ ಲಿಮಿಟೆಡ್ ನೋಂದಾಯಿತ ಕಚೇರಿ, ನಂ.9, ಆಶ್‌ಫೋರ್ಡ್ ಪಾರ್ಕ್‌ವ್ಯೂ, 80 ಅಡಿ ರಸ್ತೆ, ಇಂಡಸ್ಟ್ರಿಯಲ್ ಲೇಔಟ್, ವಾರ್ಡ್ ಸಂಖ್ಯೆ 68, III ಬ್ಲಾಕ್, ಕೋರಮಂಗಲ, ಬೆಂಗಳೂರು – 560034 ಈ ವಿಷಯದಲ್ಲಿ.
–ಅರ್ಜಿದಾರ

ಈ ಸೂಚನೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಗುರುವಾರ ದಿನಾಂಕ 28.12.2023ರಂದು ಜರುಗಿದ ಕಂಪನಿಯ ಷೇರುದಾರರ ದ್ವಿತೀಯ ವಿಶೇಷ ಮಹಾಸಭೆಯಲ್ಲಿ (02/2023-24) ಅಂಗೀಕರಿಸಲಾದ ನಿರ್ಣಯದಂತೆ, ಕಂಪನಿಯು ತನ್ನ ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನಲ್ಲಿ (Memorandum of Association) ಬದಲಾವಣೆ ಕೋರಿ ಕಂಪನಿ ಕಾಯ್ದೆ 2013ರ ವಿಭಾಗ 13ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಿದ್ದು, ಈ ಮೂಲಕ ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ಇವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಕರ್ನಾಟಕ ರಾಜ್ಯ ದಿಂದ ಕಂಪನಿಗಳ ರಿಜಿಸ್ಟ್ರಾರ್, ಶಿಲ್ಲಾಂಗ್ ಇವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಅಸ್ಸಾಂ ರಾಜ್ಯಕ್ಕೆ ಸ್ಥಳಾಂತರಿಸಲು ಅನುವಾಗುವಂತೆ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಈ ಪ್ರಸ್ತಾವಿತ ಬದಲಾವಣೆಯಿಂದ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿರುವ ಯಾವುದೇ ವ್ಯಕ್ತಿಯು, ಆಕ್ಷೇಪಣೆಗಳನ್ನು ತಮ್ಮ ಹಿತಾಸಕ್ತಿಯ ವಿವರಗಳನ್ನು ಒಳಗೊಂಡಿರುವ ಅಫಿಡವಿಟ್‌ನೊಂದಿಗೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪೋರ್ಟಲ್‌ನಲ್ಲಿ (www.mca.gov.in) ‘ಹೂಡಿಕೆದಾರರ ದೂರಿನ ಫಾರಂ’ ಮುಖಾಂತರ ಅಥವಾ ರಿಜಿಸ್ಟರ್ಡ್ ಪೋಸ್ಟ್ ಮುಖಾಂತರ-ಪ್ರಾದೇಶಿಕ ನಿರ್ದೇಶಕರು, ಪ್ರಾದೇಶಿಕ ನಿರ್ದೇಶಕರ ಕಚೇರಿ, ಆಗ್ನೇಯ ಪ್ರದೇಶ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಅನ್ನಾರಂ ಗ್ರಾಮ, ಹಯಾತ್ ನಗರ ಮಂಡಲ್, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್–500068, ತೆಲಂಗಾಣ, (Address: 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad -500068, Telangana) ರವರಿಗೆ ಈ ಸೂಚನೆ ಪ್ರಕಟಿಸಿದ ದಿನಾಂಕದಿಂದ 14 ದಿನಗಳ ಒಳಗಾಗಿ ತಲುಪುವಂತೆ ಹಾಗೂ ಅದರ ಪ್ರತಿಯನ್ನು ಅರ್ಜಿದಾರ ಕಂಪನಿಗೆ ಈ ಕೆಳಕಂಡ ನೋಂದಾಯಿತ ಕಚೇರಿಯ ವಿಳಾಸಕ್ಕೆ ಕಳುಹಿಸತಕ್ಕದ್ದು:

ಇಂಟರ್ ಗ್ಯಾಲಕ್ಟರಿ ಫೌಂಡ್ರಿ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಚೇರಿ: ನಂ.9, ಆಶ್‌ಫೋರ್ಡ್ ಪಾರ್ಕ್ ವ್ಯೂ, 80 ಅಡಿ ರಸ್ತೆ, ಇಂಡಸ್ಟ್ರಿಯಲ್ ಲೇಔಟ್, ವಾರ್ಡ್ ಸಂಖ್ಯೆ 68, III ಬ್ಲಾಕ್, ಕೋರಮಂಗಲ, ಬೆಂಗಳೂರು – 560034

ಇಂಟರ್ ಗ್ಯಾಲಕ್ಟರಿ ಫೌಂಡ್ರಿ ಪ್ರೈವೇಟ್ ಲಿಮಿಟೆಡ್‌ನ
ಪರವಾಗಿ
(ಹರ್ಷ್ ಸೋನಿ)
ನಿರ್ದೇಶಕರು
DIN: 09751267

ದಿನಾಂಕ: 29.12.2023
ಸ್ಥಳ: ಬೆಂಗಳೂರು

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.
ಸಂಖ್ಯೆ:ಎ6/ಬಿಜಿಟಿ/ಟೆಂಡರ್/ಸಿಆರ್–02/2023–24 ದಿನಾಂಕ:28.12.2023

ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2023–24 ನೇ ಸಾಲಿನಲ್ಲಿ 4406-Capital Outlay on Forestry & Wildlife-01-Forestry-101 -Forest Conservation, Development and Regeneration -0 -02-Flexi Fund - 139 MW ಲೆಕ್ಕ ಶೀರ್ಷಿಕೆ ರಡಿ ಶಿವಮೊಗ್ಗ ಅರಣ್ಯ ವಿಭಾಗದ, ವಿವಿಧ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ ಮುಂಗಡ ಕಾಮಗಾರಿ ಮತ್ತು ಸಸಿಗಳನ್ನು ಬೆಳೆಸಿಕೊಂಡು ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023–24 ನೇ ಸಾಲಿಗೆ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೊಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿ:05.01.2024 ರ ಸಂಜೆ 4.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/12/01/23–24/977

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ಸರಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ ಫೋ. ನಂ.220307

ಕ್ರ.ಸಂ:ಜಿ.ಕಾ.ನಿ.ಘ.ಗ/ಎನ್.ಎಫ್.ಡಿ.ಎಸ್/ಲ್ಯಾ.ಇ.ಟೆ/ /2023–24 ದಿನಾಂಕ:29.12.2023

ಅಲ್ಪಾವಧಿ ಟೆಂಡರ ಪ್ರಕಟಣೆ

ಗದಗ ಜಿಲ್ಲೆಯಲ್ಲಿ 2023–24ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯಡಿಯಲ್ಲಿ 15ನೇ ಹಣಕಾಸು ಆಯೋಗದಡಿಯಲ್ಲಿ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಗೂ ಉಪ ಕೇಂದ್ರಗಳಿಗೆ ಅಗತ್ಯವಿರುವ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಖರೀದಿಸಲು ಇ–ಪ್ರಕ್ಯೂರ್‌ಮೆಂಟ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. 27.20 ಲಕ್ಷಗಳು. ಇ.ಎಮ್.ಡಿ ಮೊತ್ತ ರೂ.68,000/– ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ:29.12.2023 ರಿಂದ ದಿನಾಂಕ:**12.01.2024** ರ ಸಂಜೆ 05.30 ಗಂಟೆ ವರೆಗೆ. ಮಾದರಿ ಸಲ್ಲಿಕೆಯ ದಿನಾಂಕ:**16.01.2024** ಬೆಳಿಗ್ಗೆ **11.00** ಗಂಟೆಗೆ. ತಾಂತ್ರಿಕ ಲಕೋಟಿ ತೆರೆಯುವ ದಿನಾಂಕ:**17.01.2024** ರ ಬೆಳಿಗ್ಗೆ **11.00** ಗಂಟೆಗೆ. ಆರ್ಥಿಕ ಲಕೋಟೆ ತೆರೆಯುವ ದಿನಾಂಕ:**20.01.2024** ರ ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿ ಅಥವಾ ಇ–ಪ್ರಕ್ಯೂರ್‌ಮೆಂಟ ವೆಬ್‌ಸೈಟ್ **www.eproc.karnataka.gov.in** ಅಥವಾ **dhogadag@gmail.com/ ncdgadag@gmail.com** ಸಂಪರ್ಕಿಸಬಹುದಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿ
ಜಿಲ್ಲಾ ಸಮೀಕ್ಷಣಾಧಿಕಾರಿಗಳು
ಜಿಲ್ಲಾ ಸಮೀಕ್ಷಣಾ ಘಟಕ, ಗದಗ

ಸಹಿ/– ಅಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ,
ಕಲ್ಯಾಣ ಅಧಿಕಾರಿಗಳು ಗದಗ

ವಾ.ಸಾ.ಇ/ಗದಗ/416/ದೇಶಪಾಂಡೆಪಬ್ಲಿಸಿಟಿ/2023–24

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ/ತಾಂಶಾ/ವಿ&ನೀ/ಟೆಂಡರ್/ಸಿಆರ್/15/2023–24
ದಿನಾಂಕ: 27.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 1999–2000 ಪ್ರಕಾರ ಆಕ್ಟ್ 2000ರ ನಿಯಮದಂತೆ 2023–24ನೇ ಸಾಲಿನ ಮಹಾನಗರಪಾಲಿಕೆ ನಿಧಿಯಡಿ 03 ಸಂಖ್ಯೆ ಸಿವಿಲ್ ಸಂಬಂಧಿತ ಕಾಮಗಾರಿ ಮತ್ತು 01 ಸಂಖ್ಯೆ ಮರುಟೆಂಡರ್ ಮತ್ತು ಐ.ಡಿ.ಎಸ್.ಎಂ.ಟಿ ನಿಧಿಯಡಿ 01 ಸಂಖ್ಯೆ ಸಿವಿಲ್ ಸಂಬಂಧಿತ ಸಂಬಂಧಿತ ಕಾಮಗಾರಿಯನ್ನು https://kppp.karnataka.gov.in/ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಈ ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಬಹುದಾಗಿದೆ.

ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 29–12–2023 ರಿಂದ 05–01–2024 ಸಂಜೆ 4.30 ಗಂಟೆವರೆಗೆ. 2. ಟೆಂಡರ್‌ಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:03–01–2024 ರಂದು ಸಂಜೆ 4.30ಗಂಟೆವರೆಗೆ. 3. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 05–01–2024 ರಂದು ಸಂಜೆ 4.30 ಗಂಟೆವರೆಗೆ. 4. ಟೆಂಡರ್‌ನ ತೆರೆಯುವ ದಿನಾಂಕ: 06–01–2024 ರಂದು ಸಂಜೆ 5.00 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು

DIPR/TUM/402/KSMCA/2023-24

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJMTENDER23–24:2023–24/1835
ದಿನಾಂಕ:27.12.2023

1.ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:07/2023–24
(ಏಕ &ದ್ವಿ–ಲಕೋಟೆ ಪದ್ಧತಿ)
2.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:04/2023–24
(ಏಕ & ದ್ವಿ–ಲಕೋಟೆ ಪದ್ಧತಿ)2ನೇ ಕರೆ
3.ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:06/2023–24
(ದ್ವಿ–ಲಕೋಟೆ ಪದ್ಧತಿ)2ನೇ ಕರೆ
4.ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:08/2023–24
(ದ್ವಿ–ಲಕೋಟೆ ಪದ್ಧತಿ)
(e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆಯ ಮದ್ದೂರು ನಾಗಮಂಗಲ ಮತ್ತು ಮಂಡ್ಯ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.114.90ಲಕ್ಷಗಳು.** ಪೂರ್ವಭಾವಿ ಸಭೆ ದಿನಾಂಕ: **02.01.2024 ಸಮಯ : ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ)** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.01.2024 ಸಂಜೆ:5:00 ಗಂಟೆಗೆ,** ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ:**06.01.2024 ಸಂಜೆ:05:05 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:12.01.2024 ಬೆಳಿಗ್ಗೆ:11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://kppp. karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ:08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು,ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/404/2023–24

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು – 570005,
ದೂರವಾಣಿ/ಫ್ಯಾಕ್ಸ್: 0821–2420624
ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/10/2023–24 ದಿನಾಂಕ:28.12.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ **ರೂ.7.50 ರಿಂದ 25.00** ಲಕ್ಷಗಳ ಅಂದಾಜು ಮೊತ್ತದ ಒಟ್ಟು **05 ಸಂಖ್ಯೆ** ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕ್ರಮ ಸಂಖ್ಯೆ 01 ರಿಂದ 05** ರವರೆಗಿನ ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 30.12.2023** ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು **ದಿನಾಂಕ: 08.01.2024** ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಕ್ರಮವಾಗಿ **ದಿನಾಂಕ: 09.01.2024** ರ ಸಂಜೆ 4.30 ರ ನಂತರ ತೆರೆಯಲಾಗುವುದು.

ಅರ್ಹ ಸಮಾಲೋಚಕರು, ನೋಂದಾಯಿತ ಸಂಸ್ಥೆ ಮತ್ತು ಸಿವಿಲ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http:// KPPP.karnataka.gov.in** ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ **0821–2420624** ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ **www.mudamysore.gov.in** ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/– ಅಧೀಕ್ಷಕ ಅಭಿಯಂತರರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ನಮೂನೆ ಸಂ. INC-26
[ಕಂಪನಿ(ನೋಂದಣಿ) ನಿಯಮಗಳು, 2014ರ ನಿಯಮ 30ರ ಅನುಸಾರ]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸ್ಥಳಾಂತರಿಸಲು ವೃತ್ತಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವ ಬಗ್ಗೆ,
ಕೇಂದ್ರ ಸರ್ಕಾರದ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ಪ್ರದೇಶ, ಹೈದರಾಬಾದ್ ಇವರ ಸಮ್ಮುಖದಲ್ಲಿ,
ಕಂಪನಿಗಳ ಕಾಯಿದೆ, 2013ರ ವಿಭಾಗ 13 ಉಪ-ವಿಭಾಗ (4) ಮತ್ತು ಕಂಪನಿಗಳ (ನೋಂದಣಿ) ನಿಯಮಗಳು, 2014 ರ ನಿಯಮ 30 ರ ಉಪ-ನಿಯಮ (5) ರ ಷರತ್ತು (ಎ) ಈ ಕುರಿತು,
ಮತ್ತು
ಗ್ಯಾರೇಜ್‌ಪ್ರಿನಿಯರ್ಸ್ ಇಂಟರ್ನೆಟ್ ಪ್ರೈವೇಟ್ ಲಿಮಿಟೆಡ್, ನೋಂದಾಯಿತ ಕಚೇರಿ: ಇಂಡಿಕ್ಯೂಬ್ ಆಶ್‌ಫೋರ್ಡ್ ಪಾರ್ಕ್‌ವ್ಯೂ, ಮೊದಲನೇ ಮಹಡಿ, ಮುನ್ಸಿಪಲ್ ನಂ. 9, 80 ಅಡಿ ರಸ್ತೆ, ಇಂಡಸ್ಟ್ರಿಯಲ್ ಲೇಔಟ್, ವಾರ್ಡ್ ಸಂಖ್ಯೆ 68, ಕೋರಮಂಗಲ, 3ನೇ ಬ್ಲಾಕ್, ಬೆಂಗಳೂರು – 560034, ಕರ್ನಾಟಕ, CIN: U72900KA2015PTC080871 ಈ ವಿಷಯದಲ್ಲಿ.
–ಅರ್ಜಿದಾರ

ಈ ಸೂಚನೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬುಧವಾರ, ದಿನಾಂಕ 27.12.2023ರಂದು ಜರುಗಿದ ಕಂಪನಿಯ ಷೇರುದಾರರ ದ್ವಿತೀಯ ವಿಶೇಷ ಮಹಾಸಭೆಯಲ್ಲಿ (02/2023-24) ಅಂಗೀಕರಿಸಲಾದ ನಿರ್ಣಯದಂತೆ, ಕಂಪನಿಯು ತನ್ನ ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನಲ್ಲಿ (Memorandum of Association) ಬದಲಾವಣೆ ಕೋರಿ ಕಂಪನಿ ಕಾಯ್ದೆ 2013ರ ವಿಭಾಗ 13ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಿದ್ದು, ಈ ಮೂಲಕ ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ಇವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಕರ್ನಾಟಕ ರಾಜ್ಯದಿಂದ ಕಂಪನಿಗಳ ರಿಜಿಸ್ಟ್ರಾರ್, ಶಿಲ್ಲಾಂಗ್ ಇವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಅಸ್ಸಾಂ ರಾಜ್ಯಕ್ಕೆ ಸ್ಥಳಾಂತರಿಸಲು ಅನುವಾಗುವಂತೆ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಈ ಪ್ರಸ್ತಾವಿತ ಬದಲಾವಣೆಯಿಂದ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿರುವ ಯಾವುದೇ ವ್ಯಕ್ತಿಯು, ಆಕ್ಷೇಪಣೆಗಳನ್ನು, ತಮ್ಮ ಹಿತಾಸಕ್ತಿಯ ವಿವರಗಳನ್ನು ಒಳಗೊಂಡಿರುವ ಅಫಿಡವಿಟ್‌ನೊಂದಿಗೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪೋರ್ಟಲ್‌ನಲ್ಲಿ (www.mca.gov.in) ‘ಹೂಡಿಕೆದಾರರ ದೂರಿನ ಫಾರಂ’ ಮುಖಾಂತರ ಅಥವಾ ರಿಜಿಸ್ಟರ್ಡ್ ಪೋಸ್ಟ್ ಮುಖಾಂತರ-ಪ್ರಾದೇಶಿಕ ನಿರ್ದೇಶಕರು, ಪ್ರಾದೇಶಿಕ ನಿರ್ದೇಶಕರ ಕಚೇರಿ, ಆಗ್ನೇಯ ಪ್ರದೇಶ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಅನ್ನಾರಂ ಗ್ರಾಮ, ಹಯಾತ್ ನಗರ ಮಂಡಲ್, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ, (Address: 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad-500068, Telangana) ರವರಿಗೆ ಈ ಸೂಚನೆ ಪ್ರಕಟಿಸಿದ ದಿನಾಂಕದಿಂದ 14 ದಿನಗಳ ಒಳಗಾಗಿ ತಲುಪುವಂತೆ ಹಾಗೂ ಅದರ ಪ್ರತಿಯನ್ನು ಅರ್ಜಿದಾರ ಕಂಪನಿಗೆ ಈ ಕೆಳಕಂಡ ನೋಂದಾಯಿತ ಕಚೇರಿಯ ವಿಳಾಸಕ್ಕೆ ಕಳುಹಿಸತಕ್ಕದ್ದು:

ಗ್ಯಾರೇಜ್‌ಪ್ರಿನಿಯರ್ಸ್ ಇಂಟರ್ನೆಟ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಚೇರಿ: ಇಂಡಿಕ್ಯೂಬ್ ಆಶ್‌ಫೋರ್ಡ್, ಪಾರ್ಕ್ ವ್ಯೂ, ಮೊದಲ ಮಹಡಿ, ಮುನ್ಸಿಪಲ್ ನಂ. 9, 80 ಅಡಿ ರಸ್ತೆ, ಇಂಡಸ್ಟ್ರಿಯಲ್ ಲೇಔಟ್, ಕೋರಮಂಗಲ, 3ನೇ ಬ್ಲಾಕ್, ವಾರ್ಡ್ ಸಂಖ್ಯೆ 68, ಬೆಂಗಳೂರು – 560034, ಕರ್ನಾಟಕ

ಗ್ಯಾರೇಜ್‌ಪ್ರಿನಿಯರ್ಸ್ ಇಂಟರ್ನೆಟ್ ಪ್ರೈವೇಟ್ ಲಿಮಿಟೆಡ್‌ನ
ಪರವಾಗಿ
ರಾಜನ್ ಬಜಾಜ್
ವ್ಯವಸ್ಥಾಪಕ ನಿರ್ದೇಶಕರು
DIN: 07197443

ದಿನಾಂಕ: 29.12.2023
ಸ್ಥಳ: ಬೆಂಗಳೂರು

ನಮೂನೆ ಸಂ. INC-26
[ಕಂಪನಿ (ನೋಂದಣಿ) ನಿಯಮಗಳು, 2014ರ ನಿಯಮ 30ರ ಅನುಸಾರ]
ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸ್ಥಳಾಂತರಿಸಲು ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವ ಬಗ್ಗೆ,
ಕೇಂದ್ರ ಸರ್ಕಾರದ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ಪ್ರದೇಶ, ಹೈದರಾಬಾದ್ ಇವರ ಸಮ್ಮುಖದಲ್ಲಿ
ಕಂಪನಿಗಳ ಕಾಯಿದೆ, 2013ರ ವಿಭಾಗ 13 ಉಪ-ವಿಭಾಗ (4) ಮತ್ತು ಕಂಪನಿಗಳ (ನೋಂದಣಿ) ನಿಯಮಗಳು, 2014ರ ನಿಯಮ 30ರ ಉಪ-ನಿಯಮ (5)ರ ಷರತ್ತು (ಎ), ಈ ಕುರಿತು
ಮತ್ತು
ಕ್ವಾಡ್ರಿಲಿಯನ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ನೋಂದಾಯಿತ ಕಚೇರಿ ನಂ.9, ಆಶ್‌ಫೋರ್ಡ್ ಪಾರ್ಕ್‌ವ್ಯೂ, 80 ಅಡಿ ರಸ್ತೆ, ಇಂಡಸ್ಟ್ರಿಯಲ್ ಲೇಔಟ್, III ಬ್ಲಾಕ್ ಕೋರಮಂಗಲ, ವಾರ್ಡ್ ಸಂಖ್ಯೆ 68, ಬೆಂಗಳೂರು – 560034. ಈ ವಿಷಯದಲ್ಲಿ.
–ಅರ್ಜಿದಾರ

ಈ ಸೂಚನೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶುಕ್ರವಾರ ದಿನಾಂಕ 29.12.2023ರಂದು ಜರುಗಿದ ಕಂಪನಿಯ ಷೇರುದಾರರ ನಾಲ್ಕನೇ ವಿಶೇಷ ಮಹಾಸಭೆಯಲ್ಲಿ (04/2023-24) ಅಂಗೀಕರಿಸಲಾದ ನಿರ್ಣಯದಂತೆ, ಕಂಪನಿಯು ತನ್ನ ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನಲ್ಲಿ (Memorandum of Association) ಬದಲಾವಣೆ ಕೋರಿ ಕಂಪನಿ ಕಾಯ್ದೆ 2013ರ ವಿಭಾಗ 13ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಿದ್ದು, ಈ ಮೂಲಕ ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು ಕಂಪನಿಗಳ ರಿಜಿಸ್ಟ್ರಾರ್, ಬೆಂಗಳೂರು ಇವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಕರ್ನಾಟಕ ರಾಜ್ಯದಿಂದ ಕಂಪನಿಗಳ ರಿಜಿಸ್ಟ್ರಾರ್, ಶಿಲ್ಲಾಂಗ್ ಇವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಅಸ್ಸಾಂ ರಾಜ್ಯಕ್ಕೆ ಸ್ಥಳಾಂತರಿಸಲು ಅನುವಾಗುವಂತೆ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಈ ಪ್ರಸ್ತಾವಿತ ಬದಲಾವಣೆಯಿಂದ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿರುವ ಯಾವುದೇ ವ್ಯಕ್ತಿಯು, ಆಕ್ಷೇಪಣೆಗಳನ್ನು ತಮ್ಮ ಹಿತಾಸಕ್ತಿಯ ವಿವರಗಳನ್ನು ಒಳಗೊಂಡಿರುವ ಅಫಿಡವಿಟ್‌ನೊಂದಿಗೆ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪೋರ್ಟಲ್‌ನಲ್ಲಿ (www.mca.gov.in) ‘ಹೂಡಿಕೆದಾರರ ದೂರಿನ ಫಾರಂ’ ಮುಖಾಂತರ ಅಥವಾ ರಿಜಿಸ್ಟರ್ಡ್ ಪೋಸ್ಟ್ ಮುಖಾಂತರ-ಪ್ರಾದೇಶಿಕ ನಿರ್ದೇಶಕರು, ಪ್ರಾದೇಶಿಕ ನಿರ್ದೇಶಕರ ಕಚೇರಿ, ಆಗ್ನೇಯ ಪ್ರದೇಶ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಅನ್ನಾರಂ ಗ್ರಾಮ, ಹಯಾತ್ ನಗರ ಮಂಡಲ್, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ, (Address: 3rd Floor, Corporate Bhavan, Bandlaguda, Nagole, Tattiannaram Village, Hayat Nagar Mandal, Ranga Reddy District, Hyderabad -500068, Telangana) ರವರಿಗೆ ಈ ಸೂಚನೆ ಪ್ರಕಟಿಸಿದ ದಿನಾಂಕದಿಂದ 14 ದಿನಗಳ ಒಳಗಾಗಿ ತಲುಪುವಂತೆ ಹಾಗೂ ಅದರ ಪ್ರತಿಯನ್ನು ಅರ್ಜಿದಾರ ಕಂಪನಿಗೆ ಈ ಕೆಳಕಂಡ ನೋಂದಾಯಿತ ಕಚೇರಿಯ ವಿಳಾಸಕ್ಕೆ ಕಳುಹಿಸತಕ್ಕದ್ದು:

ಕ್ವಾಡ್ರಿಲಿಯನ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಚೇರಿ: ನಂ.9, ಆಶ್‌ಫೋರ್ಡ್, ಪಾರ್ಕ್ ವ್ಯೂ, 80 ಅಡಿ ರಸ್ತೆ, ಇಂಡಸ್ಟ್ರಿಯಲ್ ಲೇಔಟ್, III ಬ್ಲಾಕ್, ಕೋರಮಂಗಲ, ವಾರ್ಡ್ ಸಂಖ್ಯೆ 68, ಬೆಂಗಳೂರು – 560034.

ಕ್ವಾಡ್ರಿಲಿಯನ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್‌ನ
ಪರವಾಗಿ,
(ಮಹಿಮಾ ಗರ್ಗ್)
ಪೂರ್ಣಕಾಲಿಕ ನಿರ್ದೇಶಕರು
DIN: 08386565

ದಿನಾಂಕ: 29.12.2023
ಸ್ಥಳ: ಬೆಂಗಳೂರು

ಪ್ರಜಾವಾಣಿ ಭಾನುವಾರದ ಪುರವಣಿ

ಶೇಕ್ಸ್‌ಪಿಯರ್‌ಗೆ ಬಾಹ್ಯಾಕಾಶ ಯೋಗ

11

ಅಂಚೆಚೀಟಿಗಳಲ್ಲಿ ಕರ್ನಾಟಕಕ್ಕೇಕೆ ತಾರತಮ್ಯ?

ಭಾನುವಾರ, 31 ಡಿಸೆಂಬರ್ 2023

ಕೌದಿ ನೆನಪುಗಳ ಹಾದಿ

ಗದಗ ಜಿಲ್ಲೆಯ ಗಜೇಂದ್ರಗಡದಲ್ಲಿ ಕೌದಿಗಳನ್ನು ಹೊಲಿಯುತ್ತಿರುವ ಮಹಿಳೆಯರು ಪ್ರಜಾವಾಣಿ ಚಿತ್ರ: ಶ್ರೀಶೈಲ ಎಂ. ಕುಂಬಾರ

ರಾಹುಲ ಬೆಳಗಲಿ

> ಮನೆಯ ಯಾರುಯಾರದ್ದೋ ಹಳೆಯ ಬಟ್ಟೆಗಳ ತುಂಡುಗಳ ನೆನಪಿನ 'ಆಲ್ಬಂ' ರೀತಿ ಕಾಣಿಸುವ ಕೌದಿ ನೋಡಲು ಬಣ್ಣಬಣ್ಣ. ಅದನ್ನು ಹೊಲಿಯುವವರ ಸ್ಥಿತಿ ಮಾತ್ರ ಮಂಕಾಗಿದೆ.

ಕೌದಿ ಎಂದರೆ ಬಹುತೇಕ ಜನರಿಗೆ ವಿಶಾಲ ಹೊದಿಕೆ. ಚಳಿಯಲ್ಲಿ ಬೆಚ್ಚಗಾಗಿಸುವ ದಪ್ಪನೆಯ ಬಟ್ಟೆ. ಇದೇ ಗುಂಗಿನಲ್ಲಿ ಗದಗ ಜಿಲ್ಲೆಯ ಗಜೇಂದ್ರಗಡ ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಸುಮ್ಮನೆ ದಿನಪೂರ್ತಿ ಒಂದು ಸುತ್ತು ಹಾಕಿ, ಅಲ್ಲಿ ಯಾರೊಂದಿಗೂ ಮಾತನಾಡಿಸುವ ಗೋಜಿಗೆ ಹೋಗಬೇಡಿ. ಸಂಶೋಧನೆಗೂ ಇಳಿಯಬೇಡಿ. ಆದರೆ, ಕುತೂಹಲ ಮಾತ್ರ ಕಳೆದುಕೊಳ್ಳಬೇಡಿ.

ಮನೆಯ ಎದುರಿಗೆ ದಪ್ಪನೆಯ ಬಟ್ಟೆ ಹಾಸಿಕೊಂಡು, ಸೂಜಿ–ದಾರ ಹಿಡಿದು ಕೂತ ಹೆಣ್ಣುಮಕ್ಕಳ ಎದುರು ನಿಲ್ಲಿ. ಅವರು ಹೊಲಿಯುತ್ತಿರುವುದು ಬರೀ ಹೊದಿಕೆಯಲ್ಲ ಎಂಬುದು ಅರಿವಾಗಲು ಹೆಚ್ಚು ಸಮಯ ಬೇಕಾಗದು. ಅವರ ಮಾತು ಆಲಿಸುತ್ತಾ, ಅವರ ಶ್ರದ್ಧೆ ಕಂಡಾಗ, ಮನದಲ್ಲಿನ ಹಲವು ಪ್ರಶ್ನೆಗಳಿಗೆ–ಸಣ್ಣಪುಟ್ಟ ಗೊಂದಲಗಳಿಗೆ ಒಂದೇ ಸಾಲಿನ ಸ್ಪಷ್ಟ ಉತ್ತರ ಸಿಗುತ್ತದೆ: ಕೌದಿ ಎಂದರೆ ಅಕ್ಷರಶಃ ನೆನಪುಗಳ ಗುಚ್ಛ.

ಗಂಟೆಗಟ್ಟಲೆ ಒಂದೇ ಕಡೆ ಕೂತು ಕೌದಿಗಳನ್ನು ಸಿದ್ಧಪಡಿಸುವ ಮಹಿಳೆಯರ ಬಳಿ ನೀವು ಎಷ್ಟೇ ಹುಡುಕಾಡಿದರೂ ಒಂದು ತುಂಡೂ ಹೊಸ ಬಟ್ಟೆ ಸಿಗದು. ಮೂಟೆಯಲ್ಲಿ ಮುದುಡಿ ಮಾಡಿ ತುಂಬಿಟ್ಟ ಹಳೆಯ ಬಟ್ಟೆಗಳ ರಾಶಿ, ಹರಿದ ಜಮಖಾನ, ಬಣ್ಣ ಎಲ್ಲವೂ ಮಾಸಿ ಹೋಗಿ ಬಳಸಲು ಆಗದ ಶರ್ಟು–ಪ್ಯಾಂಟು, ಹೊಳಪು ಕಳೆದುಕೊಂಡ ಸೀರೆ, ಚೂಡಿದಾರ, ಲುಂಗಿಗಳಿಗೆ ಕೊರತೆ ಇರಲ್ಲ. ಸತ್ವ ಕಳೆದುಕೊಂಡ ಈ ಬಟ್ಟೆಗಳೇ ಕೌದಿಗೆ ಜೀವಾಳ. ನಿಸ್ಸಂಶಯವಾಗಿ ಜೀವಕಳೆ ತರುತ್ತವೆ.

ಎಲ್ಲವನ್ನೂ ಮೇಳೈಸಿಕೊಂಡ ಕೌದಿಯನ್ನು ಹೊದ್ದುಕೊಂಡರೆ, ಕುಟುಂಬ ಸದಸ್ಯರ ನೆನಪುಗಳನ್ನೇ ಸುತ್ತಿಕೊಂಡಂತೆ. ಒಂದು ತುದಿಯಲ್ಲಿ ಅಜ್ಜನ ಪಂಚೆ ದೊರೆತರೆ, ಇನ್ನೊಂದರಲ್ಲಿ ಅಜ್ಜಿಯ ಸೀರೆಯ ಸ್ಪರ್ಶ. ಸಹೋದರ, ಸಹೋದರಿಯರ ಇಲ್ಲವೇ ಸ್ವಂತದ ಹಳೆಯ ಬಟ್ಟೆಗಳೂ ಅಲ್ಲಲ್ಲಿ. ಚಳಿಗಾಲದಲ್ಲಿ ಬೆಚ್ಚನೆಯ ಮತ್ತು ಬೇಸಿಗೆಯಲ್ಲಿ ತಂಪಾದ ಅನುಭೂತಿಯನ್ನು ಕೌದಿ ನೀಡುತ್ತದೆ.

ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ವಾಸಿಸುವ ಮೋಚಿ ಸಮುದಾಯದ ಕುಲಕಸುಬು ಕೌದಿ ಹೊಲಿಯುವುದು. ಇದು ಒಂದು ರೀತಿಯ ವಿಶಿಷ್ಟ ಕಲೆ. ಅನಾದಿ ಕಾಲದಿಂದ ಆ ಸಮುದಾಯದ ಪುರುಷರು ಚರ್ಮಗಾರಿಕೆ ಕೆಲಸ ಮಾಡಿದರೆ, ಮಹಿಳೆಯರು ಕೌದಿ ಹೊಲಿಯುವುದನ್ನೇ ಬದುಕು ಆಗಿಸಿಕೊಂಡರು. ವರ್ಷಗಳು ಕಳೆದಂತೆ ಎಲ್ಲವೂ ಬದಲಾಗಿ, ಜೀವನಶೈಲಿ ಹಲವು ಸ್ವರೂಪಗಳ ಪರಿವರ್ತನೆ ಕಂಡರೂ ಕೌದಿಯ ಸಾಂಗತ್ಯ ಮಾತ್ರ ಕಳಚಿಲ್ಲ.

ಶ್ರಮಜೀವಿ ನಿಂಗಮ್ಮ

ನಿಂಗಮ್ಮ ಸವಣೂರು

ಅರವತ್ತು ವರ್ಷಗಳಿಂದ ಕೌದಿ ಹೊಲಿಯುವುದನ್ನೇ ಕಾಯಕ ಮಾಡಿಕೊಂಡಿರುವ ಗಜೇಂದ್ರಗಡದ ನಿಂಗಮ್ಮ ಸವಣೂರು ಅವರಿಗೆ ಈಗ ವಯಸ್ಸು 76. ಸುಮಾರು 16ನೇ ವಯಸ್ಸಿನಲ್ಲೇ ಕೌದಿಯೊಂದಿಗೆ ನಂಟು ಬೆಸೆದುಕೊಂಡ ಅವರು, ಈಗಲೂ ಸೂಜಿ–ದಾರಕ್ಕೆ ವಿರಾಮ ನೀಡಲು ಬಯಸಲ್ಲ. ಬೆಳಗಿನ ತಿಂಡಿ ಇಲ್ಲವೇ ಮಧ್ಯಾಹ್ನದ ಊಟದ ಬಳಿಕ ನಿದ್ದೆಗೆ ಜಾರುವ ಬದಲು ಅವರು ಬಟ್ಟೆಗಳ ರಾಶಿ ಹಾಕಿ ಕೂತುಬಿಡುತ್ತಾರೆ. ನಂತರ ಒಂದೊಂದೇ ಬಟ್ಟೆಯನ್ನು ಆಯ್ದುಕೊಂಡು ಕೌದಿ ಹೊಲಿಯುವುದರಲ್ಲಿ ಮಗ್ನರಾಗುತ್ತಾರೆ.

ವಿವಿಧ ಬಗೆಯ ಹೊದಿಕೆಗಳನ್ನು ಯಂತ್ರ ಇಲ್ಲವೇ ಹೊಚ್ಚಹೊಸ ಬಟ್ಟೆಗಳನ್ನು ಪೇರಿಸಿ ಸಿದ್ಧಪಡಿಸಬಹುದು. ಆದರೆ, ಕೌದಿ ಹಾಗಲ್ಲ. ಇದಕ್ಕೆ ಮಹಿಳೆಯರ ಶ್ರಮ, ಏಕಾಗ್ರತೆ, ಆಸ್ಥೆ ಅಗತ್ಯ. ಇಂಚು ಇಲ್ಲವೇ ಸೆಂಟಿಮೀಟರ್‌ಗೆ ತಕ್ಕಂತೆ ಹೊಲಿಗೆ ಹಾಕಬೇಕು. ಎಲ್ಲವೂ ಸಡಿಲವಾಗಬಾರದು. ಸ್ವಲ್ಪವೂ ಮುದುಡಿದಂತೆ ಆಗಬಾರದು. ಇದರ ಲೆಕ್ಕದಲ್ಲಿ ಸ್ವಲ್ಪ ಆಚೀಚೆಯಾದರೂ ಹೊಲಿದದ್ದನ್ನು ಮತ್ತೆ ಮತ್ತೆ ಬಿಚ್ಚಬೇಕು. ಮತ್ತೆ ಸರಿಪಡಿಸಬೇಕು. ಪುನಃ ಮೊದಲಿನಿಂದ ಆರಂಭಿಸಬೇಕು.

'ಮೊದಲೆಲ್ಲ ತುಂಡು ಬಟ್ಟೆಗಳನ್ನೆಲ್ಲ ಒಂದು ಕಡೆ ಗುಡ್ಡೆ ಹಾಕಿ ಪಗಡಿ, ಬಾಸಿಂಗ, ತೇರು ಕೌದಿ ಎಂದೆಲ್ಲ ಹೊಲಿಯುತ್ತಿದ್ದೆವು. ದೊಡ್ಡದಾದ ಬಟ್ಟೆಯ ಮೇಲೆ ಅಲ್ಲಲ್ಲಿ ಅಡ್ಡಡ್ಡ, ಉದ್ದುದ್ದ, ಚೌಕ, ದುಂಡನೆಯ ಬಟ್ಟೆಗಳನ್ನು ಇಟ್ಟು ರಂಗೋಲಿ ರೂಪದಲ್ಲಿ ವಿನ್ಯಾಸ ಮಾಡುತ್ತಿದ್ದೆವು. ಆದರೆ, ಈಗ ಅದೆಲ್ಲವನ್ನೂ ಮಾಡುವುದು ಕಷ್ಟ. ತುಂಬಾ ಸಮಯ ಬೇಕು. ತಾಳ್ಮೆ ಕೂಡ. ಅದಕ್ಕೇ ಎರಡು–ಮೂರು ಪದರ ಬಟ್ಟೆಗಳನ್ನು ಹೊಂದಿಸಿಕೊಂಡು ಕೌದಿ ಹೊಲಿಯುತ್ತೇವೆ' ಎಂದು ಹೇಳುವಾಗ ನಿಂಗಮ್ಮ ಸವಣೂರು ಅವರ ಮೊಗದಲ್ಲಿ ಉತ್ಸಾಹವಿತ್ತೇ ಹೊರತು ದಣಿವಿನ ಸುಳಿವು ಕಿಂಚಿತ್ತೂ ಇರಲಿಲ್ಲ. ಲಕ್ಷ್ಮೀದೇವಿ ಡಂಬಳ ಕೂಡ ಇದೇ ಹಾದಿಯಲ್ಲಿ ನಡೆದು ಬಂದವರು.

ಗ್ರಾಮಗಳಿಗೇ ಹೋಗಿ ಕೇಳುವ ಪರಿಸ್ಥಿತಿ

ದಶಕಗಳ ಹಿಂದೆ ಒಂದು ಮೊಳಕ್ಕೆ ನಾಲ್ಕು ಆಣೆ ಇಲ್ಲವೇ ಎಂಟು ಆಣೆಗೆ ಹೊಲಿದುಕೊಡುತ್ತಿದ್ದ ಅವರು ಈಗ ದಿನಪೂರ್ತಿ ದುಡಿದರೂ ಸಿಗುವ ಕೂಲಿ ಕಡಿಮೆ. ಮೊದಲೆಲ್ಲ ಆಯಾ ಗ್ರಾಮದವರೇ ಕೌದಿ ಹೊಲಿಯುವವರ ಮನೆಗೆ ಬಂದು, ಹಳೆ ಬಟ್ಟೆಗಳನ್ನು ಕೊಡುತ್ತಿದ್ದರು. ಆದರೆ, ಈಗ ಇವರೇ ಆಯಾ ಗ್ರಾಮಗಳಿಗೆ ಹೋಗಿ, 'ಕೌದಿ ಹೊಲಿದುಕೊಡುತ್ತೇವೆ. ಹಳೆಯ ಬಟ್ಟೆಗಳ ಕೊಡಿ' ಎಂದು ಕೋರುತ್ತಾರೆ.

ಪರಿಶಿಷ್ಟ ಜಾತಿಯಾದ ಮೋಚಿ ಸಮುದಾಯದವರ ಜನಸಂಖ್ಯೆ ತುಂಬಾ ಕಡಿಮೆ.

12ನೇ ಪುಟಕ್ಕೆ...

ಮೀಮ್ ಕೂಪಕ್ಕೆ ಪಾತಾಳಗರಡಿ

ಸತ್ಯಪ್ರಕಾಶ್ ಎಂ.ಆರ್.

ಇತ್ತೀಚೆಗೆ ಬಿಡುಗಡೆಯಾಗಿ ಇಡೀ ದೇಶದ ಸಾಂಸ್ಕೃತಿಕ ವಲಯವನ್ನು ವಿಭಜಿಸಿರುವ 'ಅನಿಮಲ್' ಚಲನಚಿತ್ರ ಸಮಕಾಲೀನ ಸಮಾಜದ ಹಲವು ವೈರುಧ್ಯಗಳಿಗೆ ಕನ್ನಡಿ ಹಿಡಿದಿದೆ. ಈ ಚಿತ್ರವು ಒಂದೆಡೆ ಗಂಡಸಿನ ವಿಕ್ಷಿಪ್ತತೆ, ವಿಕೃತಿಯನ್ನು ಅನಾವರಣಗೊಳಿಸಿದರೆ, ಮತ್ತೊಂದೆಡೆ ತಂದೆಯ ವೈಫಲ್ಯ, ಹೆಂಡತಿಯ ಆತ್ಮಗೌರವ, ಸಹೋದರ, ಸಹೋದರಿಯರ ನಡುವಿನ ಆತ್ಮೀಯ ಸಂಬಂಧ, ಎಲ್ಲವನ್ನೂ ರಕ್ತದಲ್ಲಿ ಅದ್ದಿ ತೆಗೆದಿದೆ. ಪಶ್ಚಾತ್ತಾಪವಿಲ್ಲದ ತಣ್ಣನೆಯ ಕ್ರೌರ್ಯ, ರಕ್ತದ ಘಾಟು, ಹತ್ಯೆಗಳ ಸರಮಾಲೆ, ಎಲ್ಲವೂ ವಿಚಿತ್ರವಾದ ಸಮತೋಲನ ಸಾಧಿಸಿದ್ದು, ಸಮಗ್ರವಾದ ಸಿನೆಮ್ಯಾಟಿಕ್ ಅನುಭವವನ್ನು ಕಟ್ಟಿಕೊಡುತ್ತದೆ. ಹೀಗಾಗಿ, ಇದನ್ನು ಕೇವಲ ಸ್ತ್ರೀ ವಿರೋಧಿ ಮತ್ತು ಪುರುಷ ಪ್ರಧಾನ ಯಥಾಸ್ಥಿತಿವಾದದ ಚಿತ್ರವೆಂದು ಕಪ್ಪು ಬಿಳುಪಿನ ವಿಶ್ಲೇಷಣೆಗೆ ಸೀಮಿತಗೊಳಿಸಲಾಗುವುದಿಲ್ಲ. ನೈತಿಕ ಮೌಲ್ಯಗಳ ಹೊರೆಯನ್ನು ಪಕ್ಕಕ್ಕಿರಿಸಿ ನಿರ್ದೇಶಕನೊಬ್ಬನ ಕಲಾಕೃತಿಯನ್ನಾಗಿ ನೋಡಿದರೆ 'ಗಾಡ್ ಫಾದರ್', 'ಸ್ಕಾರ್‌ಫೇಸ್'ನಂತಹ ಚಿತ್ರಗಳ ಛಾಯೆ ಎದ್ದು ಕಾಣುತ್ತದೆ. ಮಾರ್ಟಿನ್ ಸ್ಕಾರ್ಸೆಸಿ, ಫ್ರಾನ್ಸಿಸ್ ಫೋರ್ಡ್ ಕೊಪ್ಪೋಲಾ, ಸ್ಟ್ಯಾನ್ಲಿ ಕ್ಯೂಬ್ರಿಕ್‌ರಂತಹ ನಿರ್ದೇಶಕರ ಪ್ರಭಾವ ಕಣ್ಣಿಗೆ ರಾಚುತ್ತದೆ.

ಚಿತ್ರದ ಗುಣಾವಗುಣಗಳು ಏನೇ ಇರಲಿ. ಸಾಮಾಜಿಕ ಜಾಲತಾಣಗಳಲ್ಲಿ, ಸಾವಿರಾರು ಮೀಮ್‌ಗಳಿಗೆ ಸ್ಫೂರ್ತಿಯಾಗಿರುವುದು 'ಅನಿಮಲ್' ಚಿತ್ರದ ನಿಜವಾದ ಜನಪ್ರಿಯತೆಗೆ ಸಾಕ್ಷಿ. ಡಿಜಿಟಲ್ ಜಾನಪದ ಲೋಕದ ನೂರಾರು ಸಾಮಾಜಿಕ ಮಾಧ್ಯಮ ಪ್ರಭಾವಿಗಳು (Social Media Infuencers), ಕಂಟೆಂಟ್ ಕ್ರಿಯೇಟರ್‌ಗಳು 'ಅನಿಮಲ್' ಚಿತ್ರದ ಸಾವಿರಾರು ಮೀಮ್‌ಗಳನ್ನು ಸೃಷ್ಟಿಸಿ ಅಂತರ್ಜಾಲದಲ್ಲಿ ಹರಿಬಿಟ್ಟಿದ್ದಾರೆ. ಚಿತ್ರದಲ್ಲಿ ಬಾಬ್ಬಿ ಡಿಯೋಲ್‌ನನ್ನು ಪರಿಚಯಿಸಲು ಬಳಸಿರುವ ಇರಾನಿ ಜಾನಪದ ಗೀತೆ 'ಜಮಾಲ್ ಕುಡು', ರಣಬೀರ್‌ನನ್ನು ಪರಿಚಯಿಸುವ 'ರೋಜಾ' ಚಿತ್ರದ ಹಾಡುಗಳ ವಯೋಲಿನ್ ವರ್ಷನ್ ಸಾವಿರಾರು ಮೀಮ್‌ಗಳಿಗೆ ಆಹಾರವಾಗಿರುವುದಂತೂ ಸತ್ಯ. ಚಿತ್ರದಲ್ಲಿ ಬಳಕೆಯಾಗಿರುವ 'ರೋಜಾ'ದ ವಯೋಲಿನ್ ಅಳವಡಿಕೆ ಕೂಡ 'ಥ್ರಿಯರಿ' ಎಂಬ ರಾಕ್ ಫ್ಯೂಷನ್ ಬ್ಯಾಂಡ್, ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್‌ಗೆ ಕಾಣಿಕೆಯಾಗಿ ಅರ್ಪಿಸಿದ ಸಂಗೀತದ ಮಿಶ್ರಣ (ಮೆಡ್ಲೆ) ಎಂಬುದನ್ನು ಗಮನಿಸಬೇಕು. ಈ ಮರುಸೃಷ್ಟಿಯ ಬಳಕೆಯನ್ನು ನಿರ್ದೇಶಕ ಸಂದೀಪ್ ರೆಡ್ಡಿ ವಂಗಾ ಸೃಷ್ಟಿಸಿರುವ 'ಸಿನೆಮ್ಯಾಟಿಕ್ ಮೀಮ್' ಎಂದರೆ ತಪ್ಪಾಗಲಾರದು.

> ಕಳೆದ ದಶಕದಿಂದೀಚೆಗೆ ಮೀಮ್‌ಗಳು ವಿಶಿಷ್ಟ ಅಭಿವ್ಯಕ್ತಿ ಮಾಧ್ಯಮವಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಜನಪ್ರಿಯಗೊಂಡಿವೆ. ಈ ಮೀಮ್‌ಗಳು ಜನಪ್ರಿಯ ದೃಶ್ಯವೊಂದರ ದುರ್ಬಲ ಅನುಕರಣೆಯೋ ಅಥವಾ ಸ್ವತಂತ್ರವಾದ ಕಲಾತ್ಮಕ ಅಭಿವ್ಯಕ್ತಿಯೋ?

ಚಿತ್ರದ 'ಅರ್ಜನ್ ವೈಲ್ಲಿ' ಹಾಡಿಗೆ ಕ್ರಿಕೆಟಿಗ ವಿರಾಟ್ ಕೊಹ್ಲಿ ಆಸ್ಟ್ರೇಲಿಯಾದ ಪರ್ತ್‌ನಲ್ಲಿ 2018ರಲ್ಲಿ ಗಳಿಸಿದ 25ನೇ ಶತಕದ ಸೊಗಸಿನಾಟದ ದೃಶ್ಯ ಜೋಡಿಸಿರುವ ಮೀಮ್, ಮುಂಬೈ ಇಂಡಿಯನ್ಸ್ ತಂಡದ ಎಐ ಜನರೇಟೆಡ್ ವಿಡಿಯೊವೊಂದರಲ್ಲಿ ಚಿತ್ರದ ವಿವಿಧ ದೃಶ್ಯಗಳಲ್ಲಿ ರಣಬೀರ್ ಕಪೂರ್ ಬದಲಿಗೆ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್ ಚಹರೆಗಳನ್ನು ಜೋಡಿಸಿ ಆಟಗಾರರನ್ನು ಪರಿಚಯಿಸುವ ಮೀಮ್, ಒಂದಾ ಎರಡಾ? ಹೀಗೆ, ಕಳೆದ ದಶಕದಿಂದೀಚೆಗೆ 'ಉಗ್ರಂ', 'ಕಿರಿಕ್ ಪಾರ್ಟಿ' 'ಕೆಜಿಎಫ್', 'ಬಾಹುಬಲಿ', 'ಕಾಂತಾರ' ಮತ್ತೀಗ 'ಅನಿಮಲ್' ಮತ್ತು 'ಸಲಾರ್'ನಂತಹ ಬ್ಲಾಕ್‌ಬಸ್ಟರ್ ಚಲನಚಿತ್ರಗಳನ್ನಾಧರಿಸಿದ ಮೀಮ್‌ಗಳು ಆಯಾ ಸಂದರ್ಭದಲ್ಲಿ ಮಿಂಚಿ ಮರೆಯಾಗುತ್ತಲಿವೆ.

ಈ ಮೀಮ್‌ಗಳ ವಸ್ತುವಿಷಯ ಜನಪ್ರಿಯ ಚಲನಚಿತ್ರಗಳಿಗೆ ಮಾತ್ರ ಸೀಮಿತವಾಗಿಲ್ಲ. ಕ್ರಿಕೆಟ್, ರಾಜಕಾರಣ, ಟಿವಿ ಧಾರಾವಾಹಿಗಳು, ರಿಯಾಲಿಟಿ ಷೋಗಳು, ವೆಬ್ ಸಿರೀಸ್‌ಗಳ ದೃಶ್ಯಗಳು, ಸಂಗೀತದ ತುಣುಕುಗಳು ಹೀಗೆ ಡಿಜಿಟಲ್ ಕಂಟೆಂಟ್ ಸೃಷ್ಟಿಕರ್ತರಿಗೆ ಎಲ್ಲವೂ ಸಂಭಾವ್ಯ ವಿಷಯಗಳೇ. ಕೆಲವೊಮ್ಮೆ ಮೀಮ್‌ಗಳು ವೈಯಕ್ತಿಕ ವಲಯವನ್ನೂ ಪ್ರವೇಶಿಸುವುದುಂಟು. ಉದಾಹರಣೆಗೆ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯ ವೇಳೆ ಶುಭ್‌ಮನ್ ಗಿಲ್ ಮತ್ತು ಸಾರಾ ತೆಂಡೂಲ್ಕರ್ ನಡುವಿನ ಕಲ್ಪಿತ ಸಂಬಂಧವನ್ನು ಕುರಿತು ಸೃಷ್ಟಿಸಲಾದ ನೂರಾರು ಮೀಮ್‌ಗಳು ಸಾಮಾಜಿಕ ಮಾಧ್ಯಮಗಳಲ್ಲಿ ಜನಪ್ರಿಯವಾಗಿದ್ದವು. ವಿರಾಟ್ ಕೊಹ್ಲಿ 50ನೇ ಶತಕ ಬಾರಿಸಿದಾಗ, 'ವಿರಾಟ್ ದಾಖಲೆ ಮುರಿದ, ಗಿಲ್ ಮಗಳನ್ನು ಗೆದ್ದ' ಎಂದು ಸಚಿನ್ ಅಲವತ್ತುಕೊಳ್ಳುವ ಹಾಸ್ಯಭರಿತ ಮೀಮ್ ವೈರಲ್ ಆಗಿತ್ತು. ಮತ್ತೊಂದು ಮೀಮ್ 'ಹಮ್ ಸಾಥ್ ಸಾಥ್ ಹೈ' ಚಿತ್ರದ 'ಸುನೊ ಜಿ ದುಲ್ಹನ್...' ಹಾಡನ್ನು ಬಳಸಿ ಸಾರಾಗೆ ವಿರಾಟ್-ಅನುಷ್ಕಾ, ರೋಹಿತ್-ರಿತಿಕಾ, ಇಶಾನ್ ಕಿಶನ್ ಮತ್ತು ಕೊನೆಯದಾಗಿ ಗಿಲ್‌ರನ್ನು ಪರಿಚಯಿಸುವ ವಿಡಿಯೊ ಜನಪ್ರಿಯವಾಗಿತ್ತು.

13ನೇ ಪುಟಕ್ಕೆ...

ಕಲಾತ್ಮಕತೆ ಕಳೆದುಕೊಂಡ ಅಭಿವ್ಯಕ್ತಿ

ಜರ್ಮನಿಯ ಸಂಸ್ಕೃತಿ ಚಿಂತಕ ಥಿಯೋಡರ್ ಅಡೋರ್ನೊ ಪಾಪ್ ಸಂಸ್ಕೃತಿಯ ಕೆಡುಕುಗಳ ಬಗ್ಗೆ ವಿಶ್ಲೇಷಿಸುತ್ತಾ, 'ಸಾಂಸ್ಕೃತಿಕ ಉದ್ಯಮಗಳಲ್ಲಿ ಸಾಮೂಹಿಕವಾಗಿ ತಯಾರಾಗುವ ಉತ್ಪನ್ನಗಳು ಕಲಾತ್ಮಕ ಅಥವಾ ಬೌದ್ಧಿಕ ಉದ್ದೇಶಗಳಿಗಿಂತ ಹೆಚ್ಚಾಗಿ ಸಾಮೂಹಿಕ ಮಾರಾಟ ಮತ್ತು ಲಾಭಗಳಿಕೆಯ ಉದ್ದೇಶ ಹೊಂದಿರುತ್ತವೆ. ಹೀಗಾಗಿ ಸಾಮೂಹಿಕ ಮಾರಾಟಕ್ಕೆಂದು ಮರುಸೃಷ್ಟಿಸಲಾಗುವ ಶ್ರೇಷ್ಠ ಪ್ರದರ್ಶನ ಕಲೆಗಳು, ತಮ್ಮ ಮೂಲ ಸತ್ವ ಮತ್ತು ಕಲಾತ್ಮಕತೆಯನ್ನು ಕಳೆದುಕೊಂಡಿರುತ್ತವೆ. ಇವು ಶ್ರೇಷ್ಠ ಕಲಾಭಿವ್ಯಕ್ತಿಯ ದುರ್ಬಲ ಅನುಕರಣೆಗಳಾಗಿ ಮಾತ್ರ ಉಳಿದುಬಿಡುತ್ತವೆ' ಎನ್ನುತ್ತಾನೆ.

ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯೂಟ್ಯೂಬ್‌ನಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಸೃಷ್ಟಿಯಾಗುವ ಬಹುತೇಕ ಮೀಮ್‌ಗಳು ಅಡೋರ್ನೊನ ವಿಶ್ಲೇಷಣೆಗೆ ಪುಷ್ಟಿ ನೀಡುತ್ತವೆ. ಈ ಜನಪ್ರಿಯ ತಾಣಗಳಲ್ಲಿ ರೀಲ್ಸ್, ಶಾರ್ಟ್ಸ್ ಮಾದರಿಯಲ್ಲಿ ಮೀಮ್‌ಗಳನ್ನು ಸೃಷ್ಟಿಸಲು ರೆಡಿಮೇಡ್ ಮಾದರಿಗಳು, ಚಿತ್ರಗಳ ತುಣುಕುಗಳು, ಸಂಗೀತದ ಬಿಟ್‌ಗಳು ಲಭ್ಯವಿರುತ್ತವೆ. ಕೆಲವೊಮ್ಮೆ ಹೊಸದಾಗಿ ಸೃಷ್ಟಿಸುವ ಅವಶ್ಯಕತೆಯೂ ಇರುವುದಿಲ್ಲ. ಆದರೆ ಇಂಥ ಮರುಸೃಷ್ಟಿಯನ್ನಾಧರಿಸಿದ ನೂರಾರು ಕೆಟ್ಟ ಪುನರ್‌ಸೃಷ್ಟಿಗಳಿಂದಾಗಿ ಕೆಲವೊಮ್ಮೆ ಮೀಮ್‌ಗಳನ್ನು ಕ್ಷುಲ್ಲಕ ಅಭಿವ್ಯಕ್ತಿಯೆಂದು ಜರಿಯಬೇಕಾಗಿಬರುತ್ತದೆ. ಇವೆಲ್ಲವನ್ನು ತಮ್ಮ ಮಾರುಕಟ್ಟೆ, ವಾಣಿಜ್ಯ ವ್ಯವಹಾರಗಳ ವಿಸ್ತರಣೆಗೆ ಬಳಸಿಕೊಳ್ಳುವ ಜಾಲತಾಣ ವೇದಿಕೆಗಳ ಬಂಡವಾಳವಾದ ಗೆದ್ದರೆ, ಕಲೆ ಸೋತಿರುತ್ತದೆ.

ಕಡಕೋಳ ಮಡಿವಾಳಪ್ಪನೆಂಬ ಲೋಕದ ಬೆಳಕು

ಮಲ್ಲಿಕಾರ್ಜುನ ಕಡಕೋಳ

ತತ್ವಪದಗಳನ್ನು ಮಹತ್ವದ ಸಾಹಿತ್ಯ ಪ್ರಕಾರ ಎಂದು ಕನ್ನಡ ಸಾಹಿತ್ಯ ಚರಿತ್ರೆಕಾರರು ಗುರುತಿಸಿಲ್ಲ ಎಂಬ ಆರೋಪವಿದೆ. ತತ್ವಪದಗಳ ಅಂತರಂಗದ ಸೂಕ್ಷ್ಮತೆ, ಅನುಭಾವದ ಚೈತನ್ಯ ಅರಿಯುವ ಗೋಜಿಗೆ ಚರಿತ್ರಕಾರರು ಹೋಗಲಿಲ್ಲ. ಅದು 'ಬಹುಮುಖಿ ಕಾವ್ಯಧಾರೆ ಸಂಸ್ಕೃತಿ' ಎಂಬುದನ್ನರಿಯದ ಕಾವ್ಯ ಮೀಮಾಂಸಕರು ಆ ಕಾಲಘಟ್ಟವನ್ನು 'ಕತ್ತಲೆಯುಗ' ಎಂದು ಬೀಸುಗುಟ್ಟಿದರು.

ಅಚ್ಚರಿಯೆಂದರೆ ಈ ಕತ್ತಲೆಯುಗದಲ್ಲೇ ಜನಸಂಸ್ಕೃತಿಯ ಚಳವಳಿಯಂತೆ ಹುಟ್ಟಿ, ಬಾಳಿ - ಬದುಕಿದ್ದೇ ತತ್ವಪದ ಸಾಹಿತ್ಯ. ಪ್ರಾಯಶಃ ಅದೇ ಹಿನ್ನೆಲೆಯಿಂದ ಅಮಾವಾಸ್ಯೆಯ ಕತ್ತಲೆರಾತ್ರಿ ಮತ್ತು ಸತ್ತವರ ಸೂತಕದ ಮನೆಗಳ ಪದಗಳು, ಹೆಣದ ಸಾನಿಧ್ಯ ಏಕತಾರಿ ನಾದದಲಿ ಕೇಳಿ ಬರುವ ನೋವಿನೆಚ್ಚರದ ಅಹೋರಾತ್ರಿ ಭಜನೆ ಪದಗಳು ಹುಟ್ಟಿದವು. ಅವು ತತ್ವಜ್ಞಾನ ಪದಗಳು. ಅಂತೆಯೇ ಅವು ಏಕಕಾಲಕ್ಕೆ ಪಂಡಿತ ಪಾಮರರನ್ನು ಪಾರಮಾರ್ಥದ ಚಿಂತನಶೀಲ ಜಗಕ್ಕೆ ಕರೆದೊಯ್ಯುತ್ತವೆ. ಅವು ಎದೆ ತೋಯಿಸುವ ಪರಿಮಳದ ಲೋಕಜ್ಞಾನ ಜಿಜ್ಞಾಸೆಗಳು. ಬಹುತ್ವದ ಬದುಕಿನ ಅವರದು ಗುರುಮಾರ್ಗ ಪರಂಪರೆ.

ಕರ್ನಾಟಕದಲ್ಲಿ ಎಲ್ಲಾ ಜಾತಿ, ಧರ್ಮಗಳ ಅಜಮಾಸು ಐದುನೂರು ಮಂದಿ ವಿವಿಧ ಭಾಷೆಯ ತತ್ವಪದಕಾರರು ಆಗಿ ಹೋಗಿದ್ದಾರೆ. ಅವರಲ್ಲಿ ಕಡಕೋಳ ಮಡಿವಾಳಪ್ಪನಿಗೆ ವಿಶಿಷ್ಟ ಸ್ಥಾನಮಾನ. ಅನುಭಾವ ಪರಂಪರೆಗೆ ಸೇರಿದ ಮಡಿವಾಳಪ್ಪನನ್ನು ತತ್ವಪದಗಳ ಅಲ್ಲಮನೆಂದೇ ಭಾವಿಸಲಾಗುತ್ತದೆ.

ಆ ಕದಳಿಯ ಸುಲಿದು ಒಳ ಪೊಕ್ಕಲ್ಲದೆ ನಿಜವು ತಿಳಿಯದು/ಆ ನಿಜವು ತಿಳಿದಲ್ಲದೆ ಬಯಲು ಹೋಗದು/ಆ ಬಯಲು ಹೋದಲ್ಲದೆ ನಿರ್ಬಯಲು ತಾನಾಗದು

ಅಲ್ಲಮನ ಆ ಬಯಲು ಬಿತ್ತನೆ ಹೊಳಪಿಸುವ ಮಡಿವಾಳಪ್ಪನ ಇಂತಹ ವಚನಗಳಲ್ಲಿ ಅನುಭಾವಗಮ್ಯ 'ನಿಜಬಯಲು' ಬೆರಗಿನ ಗಹನ ಅನುಸಂಧಾನಗಳಿವೆ. ಆ ಕುರಿತು ಗಂಭೀರ ಅಧ್ಯಯನ, ತರ್ಕ, ಸಂಶೋಧನೆಗಳು ನಡೆಯಬೇಕು. ಹಾಗೆ ನೋಡಿದರೆ ಮಡಿವಾಳಪ್ಪನ ತತ್ವಪದಗಳ ರಾಚನಿಕ ಸ್ವರೂಪ ನೇರ ಮತ್ತು ಸರಳ. ಲೋಕ ಬದುಕಿನ ನಿತ್ಯ ಸಂಗತಿಗಳೇ ತಾತ್ವಿಕ ಭೂಮಿಕೆ ಮತ್ತು ಜವಾರಿತನದ ಉಪಮೆ, ರೂಪಕಗಳಾಗಿ ಪಾತ್ರಗೊಳ್ಳುತ್ತವೆ.

ಅಲ್ಯಾಕ ಹುಡುಕುತಿ/ಇಲ್ಯಾದ ನೋಡ ಮುಕುತಿ

ಹೀಗೆ ಇಹದಲ್ಲೇ ನಿರ್ವಾಣ ಸಾಧ್ಯವೆಂಬ ನಿರ್ವ್ಯಾಜ ಪ್ರೀತಿಯ ಸರಳ ಮೋಕ್ಷಮಾರ್ಗದ ಆಚರಣೆ. ತನ್ಮೂಲಕ ಜಡ್ಡುಗಟ್ಟಿದ ಅಧ್ಯಾತ್ಮ ಮತ್ತು ಶುಷ್ಕ ವೇದಾಂತದ ನಿರಾಕರಣೆ.



ಯಡ್ರಾಮಿ ತಾಲ್ಲೂಕಿನ ಕಡಕೋಳದ ಮಡಿವಾಳೇಶ್ವರ ಜಾತ್ರೆಯ ಸಂಗ್ರಹ ಚಿತ್ರ

ಮಾಡಿ ಉಣ್ಣೋ ಬೇಕಾದಷ್ಟು/ಬೇಡಿ ಉಣ್ಣೋ ನೀಡಿದಷ್ಟು /ಮಾಡಿದವಗ ಮಡಿಗಡಬ/ ಮಾಡದವಗ ಬರೀಲಡಬ

ಮಡಿವಾಳಪ್ಪನ ಈ ತತ್ವಪದ ಬಸವಣ್ಣನ ಕಾಯಕ ಮತ್ತು ದಾಸೋಹ ಸಂಕಲ್ಪಗಳ ಸಂವೇದನೆ. ಹಾಗೆಯೇ ಕಾರ್ಲ್ ಮಾರ್ಕ್ಸ್ ಪ್ರಣೀತ ಶ್ರಮಸಂಸ್ಕೃತಿಯ ದುಡಿಯುವ ಮತ್ತು ದುಡಿದುದಕ್ಕೆ ಹಕ್ಕಿನಿಂದ ಪಡೆದುಣ್ಣುವ ವಿಚಾರಧಾರೆ. ಇದನ್ನು ಕಾರ್ಲ್ ಮಾರ್ಕ್ಸ್ ಪೂರ್ವದಲ್ಲೇ ಮಡಿವಾಳಪ್ಪ ಪ್ರತಿಪಾದಿಸಿದ್ದಾರೆ. ಅಷ್ಟಕ್ಕೂ ಮಡಿವಾಳಪ್ಪ ಅತ್ಯುತ್ತಮ ರೈತನಾಗಿದ್ದ. ನೇಗಿಲುಯೋಗಿ ಮಡಿವಾಳಪ್ಪ ಮಾಡಿದ ಒಕ್ಕಲುತನದ ದ್ಯೋತಕವಾಗಿ ಖುದ್ದು ಅವರೇ ತೋಡಿದ ಬಾವಿ, ತೋಟ ಪಟ್ಟಿ ಇವತ್ತಿಗೂ ಕಡಕೋಳದಲ್ಲಿ ಜೀವಂತಿಕೆ ಉಳಿಸಿಕೊಂಡಿವೆ.

ಪುಣ್ಯದಿಟ್ಟೆಗಾಗಿ ಯಾತ್ರೆ ಮಾಡುವರೋ ನದಿಯೊಳು/ಕಣ್ಣು ಮೂಗು ಬಾಯಿ ಮುಕುಳಿ ತೊಳಕೊಂಬುವರೋ/ಕಲ್ಲು ಮಣ್ಣು ದೇವರೆಂದು ಪೂಜೆ ಮಾಡುವರೋ/ಬಲ್ಲಿದರು ಬಂದರೆ ಕೊಲ್ಲು ಎಂಬುವರೋ

ಇಂತಹ ನೂರಾರು ತತ್ವಪದಗಳನ್ನು ಗಟ್ಟಿ ನೆಲೆಗಟ್ಟಿನಲ್ಲಿ ಕಟ್ಟಿ ಹಾಡಿದವರು ಹದಿನೇಳನೇ ಶತಮಾನದ ಕಡಕೋಳ ಮಡಿವಾಳಪ್ಪ. ಇದು ಅವರ ಬಂಡಾಯಭಾವದ ದನಿಗೆ ಸಾಕ್ಷಿ.

ಆಗಲೇ ತತಮ್ಮ ಗುರುವನ್ನು ಸಹಿತ ಸಾಂಕೇತಿಕವಾಗಿ ಅವರು ಹೀಗೆ ಪ್ರಶ್ನಿಸಿದ್ದರು:

ಕೊಂಬು ಹೊಲೆಯಂದು ಏಕಾಂತ/ಬಿರುದು ನಿಮ್ಮದು ಶ್ರೀ ಮಹಾಂತ ಕೊಂಬು, ಕಹಳೆಗಳನ್ನು ಊದುವವನು ಹೊಲೆಯ. ಆದರೆ ನಿಮಗೇಕೆ ಬಿರುದು ಬಾವಲಿ? ಎನ್ನುವುದು ಇದರರ್ಥ.

11ನೇ ಪುಟಕ್ಕೆ...

ಜನವರಿ 3ರಿಂದ ಜಾತ್ರೆ

ಕಡಕೋಳ ಮಡಿವಾಳಪ್ಪನ ಜಾತ್ರೆ ಜನವರಿ 3 ಹಾಗೂ 4ರಂದು ನಡೆಯಲಿದೆ. ಇದು ಸಾಧು ಸಂತರ ತತ್ವಪದಗಳ ಸತ್ಸಂಗ. ವಾರವೊಪ್ಪತ್ತು ಗವಿ ಭೀಮಾಶಂಕರ ಪೌಳಿಯ ತುಂಬಾ ಮಹಾರಾಷ್ಟ್ರ, ಆಂಧ್ರ, ತೆಲಂಗಾಣದ ಜಟಾಧಾರಿ ಸಾಧುಗಳ ಸಂದೋಹ. ಗವಿಯ ಮುಂದಿನ ನಿಗಿ ನಿಗಿ ಕೆಂಡದ ಧುನಿಯ ಸುತ್ತಲೂ ಸಿದ್ಧರ ಸಿದ್ಧಪತ್ರಿ ಮತ್ತು ಜ್ಯೋತಿಯ ಘಮಲು. ದಮಡಿ, ಚಳ್ಳಮ, ಏಕತಾರಿಗಳ ನಾದ, ಸಂವಾದ. ತರಹೇವಾರಿ ಜೈಕಾರಗಳ ಸಮಾರೋಹ. ಇತ್ತ ಮಠದ ಆವರಣ ದಲ್ಲಿ ದಲಿತ, ಮುಸ್ಲಿಮರಾದಿಯಾಗಿ ಎಲ್ಲಾ ಜಾತಿಯವರು ಸೇರಿ ತಯಾರಿಸುವ 'ಕಜ್ಜ ಭಜ್ಜಿ'ಯ ಮಹಾಪ್ರಸಾದ. ಬೇವಿನ ಸೊಪ್ಪು ಸೇರಿದಂತೆ ಸಕಲೆಂಟು ಬಗೆಯ ಸೊಪ್ಪು, ಕಾಯಿಪಲ್ಯ ಮತ್ತು ಸಿರಿಧಾನ್ಯಗಳನ್ನು ಸೇರಿಸಿ ಮಣಗಟ್ಟಲೇ ಕುದಿಯುವ ಕಡಾಯಿಗಳಲ್ಲಿ ತಯಾರಿಸುವ ಅನನ್ಯ ರುಚಿಕಟ್ಟಿನ ಪೌಷ್ಟಿಕಾಂಶದ ವ್ಯಂಜನವೇ ಭಜ್ಜಿ. ಖಾಂಡದ ಸಂಜೆ, ಸಜ್ಜೆ ಮತ್ತು ಜೋಳದ ರೊಟ್ಟಿಗಳೊಂದಿಗೆ ಭಜ್ಜಿಯ ಸಾಂಗತ್ಯ. ಸಹಸ್ರಾರು ಜನ ಸೇರುವ ಅಪರೂಪದ ಸಮೂಹಪಂಕ್ತಿ ಭೋಜನ. ಇದೆಲ್ಲವೂ ಊರ ಮುಂದಲ ಹಿರೇಹಳ್ಳದ ನೀರನೆರಳ ಸಲಿಲಧಾರೆ.

ಶೇಕ್ಸ್‌ಪಿಯರ್‌ಗೆ ಬಾಹ್ಯಾಕಾಶ ಯೋಗ

ಗುರುರಾಜ್ ಎಸ್. ದಾವಣಗೆರೆ

ಆಕೆ ಕಾಲೇಜಿನಲ್ಲಿ ಓದುತ್ತಿದ್ದಾಗ ಶೇಕ್ಸ್‌ಪಿಯರ್‌ನ ನಾಟಕಗಳಿಂದ ತುಂಬಾ ಪ್ರಭಾವಿತಳಾಗಿದ್ದಳು. ಬೀಳ್ಕೊಡುಗೆ ಸಮಾರಂಭದ ದಿನ ಆಡಿದ 'ರೋಮಿಯೋ ಜೂಲಿಯೆಟ್' ನಾಟಕದಲ್ಲಿ ಜೂಲಿಯೆಟ್ಟಳ ಪಾತ್ರ ಮಾಡಿದ್ದಳು. ನಾಟಕ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿತ್ತು. ಮರುದಿನ ಕಾಲೇಜಿನ ನೋಟಿಸ್ ಬೋರ್ಡಿನಲ್ಲಿ ಕೈಯಲ್ಲಿ ಬರೆದ ಅವಳ ಚಿತ್ರದ ಜೊತೆ 'ಕ್ಯಾಂಪಸ್ ಜೂಲಿಯೆಟ್' ಎಂಬ ಅಡಿಬರಹವಿದ್ದ ಪೋಸ್ಟರ್ ರಾರಾಜಿಸುತ್ತಿತ್ತು. ರಾತ್ರೋರಾತ್ರಿ ಜನಪ್ರಿಯಳಾಗಿದ್ದ ಹುಡುಗಿ, 'ಶೇಕ್ಸ್‌ಪಿಯರ್‌ನಿಂದಾಗಿ ಇಷ್ಟೊಂದು ಖ್ಯಾತಿ ಸಿಕ್ಕಿದೆ, ಆತನಿಗೆ ನನ್ನ ಉಪಕಾರ ಸಲ್ಲಿಸುವುದು ಹೇಗೆ?' ಎಂದು ಅಪ್ಪನನ್ನು ಕೇಳಿದಳು. 'ಮಗಳೇ, ಜನ ತಮಗೆ ಬೇಕಾದ ಖ್ಯಾತಿ, ಪದವಿ ಸಿಕ್ಕ ಸಂತಸಕ್ಕೆ ಪಾರಿವಾಳ, ಪಟಾಕಿ, ಗಾಳಿಪಟ ಹಾರಿಸುತ್ತಾರೆ, ಕೆಲವರು ಬಣ್ಣದ ಬಲೂನು ಹಾರಿಬಿಡುತ್ತಾರೆ. ನೀನೂ ಹಾಗೆಯೇ ಮಾಡು' ಎಂದ.

'ಬರೀ ಬಲೂನು ಏಕೆ? ನನಗೆ ಪ್ರಸಿದ್ಧಿ ತಂದು ಕೊಟ್ಟ ನಾಟಕಕಾರನ ಚಿತ್ರವನ್ನೇ ಆಕಾಶಕ್ಕೆ ಹಾರಿಬಿಡುತ್ತೇನೆ' ಎಂದು ನಿರ್ಧರಿಸಿದ ಹುಡುಗಿ ಶೇಕ್ಸ್‌ಪಿಯರ್‌ನ ಚಿತ್ರಕ್ಕೆ ಬಣ್ಣದ ಬಲೂನು ಕಟ್ಟಿ ದಿಗಂತದ ಅಂಚಿಗೆ ಹಾರಿಬಿಟ್ಟಳು.

ನಾನ್ನೂರು ವರ್ಷಗಳ ಹಿಂದೆ ಮಹಾನ್ ನಾಟಕಕಾರನ ನಾಟಕಗಳ ಸಂಗ್ರಹ ಪ್ರಕಟವಾಗಿತ್ತು (1623ರ ನವೆಂಬರ್ 8). ಶೇಕ್ಸ್‌ಪಿಯರ್ ಮರಣಿಸಿದ ಏಳು ವರ್ಷಗಳ ನಂತರ ಆತನ ಸ್ನೇಹಿತರೆಲ್ಲ ಸೇರಿದರು. ಶೇಕ್ಸ್‌ಪಿಯರ್ ಬರೆದ ಹಾಸ್ಯ, ದುಃಖಾಂತ್ಯ, ಇತಿಹಾಸ ಆಧರಿತ 37 ನಾಟಕಗಳ ಪೈಕಿ 36 ಅನ್ನು ಸಂಕಲಿಸಿ ಒಂಬೈನೂರು ಪುಟಗಳ 750 ಪ್ರತಿಗಳನ್ನು ಪ್ರಕಟಿಸಿದ್ದರು. ಇದರ ಸವಿನೆನಪು ಮತ್ತು ನಾಟಕಕಾರನ ಗೌರವಾರ್ಥವಾಗಿ ಶೇಕ್ಸ್‌ಪಿಯರ್ ಚಿತ್ರವಿರುವ ಪುಸ್ತಕದ ಮೊದಲ ಒಳಪುಟ ಮತ್ತು 'ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ಸ್' ನಾಟಕದಲ್ಲಿ ನಾಯಕ ಮಾಡುವ ಭಾಷಣದ ಸಾಲುಗಳಿರುವ ಪುಟವನ್ನು ಬಿಸಿ ಹವೆಯ ಬಲೂನುಗಳಲ್ಲಿಟ್ಟು ಭೂಮಿಯ ವಾತಾವರಣದ ಅಂಚಿನವರೆಗೂ ಹಾರಿಸಲಾಗಿದೆ. ಇದೇ 16 ನಿಮಿಷಗಳ ಕಿರುಚಿತ್ರವಾಗಿಯೂ ರೂಪುಗೊಂಡಿದೆ.

ಇನ್ವರ್ಸ್ ಫಿಲ್ಮ್ಸ್ ಡಾಕ್ಯುಮೆಂಟರಿಯಲ್ಲಿನ ಚಿತ್ರಿಕೆ



ಶೇಕ್ಸ್‌ಪಿಯರನ ಮೊದಲ ಫೋಲಿಯೊ

> ವಿಲಿಯಂ ಶೇಕ್ಸ್‌ಪಿಯರ್ ಸದಾಕಾಲವೂ ಸಹೃದಯರ ಬದುಕಿನಲ್ಲಿ ಪ್ರವಹಿಸುತ್ತಿರುತ್ತಾರೆ. ಅವರ ಚಿತ್ರ ಹೊತ್ತ ಬಲೂನು ಅಂತರಿಕ್ಷದಲ್ಲಿ ತೇಲುತ್ತಿದ್ದರೆ, ಅವರನ್ನು ಕುರಿತ ಕಿರುಚಿತ್ರಗಳು ಸಮಕಾಲೀನ ಅನುಸಂಧಾನಕ್ಕೂ ಸಾಕ್ಷಿಯಾಗಿವೆ.

ನೆನಕೆ

ಏನಿದರ ವಿಶೇಷ?

ಬ್ರಿಟಿಷ್ ಚಲನಚಿತ್ರ ನಿರ್ಮಾಪಕ ಜಾಕ್‌ಜೆರ್ಸ್ ತನ್ನ ಕಿರು ಚಲನಚಿತ್ರಗಳಿಗೆ ಸಮಕಾಲೀನ ವಿಷಯಗಳನ್ನು ಆಯ್ದುಕೊಳ್ಳಲು ನಿರ್ಧರಿಸಿದಾಗ ಜೇಮ್ಸ್ ವೆಬ್ ಟೆಲಿಸ್ಕೋಪಿನ ಚಮತ್ಕಾರಿ ಚಿತ್ರಗಳು, ಭಾರತದ ಇತ್ತೀಚಿನ ಚಂದ್ರ, ಸೂರ್ಯಯಾನಗಳ ಬಾಹ್ಯಾಕಾಶ ವಿಜ್ಞಾನ ಸಾಧನೆ, ಕೃತಕ ಬುದ್ಧಿಮತ್ತೆ, ಕೋವಿಡ್ ಉಪಟಳ, ರಷ್ಯಾ – ಉಕ್ರೇನ್ ಯುದ್ಧ ಇತ್ಯಾದಿ ವಿಷಯಗಳು ಆತನ ಮನಸ್ಸು ತುಂಬಿದವು. ಇದನ್ನೇ ಹಿನ್ನೆಲೆಯಾಗಿಟ್ಟುಕೊಂಡು ಮಹಾನ್ ನಾಟಕಕಾರನಿಗೆ ಗೌರವ ಸಲ್ಲಿಸಿದರೆ ಹೇಗೆ? ಎಂಬ ಯೋಚನೆಯನ್ನು ಚಿತ್ರತಂಡಕ್ಕೆ ಹೇಳಿದಾಗ, 'ಹೌದಲ್ಲ, ಇದು ತುಂಬಾ ವಿಶೇಷವಾಗಿದೆ, ಮಾಡಿಯೇ ಬಿಡೋಣ' ಎಂದರು.

ಶೇಕ್ಸ್‌ಪಿಯರ್ ನಾಟಕಗಳೆಲ್ಲ ಜೀವನದ ಪ್ರತಿಬಿಂಬಗಳೇ. ಮೊದಲ ಪುಸ್ತಕ ಪ್ರಕಟವಾದಾಗ, ಯೂರೋಪಿನಲ್ಲಿ ಪ್ಲೇಗ್ ಸಾಂಕ್ರಾಮಿಕ ತಾಂಡವವಾಡುತ್ತಿತ್ತು. ಜನ ಅಟ್ಲಾಂಟಿಕ್ ಸಾಗರ ದಾಟಿ ಉತ್ತರ ಅಮೆರಿಕದ ಕಡೆ ವಲಸೆ ಹೊರಟಿದ್ದರು. ಅಂದಿನ ದಿನಗಳಲ್ಲಿದ್ದ ಮಾರಕ ಪಿಡುಗು, ಇಮಿಗ್ರೇಶನ್‌ನ ಸಮಸ್ಯೆ, ಸಾಮಾಜಿಕ ಬಿಕ್ಕಟ್ಟು, ಪ್ರಭುತ್ವವನ್ನು ಪ್ರಶ್ನಿಸುವ ಗುಣ ಈಗಲೂ ಹೊಸ ರೂಪದಲ್ಲಿ ಮತ್ತೆ ಮತ್ತೆ ಮುನ್ನೆಲೆಗೆ ಬರುತ್ತಿವೆ. ನಾಲ್ಕು ಶತಮಾನಗಳ ಹಿಂದೆ ಇದ್ದಂತಹ ವಿಷಮ ಪರಿಸ್ಥಿತಿ ಈಗಲೂ ಇದೆ. ತಾನು ತಯಾರಿಸಿರುವ ಆರು ಕಿರುಚಿತ್ರಗಳು ಆರು ವೈವಿಧ್ಯಮಯ ವಿಷಯಗಳನ್ನೊಳಗೊಂಡಿದ್ದರೂ ಅವೆಲ್ಲ ಶೇಕ್ಸ್‌ಪಿಯರ್‌ನ ನಾಟಕ ಮತ್ತು ಪದ್ಯಗಳನ್ನೇ ಪ್ರತಿಬಿಂಬಿಸುತ್ತವೆ ಎಂಬುದು ಜೆರ್ಸ್‌ನ ಮಾತು.

ಒರಿಜಿನಲ್ ಚಿತ್ರವೇ ಬೇಕು

ಒಂದು ಸಿನಿಮಾದಲ್ಲಿ ನಾಟಕಕಾರನ ಚಿತ್ರವನ್ನು ಬಾಹ್ಯಾಕಾಶಕ್ಕೆ ಕಳಿಸುವ ವಿಲಕ್ಷಣ ಯೋಚನೆ ಬಂದಾಗ ಮೇಲೆ ಹೋಗುವ ಚಿತ್ರ ಆತನ ಪುಸ್ತಕದಲ್ಲಿರುವ ಚಿತ್ರವೇ ಆದರೆ ಅದು ನಿಜವಾದ ಗೌರವ ಎಂಬ ಸಲಹೆ ಬಂತು. ನಾಲ್ಕುನೂರು ವರ್ಷಗಳ ಹಿಂದೆ ಪ್ರಕಟಗೊಂಡಿದ್ದ ಪುಸ್ತಕಗಳು ಎಲ್ಲಿವೆ, ಯಾರ ಬಳಿ ಇವೆ, ಅನುಮತಿ ಯಾರು ಕೊಡುತ್ತಾರೆ ಎಂಬ ಪ್ರಶ್ನೆಗಳು ಎದುರಾದವು. ಲಂಡನ್‌ನ ಗ್ಲೋಬ್ ಥಿಯೇಟರ್‌ನ ಶೇಕ್ಸ್‌ಪಿಯರ್ ಅಧ್ಯಯನ ಕೇಂದ್ರದ ಮುಖ್ಯಸ್ಥ ಹಾಗೂ ಸಾಹಿತ್ಯ ಸಂಶೋಧಕ ವಿಲ್ ಟೋಶ್ ಜೆರ್ಸ್‌ನನ್ನು ಕರೆದು, 'ಇಗೋ ನಿಮಗೆ ಬೇಕಾದ ಚಿತ್ರ ಇಲ್ಲಿದೆ' ಎಂದು ಒಂದು ಪ್ರತಿಯನ್ನು ನೀಡಿಯೇ ಬಿಟ್ಟರು. ಅದರಿಂದ ಶೇಕ್ಸ್‌ಪಿಯರ್‌ನ ಭಾವಚಿತ್ರವಿರುವ ಪುಸ್ತಕದ ಮೂಲ ಹಾಳೆಗೆ ಫ್ರೇಮ್ ಹಾಕಿ, 'ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್ಸ್' ನಾಟಕದ 'ಲವರ್ಸ್ ಅಂಡ್ ಮ್ಯಾಡ್‌ಮೆನ್' ಭಾಷಣದ ಛಾಯಾಪ್ರತಿ ತಯಾರಿಸಿ, ಎರಡನ್ನೂ ಬಿಸಿ ಗಾಳಿಯ ಬಲೂನಿನಲ್ಲಿಟ್ಟು ಭೂಮಿಯಿಂದ ಒಂದು ನೂರು ಕಿ.ಮೀ. ಎತ್ತರಕ್ಕೆ ಕಳಿಸುವಲ್ಲಿ ತಂಡ ಯಶಸ್ವಿಯಾಯಿತು. ಮೇಲೆ ಹೋಗಿರುವ ಬಿಸಿಹವೆಯ ಬಲೂನಿನಲ್ಲಿ ಕ್ಯಾಮೆರಾ, ಜಿಪಿಎಸ್ ಟ್ರ್ಯಾಕರ್‌ಗಳಿವೆ.

ಸಿನಿಮಾದಲ್ಲೇನಿದೆ?

ಚಲನಚಿತ್ರಗಳನ್ನು 'ಇನ್ವರ್ಸ್ ಫಿಲ್ಮ್ಸ್'ಸಂಸ್ಥೆ ನಿರ್ಮಿಸಿದೆ. ಪ್ರತಿ ಕಿರುಚಿತ್ರದಲ್ಲೂ ಯಶಸ್ವಿ ಕವಿತೆಗಳನ್ನು ಆಯಾ ಥೀಮ್‌ಗೆ ಹೊಂದುವಂತೆ ವಾಚಿಸಲಾಗಿದೆ. ಒಂದು ಸಿನಿಮಾದಲ್ಲಿ ಉಕ್ರೇನಿನ ಯುದ್ಧದಲ್ಲಿ ನೊಂದ ನಾಗರಿಕರಲ್ಲಿ ಜೀವನದ ಕುರಿತು ಆತ್ಮವಿಶ್ವಾಸ ತುಂಬಲು ಹೆನ್ರಿ ಗಿ ನಾಟಕದ 'ಬ್ಯಾಂಡ್ ಆಫ್ ಬ್ರದರ್ಸ್' ಭಾಷಣವನ್ನು ಬಳಸಿಕೊಂಡಿರುವುದು ಮನನೀಯವಾಗಿದೆ. ಕೋವಿಡ್‌ನ ದಿನಗಳಲ್ಲಿ ಜನ ಕುಟುಂಬದ ಪ್ರೀತಿ ಪಾತ್ರರಿಂದ ದೂರವಿರುವ ಸಂದರ್ಭದಲ್ಲಿ ಅನುಭವಿಸಿದ ಏಕಾಂಗಿತನದ ಕುರಿತು ಮತ್ತು ಸಾವಿನ ದವಡೆಯಿಂದ ಪಾರಾಗಿ ಸಹಜ ಜೀವನಕ್ಕೆ ಮರಳಿದಾಗ ಅದಕ್ಕೆ ಸರಿಯಾಗಿ ಹೊಂದುವಂತೆ ಟೆಂಪೆಸ್ಟ್ ನಾಟಕದ 'ಅವರ್ ರಿವೆಲ್ಸ್ ನೌ ಆರ್ ಎಂಡೆಡ್' ಎಂಬ ಭಾಷಣ ಹದವಾಗಿ ಬಳಕೆಗೊಂಡಿದೆ. ಇನ್ನೊಂದು ಸಿನಿಮಾದಲ್ಲಿ ಜನ ನಿರಾಶ್ರಿತರಾಗಿ ಹೊಸ ನೆಲೆಗೆ ಗುಳೆ ಹೋಗುವುದನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ಶೇಕ್ಸ್‌ಪಿಯರ್‌ನ ಆಡದೇ ಇರುವ ನಾಟಕದ ಸಾಲುಗಳನ್ನು ಹಿನ್ನೆಲೆ ಧ್ವನಿಯಾಗಿ ಬಳಸಲಾಗಿದೆ. ಎಲ್ಲ ಮಾತುಗಳು 'ಡಾಕ್ಟರ್ ಹೂ' ಸಿನಿಮಾದಲ್ಲಿ ನಾಲ್ಕನೆಯ ವೈದ್ಯನ ಪಾತ್ರದಲ್ಲಿ ಅಭಿನಯಿಸಿದ್ದ ನಟ ಟಾಂ ಬಕರ್‌ನ ಧ್ವನಿಯಲ್ಲಿವೆ. ಇನ್ವರ್ಸ್ ಫಿಲ್ಮ್ಸ್‌ಸಂಸ್ಥೆ ತನ್ನ ಎಲ್ಲ ಆರು ಕಿರು ಸಿನಿಮಾಗಳನ್ನು inversefilms.co.uk ಆನ್‌ಲೈನ್ ಪ್ಲಾಟ್‌ಫಾರ್ಮ್‌ನಲ್ಲಿ ಈಗಾಗಲೇ ಬಿಡುಗಡೆಗೊಳಿಸಿದೆ.

ದಶಕದ ಹಿಂದೆ ನಮ್ಮ ಶಾಲೆ – ಕಾಲೇಜುಗಳ ಇಂಗ್ಲಿಷ್ ಪಠ್ಯದಲ್ಲಿ ಶೇಕ್ಸ್‌ಪಿಯರ್ ಬರೆದ ನಾಟಕ - ಪದ್ಯಗಳು ಓದಿನ ಭಾಗವಾಗಿ ಇದ್ದೇ ಇರುತ್ತಿದ್ದವು. ತರಗತಿ ಕೋಣೆಗಳಿಂದ ರಂಗವೇರುತ್ತಿದ್ದ ಅನೇಕ ನಾಟಕಗಳು ನಮ್ಮನ್ನೇ ಬದಲಾಯಿಸಿಬಿಡುವಷ್ಟು ಪರಿಣಾಮಕಾರಿಯಾಗಿರುತ್ತಿದ್ದವು. ಈಗ ನಮ್ಮ ಎಲ್ಲಾ ಪಠ್ಯಗಳಿಂದ ಶೇಕ್ಸ್‌ಪಿಯರ್ ಮಾಯವಾಗಿರುವ ಸುದ್ದಿ ಇದೆ. ಬಾಹ್ಯಾಕಾಶಕ್ಕೆ ಹೋಗಿದ್ದೇ ಕಾರಣವಿರಬಹುದೇ? ❖

ಅಂಚೆಚೀಟಿಗಳಲ್ಲಿ ಕರ್ನಾಟಕಕ್ಕೇಕೆ ತಾರತಮ್ಯ?

ಎನ್. ಜಗನ್ನಾಥ ಪ್ರಕಾಶ್

ಆಧುನಿಕ ಅಂಚೆ ವ್ಯವಸ್ಥೆ ಇಂಗ್ಲೆಂಡ್‌ನಲ್ಲಿ ಶುರುವಾಗಿ ಇನ್ನೂರು ವರ್ಷಗಳೇ ಕಳೆದುಹೋಗಿದೆ. ಸುಲಭ ಎನ್ನಬಹುದಾದ ಈ ವ್ಯವಸ್ಥೆಯನ್ನು ಜಗತ್ತಿನ ಬಹುತೇಕ ಎಲ್ಲಾ ದೇಶಗಳೂ ಅನುಸರಿಸಿವೆ.

ಈಗ ಕೊರಿಯರ್, ಇ-ಮೇಲ್, ಎಸ್.ಎಂ.ಎಸ್. ಗಳದ್ದೇ ಸದ್ದು. ದಿನನಿತ್ಯ ಕಾಣಿಸಿಕೊಳ್ಳುತ್ತಿದ್ದ ಖಾಕಿಧಾರಿ, ಅಂಚೆ ಸಂಚಿಯ ಅಂಚೆಯಲ್ಲಿ ಕೂಡ ಈಗ ಅಪರೂಪ. ಆದರೆ ಕಾಗದಪತ್ರಗಳ ರವಾನೆಗೆ ಉಪಯೋಗವಾಗುತ್ತಿದ್ದ ಅಂಟು ಉಳ್ಳ ಪುಟ್ಟಪುಟ್ಟ ಬಣ್ಣಬಣ್ಣದ ಕಾಗದದ ತುಂಡುಗಳೇನೂ (ಅಂಚೆಚೀಟಿಗಳು) ಅಪರೂಪವಾಗಿಲ್ಲ. ಎರಡು ಶತಮಾನಗಳ ಹಿಂದೆ ಆರಂಭವಾದ ಅಂಚೆ ಚೀಟಿಗಳ ಸಂಗ್ರಹ ಹವ್ಯಾಸ ಇಂದು ಹೆಚ್ಚುತ್ತಲೇ ಇದ್ದು, ಈ ಹವ್ಯಾಸ ದೊಡ್ಡ ಉದ್ಯಮದ ಮುಖವನ್ನೇ ಪಡೆದುಕೊಂಡಿದೆ.

ಇಂಗ್ಲೆಂಡಿನಲ್ಲಿ ಅಂಚೆಚೀಟಿಗಳಲ್ಲಿ ಮೊದಲು ಕಾಣಿಸಿಕೊಂಡಿದ್ದು ಆ ದೇಶದ ರಾಣಿ. ಕಾಲಕ್ರಮೇಣ ಆಗೀಗ ರಾಜನ ಚಿತ್ರ ಅಲ್ಲಿ ಅಚ್ಚಾದರೂ ರಾಣಿಯ ಮುಖಕ್ಕೇ ಪ್ರಾಶಸ್ತ್ಯ. ಬ್ರಿಟಿಷರೇ ಆಳುತ್ತಿದ್ದ ಭಾರತದ ಅನೇಕ ಸಂಸ್ಥಾನಗಳು ತಮ್ಮದೇ ಅಂಚೆಚೀಟಿಗಳನ್ನು ತಮ್ಮ ಅರಸರ ಚಿತ್ರಗಳೊಂದಿಗೆ ಮುದ್ರಿಸಿಕೊಂಡು ಚಲಾವಣೆ ಮಾಡಿದವಾದರೂ, ಬ್ರಿಟಿಷ್ ಸರ್ಕಾರ ಭಾರತದಲ್ಲಿ ಜಾರಿಗೆ ತಂದ ಇಂಪೀರಿಯಲ್ ಪೋಸ್ಟ್‌ನಲ್ಲಿ ಸೇರಿಹೋಗಿದ್ದು ಇತಿಹಾಸ. ಅಂಚೆಚೀಟಿ ಇಲ್ಲದಿದ್ದರೂ ಅಂಚೆ ಮೊಹರು ಬಳಸಿಕೊಂಡು ವ್ಯವಸ್ಥಿತವಾಗಿ ಚಲಾವಣೆಯಲ್ಲಿದ್ದ ಮೈಸೂರು ಅಂಚೆ ಇಂಪೀರಿಯಲ್ ಪೋಸ್ಟ್‌ನಲ್ಲೇ ಹುದುಗಿಕೊಂಡಿತು.

ವ್ಯವಸ್ಥೆ ಶುರುವಾದುದು...

ಮೊದಮೊದಲು ರಾಜಮಹಾರಾಜರಿಗೆ ಆಡಳಿತ ವ್ಯವಸ್ಥೆಗೆ ಮಾತ್ರ ಲಭ್ಯವಿದ್ದ ಅಂಚೆ ಸೇವೆ, ನಂತರದ ದಿನಗಳಲ್ಲಿ ಸಾರ್ವಜನಿಕರಿಗೂ ಲಭಿಸಿತು. ಅಂಚೆ ಜನರ ಬದುಕಿನ ಅವಿಭಾಜ್ಯ ಅಂಗವೂ ಆಗಿತ್ತು. ಸ್ವಾತಂತ್ರ್ಯಾನಂತರ ಸ್ವತಂತ್ರ ಅಂಚೆ ವ್ಯವಸ್ಥೆಯೂ ಭಾರತದಲ್ಲಿ ಪ್ರಾರಂಭಗೊಂಡಿತು.

ಅಂಚೆಚೀಟಿಗಳು ಕೇವಲ ಕಾಗದ ಪತ್ರಗಳನ್ನು ರವಾನೆ ಮಾಡುತ್ತಿರಲಿಲ್ಲ. ಆಯಾ ದೇಶಗಳ ಸಾಧಕರು, ಪ್ರವಾಸಿ ತಾಣಗಳು, ಸಾಧನೆಯ ಹೆಜ್ಜೆಗಳ ವಾಹಕಗಳೂ ಆಗಿದ್ದವು. ಅಪರೂಪದ ಘಟನೆಗಳು ಚಾರಿತ್ರಿಕ ವಿಚಾರಗಳನ್ನು ದಾಟಿಸುವ ಅಂಚೆ ಚೀಟಿಗಳನ್ನು ಸಂಗ್ರಹಿಸುವ ಹವ್ಯಾಸ ಅನೇಕರಿಗೆ ಇದೆ. ಹೀಗಾಗಿ ಈ ಕೊರಿಯರ್ ಅಬ್ಬರದ ಕಾಲದಲ್ಲೂ ಅಂಚೆಚೀಟಿಗಳ ಬೇಡಿಕೆಗೆ ಕುಂದು ಬಂದಿಲ್ಲ.

'ಫಿಲಾಟಲಿ' ಅಂದರೆ ಅಂಚೆಚೀಟಿ ಹಾಗೂ ದಸ್ತಾವೇಜುಗಳನ್ನು ಸಂಗ್ರಹಿಸುವ ಹವ್ಯಾಸ; ಈಗ ವಿಜ್ಞಾನವೇ ಆಗಿದೆ. ದೊಡ್ಡ ಮೊತ್ತದ ಬಂಡವಾಳವಿರುವ ವ್ಯವಹಾರದ ಬಾಬತ್ತು ಕೂಡ ಆಗಿದೆ.

ನಿಯತ ಅಂಚೆ ಚೀಟಿಗಳು ಹಾಗೂ ಸ್ಮರಣಾರ್ಥ ಚೀಟಿಗಳು–ವಿಶ್ವದ ಎಲ್ಲಾ ದೇಶಗಳಲ್ಲೂ ಪ್ರಕಟಣೆಗೊಳ್ಳುವ ಎರಡು ಬಗೆಯವು. ಸ್ಮರಣೀಯ ಸಮಾರಂಭಗಳು, ಗಣ್ಯವ್ಯಕ್ತಿಗಳು ಗಮನಾರ್ಹ ಸಂಸ್ಥೆಗಳು, ಐತಿಹಾಸಿಕ ಘಟನೆಗಳು, ಪ್ರಾಕೃತಿಕ ತಾಣಗಳು, ಪ್ರಾಣಿ-ಪಕ್ಷಿಸಂಕುಲ. ಆಯಾದೇಶಗಳ ಪ್ರಮುಖ ಆಗುಹೋಗುಗಳನ್ನು ಪ್ರತಿಬಿಂಬಿಸುವ ಸಾಧನಗಳಾಗಿ ಅಂಚೆಚೀಟಿಗಳು ಬಳಕೆಯಲ್ಲಿವೆ. ವಿಶೇಷ ಸಂದರ್ಭಗಳಲ್ಲಿ ನೆನಪಿನ (ಸ್ಮರಣಾರ್ಥ) ಅಂಚೆಚೀಟಿಗಳನ್ನು ಹೊರತರುವುದು ಜಾಗತಿಕವಾಗಿ ರೂಢಿಯಲ್ಲಿದೆ.

ನಮ್ಮ ದೇಶದಲ್ಲಿ ತ್ರಿವರ್ಣ ಧ್ವಜದ ಚಿತ್ರವುಳ್ಳ ಅಂಚೆಚೀಟಿ ಮೊದಲು ಮುದ್ರಿತವಾಗಿತ್ತು. ಒಕ್ಕೂಟ ರಾಷ್ಟ್ರವಾದ ಭಾರತದ ಎಲ್ಲ ರಾಜ್ಯಗಳ ವಿಷಯ ವಿಶೇಷಗಳನ್ನು ಭಾರತೀಯ ಅಂಚೆ ಚೀಟಿಗಳು ಹೊತ್ತು ತರುತ್ತಿವೆ.

ಕರ್ನಾಟಕದ ಪಾಲು ಕಡಿಮೆ

ವಿಜಯಪುರದ ಗೋಲ್‌ಗುಂಬಜ್ ಪ್ರಥಮವಾಗಿ ಕಾಣಿಸಿಕೊಂಡ ಕರ್ನಾಟಕದ ಚಿತ್ರ ಒಳಗೊಂಡ ಅಂಚೆಚೀಟಿ. ಭಾರತೀಯ ಅಂಚೆ ಇಲಾಖೆ ಕಳೆದ ಏಳು ದಶಕಗಳಲ್ಲಿ ಹೊರತಂದಿರುವ ಅಂಚೆಚೀಟಿಗಳ ಸಂಖ್ಯೆ ಮೂರು ಸಾವಿರಕ್ಕೂ ಹೆಚ್ಚು. ಹಲವಾರು ವಿಚಾರಗಳಲ್ಲಿ ತಾರತಮ್ಯಕ್ಕೆ ತುತ್ತಾಗಿರುವ ಕರ್ನಾಟಕ ಅಂಚೆಚೀಟಿ ವಿಷಯದಲ್ಲಿಯೂ ಇದನ್ನು ಅನುಭವಿಸುತ್ತಿದೆ. ಅನ್ಯರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಅಂಚೆಚೀಟಿಗಳ ಪಾಲು ತೀರಾ ಕಡಿಮೆ. ಬೇರೆ ರಾಜ್ಯಗಳು ಅಂಚೆಚೀಟಿಗಳಲ್ಲಿ ಶತಕ ಬಾರಿಸಿದ್ದರೂ ಕರ್ನಾಟಕಕ್ಕೆ ಆ ಭಾಗ್ಯ ಇನ್ನೂ ಸಿಕ್ಕಿಲ್ಲ.

ಅಂಚೆಚೀಟಿಗಳ ಪ್ರಕಟಣೆಯಲ್ಲಿ ಕರ್ನಾಟಕಕ್ಕೆ ಕೆಲವಾರು ಗೌರವಗಳು ಸಿಕ್ಕಿದ್ದರೂ ಸಹಜವಾಗಿ ಸಿಗಬೇಕಾದ ಮಾನ್ಯತೆಯಂತೂ ಸಿಕ್ಕಿಲ್ಲ. ಬಸವಣ್ಣ, ಕನಕದಾಸ, ಪುರಂದರದಾಸರು ಅಂಚೆಚೀಟಿಗಳಲ್ಲಿ ಕಾಣಿಸಿಕೊಂಡಿದ್ದರೂ ಸರ್ವಜ್ಞ, ಶಿಶುನಾಳ ಷರೀಫ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಕೈವಾರ ನಾರೇಯಣರಿಗೆ ಸ್ಥಾನ ಸಿಕ್ಕಿಲ್ಲ.

ಒಂಬತ್ತು ದಶಕಗಳನ್ನು ಕಂಡಿರುವ ಕನ್ನಡ ಚಿತ್ರರಂಗದಲ್ಲಿ ರಾಜ್‌ಕುಮಾರ್, ವಿಷ್ಣುವರ್ಧನ್ ಅಂಚೆ ಚೀಟಿಗಳನ್ನು ಅಲಂಕರಿಸಿದ್ದರೆ, ರಂಗಭೂಮಿ ಚಿತ್ರರಂಗದಲ್ಲಿ ಖ್ಯಾತರಾದ ಗುಬ್ಬಿ ವೀರಣ್ಣ, ಸುಬ್ಬಯ್ಯನಾಯ್ಡು, ನರಸಿಂಹರಾಜು, ಬಾಲಕೃಷ್ಣ, ನಿರ್ದೇಶಕರಾದ ಸಿದ್ಧಲಿಂಗಯ್ಯ, ಪುಟ್ಟಣ್ಣ ಕಣಗಾಲ್, ಬಿ.ಆರ್.ಪಂತಲು, ವೈ.ಆರ್. ಸ್ವಾಮಿ, ಡಿ.ಶಂಕರ್ ಸಿಂಗ್ ಅವರು ಇನ್ನೂ ಕಾಣಿಸಿಕೊಳ್ಳಬೇಕಿದೆ.

ಪರಂಪರೆ

ಶತಮಾನ ತುಂಬಿದ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಕೆಂಪುಕೋಟೆ, ವಿಧಾನಸೌಧ, ಸೆಂಟ್ರಲ್ ಕಾಲೇಜ್ ಇನ್ನೂ ಸ್ಥಾನ ಪಡೆದಿಲ್ಲ.

ಅನೇಕ ರಾಜ್ಯಗಳ ಮಾಜಿ ಮುಖ್ಯಮಂತ್ರಿಗಳು ಅಂಚೆಚೀಟಿಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕರ್ನಾಟಕ ಕೆಂಗಲ್ ಹನುಮಂತಯ್ಯ, ಡಿ.ದೇವರಾಜು ಅರಸು ಮುಂತಾದವರಿಗೆ ಆ ಗೌರವ ಸಿಗಬೇಕಿದೆ. ಶಿಕ್ಷಣ ತಜ್ಞರಾದ ಎಚ್.ನರಸಿಂಹಯ್ಯ, ಪ್ರೊ.ಸಿ.ಡಿ.ನರಸಿಂಹಯ್ಯ, ಡಿ.ಸಿ. ಪಾವಟೆ, ಎಲ್ಲ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಿಗೂ ಅಂಚೆಚೀಟಿಗಳಲ್ಲಿ ಜಾಗ ಮಾಡಬೇಕಿದೆ.

ಪಿಟೀಲು ಚೌಡಯ್ಯ, ವೀಣೆ ದೊರೆಸ್ವಾಮಿ ಅಯ್ಯಂಗಾರ್, ಮೈಸೂರು ಅನಂತಸ್ವಾಮಿ, ಹುಕ್ಕೇರಿ ಬಾಳಪ್ಪ, ಕಾಳಿಂಗರಾವ್, ಸಿ. ಅಶ್ವಥ್, ಜಿ.ಕೆ.ವೆಂಕಟೇಶ್, ವಿಜಯಭಾಸ್ಕರ್, ಕಾಳಿಂಗ ನಾವಡ, ಹೀಗೆ ಸಂಗೀತ ಸಂಬಂಧಿಸಿದ ಗಣ್ಯರ ಪಟ್ಟಿ ಸಾಕಷ್ಟಿದೆ.

ಜಾನಪದ ಕಲೆಗಳಲ್ಲಿ ಕರ್ನಾಟಕಕ್ಕೆ ಪ್ರಮುಖ ಸ್ಥಾನವಿದೆ. ಡೊಳ್ಳು, ಕಂಸಾಳೆ, ವೀರಗಾಸೆ, ಮರಗೋಲು, ಕೊಡವನೃತ್ಯ, ತಮಟೆ, ಚೆಂಡೆ, ಕರ್ನಾಟಕದ ಜಾನಪದ ಕಲೆಗಳಾಗುವುವೂ ಅಂಚೆಚೀಟಿಗಳಲ್ಲಿ ಬಂದಿಲ್ಲ.

ನೂರು ವರ್ಷ ತುಂಬಿದಾಗ ಅವರದೇ ಸ್ಮರಣಾರ್ಥ ಅಂಚೆಚೀಟಿ ಬಿಡುಗಡೆ ಕಾಣುವ ಯೋಗ ಹೆಸರಾಂತ ಆಡಳಿತಗಾರ, ವಿಖ್ಯಾತ ಎಂಜಿನಿಯರ್ ಸರ್. ಎಂ.ವಿಶ್ವೇಶ್ವರಯ್ಯ ಅವರದ್ದು.

ಅಂಚೆಚೀಟಿಗಳಲ್ಲಿ ಕರ್ನಾಟಕಕ್ಕೆ ಈ ತಾರತಮ್ಯ ಆಗಿರುವುದಕ್ಕೆ ಕೇಂದ್ರ ಸರ್ಕಾರದ ಅಂಚೆ ಇಲಾಖೆಯ ನಿರ್ಲಕ್ಷ್ಯದ ಜತೆಗೆ ಕರ್ನಾಟಕದ ಸ್ಥಳೀಯ ಅಂಚೆ ಇಲಾಖೆ ಹಾಗೂ ಕರ್ನಾಟಕದ ಲೋಕಸಭಾ ಸದಸ್ಯರ ಅಸಡ್ಡೆಯೂ ಕಾರಣ.

ಅಂಚೆಚೀಟಿಗಳನ್ನು ಪ್ರಕಟಿಸಲು ಸಾಂದರ್ಭಿಕವಾಗಿ ಸೂಕ್ತ ಮಾಹಿತಿಗಳನ್ನು ಅಂಚೆ ಇಲಾಖೆಗೆ ತಲುಪಿಸಬೇಕಾದುದು ಸರ್ಕಾರದ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಹೊಣೆ. ಅದು ಆಗುತ್ತಿಲ್ಲವೆನ್ನುವುದು ವಾಸ್ತವ. ❖

> ಅಂಚೆಚೀಟಿಗಳಲ್ಲಿ ಕರ್ನಾಟಕದ ಪ್ರಾತಿನಿಧ್ಯ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಮಂಕು. ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯೇ ಇದಕ್ಕೆ ಕಾರಣ.

ಜ. 5ರಿಂದ 'ಕರ್ನಾಫೆಕ್ಸ್'

ಒಂಬತ್ತು ವರ್ಷಗಳ ನಂತರ ವೈವಿಧ್ಯಮಯ ಅಂಚೆಚೀಟಿಗಳನ್ನು ಪ್ರದರ್ಶಿಸುತ್ತಿರುವ 'ಕರ್ನಾಫೆಕ್ಸ್' 2024 ಜನವರಿ 5ರಿಂದ 8ರವರೆಗೆ ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಾಡಾಗಿದೆ. ನಾಡಿನ ಭವ್ಯ ಇತಿಹಾಸವನ್ನು ಅಂಚೆಚೀಟಿಗಳಲ್ಲಿ ತರುವಂತೆ ಮಾಡಬೇಕಿದ್ದು, ಅದಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಇನ್ನಾದರೂ ಜನಪ್ರತಿನಿಧಿಗಳು ಮನಸ್ಸು ಮಾಡಬೇಕು.

...ಲೋಕದ ಬೆಳಕು

10ನೇ ಪುಟದಿಂದ...

ರಾಜಪ್ರಭುತ್ವ ಮತ್ತು ವೈದಿಕ ಧರ್ಮಪ್ರಭುತ್ವಗಳನ್ನು ಅಷ್ಟೇ ಕರಾರುವಾಕ್ಕಾಗಿ ಪ್ರತಿಭಟಿಸುವ ತತ್ವಪದವೊಂದು ಹೀಗಿದೆ:

ಭೂಪತಿಗಳ ಮೆಚ್ಚಿ ಅರಸುಖ ತನಗಾಯ್ತು/ ತಾ ಪೂರ್ಣ ಸುಖವಿಲ್ಲದೇ ಹೋಯಿತ್ತೋಯ್ತು/ಆ ಪರಬ್ರಹ್ಮ ಒಲಿದರೇನಾಯ್ತು/ಈ ಪರಿಭವವೆಲ್ಲ ಹರಿದ್ಹೋಯ್ತು

ಏಕಕಾಲಕ್ಕೆ ಅಧಿಕಾರ ಮತ್ತು ಧರ್ಮ ಪ್ರಭುತ್ವದ ಒಳಹೇತುಗಳನ್ನು ಪ್ರತಿರೋಧಿಸುವ ಮಡಿವಾಳಪ್ಪನ ಕಾವ್ಯ ವರ್ತಮಾನದ ಅನೇಕ ತಲ್ಲಣಗಳನ್ನು ಉಪಮಿಸುವ ಪ್ರತಿಭಟನ ಕಾವ್ಯವೂ ಹೌದು. ಜಾತಿ, ಮತ, ಧರ್ಮಗಳ ವಿರುದ್ಧ ಸೆಟೆದು ನಿಂತು ಅವುಗಳ ಡಾಂಭಿಕತೆಯನ್ನು ಮಡಿವಾಳಪ್ಪ ಬಯಲು ಮಾಡಿದರು. ಜಾತಿ ನಿರಸನದ ಬೀಜಮಂತ್ರ ಬಿತ್ತಿದರು. ಇದೆಲ್ಲವೂ ಅವರ ಅಂತರಂಗ ಸತಾಯಿಸಿದಾಗ ಸಾಧ್ಯವಾದುದು. ಅಂತೆಯೇ ಮಡಿವಾಳಪ್ಪ ನಮ್ಮೆಲ್ಲರ ಬದುಕಿನ ಪ್ರತಿನಿಧಿ. ಕಲ್ಯಾಣ ಮಾದರಿಯ ಅನುಭವ ಮಂಟಪ ಕಡಕೋಳದಲ್ಲೂ ನಡೆಸಿದ್ದುಂಟು. ಅಲ್ಲಿ ಅಲ್ಲಮನಿದ್ದರೆ, ಇಲ್ಲಿ ಮಡಿವಾಳಪ್ಪ. ಬ್ರಾಹ್ಮಣರ ಖೈನೂರು ಕೃಷ್ಣಪ್ಪ, ಮುಸಲ್ಮಾನರ ಚೆನ್ನೂರ ಜಲಾಲಸಾಬ, ಕಬ್ಬಲಿಗರ ಕಡ್ಲೇವಾಡ ಸಿದ್ದಪ್ಪ, ಹೂಗಾರ ಕುಲದ ರೇವಪ್ಪ, ಲಿಂಗಾಯಿತರ ಭಾಗಮ್ಮ ಎಲ್ಲಾ ಜಾತಿಯ ಈ ತತ್ವಪದಕಾರರು ಅಂದಿನ ವಚನಕಾರರ ಸರಿಸಮಾನರಾಗಿ ಹೋರಾಟ ಬದುಕಿದ್ದಾರೆ.

ಶಿಶುನಾಳ ಶರೀಫರಿಗಿಂತ ಅರ್ಧ ಶತಮಾನ ಮೊದಲೇ ಬದುಕಿದ ಮಡಿವಾಳಪ್ಪನ ಹುಟ್ಟೇ ಬಹುದೊಡ್ಡ ಬಂಡಾಯ. ಮಡಿವಾಳಪ್ಪ ಗಾಣಿಗರ ಗಂಗಮ್ಮ ಎಂಬ ವಿಧವೆಯ ಮಗ. ಮಠದ ವಿರೂಪಾಕ್ಷಯ್ಯ ಜೈವಿಕ ತಂದೆ. ಕ್ರಿ.ಶ. ಸುಮಾರು 1770 - 1860 ಮಡಿವಾಳಪ್ಪನ ಜೀವಿತಾವಧಿ. ಕಲಬುರಗಿ ಜಿಲ್ಲೆಯ ಬಿದನೂರು, ಮಡಿವಾಳಪ್ಪನ ಹುಟ್ಟೂರು. ಕಲಬುರಗಿ ಜಿಲ್ಲೆಯ ಇಂದಿನ ಯಡ್ರಾಮಿ ತಾಲ್ಲೂಕಿನ ಕಡಕೋಳ, ಮಡಿವಾಳಪ್ಪನ ಕಾಯಕ ಭೂಮಿ. ತತ್ವಪದಗಳ ಮರೆತ ಹೆಜ್ಜೆಗುರುತುಗಳನ್ನು ಜಂಗಮಗೊಳಿಸಲು ಸರ್ಕಾರವು ಮನಸ್ಸು ಮಾಡಬೇಕಿದೆ.

❖ ಕಳೆದ ಬಾರಿಯ ಮಡಿವಾಳಪ್ಪನ ರಥೋತ್ಸವದಲ್ಲಿ ಜನ ಸಾಗರ

ಮುನ್ನೋಟ 31-12-2023 ರಿಂದ -06-01-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಸಾಕಷ್ಟು ಗೌರವವನ್ನು ನಿರೀಕ್ಷಿಸುತ್ತೀರಿ. ಮಾತಿನಲ್ಲಿ ಸ್ವಲ್ಪ ಕಠಿಣತೆ ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ಸ್ವಲ್ಪ ದ್ವಂದ್ವವಿರುತ್ತದೆ. ಕೃಷಿಕರಿಗೆ ಸಾಕಷ್ಟು ಸಹಾಯಧನ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅತಿ ಹೆಚ್ಚು ಶ್ರದ್ಧೆ ಬರುತ್ತದೆ. ಉದರ ಸಂಬಂಧಿ ಕಾಯಿಲೆಗಳು ಸ್ವಲ್ಪ ಬಾಧಿಸಬಹುದು. ಪತ್ನಿ ಅಲಂಕಾರಕ್ಕೆ ಹೆಚ್ಚು ಪ್ರಾಮುಖ್ಯ ಕೊಡುವ ಸಲುವಾಗಿ ಹಣ ಖರ್ಚು ಮಾಡುತ್ತಾಳೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಂಗೀತಗಾರರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ನಯವಾಗಿ ಮಾತನಾಡಿ ವ್ಯವಹಾರ ಸಾಧಿಸುವಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ಸೋದರಿಯರ ಮತ್ತು ತಾಯಿಯ ಸಹಕಾರ ದೊರೆಯುತ್ತದೆ. ಕೃಷಿ ಭೂಮಿಯ ವಿಸ್ತರಣೆಯನ್ನು ಮಾಡಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಅಂತಹ ಯಶಸ್ಸು ಇರುವುದಿಲ್ಲ. ನರ ದೌರ್ಬಲ್ಯ ಇರುವವರು ದೂರ ಪ್ರಯಾಣದಲ್ಲಿ ಎಚ್ಚರಿಕೆವಹಿಸಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಒಂದು ರೀತಿಯ ನಿಧಾನ ಗತಿ ನಿಮ್ಮಲ್ಲಿ ಇರುತ್ತದೆ. ತಾಯಿಯಿಂದ ಅಥವಾ ಸೋದರಿಯರಿಂದ ಧನಸಹಾಯ ದೊರೆಯುತ್ತದೆ. ಕೃಷಿಯಲ್ಲಿ ಆಸಕ್ತಿಯು ಹೆಚ್ಚುತ್ತದೆ. ಕ್ರೀಡಾಪಟುಗಳಿಗೆ ಸರ್ಕಾರದಿಂದ ಉತ್ತಮ ಪ್ರೋತ್ಸಾಹ ದೊರೆಯುತ್ತದೆ. ಸರ್ಕಾರಿ ಕೃಷಿ ಅಧಿಕಾರಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ನಿರೀಕ್ಷೆ ಮಾಡದಿದ್ದ ವ್ಯಕ್ತಿಗಳು ನಿಮಗೆ ಹಿತಶತ್ರುಗಳಾಗುತ್ತಾರೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಹೊಸ ರೀತಿಯ ಆನಂದ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಧನ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ಸರ್ಕಾರಿ ಸಹಾಯಧನಗಳು ನಿಮಗೆ ಈಗ ದೊರೆಯುತ್ತವೆ. ಭೂಮಿ ಮಧ್ಯಸ್ಥಿಕೆ ವ್ಯವಹಾರ ಮಾಡುವವರಿಗೆ ಕಮಿಷನ್ ಹೆಚ್ಚು ದೊರೆಯುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಸ್ವಲ್ಪ ಮುಖಭಂಗವಾಗುವ ಸಂದರ್ಭಗಳಿವೆ. ಸಂಗಾತಿಯ ಕಠಿಣ ನಿಲುವುಗಳು ನಿಮಗೆ ಬೇಸರ ತರಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮನಸ್ಸಿನಲ್ಲಿ ತಾಕಲಾಟಗಳಿರುತ್ತವೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಕೃಷಿ ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ಇರುತ್ತದೆ. ಸಂಗಾತಿಯ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ಇರಲಿ. ಸಂಗಾತಿಯ ನಿಷ್ಠುರ ಮಾತುಗಳು ಮನಸ್ಸಿಗೆ ನೋವುಂಟು ಮಾಡಬಹುದು. ವಾಹನ ಮಾರಾಟಗಾರರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಿಪರೀತ ಆಲಸೀತನ ನಿಮ್ಮನ್ನು ಆವರಿಸುತ್ತದೆ. ನಿಮ್ಮ ಮಾತು ಮತ್ತು ನಡವಳಿಕೆಯಲ್ಲಿ ತೀರ ವ್ಯಾವಹಾರಿಕತೆ ಇರುತ್ತದೆ. ನಿಮ್ಮ ಚಟುವಟಿಕೆಗಳಿಂದ ಹಣ ಸಂಪಾದನೆ ಮಾಡಬಹುದು. ಆಸ್ತಿ ವಿಚಾರದಲ್ಲಿ ಇದ್ದ ಸರ್ಕಾರಿ ತೊಂದರೆಗಳು ಈಗ ನಿವಾರಣೆಯಾಗುತ್ತವೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇರುವುದಿಲ್ಲ. ಸಂಗಾತಿಯ ಮೇಲೆ ನಿಮ್ಮ ಅಭಿಪ್ರಾಯಗಳನ್ನು ಹೇರಲು ಪ್ರಯತ್ನಪಡುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವ್ಯವಹಾರದಲ್ಲಿ ಚತುರತೆಯನ್ನು ಸಾಧಿಸಲು ಪ್ರಯತ್ನ ಪಡುವಿರಿ. ಆಸ್ತಿಯನ್ನು ಕೊಳ್ಳುವ ವಿಚಾರದಲ್ಲಿ ಅಂತಹ ಬೆಳವಣಿಗೆಗಳು ಆಗುವುದಿಲ್ಲ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ದೊರಕುವುದು ಕಷ್ಟ. ಕೀಲು ನೋವು ಇರುವವರಿಗೆ ಬಾಧೆ ಹೆಚ್ಚಾಗಬಹುದು. ಸಂಗಾತಿಯಿಂದ ಅವರ ಖರ್ಚಿಗಾಗಿ ಹೆಚ್ಚು ಹಣದ ಬೇಡಿಕೆ ಬರಬಹುದು. ಅನಿರೀಕ್ಷಿತ ಧನ ಲಾಭಗಳು ಆಗುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವ್ಯಾಪಾರಿ ಮನೋಭಾವ ನಿಮ್ಮಲ್ಲಿ ತುಂಬಿರುತ್ತದೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಇರುತ್ತದೆ. ಮಾತಿನಲ್ಲಿ ಬಹಳ ಗತ್ತು ಇರುತ್ತದೆ. ಶತ್ರುಗಳನ್ನು ಮಟ್ಟ ಹಾಕಿ ನಿಮ್ಮ ಕೆಲಸ ಸಾಧಿಸುವಿರಿ. ಸಂಸಾರ ಸುಖದಲ್ಲಿ ಸ್ವಲ್ಪ ವ್ಯತ್ಯಾಸಗಳಿರುತ್ತವೆ. ಕೃಷಿಯಲ್ಲಿ ಅಭಿವೃದ್ಧಿ ಇರುತ್ತದೆ. ಮಕ್ಕಳಿಂದ ಗೌರವ ದೊರೆಯದಿರಬಹುದು. ಕೆಲವರಿಗೆ ವಿದೇಶದಲ್ಲಿರುವ ಮಕ್ಕಳಿಂದ ಧನಸಹಾಯ ಲಭಿಸುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಅತಿಯಾದ ಆತ್ಮಗೌರವ ನಿಮ್ಮಲ್ಲಿ ಇರುತ್ತದೆ. ನಿಮ್ಮ ಚಟುವಟಿಕೆಗಳಿಂದ ಧನ ಸಂಪಾದನೆಯ ಕಡೆ ಹೆಚ್ಚು ಗಮನಕೊಡುವಿರಿ. ಆಸ್ತಿ ವಿಚಾರಗಳಲ್ಲಿ ಸ್ವಲ್ಪ ಗೊಂದಲಗಳಾಗಬಹುದು. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಇದ್ದೇ ಇರುತ್ತದೆ. ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ. ಹಣದ ನಿರ್ವಹಣೆಯನ್ನು ಸರಿಯಾಗಿ ಮಾಡುವುದು ಬಹಳ ಉತ್ತಮ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸ್ಥಿತ ಪ್ರಜ್ಞರಾಗಿ ಕೆಲಸಗಳನ್ನು ಮಾಡುವಿರಿ. ಧನ ಆದಾಯವು ಕಡಿಮೆ ಇರುತ್ತದೆ. ವೃತ್ತಿಯಲ್ಲಿ ಸ್ವಲ್ಪ ಏಳಿಗೆ ಇರುತ್ತದೆ. ಲಲಿತ ಕಲೆಗಳನ್ನು ಅಭ್ಯಾಸ ಮಾಡುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭಗಳು ಸ್ವಲ್ಪ ಕಡಿಮೆಯಾಗುವ ಸಾಧ್ಯತೆ ಇದೆ. ಸಂಗಾತಿಯು ಸ್ವಲ್ಪ ಮುನಿಸು ತೋರಿಸಿದರೂ ನಂತರ ಸರಿಯಾಗುವವರು. ತಂದೆಯಿಂದ ಧಾರ್ಮಿಕ ವಿದ್ಯೆಗಳನ್ನು ಕಲಿಯಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮೈಯೆಲ್ಲಾ ಎಚ್ಚರವಾಗಿದ್ದು ಕೆಲಸ ಮಾಡುವುದು ಒಳ್ಳೆಯದು. ಹಿರಿಯರ ನಡವಳಿಕೆಗಳು ಇತರರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತವೆ. ಆಸ್ತಿ ವಿಚಾರಗಳಲ್ಲಿ ಮುಂದುವರಿಯುವುದು ಅಷ್ಟು ಒಳಿತಲ್ಲ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಸಿಗುತ್ತದೆ. ವಿದೇಶದಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ. ಸಂಗಾತಿಯಿಂದ ನಿರೀಕ್ಷಿತ ಸಹಾಯ ದೊರೆಯುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ವಿದೇಶದಲ್ಲಿರುವವರಿಗೆ ಹೆಚ್ಚಿನ ಅನುಕೂಲಗಳು ದೊರೆಯುತ್ತವೆ. ಧನ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ಉಪನ್ಯಾಸಕರಿಗೆ ಹೆಚ್ಚು ಪ್ರೋತ್ಸಾಹ ದೊರೆಯುತ್ತದೆ. ನಿಮ್ಮ ನಡವಳಿಕೆಗಳಿಂದ ವೈರಿಗಳನ್ನು ಹೆಚ್ಚು ಮಾಡಿಕೊಳ್ಳುವಿರಿ. ಹಿರಿಯರ ಒಡವೆಗಳು ನಿಮಗೆ ದೊರೆಯಬಹುದು. ಸಂಸಾರದಲ್ಲಿ ಇದ್ದ ಸುಖವನ್ನು ನೀವೇ ಹಾಳುಮಾಡುವಿರಿ. ವಿದ್ಯಾರ್ಥಿಗಳಿಗೆ ಅಭಿವೃದ್ಧಿ ಕಡಿಮೆ ಇರುತ್ತದೆ.

ಪದಬಂಧ 2822



ಮೇಲಿನಿಂದ ಕೆಳಕ್ಕೆ

1. ಪ್ರತಿ ಜೀವಿಯಲ್ಲೂ ಇರಬಹುದಾದ ಪರಮಾತ್ಮನ ಒಂದು ಭಾಗ 3
2. ಮನಸ್ಸಿಲ್ಲದಿದ್ದರೂ ಮನಸ್ಸಿನ ನಮಸ್ಕಾರ 3
3. ನೋವುಂಟು ಮಾಡುವ ನರ ಮೂಳೆಗಳ ಹೊರಳು 3
4. ನಗರದಲ್ಲಿ ಹೊಡೆಯುವ ಭೇರಿಯೇ ಇದು 3
7. ಮಾವನಲ್ಲಿ ಮೂಡುವ ರಾಧಾ ಪ್ರಿಯ 3
9. ಸಂಗೀತದಲ್ಲಿ ಎರಡು ರಿಷಭಗಳ ನಡುವೆ ಬಂದ ಷಡ್ಜ 3
10. ಹೊಸದಾದ ಒಂಭತ್ತು 3
11. ಸಿಟ್ಟಿನಿಂದ ದನಿ ಎತ್ತರಿಸು 3
12. ಕುರುಕುರು ಎಂದು ಶಬ್ದ ಮಾಡಿಕೊಂಡು ತಿನ್ನುವ ತಿನಿಸು 3
14. ಒಳ್ಳೆಯ ಬುದ್ಧಿ ಇರುವಾಕೆ 3
19. ಕತ್ತರಿ, ಕತ್ತಿ, ಕನ್ನಡಿ, ಬಾಚಣಿಗೆ ಎಲ್ಲವನ್ನೂ ತುಂಬಿದ ಚೀಲ 3
21. ಪತ್ರದಲ್ಲಿ ಪಾವನವಾದುದು 3
22. ಕಾಡಿನಲ್ಲಿ ಬೀಸುವ ಗಾಳಿ 3
23. ಇವಳು ದೈವ ಸ್ವರೂಪಿ 3
24. ಪಶುವಿಗೆ ಬಿದ್ದಿರುವ ಕೊಡಲಿ ಪೆಟ್ಟು 3
25. ಮಾರುತಕ್ಕೆ ಬೆರೆತು ರಾಗವಾಗುವ ಪರ್ವತ ದ್ವೀಪ 3

ಎಡದಿಂದ ಬಲಕ್ಕೆ

1. ಪ್ರತಿ ನಿತ್ಯದ ಕ್ರಿಯೆಗಳಿಗೆ ಸಂಬಂಧಿಸಿದ್ದು 4
3. ಜನರಿಗೆ ನೀಡಬಹುದಾದ ಉತ್ಸಾಹದ ಪ್ರೇರಣೆ 4
5. ಹಸೆಮಣೆಯೇರಿರುವ ಕುಮಾರಿ 5
6. ನೂರವರ್ಷಗಳ ಅಳತೆ 4
8. ಬ್ಯಾ ಬ್ಯಾ ಎಂದು ಜಿಗಿಯುವ ಬಕರಾ ಕೂಸು 4
10. ವರ್ಷಗಳು ಕಳೆದಂತೆ ಮತ್ತೆ ಹುಟ್ಟುವ ಹೊಸ ಕಾಲಮಾನ 4
12. ವ್ಯಾಪಾರ ವಹಿವಾಟುಗಳನ್ನು ಹೊಂದಿಸು 4
15. ಅಂತರಂಗದ ಅಕ್ಕನ ಗಂಡ 2
16. ಅರಸನ ಆಸ್ಥಾನದ ಕಾರುಬಾರು 3
17. ಹಾಗೂ ಕುಡಿದು ಏರುವ ಅಮಲು 2
18. ಅಪರಾಧ, ಅಪಘಾತದ ನಂತರ ಪೋಲಿಸರು ನಡೆಸುವ ಕೆಲಸ 4
20. ಒಂದು ಜಾತಿಯ ಗುಂಪಿನ ಒಡೆಯ ವಿಶ್ವವಿದ್ಯಾಲಯದ ವರಿಷ್ಠ ಅಧಿಕಾರಿಯೆ? 4
22. ಮತ್ತೆ ಮತ್ತೆ ಎನ್ನುವುದರ ಪರ್ಯಾಯವನ್ನು ಮತ್ತೆ ಮತ್ತೆ ಹೇಳಬೇಕೆ? 4
24. ಕೇವಲ ಓಲೆಯ ಮೂಲಕ ಬೆಳೆದ ಪ್ರೀತಿ 4
26. ಬಟ್ಟೆ ತೊಟ್ಟು ಮಾಡಿಕೊಳ್ಳುವ ಸಿಂಗಾರ 5
27. ಹೊಸವರ್ಷಕ್ಕೆ ಹಾಡೋಣ ಬನ್ನಿ ಹೊಸ ಹಾಡು 4
28. ಬೆಳಗು ಮಂಗಳಮಯವಾಗಲೆಂಬ ಆಶಯ 4

ಪದಬಂಧ ಉತ್ತರ -2821

ಮೇಲಿಂದ ಕೆಳಕ್ಕೆ

1.ಜೀವನಾಂಶ 2.ಪಾರಿತೋಷಕ 4.ಕಾಲುವೆದಾರಿ 5.ಗೆಣೆಕಾರ 8.ತಾಳವಾದನ 10.ವೀರವನಿತೆ 12. ನಾವಿಕ 13.ಸಾಧನಾ 17.ಪಾರಮಾರ್ಥಿಕ 19.ಸಾಕಾರಮೂರ್ತಿ 20.ಧನುರ್ಮಾಸ 22.ನೆರೆಸುಂಕ

ಎಡದಿಂದ ಬಲಕ್ಕೆ

1.ಜೀವನೋಪಾಯ 3.ಆಕಾಶಗಂಗೆ 6.ತೋಮಾಲೆಸೇವೆ 7.ಶತಾಯುಷ 9.ದಾನವೀರ 11.ಕನಾ 13.ಸಾರಿ 14.ರವಾ 15.ವಿವಿಧ 16.ವಟು 17.ಪಾಕ 19.ನಾಸಾ 20.ಧನಕರ 21.ಕಾಳುತೆನೆ 23.ಮಾವಿನಮರ 24.ಸತ್ಯಶಂಕರ 25.ಸ್ಫೂರ್ತಿದಾಯಕ

2023

ವರ್ಷದ ಓದಿನ ಖುಷಿ

ಕರ್ನಾಟಕ ಎಂದು ನಾಡು ಹೆಸರಾಗಿ 50 ವಸಂತಗಳು ಕಳೆದ ಈ ಸಂದರ್ಭದಲ್ಲಿ ಸಾಹಿತ್ಯ ಸಮೃದ್ಧಿ ಕಣ್ಣು ಕೋರೈಸುತ್ತದೆ. ಈ ವರ್ಷ ತಮಗೆ ದಕ್ಕ ಓದಿನಲ್ಲಿ ಇಷ್ಟವಾದ ಕೃತಿಗಳು ಯಾವುವು, ಅವುಗಳ ಹೂರಣವೇನು ಎನ್ನುವುದನ್ನು ಭಿನ್ನ ಸಂವೇದನೆಯ ಸಾಹಿತಿಗಳು ಹಂಚಿಕೊಂಡಿದ್ದಾರೆ.

ಭಾವಸಾಂದ್ರತೆಯ ಕವನಗಳು

ಗಂಡಸಿಗಿಂತ ಭಿನ್ನವಾದ/ಒಂದು ಹೆಣ್ಣಿನ ಏಕಾಂತ/ಏನೆಂದು ಬಲ್ಲಿರಾ ನೀವು?

ಎಂದು ಕಾವ್ಯ ಶುರುವಾಗುತ್ತದೆ- ನಾನು ಈ ವರ್ಷ ಓದಿದ ಪುಸ್ತಕಗಳಲ್ಲೆ ನನ್ನ ಎದೆ ತುಂಬಿಬಂದ ಕವನ ಸಂಕಲನವಿದು. ಇದರ ಶೀರ್ಷಿಕೆಯೇ ಸೂಚಿಸುವಂತೆ ಈ ಪುಸ್ತಕದಲ್ಲಿ ಒಬ್ಬ ಆದಿವಾಸಿ ಹೆಣ್ಣುಮಗಳು ತನ್ನ ವರ್ಗದವರಿಂದಲೂ ಶೋಷಿತಗೊಂಡು ನಿಜಕ್ಕೂ ತನ್ನ ವಿಳಾಸವನ್ನು, ಭೂಮಿಯನ್ನು, ತನ್ನ ಅಸ್ಮಿತೆಯನ್ನು ಹುಡುಕಿಕೊಳ್ಳಲು ಹವಣಿಸುತ್ತಿರುವ ಗಾಢವಾದ ಕವಿತೆಗಳಿವೆ. ಹಾಗಂತ ಇಲ್ಲಿ ಗೋಗರೆತವಿಲ್ಲ. ವ್ಯಂಗ್ಯ-ವಿಷಾದದ ಮೊನಚುಬಾಣದಂತೆ ಇರಿಯುತ್ತವೆ, ಗಟ್ಟಿದನಿಯಲ್ಲಿ ನಿಮ್ಮನ್ನು ತಟ್ಟಿ ಕುತ್ತಿಗೆಪಟ್ಟಿ ಹಿಡಿದು ಕೇಳುತ್ತವೆ.



ಕವಿ ತನ್ನ ಸಮುದಾಯದ ಸುತ್ತಲಿನ ಎಲ್ಲವನ್ನೂ ಕಾವ್ಯದ ವಸ್ತುವನ್ನಾಗಿ ಬಳಸಿಕೊಂಡು ಹೊಸ ಅರ್ಥ ನೀಡುತ್ತ, ಕರಾಳಹಾಸ್ಯದ ಮೂಲಕ ಓದುಗರಲ್ಲಿ ಭಾವತೀಕ್ಷ್ಣತೆಯನ್ನು ಉಂಟುಮಾಡುತ್ತಾರೆ. ಅನುವಾದವೂ ಅಷ್ಟೇ ಸಶಕ್ತವಾಗಿ ತನ್ನ ಕಾಣ್ಕೆಯನ್ನು ನೀಡಿದೆ.

ಒಂದು ಕಡೆ- ಒಡಿಶಾದ ಆದಿವಾಸಿ ಸಮುದಾಯದಿಂದ ಬಂದು ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ ದ್ರೌಪದಿ ಮುರ್ಮು ಅವರು; ಮತ್ತೊಂದು ಕಡೆ– ತನ್ನ ಸ್ವಪ್ರತಿಭೆ, ಪರಿಶ್ರಮದಿಂದ ಕುಸ್ತಿಯಲ್ಲಿ ದೊಡ್ಡ ಸಾಧನೆ ಮಾಡಿ ಪದ್ಮಶ್ರೀ ಪಡೆದ ಹರಿಯಾಣದ ಸಾಕ್ಷಿ ಮಲಿಕ್ ಲೈಂಗಿಕ ದೌರ್ಜನ್ಯದ ವಿರುದ್ಧ ನ್ಯಾಯಕ್ಕಾಗಿ ಪ್ರತಿಭಟಿಸುತ್ತಲೇ ಇರುವ ದಾರುಣತೆ! ಈ ಸಂದರ್ಭದಲ್ಲಿ ಜಾರ್ಖಂಡ್‌ನ ಸಂತಾಲಿಯ ಬುಡಕಟ್ಟಿನ ನಿರ್ಮಲಾ ಪುತುಲ್ (ಅನುವಾದ: ರೇಣುಕಾ ನಿಡಗುಂದಿ) ಅವರ ಕವಿತೆಗಳ ಓದು ಹೆಚ್ಚು ಪ್ರಸ್ತುತ ಎನಿಸುತ್ತಿದೆ.

ಇಲ್ಲಿನ ಎಷ್ಟೋ ಕವಿತೆಗಳನ್ನು ಓದುತ್ತ ಓದುತ್ತ ನಾನು ಕಣ್ಣೀರುಗರೆದಿದ್ದೇನೆ! ರಮ್ಯಕವಿತೆಗಳಂತೆ ಮನಸ್ಸಿನಲ್ಲೇ ಓದಿಕೊಂಡರೆ ಇದರ ಭಾವಸಾಂದ್ರತೆ ದಕ್ಕುವುದಿಲ್ಲ; ಬದಲಾಗಿ ಎದುರು ಕುಳಿತವರಿಗೆ ಅಥವಾ ನೀವೊಬ್ಬರೇ ದನಿತೆರೆದು ಓದಿಕೊಳ್ಳಿ.

ಮೌನೇಶ ಬಡಿಗೇರ

ಹಿಂಸ್ರ ವಾಸ್ತವದ ವಸ್ತುನಿಷ್ಠ ನಿರೂಪಣೆ



ಶ್ರೀಧರ ಬಳಗಾರ ಅವರ ‘ವಿಸರ್ಗ’ ಕಳೆದ ವರ್ಷದ ಅತ್ಯುತ್ತಮ ಕೃತಿಗಳಲ್ಲೊಂದು. ಮನುಷ್ಯರನ್ನು ವ್ಯಕ್ತಿಗಳ ಎನ್ನುವ ಪರಿಧಿಯನ್ನು ಮೀರಿ ಮನುಷ್ಯಾವಸ್ಥೆಯ ಆಳದಲ್ಲಿ ಗ್ರಹಿಸಲು ಇದು ಹವಣಿಸುತ್ತದೆ. ಮನುಷ್ಯ ಬದುಕಿನ ಚಲನೆಗಳನ್ನು ಯಾರು, ಯಾವುದು ನಿರ್ದೇಶಿಸುತ್ತದೆ, ನಿಯಂತ್ರಿಸುತ್ತದೆ ಎನ್ನುವ ಪ್ರಶ್ನೆಯ ಜೊತೆಯಲ್ಲೇ ಬಿಡಿಸಬರದಂತೆ ಹೆಣೆದುಕೊಂಡಿರುವುದು ಬದುಕಿನ ಪರಿಸರ. ಒಂದು ಇನ್ನೊಂದರ ಮೇಲೆ ಸ್ವಾಮ್ಯ ಪಡೆಯಲು ನಡೆಸುವ ಹೋರಾಟದ ಇದನ್ನು ಹೋರಾಟ ಎಂದು ಕರೆಯುವುದೂ ಸರಿಯಲ್ಲವೇನೋ. ಏಕೆಂದರೆ ಮನುಷ್ಯರೇ ಕಟ್ಟಿಕೊಂಡ ಸಾಮಾಜಿಕ ಸಂಸ್ಥೆಗಳು ಕೂಡ ತಮ್ಮ ಅಸ್ತಿತ್ವ ಮತ್ತು ಅಸ್ಮಿತೆಗಾಗಿ ಮನುಷ್ಯರನ್ನೇ ನುಂಗಿ ನೀರು ಕುಡಿಯುವ ವಿಲಕ್ಷಣ ದುರಂತವನ್ನು ಈ ಕೃತಿ ಕಾಣಿಸುವಲ್ಲಿ ಯಶಸ್ವಿಯಾಗಿದೆ. ಆದ್ದರಿಂದಲೇ ಇದೊಂದು ಘನವಾದ ಕೃತಿಯಾಗಿದೆ. ಭೀಕರವೆನಿಸುವ ಹಿಂಸ್ರ ವಾಸ್ತವವನ್ನು ಈ ಕೃತಿ ವಸ್ತುನಿಷ್ಠವಾಗಿ ಹೇಳುತ್ತಲೇ ಕಲೆಗೆ ಮಾತ್ರ ಸಾಧ್ಯವಿರುವ ಅಂತಃಕರಣದಲ್ಲಿ ತೋಯ್ದು ನಿರೂಪಿಸುತ್ತದೆ.

ನಟರಾಜ್ ಹುಳಿಯಾರರ ‘ಕಥಾನಂತರ’, ನಾಗ ಹುಬ್ಳಿಯವರ ಅನುವಾದಿತ ಕೃತಿ ‘ವಿದ್ಯಾವಂತ ವೇಶ್ಯೆಯ ಆತ್ಮಕಥೆ’, ಕೃಷ್ಣಮೂರ್ತಿ ಹನೂರರ ‘ಕನ್ನ ಮರಿ’, ದಾದಾಪೀರ್ ಜೈಮನ್ ನಿರೂಪಿಸಿರುವ ರೂಮಿ ಹರೀಶ್ ಅವರ ‘ಜೋನ್ಪುರಿ ಖಯಾಲ್’, ರಹಮತ್ ತರೀಕೆರೆ ಅವರ ಆತ್ಮಕಥೆ ‘ಕುಲುಮೆ’... ಇನ್ನೂ ಹಲವು ಕೃತಿಗಳು ನನಗೆ ಬಲು ಪ್ರಿಯವೇ ಆಗಿವೆ.

ಎಂ.ಎಸ್. ಆಶಾದೇವಿ

ಮಹತ್ವಪೂರ್ಣ ಬಹುಮುಖಿ ಇತಿಹಾಸ

ರೂಪ ಹಾಸನ ಅವರು ನಿರೂಪಿಸಿರುವ ‘ಮಹಾಸಂಗ್ರಾಮಿ’ ಕೃತಿಯು ನಮ್ಮ ಕಾಲದ ಮಹತ್ವಪೂರ್ಣ ಬಹುಮುಖಿ ಇತಿಹಾಸವಾಗಿದೆ. ಇದು ಸಾಂಪ್ರದಾಯಿಕ ಅರ್ಥದಲ್ಲಿ ವ್ಯಕ್ತಿ ಚರಿತ್ರೆ ಅಲ್ಲ. ಏಕೆಂದರೆ ಈ ಕೃತಿಯ ಕೇಂದ್ರದಲ್ಲಿರುವುದು ಎಸ್.ಆರ್.ಹಿರೇಮಠ ಎನ್ನುವ ವ್ಯಕ್ತಿಯಲ್ಲ. ಅಲ್ಲಿರುವುದು ಅರ್ಧಶತಮಾನದ ಅನೇಕ ಮುಖ್ಯ ಚಾರಿತ್ರಿಕ ತಿರುವುಗಳ ಕಥೆ. ಆಧುನಿಕ ಯೂರೋಪು ಮತ್ತು ವಿಶ್ವದ ಬಲಶಾಲಿ ರಾಷ್ಟ್ರವಾಗಿದ್ದ ಅಮೆರಿಕಗಳು, ತಾವು ನೆಚ್ಚಿಕೊಂಡಿದ್ದ ಅಭಿವೃದ್ಧಿ, ಆಧುನಿಕತೆ ಇವುಗಳನ್ನು ತೀವ್ರವಾಗಿ ಪ್ರಶ್ನಿಸಿಕೊಂಡು ಸ್ವಾತಂತ್ರ್ಯ, ಅಸಮಾನತೆ, ವಿಧಿಸಿದ ಮಾನವಹಕ್ಕುಗಳ ಬಗ್ಗೆ ಚಿಂತಿಸಿ ಕ್ರಿಯಾಶೀಲವಾಗಿ ಬದಲಾವಣೆಗೆ ತೊಡಗಿಕೊಂಡಾಗ ಹುಟ್ಟಿದ ಪ್ರಜ್ಞೆ ಹಿರೇಮಠರನ್ನು ರೂಪಿಸುತ್ತದೆ. ಆದ್ದರಿಂದಲೇ ಅವರಿಗೆ ಅಮೆರಿಕದ ಥೋರೋ ಶೂಮಾಕರ್ ಇಂಥವರು ಗುರುಗಳಾಗಿ ಕಾಣುತ್ತಾರೆ. ಅಮೆರಿಕದಲ್ಲಿ ಇದ್ದುಕೊಂಡೇ ತುರ್ತು ಪರಿಸ್ಥಿತಿ ಹೇರಿದ್ದ ಶಕ್ತಿಗಳ ವಿರುದ್ಧ ಪ್ರಭಾವಶಾಲಿ ಹೋರಾಟವನ್ನು ನಡೆಸುತ್ತಾರೆ. ಭಾರತಕ್ಕೆ ಮರಳಿ ಬಂದ ಮೇಲೆ ಗಾಂಧಿ ಕನಸಿನ ಗ್ರಾಮ ಸ್ವರಾಜ್ಯವನ್ನು ಮೆಡ್ಲೇರಿಯಲ್ಲಿ ನಿರ್ಮಿಸುತ್ತಾರೆ. ಬಳ್ಳಾರಿ ರಿಪಬ್ಲಿಕ್‌ನ ವಿರುದ್ಧ ಯಶಸ್ವಿ ಹೋರಾಟವನ್ನು ನಡೆಸುತ್ತಾರೆ. ಇವೆಲ್ಲ ಈ ಕೃತಿಯಲ್ಲಿ ಅದ್ಭುತವಾಗಿ ನಿರೂಪಿತವಾಗಿದೆ. ಆದರೆ ಇದರಲ್ಲಿ ನಾಯಕ ಆರಾಧನೆ ಇಲ್ಲ. ಇದು ಯಾವ ವೈಭವೀಕರಣವೂ ಇಲ್ಲದೇ ನಮ್ಮ ಕಾಲದ ಬಹು ದೊಡ್ಡ ಹೋರಾಟಗಾರನ ಅನುಭವಗಳ ಕಥನದ ಮೂಲಕ ಅದೆಷ್ಟು ವಿಷಯಗಳನ್ನು ಚರ್ಚೆಗೆ ತರುತ್ತದೆ ಎಂದರೆ ಇದನ್ನು ರಾಜಕೀಯ–ಸಾಂಸ್ಕೃತಿಕ ಜ್ಞಾನಕೋಶವಾಗಿ ಓದಬಹುದು. ರೂಪ ಹಾಸನ ಅವರ ವಿರಳವೂ–ಸೂಕ್ಷ್ಮವೂ ಆಗಿರುವ ನಿರೂಪಣೆಯಿಂದಾಗಿ ಓದುವವರ ಬದುಕನ್ನು ಬದಲಾಯಿಸಬಲ್ಲ ಶಕ್ತಿ ಅದಕ್ಕಿದೆ.



ರಾಜೇಂದ್ರ ಚೆನ್ನಿ



ಹದವರಿತ ಕಾವ್ಯಧ್ವನಿ

ಭಾಷೆ ಮತ್ತು ಆಕೃತಿಯ ವಿಷಯದಲ್ಲಿ ಸದಾ ಪ್ರಯೋಗಶೀಲರಾದ ಕೆ.ಪಿ.ಮೃತ್ಯುಂಜಯ ಅವರದ್ದು ಸಮಕಾಲೀನ ಸಂದರ್ಭದ ಹದವರಿತ ಕಾವ್ಯಧ್ವನಿ. ಇವರ ‘ಉಳಿದು ಬಿಡು ಒಂದು ಬಿಂದುವಾಗಿ’ ಸಂಕಲನವು ಸಮೃದ್ಧ ಭಾವಲೋಕದ ಪ್ರತೀಕವಾಗಿದೆ. ‘ಹೊಸ ದಿನದಂತೆ ಹೊಸ ಕವಿತೆ’ ಎಂದು ನಂಬಿ, ಅದರಂತೆ ಬರೆಯುತ್ತಿರುವ ಮೃತ್ಯುಂಜಯ ಅವರ ಕಾವ್ಯಭಾಷೆಯ ಶಕ್ತಿಯಿರುವುದು ಅದರ ಅಡಕದ ಗುಣದಲ್ಲಿ: ‘ಕನಸು ತುಂಬಿ ತುಳುಕಿ/ದುಃಖವಳಿದು ಅಳುಕಿ/ ಉಕ್ಕಿ ಹರಿವ ಹೊಳೆಯಂತೆ ಮಾತು ಬೆಳೆದು/ಹೊಸದೇನೇ/ಈ ದಿನದಂತೆ/ಗಾಳಿ ಬೆಳಕಿನಂಥ-/ನನ್ನ ಕವಿತೆ’. ‘ನಿಂದ ನೀ ತಿಳುಕೊ’ ಎಂಬುದನ್ನು ಉತ್ಕಟವಾಗಿ ನೆಚ್ಚಿ ಬರೆಯುವ ಕವಿ ಮಾತ್ರ ಹೀಗೆ ತನ್ನ ಕಾವ್ಯಮೀಮಾಂಸೆಯನ್ನು ಕಟ್ಟಬಲ್ಲ/ಳು.



ಅಂತರಂಗ ಮತ್ತು ಬಹಿರಂಗದ ಸೋಜಿಗಗಳನ್ನು ಬೆಸೆದು ಕಥಾಪ್ರಕಾರವನ್ನು ಚೋದ್ಯವಾಗಿಸಿರುವ ಅನುಪಮಾ ಪ್ರಸಾದ್ ಅವರ ‘ಚೋದ್ಯ’ ಕಥಾಸಂಕಲನ; ಭಾಷೆಯ ಬಳಕೆಯನ್ನು ‘ಸರಿ’ಯಾಗಿ ತಿದ್ದುವ ಅಪಾರ ಅವರ ‘ಸರಿಗನ್ನಡಂ ಗೆಲ್ಗೆ’; ಹೊಸಕಥನದ ಜಾಡು ಹಿಡಿದಂತಿರುವ ಸ್ವಾಮಿ ಪೊನ್ನಾಚಿಯವರ ‘ದಾರಿ ತಪ್ಪಿಸುವ ಗಿಡ’; ಒಲವಿನ ಹಂಬಲವನ್ನು ಪರೀಕ್ಷಿಸಿಕೊಳ್ಳುವಂತೆ ಮಾಡಿದ ಎಚ್.ಎಸ್.ಶ್ರೀಮತಿ ಅವರ ‘ಸಾಂಗತ್ಯ’ (ಅನುವಾದ) ಕೃತಿಗಳು ನನ್ನ ಅರಿವಿನ ಲೋಕವನ್ನು ಹಿಗ್ಗಿಸಿವೆ.

ಜ.ನಾ.ತೇಜಶ್ರೀ

ವಿಮರ್ಶಾ ಪ್ರಜ್ಞೆಯ ಬಹುದೊಡ್ಡ ಮಾದರಿ

ಭಾಷೆ, ತತ್ವ, ತರ್ಕಗಳು ಹಿಂದೆ ಸರಿದು ಕಥನವೇ ಮುನ್ನೆಲೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಸಿ.ಜಿ. ಲಕ್ಷ್ಮೀಪತಿ ಅವರ ‘ಲೋಕದೃಷ್ಟಿ ಮಾರ್ಕ್ಸ್‌ವಾದೋತ್ತರ ಮತ್ತು ಆಧುನಿಕ ಚಿಂತಕರ ಕಥನ’ ಕೃತಿಯು ಅಂತರಶಿಸ್ತೀಯ ಅಧ್ಯಯನಶೀಲರಿಗೆ ಮಹತ್ವದ ಒಳನೋಟಗಳನ್ನು ಒದಗಿಸಿದೆ. ಪಶ್ಚಿಮದ ಜ್ಞಾನಮೀಮಾಂಸೆಯನ್ನು ಕನ್ನಡಕ್ಕೆ ದಕ್ಕಿಸಿಕೊಡುವ ಪ್ರಯತ್ನ ಇಲ್ಲಿದೆ. ಸ್ವವಿಮರ್ಶೆ ಮತ್ತು ಲೋಕವಿಮರ್ಶೆಯೆಂಬ ಎರಡೂ ಮಾದರಿಗಳು ಸಮ್ಮಿಳಿತಗೊಂಡ ಅಕೆಡೆಮಿಕ್ ವಿದ್ಯಾರ್ಥಿ ಹೊತ್ತಿಗೆಯಂತೆ ರಚನೆ ಕಾಣಿಸಿದೆ. ಮಾರ್ಕ್ಸ್‌ವಾದೋತ್ತರ ಮತ್ತು ಆಧುನಿಕವೆಂಬ ನೆಲೆಯಲ್ಲಿ ಕೃತಿಯನ್ನು ಎರಡು ಭಾಗವಾಗಿ ವಿಭಾಗಿಸಿದ್ದು, ಓದುಗನಿಗೆ ಅರ್ಥಮಾಡಿಕೊಳ್ಳಲಿರುವ ಸರಳೀಕೃತ ಮಾದರಿಯಂತಿದೆ.

ಮಾನವಿಕದ ಮಾತೃವಾದ ಸಮಾಜಶಾಸ್ತ್ರವನ್ನು ಮೂಲಾಧಾರವಾಗಿಟ್ಟುಕೊಂಡು ಅನ್ಯಜ್ಞಾನಶಿಸ್ತುಗಳ ಹಿನ್ನೆಲೆಯಲ್ಲಿ ಸಮಕಾಲೀನ ಸಮಾಜವನ್ನು ಗ್ರಹಿಸಲು ಇಲ್ಲಿ ಅವಕಾಶವಿದೆ. ಹತ್ತೊಂಬತ್ತು ಮತ್ತು ಇಪ್ಪತ್ತನೇ ಶತಮಾನದ ಪ್ರಮುಖ ತತ್ವಶಾಸ್ತ್ರಜ್ಞರನ್ನು ಪರಿಚಯಿಸುವ; ಕಾರ್ಲ್ ಮಾರ್ಕ್ಸ್ ನಂತರದ ತೃತೀಯ ಜಗತ್ತಿನಲ್ಲಿ ತತ್ವಶಾಸ್ತ್ರ, ಮಾರ್ಕ್ಸ್‌ವಾದ, ವಸಾಹತ್ತೋತ್ತರ ಚಿಂತನೆಗಳ ಬೆಳವಣಿಗೆಯ ಆಯಾಮಗಳನ್ನು ಪರಿಶೀಲಿಸುವ; ಮಾರ್ಕ್ಸ್ ರೂಪಿಸಿದ ಮಾರ್ಕ್ಸ್‌ವಾದದ ಪುನರ್ ವಿಮರ್ಶೆಯ ನೆಲೆಗಳನ್ನು ಗ್ರಹಿಸುವ ಕಾರ್ಯವನ್ನು ಈ ಪುಸ್ತಕ ಮಾಡಿದೆ. ಹನ್ನೆರಡು ಮಂದಿ ಚಿಂತಕರಲ್ಲಿ ಹೆಣ್ಣು ಲೋಕದೃಷ್ಟಿಗೆ ಕೃತಿಯೊಳಗೆ ಸಿಮನ್ ದುಬುವಾ ಎಂಬ ಏಕೈಕ ಚಿಂತಕಿಗೆ ಮಾತ್ರ ಸ್ಥಾನ ದಕ್ಕಿದೆ ಎಂಬುದೆ ಕೃತಿಯ ಮಿತಿ. ಈ ಕೃತಿಯು ವಿಮರ್ಶಾ ಪ್ರಜ್ಞೆಯ ಬಹುದೊಡ್ಡ ಮಾದರಿಯೇ ಸರಿ. ಇದಲ್ಲದೆ ಸುರೇಶ್ ನಾಗಲಮಡಿಕೆ ಅವರ ‘ಮಣ್ಣಿನ ಕಸುವು’ ಕೃತಿಯು ಓದನ್ನು ವಿಸ್ತರಿಸಲು ಸಹಕರಿಸಿದೆ.

ಮುಸ್ತಫಾ ಕೆ.ಎಚ್.

ದಲಿತ ಅನುಭವದ ಮೂಸೆಯ ಗಟ್ಟಿ ಕೃತಿ

ದು.ಸರಸ್ವತಿಯವರು ಅನುವಾದಿಸಿರುವ ಮರಾಠಿಯ ಶ್ರೇಷ್ಠ ಕತೆಗಾರರಲ್ಲೊಬ್ಬರಾದ ಬಾಬುರಾವ್ ಬಾಗೂಲ್‌ರ ‘When I Hid My Caste’ ಕೃತಿಯ ಕನ್ನಡಾನುವಾದ ‘ಬೀದಿ ಹೆಣ್ಣು’ ಸೃಜನಶೀಲ ಕೃತಿಗಳಲ್ಲಿ ಬಹಳ ಇಷ್ಟವಾಯಿತು. ಬಾಗೂಲ್ ಸ್ವಾತಂತ್ರ್ಯೋತ್ತರ ಭಾರತದ ಮೊದಲ ತಲೆಮಾರಿನ ದಲಿತ ಲೇಖಕರು. ಸುಧಾರಣಾವಾದಿ ಲೇಖಕರು ಕಟ್ಟಿಕೊಡುತ್ತಾ ಬಂದಿದ್ದ ದಲಿತ ಜಗತ್ತನ್ನು ತಮ್ಮ ಕತೆಗಳ ಮೂಲಕ ಹೊಡೆದು ಉರುಳಿಸಿಬಿಟ್ಟವರು. ತಳಸಮುದಾಯಗಳ ಪಾತ್ರಗಳು ಕೇವಲ ದಮನಕ್ಕೊಳಗಾಗುವುದಕ್ಕಷ್ಟೇ ಸೀಮಿತವಾಗದೆ ಸಮಾಜದಲ್ಲಿ ಘನತೆಯಿಂದ ಬದುಕುವುದಕ್ಕಾಗಿ ಹೋರಾಡುತ್ತವೆ ಎನ್ನುವುದನ್ನು ತೋರಿಸಿಕೊಟ್ಟವರು. ದಲಿತ ಅನುಭವದ ಮೂಸೆಯಲ್ಲಿ ಮೂಡಿರುವ ಈ ಕತೆಗಳು ಸಮಕಾಲೀನ ಸಮಾಜಕ್ಕೆ ಕನ್ನಡಿ ಹಿಡಿಯುವಂತಿವೆ.

ಜೊತೆಗೆ ರಾಜೇಂದ್ರ ಚೆನ್ನಿಯವರ ‘ಸಾಂಸ್ಕೃತಿಕ ರಾಜಕಾರಣ’ ಕಳೆದ ಕೆಲವು ವರ್ಷಗಳಿಂದ ಸೃಷ್ಟಿಯಾಗಿರುವ ಸಾಮಾಜಿಕ ಬಿಕ್ಕಟ್ಟುಗಳಿಗೆ ಜವಾಬ್ದಾರಿಯುತ ಚಿಂತಕರೊಬ್ಬರು ಪ್ರತಿಕ್ರಿಯಿಸಬೇಕಾದ ಮಾದರಿ ಯಾವುದೆಂಬುದನ್ನು ತೋರಿಸುವ ಕೃತಿಯಾಗಿದೆ. ಗುರುಪ್ರಸಾದ್ ಕಂಟಲಗೆರೆ ನಿರೂಪಿಸಿರುವ ದಲಿತ ಚಳವಳಿಗಾರ ಕುಂದೂರು ತಿಮ್ಮಯ್ಯನವರ ಆತ್ಮಕಥನ ‘ಅಂಗುಲಿಮಾಲ’ ವಿಶಿಷ್ಟ ಮತ್ತು ಪ್ರಾಮಾಣಿಕ ಕಥನವಾಗಿದೆ. ಶ್ರೀಪಾದಭಟ್ ಅವರ ‘ವಿಷವಟ್ಟಿ ಸುಡುವಲ್ಲಿ’, ಬಂಜಗೆರೆ ಜಯಪ್ರಕಾಶ್ ಅನುವಾದಿಸಿರುವ ಗೇಲ್ ಓಮ್ವೆಡ್ತ್ ಅವರ ‘ಬೇಗಂಪುರ’, ವಿಕಾಸ್ ಮೌರ್ಯ ಅನುವಾದಿಸಿರುವ ಎಲಿನಾರ್ ಝೆಲಿಯಟ್ ಅವರ ‘ಅಂಬೇಡ್ಕರ್ ಜಗತ್ತು’ ಈ ಕಾಲಕ್ಕೆ ಬೇಕಿರುವ ಬೌದ್ಧಿಕ ಹತಾರಗಳನ್ನು ಸೃಷ್ಟಿಸಬಲ್ಲ ಚಿಂತನೆಗಳನ್ನು ಕೊಟ್ಟರೆ, ಸಂವರ್ತ ಸಾಹಿಲ್ ಅನುವಾದಿಸಿರುವ ಜೆಸಿಂತಾ ಕರ್ಕೆಟ್ಟಾ ಅವರ ‘ಗೋರಿಯ ಮೇಲೆ ರಾಗಿಯ ಕೊನರು’ ಆದಿವಾಸಿ ಸಮುದಾಯದ ಸಂವೇದನಾಶೀಲ ಕವಯಿತ್ರಿಯ ದನಿಯನ್ನು ಕನ್ನಡಕ್ಕೆ ಪರಿಚಯಿಸುವ ಮೂಲಕ ಮಹತ್ವದ ಕೃತಿಯಾಗಿ ನಿಲ್ಲುತ್ತದೆ.



ವಿ.ಎಲ್. ನರಸಿಂಹಮೂರ್ತಿ

ಕೌದಿ ನೆನಪುಗಳ...

10ನೇ ಪುಟದಿಂದ...

ಕೌದಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿ, ನ್ಯಾಯಯುತ ಬೆಲೆ ನಿಗದಿಪಡಿಸಿ ಎಂಬುದು ಅವರ ತುಂಬಾ ಹಳೆಯ ಬೇಡಿಕೆ. ಅದಕ್ಕಾಗಿ ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಅಧಿಕಾರಿಗಳಿಂದ ಜನಪ್ರತಿನಿಧಿಯವರೆಗೆ ಅವರು ಮನವಿ ಸಲ್ಲಿಸಿದ್ದಾರೆ, ಕಷ್ಟಕೋಟಲೆಗಳನ್ನು ಹೇಳಿಕೊಂಡಿದ್ದಾರೆ. ಆದರೆ, ಅವರಿಗೆ ಭರವಸೆ ಹೊರತುಪಡಿಸಿ ದಕ್ಕಿದ್ದೇನೂ ಇಲ್ಲ.

‘ಬ್ಲಾಂಕೆಟ್, ಕಂಬಳಿ, ಹೊದಿಕೆ, ರಗ್, ಬೆಡ್‌ಶೀಟ್ ಮುಂತಾದವುಗಳಿಗೆ ಹೋಲಿಸಿದರೆ ಕೌದಿಯ ಬೆಲೆ ತುಂಬಾ ಕಡಿಮೆ. ಎಲ್ಲವೂ ಕಾರ್ಖಾನೆಗಳಲ್ಲಿ ಸಿದ್ಧವಾದರೆ, ಕೌದಿಯನ್ನು ಕೈಯಲ್ಲೇ ಹೊಲಿಯಬೇಕು. ಶ್ರಮಕ್ಕೆ ತಕ್ಕಂತೆ ಬೆಲೆ ನಿಗದಿ ಆಗುತ್ತಿಲ್ಲ. ರಾಜ್ಯದ ವಿಶಿಷ್ಟ ಉತ್ಪನ್ನವೆಂದು ಇದನ್ನು ಬಿಂಬಿಸಲಾಗುತ್ತಿಲ್ಲ. ಇತ್ತ ಮೀಸಲಾತಿ ಸೌಲಭ್ಯವಿಲ್ಲ, ಅತ್ತ ಸರ್ಕಾರ ನಮಗೆ ಕಿವಿಯಾಗುತ್ತಿಲ್ಲ’ ಎಂಬ ನೋವು ಶಿಕ್ಷಕ ಸುರೇಶ ಚಳಗೇರಿ ಅವರದ್ದು. ಇದೇ ರೀತಿಯ ನಿರಾಸೆಯ ಮಾತುಗಳು ನಾಗರಾಜ ಕೋಟಿ ಎಂಬುವರದ್ದೂ ಹೌದು.

‘ನೂರಾರು ವರ್ಷಗಳಿಂದ ಅಜ್ಜ, ಮುತ್ತಜ್ಜ ಕಾಲದಿಂದಲೂ ಪಾಲಿಸಿಕೊಂಡು ಬಂದ ಕೌದಿ ಹೊಲಿಯುವ ಕಸುಬು ಕ್ರಮೇಣ ಕಡಿಮೆ ಆಗುತ್ತಿದೆ. ಮನೆಯಲ್ಲಿ ಅಜ್ಜಿಯಂದಿರು ಬಿಟ್ಟರೆ ನಂತರದ ಪೀಳಿಗೆಯವರು ಕೌದಿ ಹೊಲಿಯುವತ್ತ ಆಸಕ್ತಿ ತೋರುತ್ತಿಲ್ಲ. ಓದು, ಕಲಿತು ದೊಡ್ಡವರಾದ ಕೂಡಲೇ ಬಹುತೇಕ ಮಂದಿ ಉದ್ಯೋಗ ಹುಡುಕಿಕೊಂಡು ದೂರದ ಊರುಗಳಿಗೆ ಹೊರಟು ಬಿಡುತ್ತಾರೆ. ಇನ್ನೂ ಕೌದಿ ತಯಾರು ಆಗುವುದಾದರೂ ಹೇಗೆ? ಬಳಸುವುದಾದರೂ ಯಾರು’ ಎಂಬ ಆತಂಕ ಕೌದಿ ಹೊಲಿಯುವವರದ್ದು.

ಕೌದಿಗಳನ್ನು ಸಿದ್ಧಪಡಿಸಲು ಬಳಕೆಯಾಗುವ ಹಳೆಯ ಬಟ್ಟೆಗಳ ಮೂಟೆ

ಕೌದಿ ವ್ಯಾಪ್ತಿ

ಎಲ್ಲಾ ಕಡೆ ಚದುರಿ ಹೋಗಿರುವ ಮೋಚಿ ಸಮುದಾಯದವರು ಆಯಾ ಪ್ರದೇಶಕ್ಕೆ ತಕ್ಕಂತೆ ಬೇರೆ ಬೇರೆ ವೃತ್ತಿ ಕಂಡುಕೊಂಡರೂ ಕೌದಿ ಹೊಲಿಯುವುದರಿಂದ ವಿಮುಖರಾಗಿಲ್ಲ. ಕೊಪ್ಪಳ ಜಿಲ್ಲೆಯ ಕಾರಟಗಿ, ಗಂಗಾವತಿ, ಭಾಗ್ಯನಗರ, ರಾಯಚೂರು ಜಿಲ್ಲೆಯ ಸಿಂಧನೂರು, ಯಾದಗಿರಿಯ ಸುರಪುರ, ಹಾವೇರಿಯ ಶಿಗ್ಗಾವಿ, ವಿಜಯಪುರ, ಬಾಗಲಕೋಟೆ ಜಿಲ್ಲೆಯ ಗ್ರಾಮಗಳು ಸೇರಿದಂತೆ ಬಹುತೇಕ ಕಡೆ ಇರುವ ಅಸ್ತಿತ್ವ ಮತ್ತು ಜೀವನಶೈಲಿಯನ್ನು ಅವರ ಕೌದಿ ಮೂಲಕ ಕಾಣಬಹುದು. ಸಮುದಾಯದ ಎಲ್ಲರನ್ನೂ ಒಟ್ಟುಗೂಡಿಸುವ ಮತ್ತು ಜಾಗೃತಿ ಮೂಡಿಸುವ ನಿರಂತರವಾಗಿ ನಡೆದಿದೆ. ಆದರೆ, ಫಲ ಸಿಕ್ಕಿದ್ದು ಕಡಿಮೆ.

ಒಂದೇ ಸಮುದಾಯಕ್ಕೆ ಸೀಮಿತವಾಗಿದ್ದ ಕೌದಿ ಹೊಲಿಯುವ ಕೆಲಸ ಕ್ರಮೇಣ ವಿವಿಧ ಜಾತಿ, ಸಮುದಾಯದವರಿಗೂ ವಿಸ್ತರಿಸಿದೆ. ಕೆಲ ಅಲೆಮಾರಿ ಸಮುದಾಯದವರು, ಪರಿಶಿಷ್ಟ ಜಾತಿಯವರು, ಹಿಂದುಳಿದ ವರ್ಗದವರು ಇದನ್ನೇ ಕಾಯಕವಾಗಿಸಿಕೊಂಡಿದ್ದಾರೆ. ಇದಕ್ಕೆ ಪೂರಕವಾಗಿ ಕೌದಿಗೆ ಕೌಂದಿ, ಕವುದಿ, ಕವಿದಿ, ಕವದಿ ಎಂದೆಲ್ಲ ಹೆಸರುಗಳು ಬಂದಿವೆ. ಇನ್ನೂ ಕೆಲ ಕಡೆ ದಟ್ಟ ಎಂದೂ ಕರೆಯಲಾಗುತ್ತದೆ.

₹ 100 ಕೂಡ ಉಳಿಯದು

ಒಂದು ಕೌದಿ ಹೊಲಿಯಲು ಸುಮಾರು ₹ 400ರವರೆಗೆ ಖರ್ಚು ಆಗುತ್ತದೆ. ಆದರೆ, ಓಡಾಟ, ಸೂಜಿ–ದಾರ, ಶುಚಿಗೊಳಿಸುವುದು, ಹೊಲಿಯುವುದು ಸೇರಿ ಎಲ್ಲಾ ಖರ್ಚುಗಳನ್ನು ತೆಗೆದರೆ, ಅವರ ಕೈಯಲ್ಲಿ ₹ 100 ಕೂಡ ಉಳಿಯುವುದಿಲ್ಲ. ಒಂದು ಕೌದಿ ಹೊಲಿದು ಪೂರ್ಣಗೊಳಿಸಲು ಒಂದು ವಾರ ಬೇಕು. ಅದಕ್ಕಾಗಿ ಹಾಕಿದ ಶ್ರಮ ಲೆಕ್ಕಕ್ಕೆ ಸಿಗದು. ಜೊತೆಗೆ ಬೆನ್ನುನೋವು ಸೇರಿ ಇನ್ನಿತರ ಆರೋಗ್ಯ ಸಮಸ್ಯೆಯೂ ಅವರನ್ನು ಕಾಡುತ್ತದೆ.

ಮೊದಲ ಓದು

ಬಂಜಾರ ಸಮುದಾಯದ ವರ್ಣಮಯ ಚಿತ್ರಣ

ವರ್ಣಮಯ ಚಿತ್ರಗಳೊಂದಿಗೆ ಬಂಜಾರರ ಜೀವನಗಾಥೆಯನ್ನು ಪರಿಚಯಿಸುವ ಪ್ರಯತ್ನವೇ ‘ಮಹಾಚಲನೆ’ ಕೃತಿ. 130 ಜಿಎಸ್‌ಎಂ ಆರ್ಟ್ ಕಾಗದದಲ್ಲಿ ಕೃತಿಯನ್ನು ಮುದ್ರಿಸಿರುವುದು, ಬಂಜಾರರ ಸೊಗಡು–ಸಂಸ್ಕೃತಿಯನ್ನು ಚಿತ್ರಗಳೊಂದಿಗೆ ಕಟ್ಟಿಕೊಟ್ಟಿರುವುದು ಇಡೀ ಕೃತಿಯ ಅಂದವನ್ನು ಹೆಚ್ಚಿಸಿದೆ. ಬಿ.ಡಿ.ಎ.ದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದ ಡಿ.ರಾಮಾನಾಯಕ್ ಈ ಕೃತಿಯ ಕರ್ತೃ.

300 ಪುಟಗಳ ಕೃತಿಯಲ್ಲಿ ಅರ್ಧದಷ್ಟು ಜಾಗವನ್ನು ಬಂಜಾರರ ಸಂಸ್ಕೃತಿ, ಆಚರಣೆ, ಉಡುಪುಗಳನ್ನು ಪ್ರತಿಬಿಂಬಿಸುವ ಚಿತ್ರಗಳಿಗೆ ನೀಡಲಾಗಿದೆ. ಲೇಖಕರು ಅದರ ಜೊತೆಜೊತೆಗೆ ಇತಿಹಾಸವನ್ನು ವಿವರಿಸುತ್ತ ಹೋಗುತ್ತಾರೆ. ‘ನಾನು ಬಂಜಾರ. ನಾವು ಸಂಚಾರಿಗಳು. ಅಲೆಮಾರಿಗಳು’ ಎಂದು ಕೃತಿಯ ಪ್ರಾರಂಭದಲ್ಲಿಯೇ ಹೇಳುವ ಲೇಖಕರು ದೇಶ, ವಿದೇಶಗಳಲ್ಲಿನ ತಮ್ಮ ಸಮುದಾಯದ ಜನರನ್ನು ಹುಡುಕಿಕೊಂಡು ಹೋಗಿದ್ದಾರೆ. ಭಾರತದಿಂದ ವಲಸೆ ಹೋದ ‘ರೋಮಾ’ ಸಮುದಾಯದ ಕುರಿತು ಕೃತಿಯಲ್ಲಿ ದಾಖಲಿಸಿರುವುದು ಕೃತಿಯ ಹಿಂದಿನ ಸಂಶೋಧನೆ–ಅಧ್ಯಯನಕ್ಕೆ ಹಿಡಿದ ಕೈಗನ್ನಡಿಯಂತಿದೆ.

ಸಮುದಾಯದ ಐತಿಹಾಸಿಕ ಪರಂಪರೆಯನ್ನು ಸ್ಮರಿಸುತ್ತ ಬಂಜಾರರ ಜಗತ್ತನ್ನು ಪರಿಚಯಿಸುತ್ತಾರೆ. ಸಮುದಾಯ, ಧರ್ಮ, ಬಂಜಾರರ ಹಬ್ಬಗಳ ವೈಶಿಷ್ಟ್ಯ ವಿವರಿಸುವ ಮಾಹಿತಿಪೂರ್ಣ ಲೇಖನ ಕೃತಿಯಲ್ಲಿದೆ. ಭಾಷೆ, ಆಹಾರ ಪದ್ಧತಿಯನ್ನು ಪರಿಚಯಿಸುವ ಯತ್ನವೂ ಇಲ್ಲಿ ಕಾಣುತ್ತಿದೆ. ಮರೆತುಹೋದ ಸಹೋದರರನ್ನು ಸ್ಮರಿಸುವ ಲೇಖನವು ಸಮಾಜಕ್ಕೆ ಕೊಡುಗೆ ನೀಡಿದ ಬಂಜಾರ ಮಹನೀಯರನ್ನು ಪರಿಚಯಿಸುತ್ತದೆ. ಒಟ್ಟಾರೆಯಾಗಿ ಬಂಜಾರ ಸಮುದಾಯದ ಸಮಗ್ರ ಚಿತ್ರಣವನ್ನು ಸಂಕ್ಷಿಪ್ತ ರೂಪದಲ್ಲಿ ಕಟ್ಟಿಕೊಡುವ ಯತ್ನವನ್ನು ಕೃತಿ ಮಾಡುತ್ತದೆ. ಪ್ರತಿ ಸಮುದಾಯವೂ ಇಂಥದ್ದೊಂದು ಕೃತಿಯನ್ನು ಹೊಂದಿರಬೇಕೆನ್ನಿಸುವಷ್ಟು ಸೊಗಸಾದ ಹೊತ್ತಿಗೆಯಿದು.

ಪು: 304
₹1800

ಮಹಾಚಲನೆ
ಲೇ: ಡಿ.ರಾಮಾನಾಯಕ್
ಪ್ರ: ಐಬ್ರೊ ಪ್ರಕಾಶನ
ಸಂ: 8884478800

ನೇಪಾಳೀ ಕತೆಗಳ ಗುಚ್ಛ ಕನ್ನಡದಲ್ಲಿ

ಭಾರತೀಯ ಸಾಹಿತ್ಯ ನಕಾಶೆಯಲ್ಲಿ ನೇಪಾಳೀ ಕತೆಗಾರರೂ ಛಾಪು ಮೂಡಿಸುತ್ತಿದ್ದಾರೆ. ಕೋಲ್ಕತ್ತ ಸುತ್ತಮುತ್ತಲಿನ ಡಾರ್ಜಿಲಿಂಗ್, ಡೆಹರಾಡೂನ್ ತರಹದ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವವರಲ್ಲಿ ನೇಪಾಳೀ ಭಾಷಿಕರಿದ್ದಾರೆ. 1821ರಿಂದ ಇದುವರೆಗೆ ನೇಪಾಳೀ ಕತೆಗಳ ಜಾಡು, ಜಾಯಮಾನ ಎರಡೂ ಬದಲಾಗುತ್ತಾ ಬಂದಿದೆ. ಅನುವಾದ ಕಮ್ಮಟವೊಂದರಲ್ಲಿ ಪ್ರತಿಭಾವಂತರ ಆಯ್ದ ನೇಪಾಳೀ ಕತೆಗಳನ್ನು ಹಿಂದಿಗೆ ಅನುವಾದಿಸಲಾಗಿತ್ತು. ದುರ್ಗಾ ಪ್ರಸಾದ್ ಶ್ರೇಷ್ಠ ಅವರು ಅವುಗಳನ್ನು ಆಧರಿಸಿದ ಕೃತಿ ಸಂಪಾದಿಸಿದ್ದರು. ಆ ಕತೆಗಳ ಗುಚ್ಛವನ್ನು ಆರ್. ಲಕ್ಷ್ಮೀನಾರಾಯಣ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ನಂದ ಹಾಂಗಖಿಮ್, ಎಂ.ಎಂ. ಗುರುಂಗ್, ಪರಶುರಾಮ ರೋಕಾ, ಹರಿಪ್ರಸಾದ್ ಗೋರ್ಖಾರಾಈ – ಹೀಗೆ ನೇಪಾಳೀ ಭಾಷೆಯಲ್ಲಿ ಬರೆದ ಭಿನ್ನ ಸಂವೇದನೆಯವರು ಹಲವರು. ಅಂತಹವರ 20 ಕತೆಗಳು ಈ ಸಂಕಲನದಲ್ಲಿ ಇವೆ. ಒಂದೊಂದೂ ಕತೆ ಸಂವೇದನೆಯ ದೃಷ್ಟಿಯಿಂದ ಮನುಷ್ಯ ಸಂಬಂಧಗಳ ಬೇರೆ ಬೇರೆ ಮನೋಲೋಕಗಳನ್ನು ತೆರೆದಿಡುತ್ತದೆ.

‘ಕಡುಬಡವರ, ಕೂಲಿ ಕುಂಬಳಿಯವರ ಬದುಕಿನ ಹಲವು ಮುಖಗಳು, ಸಮಸ್ಯೆಗಳು ತನಗೆ ತಾನೇ ಇಲ್ಲಿಯ ಕತೆಗಳಲ್ಲಿ ತೆರೆದುಕೊಳ್ಳುತ್ತಾ ಹೋಗಿವೆ. ಒಂದೇ ಎಂದರೆ ಬೆಟ್ಟ ಗುಡ್ಡಗಳ ಪರಿಸರದಲ್ಲಿ, ಅತ್ಯಂತ ಶೀತಲ ವಾತಾವರಣದಲ್ಲಿ ಬಾಳ್ವೆ ನಡೆಸುವ ಇಲ್ಲಿಯ ಜನಗಳು ಪ್ರಕೃತಿ ಸೌಂದರ್ಯದ ಮಡಿಲಲ್ಲೇ ಇದ್ದರೂ ಅತ್ತ ಕಣ್ಣೆತ್ತಿ ನೋಡಲೂ ಸಾಧ್ಯವಾಗದಷ್ಟು ಕಸಮುಸುರೆಗಳಲ್ಲಿ ಬಳಲುತ್ತಿರುವವರು; ಕಷ್ಟ ಸಹಿಷ್ಣುಗಳು. ಕನ್ನಡಕ್ಕೆ ನೇಪಾಳೀ ಭಾಷೆಯ ಕತೆಗಳು ಅನುವಾದಗೊಳ್ಳುತ್ತಿರುವುದು ಇದೇ ಮೊದಲಿಗೆ ಎನಿಸುತ್ತದೆ’ ಎಂದು ಆರ್. ಲಕ್ಷ್ಮೀನಾರಾಯಣ ತಮ್ಮ ‘ಅನುವಾದಕನ ಅರಿಕೆ’ಯಲ್ಲಿ ಉಲ್ಲೇಖಿಸಿದ್ದಾರೆ.



ಪು: 190
₹320

ಪ್ರಾತಿನಿಧಿಕ ನೇಪಾಳೀ ಕಥೆಗಳು
ಲೇ: ಸಂ: ದುರ್ಗಾಪ್ರಸಾಧ್ ಶ್ರೇಷ್ಠ, ಅ: ಆರ್. ಲಕ್ಷ್ಮೀನಾರಾಯಣ
ಪ್ರ: ಸಾಹಿತ್ಯ ಅಕಾದೆಮಿ
ಸಂ: 080-22245152

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಜವಗಂಟೆ

ಮೃತ್ಯುದೇವತೆ ಯಮನನ್ನು ‘ಜವ’ ಎನ್ನುವರು. ಅವನು ತರುವ ಸಾವು ಖಚಿತವಾದರೂ ಅನಿರೀಕ್ಷಿತವಾದುದು. ಆಸೆಗಳು ಅರಳಿ ಕೈಗೂಡುವ ಮೊದಲೆ ಅವನು ‘ಜವಗಂಟೆ’ಯನ್ನು ಬಾರಿಸಿ ಸಾವಿನ ಸೂಚನೆ ನೀಡುತ್ತ ಪ್ರಾಣವನ್ನು ಎಳೆದೊಯ್ಯುವನು. ಕುವೆಂಪು ಅವರು ಕಾಲನ ಕರೆಯನ್ನು ‘ಜವಗಂಟೆ’ ಎಂದು ಕರೆದಿದ್ದಾರೆ.

‘ಆಸೆಗಳರಳುವ ಮುನ್ನ
ಯಮ ಮಾರಾಯನು ತನ್ನ
ಜವಗಂಟೆಯ ‘ಝೀ’ ಎಂದ
ಎಳೆವನು ‘ಬಾ! ಬಾ!!’ ಎಂದು!
(ಎಷ್ಟೆಂದು ನಗಲೋದೇವ – ಕೊಳಲು)

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ
ಶ್ರೀಧರ ಗಸ್ತಿ, ಧಾರವಾಡ
ಅವರ
ಅಳಿಸಲಾರದ ಕಪ್ಪುಶಾಯಿ.
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸದಾಶಿವ ಸೊರಟೂರು
ಅವರ
ಇಲ್ಲಿ ಯಾರಿಗೂ ವಿಳಾಸವಿಲ್ಲ..
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕರಡಿ ಧಾಮದಲ್ಲೊಂದು ಕಲಾಧಾಮ

ಚಿತ್ರ-ಲೇಖನ: ಸ್ವರೂಪ್ ಕೊಟ್ಟೂರು

ಪ್ರವಾಸ

ವಿಜಯನಗರ ಜಿಲ್ಲೆಯ ಗುಡೇಕೋಟೆ ಒನಕೆ ಓಬವ್ವಳ ತವರೂರು. ಇಲ್ಲಿಯ ಕರಡಿ ಧಾಮಕ್ಕೆ ಏಷ್ಯಾದಲ್ಲೇ ಎರಡನೇ ಕರಡಿ ಧಾಮ ಎಂಬ ಹೆಗ್ಗಳಿಕೆ. ಇದು ಬಯಲು ಸೀಮೆ. ಈ ಪರಿಸರದ ಬಹುಭಾಗ ಬೆಟ್ಟಗುಡ್ಡಗಳಿಂದ ಆವೃತಗೊಂಡಿದ್ದು, ಭಾಗಶಃ ಮಳೆ ನಂಬಿ ಉಳುವ ಇಲ್ಲಿನ ರೈತರ ಜಮೀನುಗಳನ್ನು ಅರ್ಧಕರ್ಧ ಕಲ್ಲು, ಗುಂಡುಗಳು ನುಂಗಿವೆ. ಫಲಗಳು ಕರಡಿ, ಕಾಡು ಹಂದಿ ಪಾಲಾಗುತ್ತವೆ. ಆದಿಮರು ನೆಲೆಸಿದ ಗುಹೆಗಹ್ವರಗಳೀಗ ಕರಡಿಗಳ ಆವಾಸಸ್ಥಾನ. ಹೀಗಾಗಿ ಗುಡೇಕೋಟೆಯಲ್ಲಿ ಬರೀ ಹೊರಭೂಮಿ, ಗುಡ್ಡ, ಗುಂಡುಕಲ್ಲುಗಳು, ಬೃಹತ್ ಬಂಡೆಗಳು, ಕರಡಿ, ಚಿರತೆಗಳು.. ಬಿಟ್ಟರೆ ಮತ್ತೇನಿದೆ? ಎನ್ನುವ ಉಪೇಕ್ಷೆಯ ಮಾತನ್ನು ಆಡುವವರೇ ಹಲವರು. ಇದು ಕರಡಿ ಧಾಮವೆಂತೋ ಹಾಗೆ ಬಯಲು ಕಲಾ ಧಾಮವೂ ಹೌದು. ಆದರಿದು ಕರಡಿ ಧಾಮದಲ್ಲಿ ಹುದುಗಿರುವುದರಿಂದ ಹೊರ ಜಗತ್ತಿಗೆ ಅಪರಿಚಿತವಷ್ಟೆ.

> ಒನಕೆ ಓಬವ್ವಳ ತವರು ಗುಡೇಕೋಟೆ. ಕರಡಿ ಧಾಮ ಎನಿಸಿಕೊಂಡಿರುವ ಈ ಪ್ರದೇಶದಲ್ಲಿನ ಶಿಲೆಯ ಕಲೆಯ ಬಲೆ ಚಿತ್ತಾಪಹಾರಿ.

ಕರಡಿ ಧಾಮ ಪರಿಸರದಲ್ಲಿ ಅದ್ಭುತ, ಕಣ್ಮನ ಸೆಳೆಯುವ ಬಯಲು ಕಲಾ ಧಾಮವೂ ಇದೆ. ಇದಕ್ಕಾಗಿ ಅಪೇಕ್ಷೆಪಟ್ಟು ಒಮ್ಮೆ ಇಲ್ಲಿನ ಕಾಡು ಹೊಕ್ಕಬೇಕು. ಬೆಟ್ಟಗುಡ್ಡಗಳ ಸನಿಹ ಸುಳಿಯಬೇಕು. ಶಿಲಾ ಸಮೂಹಗಳನ್ನು ಧೇನಿಸಿ ನೋಡಬೇಕು. ಆಗ ಮಾತ್ರ ವಿಶೇಷ ಆಕೃತಿ, ವಿನ್ಯಾಸಗಳ ಕಲ್ಲುಗಳು ವಿಭಿನ್ನ, ವಿಶಿಷ್ಟವಾಗಿ ಕಂಗೊಳಿಸುತ್ತವೆ. ಅವೆಲ್ಲ ಅಮೂರ್ತ ಕಲ್ಪನೆಯನ್ನು ಉದ್ದೀಪಿಸುತ್ತವೆ. ಕೊನೆಯಿಲ್ಲದ ಬೆಟ್ಟಗುಡ್ಡಗಳಲ್ಲಿಯ ಸೋಜಿಗದ ಇಂತಹ ಶಿಲೆಗಳನ್ನೆಲ್ಲಾ ಒಟ್ಟು ಸೇರಿಸಿ, ಗುಡ್ಡೆ ಹಾಕಿದರೆ ನಿಸ್ಸಂದೇಹವಾಗಿ ಅದು ಮತ್ತೊಂದು ಬೃಹತ್ ಗುಡ್ಡವೇ ಆಗುತ್ತದೆ.

ಈ ಬೀಡು ಪ್ರಕೃತಿ ಕಟೆದ ಚಿತ್ರಪಟಗಳಿಂದ ಸಂಪದ್ಭರಿತವಾಗಿದೆ. ಗುಡೇಕೋಟೆ ಹೋಬಳಿಯಲ್ಲಿ ಎಲ್ಲಿ ಕಣ್ಣಾಡಿಸಿದರೂ ಕಲಾತ್ಮಕ ಕಲ್ಲುಗಳ ನಿಸರ್ಗ ಎದ್ದುಕಾಣುತ್ತದೆ. ಸೃಜಿಸಿದ ಶಿಲಾ ಸಮೂಹಗಳ ಸಮ್ಮೋಹಕ ತಾಣವಿದು. ಅದರಲ್ಲೂ ವಿಶೇಷವಾಗಿ ಮರಳು ಶಿಲೆಗಳಲ್ಲಿ (ಹಿಟ್ಟು ಕಲ್ಲು) ನಿಸರ್ಗದ ನಾಜೂಕಿನ ಕುಸುರಿ ನಿಬ್ಬೆರಗಾಗಿಸುತ್ತದೆ. ಅಡಿ ಅಡಿಗೂ ಕಲೆಯ ಬಲೆಯನ್ನೇ ಹೆಣೆದಿರುವ ಈ ಅಪೂರ್ವ, ಅನನ್ಯ ಶಿಲೆಗಳ ಸೌಂದರ್ಯವನ್ನು ಆಸ್ವಾದಿಸುತ್ತಾ ಸಾಗಿದರೆ ಮನಸ್ಸು ಉಲ್ಲಸಿತಗೊಳ್ಳುತ್ತದೆ.

ಚಲನಚಿತ್ರ ನಟರಾದ ದಿ. ಪುನೀತ್ ರಾಜಕುಮಾರ್, ರಿಷಬ್ ಶೆಟ್ಟಿ ಭೇಟಿ ನೀಡಿದ ಸುಪ್ರಸಿದ್ಧ ಜೋಡಿಕಲ್ಲುಗಳು ಇಲ್ಲಿವೆ. ಇನ್ನು ಹಾವಿನ ಎಡೆಯಂತೆ, ನೀರಾನೆ ಬಾಯಿ ತೆರೆದಂತೆ, ಎತ್ತು ವಿರಮಿಸುವಂತೆ, ಟೈಟಾನಿಕ್ ಹಡಗಿನಂತೆ, ಗದೆಯಂತೆ, ರೆಕ್ಕೆಯಂತೆ, ಆಮೆ ಮೂತಿ ಹೊರ ಚಾಚಿದಂತೆ... ಹೀಗೆ ಮೊಗೆದಷ್ಟೂ ಮುಗಿಯದ, ನೋಡಿದಷ್ಟೂ ತಣಿಯದ ಬಗೆಬಗೆಯ, ರಾಶಿ ರಾಶಿ ಪ್ರಕೃತಿ ಕಟೆದ ಚಿತ್ರಪಟಗಳಿವೆ.

ಇಂತಹ ಶಿಲೆಗಳ ಸೊಬಗು ಸವಿಯಲು ಅರಣ್ಯ ಇಲಾಖೆಯ ಪರವಾನಗಿ ಮತ್ತು ನೆರವು ಅವಶ್ಯಕ. ಇದು ಮೀಸಲು ಅರಣ್ಯ. ಕರಡಿ ಧಾಮ ಆಗಿರುವುದು ಇದೇ ಕಾರಣಕ್ಕೆ. ಇನ್ನುಮುಂದೆ ನಿಮ್ಮ ಪ್ರವಾಸದ ಯೋಜನೆ, ಯೋಚನೆಯಲ್ಲಿ ಗುಡೇಕೋಟೆ ಕರಡಿ ಧಾಮ ಇದ್ದರೆ ಕೇವಲ ಕರಡಿಗಳನ್ನಷ್ಟೆ ನೋಡುವುದಕ್ಕೆ ಪ್ರವಾಸ ಸೀಮಿತಗೊಳಿಸದಿರಿ. ಅಲ್ಲೇ ಇರುವ ಇಂತಹ ಅಪೂರ್ವ ಶಿಲಾಕೃತಿಗಳನ್ನು ಕಣ್ಣು ತುಂಬಿಕೊಳ್ಳಲು ಮರೆಯದಿರಿ.

❖



ಶಿಲೆಗಳ ಮೌನ ಸಂಭಾಷಣೆ

ಪ್ರೇಮಿಗಳ ಪಾಲಿಗೆ ಇದು 'ಲವ್ ರಾಕ್' ಆದರೂ ಅಚ್ಚರಿ ಇಲ್ಲ



ಈ ಶಿಲೆಯಲ್ಲಿ ಏನು ಕಂಡಿರಿ?

ಮೀಮ್ ಕೂಪಕ್ಕೆ ಪಾತಾಳಗರಡಿ

10ನೇ ಪುಟದಿಂದ...

ಮೀಮ್ ಮತ್ತು ಮರುಸೃಷ್ಟಿ

1976ರಲ್ಲಿ ಪ್ರಕಟಿಸಿದ 'ಸೆಲ್ಫಿಶ್ ಜೀನ್' ಎಂಬ ಕೃತಿಯಲ್ಲಿ ಮೊಟ್ಟ ಮೊದಲಿಗೆ 'ಮೀಮ್' ಪದವನ್ನು ಬಳಸಿದ ಬ್ರಿಟನ್ ಮೂಲದ ವಿಕಾಸವಾದಿ ಜೀವಶಾಸ್ತ್ರಜ್ಞ ರಿಚರ್ಡ್ ಡಾಕಿನ್ಸ್, ಮಾನವ ಸಂಸ್ಕೃತಿಯ ನಿಚ್ಚಳವಾದ ತುಣುಕುಗಳು ಜನರಿಂದ ಜನರ ಮಿದುಳಿಗೆ ರವಾನೆಯಾಗುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಿದ್ದಾನೆ. 'ಅನುಕರಣೆಯ ಮೂಲಕ ಮಿದುಳಿನಿಂದ ಮಿದುಳಿಗೆ ಜಿಗಿಯುವ ಮಧುರವಾದ ಗೀತೆ, ಮರೆಯಲಾಗದ ವಿಚಾರ, ನಾಲಿಗೆಯ ಮೇಲೆ ನಲಿದಾಡುವ ನುಡಿಗಟ್ಟು ಅಥವಾ ಮಾಹಿತಿಯ ತುಣುಕುಗಳೇ ಮೀಮ್‌ಗಳು.' ಶತಮಾನಗಳಿಂದಲೂ ಅನುಕರಣೆಯ ಮೂಲಕ ಮಾನವ ಸಂಸ್ಕೃತಿಯ ಪ್ರತಿರೂಪಗಳು ಸೃಷ್ಟಿಯಾಗುತ್ತಲೇ ಇವೆ. ಹಾಗಾಗಿ ಮೀಮ್‌ಗಳು ಮಾನವ ನಾಗರಿಕತೆಯಷ್ಟೆ ಹಳೆಯದು ಎಂದು ಡಾಕಿನ್ಸ್ ವಿವರಿಸುತ್ತಾನೆ.

ಆದರೆ, ಸಮಕಾಲೀನ 'ಅಂತರ್ಜಾಲದ ಮೀಮ್'ಗಳು ಹಿಂದೆಂದಿಗಿಂತಲೂ ಭಿನ್ನ, ಜನಪ್ರಿಯ ಮತ್ತು ಪ್ರಭಾವಶಾಲಿ. ಚಲನಚಿತ್ರ, ರಿಯಾಲಿಟಿ ಷೋ, ವೆಬ್ ಸಿರೀಸ್‌ನಂತಹ ಕಲಾಪ್ರಕಾರವೊಂದರ ವಿಶಿಷ್ಟ ತುಣುಕು, ಸಾರ್ವಜನಿಕ ವಲಯದಲ್ಲಿ ಜನಪ್ರಿಯವಾಗಿರುವ ವಿಚಾರ ಅಥವಾ ವಿದ್ಯಮಾನವನ್ನು ಪೋಸ್ಟರ್ ಅಥವಾ ವಿಡಿಯೊ ಮೂಲಕ ಮರುಸೃಷ್ಟಿಸಿ, ಅದಕ್ಕೆ ತಮ್ಮ ವೈಯಕ್ತಿಕ ದೃಷ್ಟಿಕೋನವನ್ನು ಬೆರೆಸಿ, ಹಾಸ್ಯ ಮತ್ತು ವಿಡಂಬನೆಯನ್ನು ಲೇಪಿಸಿ, ಕಲಾತ್ಮಕವಾಗಿ ಮತ್ತು ಸಾಂಕೇತಿಕವಾಗಿ ಅಂತರ್ಜಾಲದ ವೇದಿಕೆಗಳಲ್ಲಿ ಅಭಿವ್ಯಕ್ತಿಸುವ ಕಿರು ಮನರಂಜನಾ ಮಾಧ್ಯಮವನ್ನು ಮೀಮ್ ಎನ್ನಬಹುದು.

ಸಾಂಸ್ಕೃತಿಕ ಆಯಾಮ

ಒಂದರ್ಥದಲ್ಲಿ ಅನುಕರಣೆಯಿಲ್ಲದೆ ಸೃಜನಶೀಲತೆ ಹುಟ್ಟುವುದಿಲ್ಲ. ಜಗತ್ತಿನ ಶ್ರೇಷ್ಠ ಸಾಹಿತ್ಯಕ ಕೃತಿಗಳು, ಚಿತ್ರಕಲೆ, ಶಿಲ್ಪಕಲೆಗಳು, ಚಲನಚಿತ್ರಗಳು, ಎಲ್ಲವೂ ಒಂದಲ್ಲಾ ಒಂದು ರೀತಿಯಲ್ಲಿ ಹಿಂದಿನ ಶ್ರೇಷ್ಠ ಕಲಾಕೃತಿಗಳಿಂದ ಸ್ಫೂರ್ತಿ ಪಡೆದಿರುವುದಂತೂ ನಿಜ. ಅರಿಸ್ಟಾಟಲ್‌ನ ಅನುಕರಣೆಯ ಸಿದ್ಧಾಂತ (ಮೀಮೆಸಿಸ್), ಟಿ. ಎಸ್. ಇಲಿಯಟ್‌ನ 'ಪರಂಪರೆ ಮತ್ತು ವೈಯಕ್ತಿಕ ಪ್ರತಿಭೆ' ಪ್ರಬಂಧ, ಅನುಕರಣೆ ಮತ್ತು ಕಲೆಯ ಸಂಬಂಧವನ್ನು ನಿಕಷಕ್ಕೆ ಒಡ್ಡುತ್ತದೆ. 'ಯಾವುದೇ ಕವಿ, ಕಲಾವಿದ ತನ್ನಷ್ಟಕ್ಕೇ ತಾನು ಪರಂಪರೆಯಿಂದ ಹೊರಗುಳಿದು, ಸ್ವತಂತ್ರವಾಗಿ ಗುರುತಿಸಿಕೊಳ್ಳಲು ಸಾಧ್ಯವಿಲ್ಲ. ಕಲಾವಿದನಿಗೆ ಪರಂಪರೆ ಬಳುವಳಿಯಾಗಿಯೂ ಬರುವುದಿಲ್ಲ. ಇದನ್ನು ಅಂತರ್ಗತಗೊಳಿಸಿಕೊಳ್ಳಲು ಸಮಕಾಲೀನತೆ ಮತ್ತು ಕಾಲಾತೀತ ಅಂಶಗಳನ್ನೊಳಗೊಂಡ ಐತಿಹಾಸಿಕ ಪ್ರಜ್ಞೆ ಆತನಿಗೆ ಅವಶ್ಯಕ' ಎನ್ನುತ್ತಾನೆ ಇಲಿಯಟ್.

ಇನ್ನು ಅರಿಸ್ಟಾಟಲ್ ಪ್ರಕಾರ ಕಲಾವಿದನು ಶ್ರೇಷ್ಠ ಪರಂಪರೆಯನ್ನು ಅನುಕರಿಸುವ ಪ್ರಕ್ರಿಯೆಯಲ್ಲಿ ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ತನ್ನ ಪ್ರತಿಭೆಯ ಮುದ್ರೆ ಒತ್ತುತ್ತಾನೆ. ಇದು ಕಲೆಯ ಸೃಷ್ಟಿಗೆ ಮೂಲಧಾತುವಾಗುತ್ತದೆ. ಹೀಗೆ ಸೃಷ್ಟಿಯಾದ ಹೊಸ ಆಯಾಮವೇ 'ಕಲೆ' ಎಂಬುದು ಅರಿಸ್ಟಾಟಲ್‌ನ ವಾದ. ಇಲಿಯಟ್ ಇದನ್ನೇ ವೈಯಕ್ತಿಕ ಪ್ರತಿಭೆ ಎಂದು ಕರೆದಿದ್ದಾನೆ. ಇವರಿಬ್ಬರ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ನೋಡುವುದಾದರೆ, ಎಲ್ಲ ಶ್ರೇಷ್ಠ ಕಲಾಕೃತಿಗಳು ಕೂಡ ಪರಂಪರೆಯ ಯಾವುದಾದರೂ ಒಂದು ಅಂಶದ ಅನುಕರಣೆಯೇ ಆಗಿರುತ್ತದೆ.

ಇದೇ ವಿವರಣೆಯನ್ನು ಅಂತರ್ಜಾಲದ ಮೀಮ್‌ಗಳಿಗೆ ಅನ್ವಯಿಸುವುದಾರೆ, ಇವುಗಳನ್ನು ಕೂಡ ಡಿಜಿಟಲ್ ಜಾನಪದ ಲೋಕದ ಸೃಜನಶೀಲ ಕಲಾಕೃತಿಗಳು ಎನ್ನಬಹುದು. ಈ ಕಲಾಕೃತಿಗಳ ಸ್ವರೂಪ, ವಿಚಾರ (Form and Content) ಮತ್ತು ಸಂದೇಶದ ಉದ್ದಿಶ್ಯ ಹಾಗೂ ಅಭಿರುಚಿಯ ಮಟ್ಟ ಏನೇ ಇರಬಹುದು. ಮೀಮ್‌ಗಳು ಸಮಕಾಲೀನ ಸಾಂಸ್ಕೃತಿಕ ಜಗತ್ತಿನ ಸೃಜನಶೀಲ ಅಭಿವ್ಯಕ್ತಿಯ ರೂಪಕಗಳಾಗಿ ಬೆಳೆದು ನಿಂತಿರುವುದನ್ನು ಒಪ್ಪಲೇಬೇಕು. ಜನಪ್ರಿಯ ಮಾಧ್ಯಮದಲ್ಲಿ ಬಂದ ವೈವಿಧ್ಯಮಯ ವಿಚಾರಗಳನ್ನು ಆಧರಿಸಿದ ಮೀಮ್‌ಗಳು ತಿಳಿಹಾಸ್ಯ, ವಿಡಂಬನೆಯ ಮೂಲಕ ಒಮ್ಮೆ ನಗಿಸಬಹುದು, ಇನ್ನೊಮ್ಮೆ ಆತ್ಮಸಾಕ್ಷಿಯನ್ನು ಕಲಕಬಹುದು, ಅವಡು ಕಚ್ಚುವಷ್ಟು ಸಿಟ್ಟು ತರಿಸಬಹುದು ಅಥವಾ ಮತ್ತೊಮ್ಮೆ ಈ ಮೀಮ್‌ಗಳ ಸಮಾಜ ವಿರೋಧಿ ಮತ್ತು ಮನುಷ್ಯ ವಿರೋಧಿ ಧೋರಣೆ ರೇಜಿಗೆ ಹುಟ್ಟಿಸಲೂಬಹುದು.

ಸಾಮಾಜಿಕ ಜಾಲತಾಣಗಳಲ್ಲಿ ದಿಢೀರನೆ ಸೃಷ್ಟಿಯಾಗುವ 'ಸೋ ಬ್ಯೂಟಿಫುಲ್' ಎನಿಸುವ ಈ ಮೀಮ್‌ಗಳನ್ನು ನೋಡಿ ನಕ್ಕು ಸುಮ್ಮನಾಗುವ ನಾವು, ಇಂಥ ನೂರಾರು ಮೀಮ್‌ಗಳು ನಮ್ಮನ್ನು 'ನಿಷ್ಕ್ರಿಯ ಗ್ರಾಹಕ'ರನ್ನಾಗಿಸಿ ನಮಗರಿವಿಲ್ಲದಂತೆಯೇ ನಮ್ಮ ಮನೋಧರ್ಮ ಮತ್ತು ಧೋರಣೆಯನ್ನು ಮಂದಗತಿಯಲ್ಲಿ ಬದಲಿಸುವುದು ನಿರ್ಲಕ್ಷಿಸಬಹುದಾದ ವಿಚಾರವಂತೂ ಅಲ್ಲ.

❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಗ್ಗು ಚಕ್ಕು ಶೇಶ್ರುಷ್ಪ ಕಥೆಯ ಹೊಸವರ್ಷದಾಟ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಹೊಸ ವರ್ಷದ ಸಂಭ್ರಮಾಚರಣೆ ತಯಾರಿ ಆರಂಭಿಸಿದ್ದ. ಹೊಸ ವರ್ಷದ ಮಧ್ಯರಾತ್ರಿಗೆಂದು ಎರಡು ದೊಡ್ಡ ರಾಕೆಟ್ ತಂದಿದ್ದ ಗುಂಡ, ಒಂದನ್ನು ಪರೀಕ್ಷಿಸಲು ನಿರ್ಧರಿಸಿದ. ಬಾಟಲ್ ತಂದು ರಾಕೆಟ್ ಇಟ್ಟು ಬೆಂಕಿ ಹಚ್ಚಿದ. ರಾಕೆಟ್ ಜೋರಾಗಿ ಶಬ್ದ ಮಾಡುತ್ತಾ ಆಕಾಶದೆತ್ತರಕ್ಕೆ ಚಿಮ್ಮಿತು. ಗುಂಡನಿಗೆ ಖುಷಿಯೋ ಖುಷಿ. ಆದರೆ ಕ್ಷಣಮಾತ್ರದಲ್ಲೇ ರಾಕೆಟ್ ತಿರುಗಿ ಗುಂಡನತ್ತಲೇ ಧಾವಿಸಿತು. ಗುಂಡ ರಾಕೆಟ್ ವೇಗದಲ್ಲೇ ಓಡಿದ...





ಮೋಜಿನ ಇಂಗ್ಲಿಷ್

1	B		
2	D		
3	F		
4	K		
5	L		
6	O		
7	P		
8	R		
9	S		
10	S		
11	T		
12	Y		

ಇಲ್ಲಿ ಕೊಟ್ಟಿರುವ ಒಂದಕ್ಷರಕ್ಕೆ ಇನ್ನೆರಡು ಅಕ್ಷರ ಸೇರಿಸಿ ಒಂದೇ ಅಕ್ಷರದಲ್ಲಿ ಉಚ್ಚರಿಸುವ ಮೂರಕ್ಷರದ ಪದಗಳನ್ನು ಮಾಡಿ.

ಉದಾ: May-ಮೇ

ಗಣಿತದಲ್ಲಿ ಗರ್ದಿ ಗಮ್ಮತ್ತು

ಲೆಕ್ಕಮಾಡು –ಮೋಜು ನೋಡು

1. 2799468X441=
2. 34227X36070=
3. 12345679X66=
4. 651X156=
5. 372X273=

2024ರ ಲಘು ಕ್ಯಾಲೆಂಡರ್

ಜ	ಫೆ	ಮಾ	ಏ	ಮೇ	ಜೂ	ಜು	ಆ	ಸೆ	ಅ	ನ	ಡಿ
0	3	4	0	2	5	0	3	6	1	4	6

ಇಲ್ಲಿ ಕ್ರಮವಾಗಿ ಒಂದು ತಿಂಗಳಿಗೆ ಒಂದು ನಿಯತಾಂಕವಿದೆ. ಇವುಗಳನ್ನು ಸುಲಭವಾಗಿ ನೆನಪಿಡಲು 034/025/036/146 ಎಂದು ನಾಲ್ಕು ಸಂಖ್ಯೆಗಳನ್ನಾಗಿ ಮಾಡಿ ನಿಮ್ಮ ಮನಸ್ಸಿನಲ್ಲಿಟ್ಟುಕೊಂಡರೆ 2024ರ ಯಾವ ದಿನ ಯಾವ ವಾರವೆಂದು ಅರೆಕ್ಷಣದಲ್ಲಿ ಜಾದೂವಿನಂತೆ ಹೇಳಿಬಿಡಬಲ್ಲಿರಿ. ಅದು ಹೇಗೆ?

ಹೀಗೆ: ನಿಮಗೆ ಯಾವ ತಿಂಗಳಿನ ಯಾವ ದಿನಾಂಕ ತಿಳಿಯಬೇಕಾಗಿದೆಯೋ ಆ ತಿಂಗಳಿನ ನಿಯತಾಂಕಕ್ಕೆ ನಿಮ್ಮ ತಾರೀಕು ಕೂಡಿಸಿ 7ರಿಂದ ಭಾಗಿಸಿ, ಉಳಿಯುವ ಶೇಷವನ್ನು ಗಮನಿಸಿ. (ಸಂಖ್ಯೆ ಭಾಗ ಹೋಗದಿದ್ದರೆ ಅದೇ ಶೇಷವೆಂದು ತಿಳಿದು ವಾರ ಹೇಳಿ)

1-ಉಳಿದರೆ ಸೋಮ, 2-ಮಂಗಳ, 3-ಬುಧ, 4-ಗುರು, 5-ಶುಕ್ರ, 6-ಶನಿ ಹಾಗೂ 0-ಭಾನುವಾರ ಎಂದು ತಿಳಿಯಿರಿ.

ಉದಾ: 2024ರ ಆಗಸ್ಟ್ 15 ಯಾವ ವಾರ?

ಆಗಸ್ಟ್ ನಿಯತಾಂಕ-3
ತಾರೀಕು- 15
ಎರಡನ್ನೂ ಕೂಡಿಸಿದಾಗ-18

7ರಿಂದ ಭಾಗಿಸಿದಾಗ- 7)18(2
14
―――
4-ಶೇಷ- ಗುರುವಾರ.

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ರ' ಅಕ್ಷರ ಒಳಗೊಳ್ಳುವಂತೆ ಸುಳಿವು ಆಧರಿಸಿ ಮೂರು ಅಕ್ಷರಗಳ ಪದ ರಚಿಸಿ

1			ರ		
2			ರ		
3			ರ		
	4		ರ		
	5		ರ		
	6		ರ		
		7	ರ		
		8	ರ		
		9	ರ		

ಸುಳಿವು

1.ಯುದ್ಧ 2.ಶಾಶ್ವತ 3.ನವಿಲು 4.ಮಣ್ಣಿನ ಪಾತ್ರೆ 5.ಆಶ್ಚರ್ಯ 6.ಭೂಮಿ 7.ವೇಗ 8.ಅಸುರ 9.ಹಾಸ್ಯಗಾರ

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಸನಿ | ಚರ | ರಣ
ಸುಳಿ | ಜನ | ಗರು

ಅಕ್ಷರ ಪಟ್ಟಿ: ಉ, ಗೋ, ವ್ಯ, ಭೋ, ಗಂ, ಣ, ಹೂ, ನ, ಜಿ, ವು, ಹ, ಡ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಯಾದವಡೆ 2.ಕಿಂಕರಣಿ 3.ದಿವಸಡು 4.ಸಂಸದಸ್ಯ 5.ಗಮಾರಕ 6.ಮುಂಗಡಸು

ಮೋಜಿನ ಇಂಗ್ಲಿಷ್: 1.TUB 2.TRY 3.TEA 4.TIN 5.TEN 6.TOY 7.TIP 8.TOP 9.THE 10.TWO

ಜಾಣಪದ ಆಟ: 1.ಅಲಂಕಾರ 2.ಪ್ರತೀಕಾರ 3.ಮಮಕಾರ 4.ಸರಕಾರ 5.ದರಕಾರ 6.ಸಬಕಾರ 7.ಹರಿಕಾರ 8.ಉಪಕಾರ 9.ಅಂಧಕಾರ 10.ಅಪಕಾರ

ಏಕಾಕ್ಷರಿ ಕಥೆ: 1.ಮ 2.ಮ 3.ಮಾ 4.ಮೊ 5.ಮು 6.ಮ 7.ಮ 8.ಮ 9.ಮ 10.ಮ 11.ಮಾ 12.ಮ 13.ಮಂ 14.ಮಂ 15.ಮೊ 16.ಮ 17.ಮ 18.ಮ 19.ಮೆ 20.ಮ 21.ಮ 22.ಮಾ 23.ಮ 24.ಮ 25.ಮ 26.ಮಾ 27.ಮಾ 28.ಮಾ 29.ಮಂ 30.ಮ 31.ಮ 32.ಮ 33.ಮಂ 34.ಮು 35.ಮ 36.ಮ 37.ಮ 38.ಮ 39.ಮ 40.ಮಾ 41.ಮ 42.ಮ 43.ಮುಂ 44.ಮ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಪ್ರಾರ್ಥನ ಟಿ.ಎಸ್.
ಬೆಂಗಳೂರು

ಅಧೀಕ್ಷಾ ಬಿ.ಎಂ.
ಹೊಸದುರ್ಗ

ದಿವ್ಯಾ
ಮೈಸೂರು

ಜಯತಿ ರೆಡ್ಡಿ ಬಿ.ವಿ.
ಬಾಗೇಪಲ್ಲಿ

ಪ್ರತೀಕ್ಷಾ ಎಂ.
ಬಾಗಲಕೋಟೆ

ಲಿಖಿತ್ ಪ್ರಕಾಶ್ ಬಿ.
ಬೆಂಗಳೂರು

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್‌-4	₹152
ಆರ್‌ಎಸ್‌ಎಸ್‌-5	₹148
ಗುಡ್ ಲಾಟ್	₹131

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1630)
ಸೋಯಾ (ರಿಫೈನ್ಡ್)	₹870 (875)
ಸೂರ್ಯಕಾಂತಿ (ರಿಫೈನ್ಡ್)	₹890 (885)
ಪಾಮೋಲಿನ್	₹820 (815)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹610
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹610

ಮುಂಬೈ ಧಾರಣೆ

ಶೇಂಗಾ

30-12-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1620)
ಸೋಯಾ ಕಚ್ಚಾ	827 (830)
ಪಾಮ್ ವಾರದ ಡೆಲಿವರಿ	822 (817)
ಸೂರ್ಯಕಾಂತಿ ಎಣ್ಣೆ ಕಚ್ಚಾ	810 (815)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,900 (62,900)
ಬೆಳ್ಳಿ ಕೆ.ಜಿ 73,550 (73,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹272-446
ದ್ವಿತಳಿ (ಬಿ.ವಿ) ₹161-571

‘ಶ್ರೀಲಂಕಾಕ್ಕೆ ಐಎಂಎಫ್ ಪ್ಯಾಕೇಜ್ ಅನಿವಾರ್ಯ’

ಕೊಲಂಬೊ (ಪಿಟಿಐ): ‘ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿರುವ ಶ್ರೀಲಂಕಾದ ಆರ್ಥಿಕತೆಯ ಸುಧಾರಣೆಗೆ ಅಂತರ ರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಪ್ರಕಟಿಸಿರುವ ₹24 ಸಾವಿರ ಕೋಟಿ ನೆರವನ್ನು ಅವಲಂಬಿಸದೆ ಪರ್ಯಾಯ ಮಾರ್ಗವಿಲ್ಲ’ ಎಂದು ಶ್ರೀಲಂಕಾದ ಸೆಂಟ್ರಲ್ ಬ್ಯಾಂಕ್‌ನ ಗವರ್ನರ್ ನಂದಲಾಲ್ ವೀರಸಿಂಘೆ ಹೇಳಿದ್ದಾರೆ.

ಈ ಪ್ಯಾಕೇಜ್‌ನ ಷರತ್ತುಗಳ ಬಗ್ಗೆ ಪ್ರತಿಪಕ್ಷಗಳು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ‘ಆರ್ಥಿಕ ನೆರವಿನ ಪರ್ಯಾಯ ಮಾರ್ಗಗಳ ಬಗ್ಗೆ ಪ್ರಯತ್ನಿಸಿದ್ದರೆ ನಾವೇಕೆ ದಿವಾಳಿಯಾಗುತ್ತಿದ್ದೆವು? ಹಾಗಾಗಿ, ಐಎಂಎಫ್‌ನ ನೆರವು ಸ್ವೀಕರಿಸದೆ ಬೇರೆ ಮಾರ್ಗವಿಲ್ಲ’ ಎಂದಿದ್ದಾರೆ.

ಪ್ಯಾಕೇಜ್‌ನಡಿ ಘೋಷಿಸಿರುವ ಮೊತ್ತದ ಪೈಕಿ ಎರಡನೇ ಹಂತದಲ್ಲಿ ₹2,805 ಕೋಟಿ ಬಿಡುಗಡೆಗೆ ಐಎಂಎಫ್ ಅನುಮೋದನೆ ನೀಡಿದೆ.

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಮಾರ್ಗಸೂಚಿ ಪ್ರಕಟ

ದಟ್ಟ ಮಂಜು: ಸುಗಮ ಸಂಚಾರಕ್ಕೆ ಕ್ರಮ

ನವದೆಹಲಿ (ಪಿಟಿಐ): ಚಳಿಗಾಲದ ವೇಳೆ ದಟ್ಟ ಮಂಜು ಆವರಿಸುವುದರಿಂದ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ಚಾಲಕರು ತೊಂದರೆಗೆ ಸಿಲುಕುತ್ತಾರೆ. ಹಾಗಾಗಿ, ಇಂತಹ ತುರ್ತು ಸಂದರ್ಭಗಳಲ್ಲಿ ಸುಗಮ ಸಂಚಾರ ಹಾಗೂ ಸುರಕ್ಷತೆಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಮಾರ್ಗಸೂಚಿ ಪ್ರಕಟಿಸಿದೆ.

ಮಂಜು ಆವೃತವಾದ ವೇಳೆ ಎದುರಾಗುವ ಸಮಸ್ಯೆಗಳನ್ನು ತಾಂತ್ರಿಕ ಹಾಗೂ ಸಂಚಾರ ಸುರಕ್ಷತಾ ವಿಧಾನ ದಡಿ ಬಗೆಹರಿಸಲು ಕ್ರಮಕೈಗೊಳ್ಳುವುದಾಗಿ ಪ್ರಾಧಿಕಾರ ತಿಳಿಸಿದೆ.

ಹೆದ್ದಾರಿಗಳಲ್ಲಿ ಮಿನುಗುದೀಪ ಅಳವಡಿಕೆ ಮೂಲಕ ಬಳಕೆದಾರರಲ್ಲಿ ಸಂಚಾರ ನಿಯಮ ಪಾಲನೆ ಬಗ್ಗೆ ಜಾಗೃತಿ ಮೂಡಿಸುವುದಾಗಿ ಹೇಳಿದೆ.

ವಾಹನಗಳ ಸಂಚಾರಕ್ಕೆ ಹೆದ್ದಾರಿಯ ವಾತಾವರಣವು ಅನುಕೂಲಕರವಾಗಿದೆಯೇ ಎಂಬ ಬಗ್ಗೆ ಪ್ರತಿ ವಾರವೂ ರಾತ್ರಿವೇಳೆ ತಪಾಸಣೆ ನಡೆಸಬೇಕು. ಇದಕ್ಕಾಗಿ ಪ್ರಾಧಿಕಾರದ ಅಧಿಕಾರಿಗಳು, ಎಂಜಿನಿಯರ್‌ಗಳು ಮತ್ತು ಗುತ್ತಿಗೆದಾರರನ್ನು ಒಳಗೊಂಡ ತಂಡ ರಚಿಸಬೇಕು ಎಂದು ಸೂಚಿಸಿದೆ.

ಸುರಕ್ಷತಾ ಕ್ರಮ ಕೈಗೊಳ್ಳಬೇಕಿರುವ ಸ್ಥಳಗಳನ್ನು ಗುರುತಿಸುವುದು ಈ ತಂಡದ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ತ್ವರಿತ ಕ್ರಮಕೈಗೊಳ್ಳುವಂತೆ ಪ್ರಾಧಿಕಾರದ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ಸೂಚಿಸಿದೆ.

ಅಲ್ಲದೇ, ಮಂಜು ಆವೃತವಾಗಿರುವ ಸ್ಥಳಗಳ ಸಮೀಪದಲ್ಲಿ ಹೆದ್ದಾರಿ ಗಸ್ತು ವಾಹನಗಳನ್ನು ನಿಯೋಜಿಸುವಂತೆಯೂ ನಿರ್ದೇಶನ ನೀಡಿದೆ.

ಅಪಘಾತ ಸಂಭವಿಸಿದ ವೇಳೆ ವಾಹನಗಳ ಸಂಚಾರ ವ್ಯತ್ಯಯವಾಗದಂತೆ ಜಾಗ್ರತೆವಹಿಸಬೇಕು. ಹೆದ್ದಾರಿ ಕಾರ್ಯಾಚರಣೆ ಮತ್ತು ನಿರ್ವಹಣಾ ತಂಡವು ರಸ್ತೆ ಸಂಚಾರ ಪರಿಕರಗಳನ್ನು ಬಳಸಿ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಸ್ಥಳೀಯ ಪೊಲೀಸರು, ತುರ್ತುಸೇವಾ ವಿಭಾಗ ಹಾಗೂ ಸ್ಥಳೀಯ ಆಡಳಿತದ ನೆರವಿನೊಂದಿಗೆ ಇದನ್ನು ಕಾರ್ಯಗತಗೊಳಿಸಬೇಕು ಎಂದು ಹೇಳಿದೆ.

ಸಂಚಾರ ಸೂಚನಾ ಫಲಕ, ಅಪಘಾತ ವಲಯಗಳಲ್ಲಿ ಎಚ್ಚರಿಕೆ ಫಲಕ ಹಾಗೂ ಕಾಮಗಾರಿ ನಿರ್ಮಾಣ ಹಂತದ ಸ್ಥಳಗಳಲ್ಲಿ ಮಿನುಗುದೀಪ ಅಳವಡಿಕೆ ಸೇರಿದಂತೆ ಅಗತ್ಯ ಮುಂಜಾಗ್ರತಾ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದೆ.

ಹೆದ್ದಾರಿಯಲ್ಲಿ ಮಂಜು ಆವರಿಸಿರುವ ಸ್ಥಳಗಳ ಬಗ್ಗೆ ಎಲೆಕ್ಟ್ರಾನಿಕ್ ಫಲಕಗಳಲ್ಲಿ ಪ್ರಕಟಿಸಿ ಚಾಲಕರಿಗೆ ಮಾಹಿತಿ ನೀಡಬೇಕು. ವೇಗಮಿತಿ ಕಾಯ್ದುಕೊಳ್ಳುವ ಬಗ್ಗೆಯೂ ಸೂಚಿಸಬೇಕು ಎಂದು ತಿಳಿಸಿದೆ.

ಮುಖ್ಯಾಂಶಗಳು
- ಮಂಜಿನ ಸಮಸ್ಯೆ ಬಗ್ಗೆ ಎಲೆಕ್ಟ್ರಾನಿಕ್ ಫಲಕಗಳಲ್ಲಿ ಮಾಹಿತಿ ಪ್ರಕಟ
- ಸೂಕ್ತ ಸ್ಥಳದಲ್ಲಿ ಹೆದ್ದಾರಿ ಗಸ್ತು ವಾಹನಗಳ ನಿಯೋಜನೆ
- ಸಂಚಾರ ನಿಯಮ ಪಾಲನೆಗೆ ಜಾಗೃತಿ ಕಾರ್ಯಕ್ರಮ

ನವದೆಹಲಿಯ ಬಾರಾಪೂಲಾ ಮೇಲ್ಸೇತುವೆ ಮೇಲೆ ಆವರಿಸಿದ ದಟ್ಟ ಮಂಜಿನ ನಡುವೆಯೇ ವಾಹನಗಳು ಸಂಚರಿಸಿದವು —ಪಿಟಿಐ ಚಿತ್ರ

ವೃತ್ತಿ ಸೇವಾ ಪೋರ್ಟಲ್ 2.0 ಜಾರಿಗೆ ಸಿದ್ಧತೆ

ನವೆಂಬರ್‌ವರೆಗೆ 3.64 ಕೋಟಿ ಉದ್ಯೋಗಾಕಾಂಕ್ಷಿಗಳ ನೋಂದಣಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲ ಕಲ್ಪಿಸಲು ರಾಷ್ಟ್ರೀಯ ವೃತ್ತಿ ಸೇವಾ ಪೋರ್ಟಲ್ 2.0 (ಎನ್‌ಸಿಎಸ್) ಅನುಷ್ಠಾನಕ್ಕೆ ಸಿದ್ಧತೆ ನಡೆಸಿದೆ.

ರಾಜ್ಯಗಳಲ್ಲಿರುವ ಗಿಗ್ ಕೆಲಸಗಾರರು, ಆ್ಯಪ್ ಆಧಾರಿತ ವಾಹನ ಚಾಲಕರು, ಆಹಾರ ಪೂರೈಸುವವರು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರ ಸುಧಾರಣೆಗೆ ಒತ್ತು ನೀಡಲಾಗುವುದು. ಇದರ ಭಾಗವಾಗಿ ಮುಂದಿನ ವರ್ಷದಲ್ಲಿ ಈ ಪೋರ್ಟಲ್‌ನ ಎರಡನೇ ಆವೃತ್ತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸರ್ಕಾರ ತಿಳಿಸಿದೆ.

‘ನವೀನ ತಂತ್ರಜ್ಞಾನ ಬಳಸಿಕೊಂಡು 2.0 ಆವೃತ್ತಿಯನ್ನು ಸಿದ್ಧಪಡಿಸಲಾಗಿದೆ. ಇದು ಉದ್ಯೋಗ ಹುಡುಕುವವರಿಗೆ ನೆರವಾಗಲಿದೆ’ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಭೂಪೇಂದರ್ ಯಾದವ್ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಉದ್ಯೋಗಕ್ಕೆ ಸಂಬಂಧಿಸಿದಂತೆ ಸೇವೆ ಒದಗಿಸುವ ಈ ಪೋರ್ಟಲ್, 2015ರ ಜುಲೈನಿಂದ ಕಾರ್ಯಾರಂಭ ಮಾಡಿತು. ವೃತ್ತಿ ಸಮಾಲೋಚನೆ, ವೃತ್ತಿಪರ ಮಾರ್ಗದರ್ಶನ, ಕೌಶಲ ಅಭಿವೃದ್ಧಿ ಕೋರ್ಸ್, ಅಪ್ರೆಂಟಿಸ್‌ಶಿಪ್, ಇಂಟರ್ನ್‌ಶಿಪ್ ಬಗ್ಗೆ ಈ ಡಿಜಿಟಲ್ ವೇದಿಕೆಯು ಮಾಹಿತಿ ನೀಡುತ್ತದೆ.

ಈ ವರ್ಷದ ನವೆಂಬರ್‌ವರೆಗೆ ಪೋರ್ಟಲ್‌ನಲ್ಲಿ 3.64 ಕೋಟಿ ಉದ್ಯೋಗಾಕಾಂಕ್ಷಿಗಳು ಹಾಗೂ 19.15 ಲಕ್ಷ ಉದ್ಯೋಗದಾತ ಸಂಸ್ಥೆಗಳು ಹೆಸರು ನೋಂದಾಯಿಸಿವೆ. 1.92 ಕೋಟಿಗೂ ಹೆಚ್ಚು ಖಾಲಿ ಹುದ್ದೆಗಳ ಬಗ್ಗೆ ಇದರಲ್ಲಿ ದಾಖಲಿಸಲಾಗಿದೆ.

ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳೊಟ್ಟಿಗೆ ಸಂಯೋಜಿಸಿ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಅಲ್ಲದೇ, ಖಾಸಗಿ ಉದ್ಯೋಗ ಪೋರ್ಟಲ್‌ಗಳ ಜೊತೆಗೂ ಇದನ್ನು ಸಂಯೋಜಿಸಲಾಗಿದೆ.

ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ಪೋರ್ಟಲ್, ಇ-ಶ್ರಮ್, ಇಪಿಎಫ್‌ಒ, ಎಂಪಾಯ್ಲೀಸ್ ಸ್ಟೇಟ್ ಇನ್ಶೂರೆನ್ಸ್ ಕಾರ್ಪೊರೇಷನ್, ಡಿಜಿಲಾಕರ್ ಸೇರಿದಂತೆ ಸರ್ಕಾರದ ಹಲವು ಪೋರ್ಟಲ್‌ಗಳು ಕೂಡ ಸಂಯೋಜನೆಗೊಂಡಿದೆ.

ಮುಖ್ಯಾಂಶಗಳು
- ಗಿಗ್ ಕೆಲಸಗಾರರು ಸೇರಿ ಅಸಂಘಟಿತ ಕಾರ್ಮಿಕರ ಸುಧಾರಣೆಗೆ ಕ್ರಮ
- ಉದ್ಯೋಗ ಹುಡುಕುವವರಿಗೆ ಪೋರ್ಟಲ್‌ನಿಂದ ನೆರವು: ಕೇಂದ್ರ ಸಚಿವ
- ಎಲ್ಲ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳೊಟ್ಟಿಗೆ ಪೋರ್ಟಲ್ ಸಂಯೋಜನೆ

ಸರ್ಕಾರಿ ಬ್ಯಾಂಕ್‌ಗಳ ಮುಖ್ಯಸ್ಥರ ಜತೆ ನಿರ್ಮಲಾ ಸಭೆ

ನಿರ್ಮಲಾ

ನವದೆಹಲಿ (ಪಿಟಿಐ): ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಕೇಂದ್ರ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಮುಖ್ಯಸ್ಥರ ಜತೆ ಸಭೆ ನಡೆಸಿದರು.

ಪ್ರಸಕ್ತ ವರ್ಷದಲ್ಲಿನ ಹಣಕಾಸು ನಿರ್ವಹಣೆ, ಸೈಬರ್ ಅಪರಾಧ ಹಾಗೂ ಅದನ್ನು ತಡೆಗಟ್ಟುವ ಬಗ್ಗೆ ಬ್ಯಾಂಕಿಂಗ್ ಕ್ಷೇತ್ರ ಕೈಗೊಳ್ಳಬೇಕಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಂಚನೆ, ಸುಸ್ತಿದಾರರು, ರಾಷ್ಟ್ರೀಯ ಆಸ್ತಿ ಪುನರ್‌ರಚನಾ ಕಂಪನಿಯ (ಎನ್‌ಎಆರ್‌ಸಿಎಲ್) ಪ್ರಗತಿ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾವವಾಯಿತು ಎಂದು ತಿಳಿಸಿವೆ. ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದ ಆರು ತಿಂಗಳಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ₹68,500 ಕೋಟಿ ಲಾಭ ಗಳಿಸಿವೆ.

ಚೀನಾ: ಒಂಬತ್ತು ಜನರಲ್‌ಗಳ ವಜಾ

ಬೀಜಿಂಗ್ (ಪಿಟಿಐ): ಮಹತ್ವದ ಬೆಳವಣಿಗೆಯೊಂದರಲ್ಲಿ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿಯ (ಪಿಎಲ್‌ಎ) ಉನ್ನತ ಮಟ್ಟದ 9 ಜನರಲ್‌ಗಳನ್ನು ಸಂಸತ್ತಿನಿಂದ ವಜಾಗೊಳಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಮಾಧ್ಯಮ ಶನಿವಾರ ವರದಿ ಮಾಡಿದೆ.

ಚೀನಾದ ಸಂಸತ್ತು ಆಗಿರುವ ನ್ಯಾಷನಲ್ ಪೀಪಲ್ಸ್ ಕಾಂಗ್ರೆಸ್‌ನಿಂದ (ಎನ್‌ಪಿಸಿ) ವಜಾಗೊಂಡವರಲ್ಲಿ ಕ್ಷಿಪಣಿ ಮತ್ತು ಅಣ್ವಸ್ತ್ರಗಳ ವಿಭಾಗ ನಿರ್ವಹಿಸುವ ಪಿಎಲ್‌ಎನ ರಾಕೆಟ್ ಪಡೆಯ ಐವರು ಮಾಜಿ ಅಥವಾ ಹಾಲಿ ಕಮಾಂಡರ್‌ಗಳು ಇದ್ದಾರೆ ಎನ್ನಲಾಗಿದೆ.

ವೀಸಾ ವಂಚನೆ: ಇಬ್ಬರು ಭಾರತೀಯರ ಬಂಧನ

ನ್ಯೂಯಾರ್ಕ್ (ಪಿಟಿಐ): ವೀಸಾ ಸಂಬಂಧಿತ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತ ಮೂಲದ ಇಬ್ಬರು ವ್ಯಕ್ತಿಗಳನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಮ್‌ಭಾಯ್ ಪಟೇಲ್ (36) ಮತ್ತು ಬಲ್ವಿಂದರ್ ಸಿಂಗ್ (39) ಎಂಬವರನ್ನು ಡಿಸೆಂಬರ್ 13ರಂದು ಬಂಧಿಸಲಾಗಿದೆ ಎಂದು ಅಮೆರಿಕದ ಅಟಾರ್ನಿ ಕಚೇರಿಯು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ.

ಆರೋಪ ಸಾಬೀತಾದಲ್ಲಿ ಇವರಿಗೆ ಗರಿಷ್ಠ 5 ವರ್ಷ ಕಾರಾಗೃಹ ಶಿಕ್ಷೆ ಮತ್ತು 2.50 ಲಕ್ಷ ಡಾಲರ್ ದಂಡ ವಿಧಿಸಬಹುದಾಗಿದೆ.

‘ಅಮೆರಿಕದಲ್ಲಿ ಕೆಲವು ಪ್ರಕರಣಗಳ ಸಂತ್ರಸ್ತರಿಗೆ ಮಾತ್ರ ‘ಯು ವೀಸಾ’ ನೀಡಲಾಗುತ್ತದೆ. ಕೆಲ ಅಂಗಡಿಗಳ ಮಾಲೀಕರು ಈ ವೀಸಾವನ್ನು ಪಡೆಯುವ ಉದ್ದೇಶದಿಂದ ತಾವು, ‘ಸಂತ್ರಸ್ತರು’ ಎಂದು ಬಿಂಬಿಸಿಕೊಳ್ಳಲು ಬಂಧಿತರಿಂದ ದರೋಡೆ ಮಾಡಿಸುತ್ತಿದ್ದರು. ಪಟೇಲ್ ಮತ್ತು ಸಿಂಗ್ ಕನಿಷ್ಠ ಎಂಟು ಮದ್ಯದಂಗಡಿಗಳಲ್ಲಿ ಮತ್ತು ಫಾಸ್ಟ್ ಫುಡ್ ರೆಸ್ಟೊರೆಂಟ್‌ಗಳಲ್ಲಿ ದರೋಡೆಕಾರರಂತೆ ಕಾಣಿಸಿಕೊಂಡಿದ್ದರು’ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಇಂಡಿಗೊ: ಸ್ಯಾಂಡ್‌ವಿಚ್‌ನಲ್ಲಿ ಹುಳು ಪತ್ತೆ

ನವದೆಹಲಿ (ಪಿಟಿಐ): ನವದೆಹಲಿಯಿಂದ ಮುಂಬೈಗೆ ಶುಕ್ರವಾರ ಇಂಡಿಗೊ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರಿಗೆ ನೀಡಿದ ಸ್ಯಾಂಡ್‌ವಿಚ್‌ನಲ್ಲಿ ಹುಳು ಪತ್ತೆಯಾಗಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಖುಷ್ಬು ಗುಪ್ತ ಎಂಬುವರಿಗೆ ಇಂಡಿಗೊ ಸಿಬ್ಬಂದಿ ನೀಡಿದ ಸ್ಯಾಂಡ್‌ವಿಚ್‌ನಲ್ಲಿ ಹುಳು ಇತ್ತು. ಇದನ್ನು ವಿಡಿಯೊ ಚಿತ್ರೀಕರಿಸಿರುವ ಅವರು, ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ.

‘ಹುಳು ಇರುವ ಬಗ್ಗೆ ನಾನು ವಿಮಾನದ ಸಿಬ್ಬಂದಿಯ ಗಮನಕ್ಕೆ ತಂದೆ. ಆದರೂ, ಅವರು ಉಳಿದ ಪ್ರಯಾಣಿಕರಿಗೆ ಸ್ಯಾಂಡ್‌ವಿಚ್ ನೀಡುವುದನ್ನು ಮುಂದುವರಿಸಿದರು’ ಎಂದು ಅವರು ಹೇಳಿದ್ದಾರೆ.

‘ವಿಮಾನಯಾನ ಸಂಸ್ಥೆಯು ತನ್ನ ಸಿಬ್ಬಂದಿಗೆ ಎಂತಹ ತರಬೇತಿ ನೀಡಿದೆ ಎಂಬುದು ನನಗೆ ಅಚ್ಚರಿ ತಂದಿದೆ. ಇಂತಹ ಆಹಾರ ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾದರೆ ಹೊಣೆ ಯಾರು’ ಎಂದು ಪ್ರಶ್ನಿಸಿದ್ದಾರೆ.

‘ಹುಳು ಇರುವುದು ಗಮನಕ್ಕೆ ಬಂದ ತಕ್ಷಣವೇ ಸಿಬ್ಬಂದಿಯು ಸ್ಯಾಂಡ್‌ವಿಚ್ ವಿತರಣೆ ಸ್ಥಗಿತಗೊಳಿಸಿದ್ದಾರೆ. ಈ ಬಗ್ಗೆ ತನಿಖೆಗೆ ಸೂಚಿಸಲಾಗಿದೆ. ಸಂಸ್ಥೆಗೆ ಆಹಾರ ಪೂರೈಸುವವರ ಜೊತೆಗೆ ಚರ್ಚಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮವಹಿಸುತ್ತೇವೆ. ಪ್ರಯಾಣಿಕರಿಗೆ ಆದ ತೊಂದರೆಗೆ ವಿಷಾದ ವ್ಯಕ್ತಪಡಿಸುತ್ತೇವೆ’ ಎಂದು ಇಂಡಿಗೊ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಬೆಲ್ಗೊರೊಡ್ ಮೇಲೆ ಕ್ಲಸ್ಟರ್ ಬಾಂಬ್ ದಾಳಿ

ಉಕ್ರೇನ್ ಪ್ರತಿದಾಳಿ: ರಷ್ಯಾದಲ್ಲಿ 14 ಸಾವು

ಮಾಸ್ಕೊ (ಎಎಫ್‌ಪಿ/ರಾಯಿಟರ್ಸ್): ವರ್ಷಾಂತ್ಯದಲ್ಲಿ ರಷ್ಯಾ 18 ತಾಸು ನಡೆಸಿದ ಭಾರಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗೆ ಪ್ರತೀಕಾರವಾಗಿ ಉಕ್ರೇನ್ ಕೂಡ ಮರು ದಿನವೇ ರಷ್ಯಾದ ಪ್ರಮುಖ ನಗರಗಳನ್ನು ಗುರಿಯಾಗಿಸಿ 32 ಡ್ರೋನ್‌ಗಳನ್ನು ಉಡಾಯಿಸಿದೆ.

ಅಲ್ಲದೆ, ರಷ್ಯಾದ ಪ್ರಾಂತೀಯ ರಾಜಧಾನಿ ಬೆಲ್ಗೊರೊಡ್ ಮೇಲೆ ಬಾಂಬ್‌ಗಳ ದಾಳಿ ನಡೆಸಿದೆ. ಇದರಿಂದ ಇಬ್ಬರು ಮಕ್ಕಳು ಸೇರಿ 14 ಜನರು ಹತರಾಗಿದ್ದು, 108 ಜನರು ಗಾಯಗೊಂಡಿದ್ದಾರೆ ಎಂದು ರಷ್ಯಾ ಆರೋಪಿಸಿದೆ.

‘ಉಕ್ರೇನ್‌ನ ಹಾರ್ಕೊವ್ ಪ್ರದೇಶದಲ್ಲಿ ಬಹು ರಾಕೆಟ್ ಲಾಂಚರ್‌ನಿಂದ ಉಡಾವಣೆಯಾದ, ಜೆಕ್ ನಿರ್ಮಿತ ಎರಡು ‘ಓಲ್ಹಾ’ ಕ್ಷಿಪಣಿಗಳು ನಿಷೇಧಿತ ಕ್ಲಸ್ಟರ್ ಬಾಂಬ್‌ಗಳೊಂದಿಗೆ ಬೆಲ್ಗೊರೊಡ್ ನಗರದ ಕೇಂದ್ರ ಕ್ಯಾಥೆಡ್ರಲ್ ಸ್ಕ್ವೇರ್, ಶಾಪಿಂಗ್ ಸೆಂಟರ್, ವಸತಿ ಕಟ್ಟಡಗಳು, ಸ್ಕೇಟಿಂಗ್ ರಿಂಕ್‌ಗೆ ಅಪ್ಪಳಿಸಿವೆ’ ಎಂದು ರಷ್ಯಾದ ತನಿಖಾ ಸಮಿತಿಯ ಸಮೀಪದ ಮೂಲಗಳನ್ನು ಉಲ್ಲೇಖಿಸಿ ‘ಕಮ್ಮರ್‌ಸಾಂಟ್’ ಪತ್ರಿಕೆ ವರದಿ ಮಾಡಿದೆ.

‘ಬೆಲ್ಗೊರೊಡ್ ನಗರದ ಮೇಲೆ ಉಕ್ರೇನ್ ಶನಿವಾರ ಕ್ಲಸ್ಟರ್ ಬಾಂಬ್‌ಗಳ ದಾಳಿ ನಡೆಸಿ ಜನರನ್ನು ಕೊಂದಿದೆ. ಈ ಅಪರಾಧಕ್ಕೆ ಉಕ್ರೇನ್‌ನನ್ನು ಶಿಕ್ಷಿಸದೆ ಬಿಡುವುದಿಲ್ಲ’ ಎಂದು ರಷ್ಯಾ ಗುಡುಗಿದೆ.

ಎರಡು ‘ಓಲ್ಹಾ’ ಕ್ಷಿಪಣಿಗಳನ್ನು ಒಳಗೊಂಡಂತೆ ಹಲವು ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ. ನಗರದ ಮೇಲೆ ಕ್ಷಿಪಣಿಗಳ ಅವಶೇಷಗಳ ತುಣುಕುಗಳು ಬಿದ್ದಿದ್ದರೂ ಹೆಚ್ಚಿನ ಸಾವುನೋವು ತಡೆಯಲಾಗಿದೆ. ಅಲ್ಲದೆ, ಮಾಸ್ಕೊ, ಬ್ರಿಯಾನ್‌ಸ್ಕ್, ಓರಿಯೊಲ್, ಕರ್ಸ್ಕ್ ಪ್ರದೇಶಗಳ ವಾಯು ಪ್ರದೇಶಗಳಲ್ಲಿ ಕಂಡುಬಂದ ಉಕ್ರೇನ್ ಡ್ರೋನ್‌ಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಲಾಯಿತು ಎಂದು ರಷ್ಯಾ ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಅಮೆರಿಕ ದಾಳಿ 10 ಉಗ್ರರ ಸಾವು

ಬೈರೂತ್ (ಎಎಫ್‌ಪಿ): ಪೂರ್ವ ಸಿರಿಯಾದಲ್ಲಿ ಶನಿವಾರ ನಡೆದ ವೈಮಾನಿಕ ದಾಳಿಯಲ್ಲಿ ಇರಾನ್ ಪರವಾದ 10 ಉಗ್ರರು ಹತ್ಯೆಗೀಡಾಗಿದ್ದು, 30 ಮಂದಿ ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಈ ದಾಳಿಯನ್ನು ಅಮೆರಿಕ ಪಡೆಗಳು ಎಸಗಿರಬಹುದು ಎನ್ನಲಾಗಿದೆ.

ಹೆಚ್ಚು ಸವಾಲಿನ ‘ಸಾಹಸ’ಕ್ಕೆ ಇಸ್ರೊ ಸಜ್ಜು

ನಾಳೆ ‘ಎಕ್ಸ್‌ಪೊಸ್ಯಾಟ್’ ಉಡಾವಣೆ

ನವದೆಹಲಿ (ಪಿಟಿಐ): 2023ರಲ್ಲಿ ಚಂದಿರನ ದಕ್ಷಿಣ ಧ್ರುವದಲ್ಲಿ ಯಶಸ್ವಿ ಪದಾರ್ಪಣೆಯ ಬಳಿಕ ಭಾರತ, ಹೊಸ ವರ್ಷ 2024ರಲ್ಲಿ ಹೆಚ್ಚಿನ ಸವಾಲುಗಳ ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಿದ್ಧತೆ ನಡೆಸಿದೆ.

ಅಂತರಿಕ್ಷಕ್ಕೆ ಮನುಷ್ಯರನ್ನು ಕಳುಹಿಸುವುದು, ಸೂರ್ಯನ ಅಂಗಳದಿಂದ ಅಧ್ಯಯನಕ್ಕಾಗಿ ಮಾದರಿಗಳನ್ನು ತರುವ ಯೋಜನೆಗಳ ಜಾರಿಗೆ ಈಗ ಸಿದ್ಧತೆ ನಡೆದಿದೆ. ಈ ಎರಡೂ ಯೋಜನೆಗಳ ಪ್ರಯೋಗಾರ್ಥ ಪರೀಕ್ಷೆಯು 2024ರಲ್ಲಿ ನಿಗದಿಯಾಗಿದೆ.

ಭಾರತೀಯ ವಿಜ್ಞಾನಿಗಳ ಸಂಶೋಧನೆ ಗುರಿ ಚಂದಿರ ಮತ್ತು ಸೂರ್ಯನ ಅಂಗಳಕ್ಕಷ್ಟೇ ಸೀಮಿತವಾಗಿಲ್ಲ. ಸಮುದ್ರದಾಳದ ಸಂಶೋಧನೆಗೂ ಒತ್ತು ನೀಡಿದ್ದು, ಸಮುದ್ರದಲ್ಲಿ 500 ಮೀಟರ್ ಆಳಕ್ಕೆ ಜಲಾಂತರ್ಗಾಮಿಗಳನ್ನು ಮಾರ್ಚ್‌ನಲ್ಲಿ ಕಳುಹಿಸಲು ಸಿದ್ಧತೆ ನಡೆಸಿದ್ದಾರೆ.

ಎಕ್ಸ್‌-ರೇ ಮೂಲಗಳ ನಿಗೂಢತೆ ಹಾಗೂ ಕಪ್ಪುರಂಧ್ರದ ನಿಗೂಢ ಜಗತ್ತಿನ ವಿಸ್ಮಯಗಳನ್ನು ತಿಳಿಯುವ ಉದ್ದೇಶದ ‘ಎಕ್ಸ್‌-ರೇ ಪೋಲಾರಿಮೀಟರ್ ಉಪಗ್ರಹ’ (ಎಕ್ಸ್‌ಪೊಸ್ಯಾಟ್) ಉಡಾವಣೆಯ ಮೂಲಕ ಹೊಸ ವರ್ಷವನ್ನು ಆರಂಭಿಸಲು ಈಗ ಇಸ್ರೊ ಸಜ್ಜಾಗಿದೆ.

ಆಂಧ್ರಪ್ರದೇಶದ ಶ್ರೀಹರಿಕೋಟದಲ್ಲಿರುವ ಉಪಗ್ರಹ ಉಡಾವಣಾ ಕೇಂದ್ರದಿಂದ ಜನವರಿ 1ರಂದು ಈ ಉಪಗ್ರಹವನ್ನು ಹೊತ್ತ ಪಿಎಸ್‌ಎಲ್‌ವಿ ವಾಹಕವು ಗಗನಕ್ಕೆ ಚಿಮ್ಮಲು ಸಜ್ಜಾಗಿದೆ.

ಅದರ ಬಳಿಕ ಜನವರಿ 6ರಂದು ಸಂಜೆ 4ಗಂಟೆಗೆ ಸರಿಯಾಗಿ ಆದಿತ್ಯ ಎಲ್ -1 ಉಪಗ್ರಹವನ್ನು ಲಾಗ್ರೇಂಜ್ ಪಾಯಿಂಟ್-1ಕ್ಕೆ ತಲುಪಿಸುವ ಕಾರ್ಯ ನಡೆಯಲಿದೆ. ಈ ಪ್ರಕ್ರಿಯೆಯು ಮುಂದಿನ ಐದು ವರ್ಷ ಕಾಲ ಸೂರ್ಯನ ಅನಿಯಮಿತ ಅಧ್ಯಯನಕ್ಕೆ ನೆರವಾಗಲಿದೆ.

ಅಲ್ಲದೆ, 2024ರಲ್ಲಿ ನಾಸಾ ಮತ್ತು ಇಸ್ರೊ ಜಂಟಿಯಾಗಿ ಕಾರ್ಯಗತಗೊಳಿಸಲಿರುವ 1.2 ಬಿಲಿಯನ್ ಡಾಲರ್ ವೆಚ್ಚದ ನಿಸಾರ್ ಉಪಗ್ರಹ ಉಡಾವಣೆ ನಡೆಯಲಿದೆ. ತಾಪಮಾನ ಬದಲಾವಣೆ ಅಧ್ಯಯನ ಉದ್ದೇಶದ ಅತ್ಯಂತ ದುಬಾರಿ ಉಪಗ್ರಹ ಇದಾಗಿರಲಿದೆ.

‘ಬೃಹತ್ ಟೆಲಿಸ್ಕೋಪ್ ಯೋಜನೆಗೆ ಭಾರತದಿಂದ ₹1,250 ಕೋಟಿ’

ನವದೆಹಲಿ: ಬ್ರಹ್ಮಾಂಡವನ್ನು ಇನ್ನಷ್ಟು ಆಳವಾಗಿ ಅರಿತುಕೊಳ್ಳುವ ಯತ್ನವಾಗಿ ಎರಡು ಭೂಖಂಡಗಳನ್ನು ನೆಲೆಯಾಗಿಸಿ ಜಗತ್ತಿನತ್ತ ದೃಷ್ಟಿ ಹರಿಸಲಿರುವ ಬೃಹತ್ ಟೆಲಿಸ್ಕೋಪ್ ಯೋಜನೆ ಕಾರ್ಯಗತಕ್ಕಾಗಿ ಭಾರತ ₹1,250 ಕೋಟಿ ನೆರವು ನೀಡಲಿದೆ.

ವಿಶ್ವದ ಬೃಹತ್ ರೇಡಿಯೊ ಟೆಲಿಸ್ಕೋಪ್ ಎನ್ನಲಾದ ಸ್ಕ್ವೈರ್ ಕಿಲೋಮೀಟರ್ ಆ್ಯರೆ (ಎಸ್‌ಕೆಎ) ಯೋಜನೆಗೆ ನೆರವು ನೀಡುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಆಸ್ಟ್ರೇಲಿಯಾದ ಪರ್ತ್ ಮತ್ತು ದಕ್ಷಿಣ ಆಫ್ರಿಕಾದ ಕೇಪ್ ಟೌನ್ ಸಮೀಪ ಈ ಬೃಹತ್ ಟೆಲಿಸ್ಕೋಪ್ ನೆಲೆ ಹೊಂದಲಿದ್ದು, ಕಾರ್ಯ ನಿರ್ವಹಿಸಲಿದೆ.

ಅತ್ಯಾಧುನಿಕ ತಂತ್ರಜ್ಞಾನ, ಕ್ಷಿಪ್ರವಾಗಿ ಕಾರ್ಯನಿರ್ವಹಿಸಲಿರುವ ಜಗತ್ತಿನ ಸೂಪರ್ ಕಂಪ್ಯೂಟರ್‌ಗಳನ್ನು ಈ ಯೋಜನೆಗೆ ಬಳಸಲಾಗುತ್ತಿದೆ. ಇದು, ಜಗತ್ತನ್ನು ಆಳವಾಗಿ, ವಿವರವಾಗಿ ಅರಿತುಕೊಳ್ಳುವ ಕಾರ್ಯಕ್ಕೆ ಹೊಸ ದೃಷ್ಟಿಕೋನ ನೀಡಲಿದೆ ಎನ್ನಲಾಗಿದೆ.

ಕಪ್ಪುರಂಧ್ರದ ನಿಗೂಢತೆ, ಗುರುತ್ವಾಕರ್ಷಣ ಅಲೆಗಳ ಚಲನೆ ಅರಿಯುವುದು ಸೇರಿದಂತೆ ಹಲವು ಮಹತ್ವದ ಉದ್ದೇಶಗಳ ಗುರಿ ಸಾಧನೆ ಈ ಯೋಜನೆಯ ಹಿಂದಿದೆ. ಭಾರತ ಸೇರಿ 10ಕ್ಕೂ ಹೆಚ್ಚು ರಾಷ್ಟ್ರಗಳು ಈ ಯೋಜನೆಯಲ್ಲಿ ಭಾಗಿಯಾಗಿವೆ.

ಈ ಕುರಿತ ಹೇಳಿಕೆಯಲ್ಲಿ ಅಣುಶಕ್ತಿ ಇಲಾಖೆಯು, ‘ಎಸ್‌ಕೆಯ ಅಂತರ ರಾಷ್ಟ್ರೀಯ ಮೆಗಾ ವಿಜ್ಞಾನ ಯೋಜನೆಗೆ ₹ 1,250 ಕೋಟಿ ಒದಗಿಸುವ ಮೂಲಕ ಭಾರತ ಭಾಗಿಯಾಗಲಿದೆ’ ಎಂದು ತಿಳಿಸಿದೆ.

ಎನ್‌ಸಿಆರ್‌ಎ ಮತ್ತು ಬೆಂಗಳೂರಿನ ರಾಮನ್ ಸಂಶೋಧನಾ ಸಂಸ್ಥೆ ವಿಜ್ಞಾನಿಗಳ ನೇತೃತ್ವದಲ್ಲಿ ಭಾರತೀಯ ರೇಡಿಯೊ ಖಗೋಳತಜ್ಞರು, ಯೋಜನೆ ವಿನ್ಯಾಸ, ಕಾರ್ಯಗತಗೊಳಿಸುವ ಆರಂಭಿಕಹಂತದ ಪ್ರಕ್ರಿಯೆಗಳಲ್ಲಿ ಭಾಗಿಯಾಗಿದ್ದಾರೆ.

ಪ್ರಜಾವಾಣಿ — ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

27.01.2024 12.03.2024 12.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು . 05.02.2024 25.03.2024 02.04.2024 ಶ್ರೀಲಂಕಾ 6 ದಿನಗಳು. 02.03.2024 03.04.2024 02.06.2024 ಅಸ್ಸಾಂ,ಮೇಘಾಲಯ 9 ದಿನಗಳು. 17.01.2024 27.02.2024 09.03.2024 ಗುಜರಾತ್ 8 ದಿನಗಳು. 10.02.2024 15.03.2024 ರಾಜಸ್ಥಾನ್ 10 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. 12.04.2024 06.05.2024 05.06.2024 ಕಾಶ್ಮೀರ್ 6 ದಿನಗಳು. 05.04.2024 25.04.2024 21.05.2024 ಶಿಮ್ಲಾ,ಕುಲುಮನಾಲಿ 8 ದಿನಗಳು. 15.02.2024 26.03.2024 ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.03 9448402248 7022547922

23.1.2024 ಕನ್ಯಾಕುಮಾರಿ, ರಾಮೇಶ್ವರಂ, ಶ್ರೀರಂಗಂ, ನವಗ್ರಹ ಕ್ಷೇತ್ರಗಳು, 11.2.2024 ಗುಜರಾತ್, ಮಧ್ಯಪ್ರದೇಶ್. 11.2.2024 ಭುವನೇಶ್ವರ್, ಪುರಜಗನ್ನಾಥ್, ಕೊಲ್ಕತ್ತಾ. 19.2.2024 ಅಯೋಧ್ಯಾ ಕಾಶಿ,ಗಯಾ, ಪ್ರಯಾಗ್‌ರಾಜ್ ಕರ್ನಾಟಕ ಹರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

★ಶ್ರೇಯಸ್ ಟೂರ್ಸ್★ ವಿ.ವಿ.ಪುರಂ 05.02.2024 12ದಿನಗಳು ಅಖಂಡ ಗುಜರಾತ್ (ಕಚ್‌ಬುಜ್).03.03.2024 10ದಿನಗಳು ಅಖಂಡ ನೇಪಾಳ (ಮುಕ್ತಿನಾಥ).13.03.2024 21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ.ಅರುಣಾಚಲಪ್ರದೇಶ. ಮೇಘಾಲಯ.ಮಣಿಪುರ.ತ್ರಿಪುರ. ಮಿಝೋರಾಂ,ನಾಗಲ್ಯಾಂಡ್. 9743351212, 9206979202, 6366322639

10 ದಿನಗಳ ಗುಜರಾತ್. 8ದಿನಗಳ ಕಾಶಿಯಾತ್ರೆ. 12 ದಿನಗಳ ಮಧ್ಯಪ್ರದೇಶ. 13 ದಿನಗಳ ಚಾರ್ ಧಾಮ್‌ಯಾತ್ರೆ ಶ್ರೀನಂದಿ ಹಾಲಿಡೇಸ್. 9740228186 9980270467

ಇತರೆ

Medical

ಶ್ರೀಶಕ್ತಿ ಹೆಲ್ತ್ ಕೇರ್ ವತಿಯಿಂದ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿ ಚಿಕಿತ್ಸೆ. ಶಿಬಿರ ದಿನಾಂಕ 01.01.2024 ರಿಂದ 07.01.2024 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆ ನೋವು, ಮೈಗ್ರೇನ್, ಭುಜದ ನೋವು, ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಚಿಕಿತ್ಸೆ ಪಡೆಯಿರಿ. ವಿಳಾಸ: ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು ಶೇಷಾದ್ರಿಪುರಂ, ಬೆಂಗಳೂರು-20. ಮೊಬೈಲ್: 7349494852.

ವ್ಯಾಪಾರ

Business to Business

Business

ಮಹಿಳಾ ಸಂಘ ಸಂಸ್ಥೆಗಳಿಗೆ ರೇಷ್ಮೆ, ಸಿಲ್ಕ್, ಕಾಟನ್, ಎಲ್ಲಾ ತರಹದ ಸೀರೆಗಳು, ದೊರೆಯುತ್ತದೆ. ಆಕರ್ಷಕ ಆದಾಯ ಸಿಗುತ್ತದೆ: 8892501007/ 9606701007

Business Offers

Distributors

ಮಹಿಳಾ ಉಡುಪು ತಯಾರಿಕಾಕಂಪನಿಗೆ ಬೆಂಗಳೂರೀನಾದ್ಯಂತ,ಹಾಗೂ ಜಿಲ್ಲಾವಾರುವಿತರಕರು ಬೇಕಾಗಿದ್ದಾರೆ. ಮಹಿಳಾಸಂಘಗಳು ಹಾಗೂ ಮಹಿಳೆಯರಿಗೆಆದ್ಯತೆ. ಬೆಂಗಳೂರಿನಲ್ಲಿ,ವಾಸಿಸುತ್ತಿರುವ ಮಹಿಳೆಯರಿಗೆ,ಉದ್ಯೋಗ ಕಂಪನಿಯಿಂದ ಕೊಡಲಾಗುತ್ತದೆ. ಸಂಪರ್ಕಿಸಿ:6366197165.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Rajajinagar

COMMERCIAL SPACE For sale 1472 Sqft in 2nd floor and 2267 sqft in basement. Prime 100 ft road in Rajaji Nagar, Bangalore. Suitable for CA/ Advocate/ Retail. Company owned property. Contact:- 9940125875/ 8956176149 / 9448067625.

ಸಾರ್ವಜನಿಕ ಪ್ರಕಟಣೆ

ಪ್ರಕಟಣೆ

ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠ, ನೆಲಮಂಗಲ

ಗಾಣಿಗ ಕುಲಬಾಂಧವರಲ್ಲಿ ಮನವಿ: ಶ್ರೀ ಕ್ಷೇತ್ರವನ್ನು ಜವಾಬ್ದಾರಿಯಿಂದ ಮುನ್ನಡೆಸಲು ದಕ್ಷ, ಪ್ರಮಾಣಿಕ ಮತ್ತು ಸಂಪೂರ್ಣ ತ್ಯಾಗ ಭಾವದಿಂದ ಗಾಣಿಗ ಜನಾಂಗದ ಮತ್ತು ಸಮಾಜದ ಸೇವೆಯನ್ನು ಸಮರ್ಪಣಾ ಭಾವದಿಂದ ಮಾಡಲು ಶ್ರೀ ಕ್ಷೇತ್ರಕ್ಕೆ ಮಠಸ್ವಾಮಿಗಳಾಗಲು (ಮುಂದಿನ ಎರಡನೇ ಪೀಠಾಧಿಪತಿ) ಇಚ್ಛಿಸುವ ಅರ್ಹ ಜನಾಂಗದ ವಿದ್ಯಾವಂತ ಯುವಕರು ಪೀಠಾಧಿಪತಿಗಳನ್ನು ಖುದ್ದಾಗಿ ಸಂಪರ್ಕಿಸಲು ಕೋರಲಾಗಿದೆ. ಒಂದೆರಡು ತಿಂಗಳಲ್ಲಿ ಯಾರು ಬಾರದಿದ್ದರೆ ಬೇರೆ ಆಶ್ರಮಗಳಿಂದ ಯೋಗ್ಯ ಯುವಕರನ್ನು ಮಠಕ್ಕೆ ತರುವ ಚಿಂತನೆ ಇದೆ. ಈ ವಿಷಯ ದಿ: 05-11-2023 ರಂದು ನಡೆದ ಟ್ರಸ್ಟ್‌ನ ಸಭೆಯ ತೀರ್ಮಾನವಾಗಿರುತ್ತದೆ. ಜೂನ್ 2024ರಿಂದ ಉಚಿತ ವಿದ್ಯಾರ್ಥಿ ನಿಲಯ ಪ್ರಾರಂಭಿಸಲಾಗುವುದು. ಒಂದರಿಂದ ಎಂಟನೇ ತರಗತಿವರೆಗೆ ICSE ಬೋಧನೆಯ ಶಾಲೆ ನಡೆಯುತ್ತಿದೆ. ವಿದ್ಯಾರ್ಥಿ ನಿಲಯಕ್ಕೆ ಪ್ರವೇಶ ಬಯಸುವವರು ನೋಂದಣಿ ಮಾಡಿಸಬಹುದು.
ಮೂರು-ನಾಲ್ಕು ಅನಾಥ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಶ್ರೀಗಳು ವಹಿಸಿಕೊಳ್ಳುತ್ತಾರೆ.
ಶ್ರೀ ಶ್ರೀ ಶ್ರೀ ಪೂರ್ಣಾನಂದ ಪುರಿ ಮಹಾಸ್ವಾಮಿಜಿ
ಮೊ: 94480259762

HEALTH SPECIAL

ವಾಹನ

Four Wheelers Selling

Maruti

SALE .MARUTI Super carry refrigerator (reefer) vehicle. With South Korean make Dongin refrigeration unit fitted in brand new condition.. very low usage. Bangalore. Mobile: 9886972374/ 99802 83865

ಉದ್ಯೋಗಾವಕಾಶ

Wanted

WANTED FOR Bank Loan Collection Field Executive 2 Wheeler Must, Good Salary + Attractive Incentive. 10th, 12th Pass/ Any Degree. 8762900934/ 8867443657

ಬೇಕಾಗಿದ್ದಾರೆ

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ BEML ಲೇಔಟ್‌ನಲ್ಲಿರುವ ಮನೆ ನಂ. 795ಕ್ಕೆ ಮನೆ ಮತ್ತು ಕ್ಲಿನಿಕ್ ಹಾಗೂ ವಾಚ್‌ಮನ್ ಕೆಲಸಕ್ಕಾಗಿ ದಂಪತಿಗಳ ಕುಟುಂಬ ತಕ್ಷಣ ಬೇಕಾಗಿದ್ದಾರೆ. ಈ ಕುಟುಂಬದ ವಸತಿಗಾಗಿ ಔಟ್‌ಹೌಸ್ ನೀಡಲಾಗುತ್ತದೆ. ವಯಸ್ಸು 50 ವರ್ಷ ಮೀರಿರಬಾರದು ಮತ್ತು ಕಡ್ಡಾಯವಾಗಿ ದ್ವಿಚಕ್ರವಾಹನ ಚಾಲನಾ ಪರವಾನಗಿ ಹೊಂದಿರಬೇಕು. ಮಾಸಿಕ ವೇತನ 18,000/-. ಆಸಕ್ತಿಯುಳ್ಳವರು ಕೂಡಲೇ ಸಂಪರ್ಕಿಸಿ: 9741333222, 9962182221

ಬೇಕಾಗಿದ್ದಾರೆ ಅಡಿಗೆ & ಮನೆಕೆಲಸ ಮಾಡಲು ದಂಪತಿಗಳು ಬೇಕಾಗಿದ್ದಾರೆ, ವಯಸ್ಸು: 30 to 35 ವರ್ಷದೊಳಗೆ ಸ್ಥಳ: ರಾಜರಾಜೇಶ್ವರಿನಗರ, ಬೆಂಗಳೂರು ಉತ್ತಮ ಸಂಬಳದೊಂದಿಗೆ ಉಚಿತ ವಸತಿ ಇರುತ್ತದೆ ಆಸಕ್ತರು ಕೂಡಲೇ ಸಂಪರ್ಕಿಸಿ: 7019941116

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560 : 9731810277
080 - 45557163 / 164

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ನಿಮ್ಮ ಹೆಸರು ಬದಲಾವಣೆ ಆಗಿದೆಯೇ?
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ರವೀಂದ್ರ ಜಡೇಜ ಫಿಟ್; ಪ್ರಸಿದ್ಧಕೃಷ್ಣ ಬೌಲಿಂಗ್ ಮೇಲೆ ವಿಶೇಷ ನಿಗಾ

ನೆಟ್ಸ್‌ನಲ್ಲಿ ಬ್ಯಾಟರ್‌ಗಳಿಗೆ ಪಾಠ

• ರೋಶನ್ ತ್ಯಾಗರಾಜನ್

ಸೆಂಚುರಿಯನ್: ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣದ ಮೊದಲ ಟೆಸ್ಟ್ ಪಂದ್ಯಕ್ಕೆ ಶನಿವಾರ ಕೊನೆಯ ದಿನವಾಗಬೇಕಿತ್ತು. ಆದರೆ ಈ ದಿನವು ಅಭ್ಯಾಸಕ್ಕೆ ಮೀಸಲಾಯಿತು.

ಮೊದಲ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗವು ಮೂರೇ ದಿನಗಳಲ್ಲಿ ಸೋತಿತ್ತು. ಶನಿವಾರ ಬೆಳಿಗ್ಗೆ ತಂಡದ ಆಯ್ದ ಆಟಗಾರರ ತಾಲೀಮು ನಡೆಸಲು ವ್ಯವಸ್ಥಾಪಕರು ನಿರ್ಧರಿಸಿದರು. ಅದರಿಂದಾಗಿ ಬೆಳಗಿನ ಚುಮುಚುಮು ಚಳಿಯಲ್ಲಿ ಮೂರು ಗಂಟೆಗಳ ಅವಧಿಯ ತಾಲೀಮು ನಡೆಯಿತು.

ಈ ಅಭ್ಯಾಸದಲ್ಲಿ ನಾಯಕ ರೋಹಿತ್ ಶರ್ಮಾ ಮುಂಚೂಣಿಯಲ್ಲಿದ್ದರು. ಅವ ರೊಂದಿಗೆ ನೆರವು ಸಿಬ್ಬಂದಿ ಕೂಡ ಇದ್ದರು. ರವೀಂದ್ರ ಜಡೇಜ, ಆರ್. ಅಶ್ವಿನ್, ಶಾರ್ದೂಲ್ ಠಾಕೂರ್, ಯಶಸ್ವಿ ಜೈಸ್ವಾಲ್, ಮುಕೇಶ್ ಕುಮಾರ್, ಪ್ರಸಿದ್ಧ ಕೃಷ್ಣ, ಅಭಿಮನ್ಯು ಈಶ್ವರನ್ ಮತ್ತು ಕೆ.ಎಸ್. ಭರತ್ ಹಾಜರಿದ್ದರು.

ಆಲ್‌ರೌಂಡರ್ ಜಡೇಜ, ಗುರುವಾರದ ನೆಟ್ಸ್‌ನಲ್ಲಿ ಬೌಲಿಂಗ್ ಮತ್ತು ಫೀಲ್ಡಿಂಗ್ ಅಭ್ಯಾಸ ಮಾಡಿದ್ದರು. ಇವತ್ತು ಅವರು ಮತ್ತು ಅಶ್ವಿನ್ ಹೆಚ್ಚು ಬೌಲಿಂಗ್ ಮಾಡಲಿಲ್ಲ. ಆದರೆ ಬ್ಯಾಟಿಂಗ್‌ನಲ್ಲಿ ಹೆಚ್ಚು ಹೊತ್ತು ಬೆವರಿಳಿಸಿದರು. ಬ್ಯಾಟಿಂಗ್ ವಿಭಾಗದ ಲೋಪಗಳನ್ನು ತಿದ್ದುವಲ್ಲಿ ಹೆಚ್ಚು ಹೊತ್ತು ವಿನಿಯೋಗವಾಯಿತು.

ಭಾರತ ತಂಡದ ಅಭ್ಯಾಸದ ಸಂದರ್ಭದಲ್ಲಿ ಬೌಲರ್ ಪ್ರಸಿದ್ಧ ಕೃಷ್ಣ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರ ಮಾತುಕತೆ –ಪಿಟಿಐ ಚಿತ್ರ

ವೇಗಿಗಳಾದ ಮುಕೇಶ್ ಕುಮಾರ್ ಮತ್ತು ಪ್ರಸಿದ್ಧಕೃಷ್ಣ ಬೌಲಿಂಗ್ ಅಭ್ಯಾಸದಲ್ಲಿ ಹೆಚ್ಚು ಹೊತ್ತು ತೊಡಗಿಸಿಕೊಂಡರು. ಈಚೆಗೆ ನಡೆದ ನಿಗದಿತ ಓವರ್‌ಗಳ ಸರಣಿಯಲ್ಲಿ ಉತ್ತಮ ಲಯದಲ್ಲಿದ್ದ ಮುಕೇಶ್ ಅವರ ಎಸೆತಗಳನ್ನು ರೋಹಿತ್ ಎದುರಿಸಿದರು. ಮುಕೇಶ್ ಅವರು ತಮ್ಮ ಕೆಲವು ಬೌನ್ಸರ್‌ಗಳಿಂದ ರೋಹಿತ್ ಅವರನ್ನೂ ಚಕಿತಗೊಳಿಸಿದರು.

ಕರ್ನಾಟಕದ ಪ್ರಸಿದ್ಧ ಕೃಷ್ಣ ಅವರ ಅಭ್ಯಾಸದ ಮೇಲೆ ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ ವಿಶೇಷ ನಿಗಾ ವಹಿಸಿದ್ದರು. ನಂತರ ಪಾರಸ್ ಅವರು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೂ ದೀರ್ಘ ಮಾತುಕತೆ ನಡೆಸಿದರು. ದ್ರಾವಿಡ್ ಕೂಡ ನೆಟ್ಸ್‌ನಲ್ಲಿ ಒಂದಷ್ಟು ಬೌಲಿಂಗ್ ಅಭ್ಯಾಸ ನಡೆಸಿದರು.

ಪ್ರಸಿದ್ಧ ಅವರ ಎಸೆತಗಳು ನೆಲಸ್ಪರ್ಶ ಮಾಡುತ್ತಿದ್ದ ಜಾಗ, ರನ್‌ಅಪ್ ಮತ್ತು ಶೈಲಿಗಳ ಸುಧಾರಣೆಯಲ್ಲಿ ಕುರಿತು ಪಾರಸ್ ಕೆಲವು ಸಲಹೆಗಳನ್ನು ನೀಡುತ್ತಿರುವುದು ಸ್ಪಷ್ಟವಾಗಿತ್ತು. ಸುಮಾರು ಒಂದು ಗಂಟೆ ಪ್ರಸಿದ್ಧ ಅವರ ತಾಲೀಮು ನಡೆಯಿತು.

ಪಾರಸ್ ಅವರು ಅಶ್ವಿನ್ ಜೊತೆಗೂ ಒಂದಿಷ್ಟು ಹೊತ್ತು ನೆಟ್ಸ್‌ನಲ್ಲಿ ಸಮಯ ಕಳೆದರು. ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಅವರು ಅಶ್ವಿನ್ ಬ್ಯಾಟಿಂಗ್ ಬಗ್ಗೆ ಹೆಚ್ಚು ಒತ್ತು ನೀಡಿದರು. ಮೊದಲ ಪಂದ್ಯದಲ್ಲಿ ಅವರು ಕೆಟ್ಟ ಹೊಡೆತವಾಡಿ ಔಟಾಗಿದ್ದರು.

ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರು ಕೂಡ ಅಭ್ಯಾಸ ನಡೆಸಿದರು. ಆದರೆ ಅವರ ಆಟದಲ್ಲಿ ಆತ್ಮವಿಶ್ವಾಸದ ಸೆಳಕು ಇರಲಿಲ್ಲ. ಕೆಲವು ಎಸೆತಗಳು ಅವರ ಮೈಗೆ ತಾಗಿ ಹೋದವು. ತಮ್ಮ ಅಭ್ಯಾಸದ ನಂತರ ಯಶಸ್ವಿ ಅವರು ದ್ರಾವಿಡ್ ಜೊತೆಗೆ ಸ್ವಲ್ಪ ಹೊತ್ತು ಮಾತುಕತೆ ನಡೆಸಿದರು.

ಇನ್ನೊಂದೆಡೆ ರೋಹಿತ್ ಸುಮಾರು 20 ನಿಮಿಷ ಬ್ಯಾಟಿಂಗ್ ಅಭ್ಯಾಸ ನಡೆಸಿದ ನಂತರ ಉಳಿದೆಲ್ಲ ಆಟಗಾರರ ತಾಲೀಮನ್ನು ಹತ್ತಿರದಿಂದ ಗಮನಿಸುವಲ್ಲಿ ನಿರತರಾಗಿದ್ದರು.

ಉಭಯ ತಂಡಗಳ ನಡುವಣ ಎರಡನೇ ಟೆಸ್ಟ್ ಜನವರಿ 3ರಿಂದ ನ್ಯೂಲ್ಯಾಂಡ್ಸ್‌ನಲ್ಲಿ ನಡೆಯಲಿದೆ.

ಜೆರಾಲ್ಡ್ ಅಲಭ್ಯ

ಸೆಂಚುರಿಯನ್ (ಪಿಟಿಐ): ದಕ್ಷಿಣ ಆಫ್ರಿಕಾ ತಂಡದ ಬೌಲರ್ ಜೆರಾಲ್ಡ್ ಕೊಟ್ಜಿಯಾ ಅವರು ಸೊಂಟದ ನೋವಿನಿಂದ ಬಳಲುತ್ತಿದ್ದು, ಎರಡನೇ ಟೆಸ್ಟ್ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ.

23 ವರ್ಷದ ಅವರು ಮೊದಲ ಪಂದ್ಯದಲ್ಲಿ ಆಡುವಾಗಲೇ ಸೊಂಟದಲ್ಲಿ ನೋವು, ಉರಿಯೂತ ಅನುಭವಿಸಿದ್ದರು. ಅದು ಉಲ್ಬಣಿಸಿದ್ದರಿಂದ ವಿಶ್ರಾಂತಿಗೆ ತೆರಳಿದ್ದಾರೆ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ದಕ್ಷಿಣ ಆಫ್ರಿಕಾ ತಂಡದಲ್ಲಿ ಏಳು ಹೊಸಬರು

ಕೇಪ್‌ಟೌನ್ (ರಾಯಿಟರ್ಸ್): ಫೆಬ್ರುವರಿಯಲ್ಲಿ ಎರಡು ಟೆಸ್ಟ್ ಪಂದ್ಯಗಳ ಸರಣಿಯನ್ನು ಆಡಲು ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳುವ ದಕ್ಷಿಣ ಆಫ್ರಿಕಾ ತಂಡದಲ್ಲಿ ಏಳು ಹೊಸಬರಿಗೆ ಅವಕಾಶ ನೀಡಲಾಗಿದ್ದು, ಇವರಲ್ಲಿ ಒಬ್ಬರಾದ ನೀಲ್ ಬ್ರಾಂಡ್ ಅವರನ್ನು ನಾಯಕನನ್ನಾಗಿ ನೇಮಕ ಮಾಡಿದೆ.

ಭಾರತ ವಿರುದ್ಧ ಮೊದಲ ಟೆಸ್ಟ್‌ನಲ್ಲಿ ಆಡಿದ್ದ ಇಬ್ಬರು ಮಾತ್ರ- ಡೇವಿಡ್ ಬೆಡ್ಡಿಂಗಮ್ ಮತ್ತು ಕೀಗನ್ ಪೀಟರ್ಸನ್ ಅವರು ಶನಿವಾರ ಪ್ರಕಟಿಸಿದ ತಂಡದಲ್ಲಿ ಇದ್ದು, ನ್ಯೂಜಿಲೆಂಡ್‌ಗೆ ಹೋಗಲಿದ್ದಾರೆ.

ಹೊಸ ತಂಡದಲ್ಲಿ ಝುಬೇರ್ ಹಮ್ಝಾ ಮತ್ತು ಖಾಯಾ ಝೊಂಡೊ, ವೇಗಿಗಳಾದ ಡುಯೇನ್ ಒಲಿವಿಯರ್, ಡೇನ್ ಪೀಟರ್ಸನ್, ಸ್ಪಿನ್ನರ್ ಡೇನ್ ಪೀಟ್ ಅವರು ಮಾತ್ರ ಟೆಸ್ಟ್ ಆಡಿದ ಅನುಭವ ಹೊಂದಿದ್ದಾರೆ. ಹೊಸ ಮುಖಗಳಲ್ಲಿ ಹೆಚ್ಚಿನವರು ದಕ್ಷಿಣ ಆಫ್ರಿಕಾ ಎ ತಂಡದ ಪರ ಆಡಿದವರು.

ದಕ್ಷಿಣ ಆಫ್ರಿಕಾ ತಂಡದ ಹಾಲಿ ಆಟಗಾರರಲ್ಲಿ ಬಹುತೇಕ ಮಂದಿ ದೇಶೀಯ ಟಿ 20 ಲೀಗ್ (ಎಸ್‌ಎ20) ನಲ್ಲಿ ಆಡಲಿದ್ದಾರೆ. ಕ್ರಿಕೆಟ್ ಸೌತ್ ಆಫ್ರಿಕಾ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕಳೆದ ವರ್ಷ ಈ ಲೀಗ್ ಆರಂಭಿಸಿತ್ತು.

ಮೊದಲ ಟೆಸ್ಟ್ ಫೆ. 4 ರಿಂದ 8ರವರೆಗೆ ಮೌಂಟ್ ಮಾಂಗಾನುಯಿಯಲ್ಲಿ ನಡೆಯಲಿದೆ.

ತಂಡ: ನೀಲ್ ಬ್ರಾಂಡ್ (ನಾಯಕ), ಡೇವಿಡ್ ಬೆಡ್ಡಿಂಗಮ್, ರುವಾನ್ ಡಿ ಸ್ವಾರ್ಟ್, ಕ್ಲೈಡ್ ಫರ್ಚೂಯಿನ್, ಝುಬೇರ್ ಹಮ್ಝಾ, ಶೆಪೊ ಮೊರೆಕಿ, ಮಿಹ್ಲಾಲಿ ಪೊಂಗ್ವಾನ, ಡುಯೇನ್ ಒಲಿವಿಯರ್, ಡೇನ್ ಪೀಟರ್ಸನ್, ಕೀಗನ್ ಪೀಟರ್ಸನ್, ಡೇನ್ ಪೀಟ್, ರೇನಾರ್ಡ್ ವಾನ್ ತೊಂಡರ್, ಶಾನ್ ವೊನ್ ಬರ್ಗ್, ಖಾಯಾ ಝೊಂಡೊ.

ಆಸ್ಟ್ರೇಲಿಯಾ ತಂಡಕ್ಕೆ ಜಯ, ಸರಣಿ

ಏಕದಿನ ಕ್ರಿಕೆಟ್: ದೀಪ್ತಿ ಶರ್ಮಾಗೆ 5 ವಿಕೆಟ್: ಶತಕ ವಂಚಿತ ರಿಚಾ ಘೋಷ್

ಮುಂಬೈ(ಪಿಟಿಐ): ಐದು ವಿಕೆಟ್ ಗೊಂಚಲು ಗಳಿಸಿದ ದೀಪ್ತಿ ಶರ್ಮಾ ಮತ್ತು ರಿಚಾ ಘೋಷ್ ಅವರ ಚೆಂದದ ಬ್ಯಾಟಿಂಗ್ ನೋಡುಗರ ಮನಗೆದ್ದವು. ಆದರೂ ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ಎದುರಿನ ಎರಡನೇ ಏಕದಿನ ಪಂದ್ಯದಲ್ಲಿ 3 ರನ್‌ಗಳ ಅಂತರದಿಂದ ಸೋತಿತು.

ಇದರೊಂದಿಗೆ ಪ್ರವಾಸಿ ಬಳಗವು ಮೂರು ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ವಾಂಖೆಡೆ ಕ್ರೀಡಾಂಗಣ ದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಫೋಬಿ ಲಿಚ್‌ಫೀಲ್ಡ್ (63; 98ಎ, 4X6) ಮತ್ತು ಎಲಿಸ್ ಪೆರಿ (50; 47ಎ, 4X5, 6X1) ಅವರ ಅರ್ಧಶತಕಗಳ ಬಲದಿಂದ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 258 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಭಾರತ ತಂಡವು

ಭಾರತದ ದೀಪ್ತಿ ಶರ್ಮಾ ಸಂಭ್ರಮ ಪಿಟಿಐ ಚಿತ್ರ

50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 255 ರನ್ ಗಳಿಸಿತು. 71 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡ ತಂಡಕ್ಕೆ ರಿಚಾ ಘೋಷ್ (96; 117ಎ, 4X13) ಮತ್ತು ಜೆಮಿಮಾ ರಾಡ್ರಿಗಸ್ (44; 55ಎ) ಆಸರೆಯಾದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 88 ರನ್ ಸೇರಿಸಿದರು. ಇದರಿಂದಾಗಿ ಆತಿಥೇಯ ತಂಡಕ್ಕೆ ಗೆಲುವಿನ ಆಸೆ ಚಿಗುರಿತ್ತು.

ಆದರೆ 34ನೇ ಓವರ್‌ನಲ್ಲಿ ಜೆಮಿಮಾ ಅವರ ವಿಕೆಟ್ ಗಳಿಸಿದ ವೇರ್‌ಹ್ಯಾಮ್, ಜೊತೆಯಾಟವನ್ನು ಮುರಿದರು. ನಾಯಕಿ ಹರ್ಮನ್‌ಪ್ರೀತ್ ಕೌರ್, ಅಮನ್ಜೋತ್ ಕೌರ್, ಪೂಜಾ ಮತ್ತು ಹರ್ಲೀನ್ ಅವರು ಒಂದಂಕಿ ಗಳಿಸಿದರು. ಈ ಸಂದರ್ಭದಲ್ಲಿ ದೀಪ್ತಿ (ಔಟಾಗದೆ 24) ದಿಟ್ಟ ಆಟವಾಡಿದರು. ಅದರಿಂದಾಗಿ ಕೊನೆಯ ಓವರ್‌ನವರೆಗೂ ಪಂದ್ಯ ಕುತೂಹಲ ಕೆರಳಿಸಿತ್ತು.

ಕೊನೆಯ ಎಸೆತದಲ್ಲಿ ತಂಡದ ಗೆಲುವಿಗೆ ಎಂಟು ರನ್ ಅಗತ್ಯವಿದ್ದಾಗ ಶ್ರೇಯಾಂಕ ಪಾಟೀಲ ಬೌಂಡರಿ ಬಾರಿಸಿದರು.

ದೀಪ್ತಿ (38ಕ್ಕೆ5) ಬೌಲಿಂಗ್ ನಲ್ಲಿಯೂ ಪರಿಣಾಮಕಾರಿಯಾಗಿದ್ದರು. ಅರ್ಧಶತಕ ಗಳಿಸಿದ್ದ ಎಲಿಸ್ ಪೆರಿ, ಬೆತ್ ಮೂನಿ, ತಹಲಿಯಾ ಮೆಕ್‌ಗ್ರಾ, ಅನಾಬೆಲ್ ಸದರ್ಲೆಂಡ್ ಮತ್ತು ವೇರ್‌ಹ್ಯಾಮ್ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಆರಂಭಿಕ ಬ್ಯಾಟರ್ ಲಿಚ್‌ಫೀಲ್ಡ್ ಅವರ ವಿಕೆಟ್ ಅನ್ನು ಕನ್ನಡತಿ ಶ್ರೇಯಾಂಕಾ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 258 (ಫೋಬಿ ಲಿಚ್‌ಫೀಲ್ಡ್ 63, ಎಲಿಸ್ ಪೆರಿ 50, ತಹಲಿಯಾ ಮೆಕ್‌ಗ್ರಾ 24, ಸದರ್ಲೆಂಡ್ 23, ಜಾರ್ಜಿಯಾ ವೆರ್‌ಹ್ಯಾಮ್ 22, ಅಲನಾ ಕಿಂಗ್ ಔಟಾಗದೆ 28, ದೀಪ್ತಿ ಶರ್ಮಾ 38ಕ್ಕೆ5)

ಭಾರತ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 255 (ಸ್ಮೃತಿ ಮಂದಾನ 34, ರಿಚಾ ಘೋಷ್ 96, ಜೆಮಿಮಾ ರಾಡ್ರಿಗಸ್ 44, ದೀಪ್ತಿ ಶರ್ಮಾ ಔಟಾಗದೆ 24, ಅನಾಬೆಲ್ ಸದರ್ಲೆಂಡ್ 47ಕ್ಕೆ3, ಜಾರ್ಜಿಯಾ ವೆರ್‌ಹ್ಯಾಮ್ 39ಕ್ಕೆ2)

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 3 ರನ್ ಜಯ ಹಾಗೂ ಸರಣಿಯಲ್ಲಿ 2–0 ಮುನ್ನಡೆ. ಪಂದ್ಯದ ಆಟಗಾರ್ತಿ: ಅನಾಬೆಲ್ ಸದರ್ಲೆಂಡ್.

ಶಾರ್ದೂಲ್‌ಗೆ ಪೆಟ್ಟು

ಸೆಂಚುರಿಯನ್ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ಅಭ್ಯಾಸ ಮಾಡುವಾಗ ಗಾಯಗೊಂಡಿದ್ದಾರೆ.

ಚೆಂಡು ಅವರ ಭುಜಕ್ಕೆ ಬಡಿದು ನೋವು ಅನುಭವಿಸಿದರು. ಜನವರಿ 3ರಂದು ಕೇಪ್‌ಟೌನ್‌ನಲ್ಲಿ ಆರಂಭವಾಗಲಿರುವ ಎರಡನೇ ಟೆಸ್ಟ್‌ನಲ್ಲಿ ಆಡಲಿರುವ ಶಾರ್ದೂಲ್ ಅಭ್ಯಾಸ ನಡೆಸಿದರು. ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಅವರು ಹಾಕಿದ ಥ್ರೋಡೌನ್ ಎಸೆತದಲ್ಲಿ ಚೆಂಡು ಅವರ ಎಡಭುಜಕ್ಕೆ ಅಪ್ಪಳಿಸಿತು. ಶಾರ್ದೂಲ್ ತೀವ್ರ ನೋವಿನಿಂದ ಕಿರುಚಿದರು.

ಆದರೂ ಅಭ್ಯಾಸ ಮುಂದುವರಿಸಿದರು. ತಂಡದ ಫಿಸಿಯೊ ಶಾರ್ದೂಲ್ ಅವರಿಗೆ ಐಸ್‌ಪ್ಯಾಕ್ ಹಾಕಿದರು. ಮೊದಲ ಟೆಸ್ಟ್ ಪಂದ್ಯದಲ್ಲಿ ಶಾರ್ದೂಲ್ 19 ಓವರ್ ಬೌಲಿಂಗ್ ಮಾಡಿ 100 ರನ್‌ಗಳನ್ನು ಕೊಟ್ಟಿದ್ದರು. ಬ್ಯಾಟಿಂಗ್‌ನಲ್ಲಿಯೂ ವೈಫಲ್ಯ ಅನುಭವಿಸಿದ್ದರು.

ಕರ್ತವ್ಯ ಪಥದಲ್ಲಿ ಖೇಲ್ ರತ್ನ, ಅರ್ಜುನ ಪ್ರಶಸ್ತಿ ಬಿಟ್ಟು ಹೋದ ವಿನೇಶಾ

ನವದೆಹಲಿ (ಪಿಟಿಐ); ವಿಶ್ವ ಚಾಂಪಿಯನ್ ಷಿಪ್ ಪದಕ ವಿಜೇತೆ ಕುಸ್ತಿಪಟು ವಿನೇಶಾ ಫೋಗಾಟ್ ಅವರು ತಮ್ಮ ಖೇಲ್ ರತ್ನ ಮತ್ತು ಅರ್ಜುನ ಪ್ರಶಸ್ತಿಯನ್ನು ಶನಿವಾರ ರಾಜಧಾನಿಯ ಕರ್ತವ್ಯ ಪಥದ ಮಧ್ಯದಲ್ಲಿ ಇಟ್ಟು ಹೋಗಿದ್ದಾರೆ. ಪ್ರಧಾನಿ ಕಚೇರಿಗೆ ಹೋಗುವುದನ್ನು ಪೊಲೀಸರು ತಡೆದ ಬಳಿಕ ಈ ನಿರ್ಧಾರ ಕೈಗೊಂಡಿದ್ದಾರೆ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಸ್ಥಾನಕ್ಕೆ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ನಿಷ್ಠಾವಂತ ಸಂಜಯ್ ಸಿಂಗ್ ಆಯ್ಕೆಯನ್ನು ಪ್ರತಿಭಟಿಸಿರುವ ವಿನೇಶಾ, ಎರಡು ಪ್ರಶಸ್ತಿಗಳನ್ನು ಹಿಂದಿರುಗಿಸುವುದಾಗಿ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದರು. ‘ಕುಸ್ತಿಪಟುಗಳು ನ್ಯಾಯ ಪಡೆಯಲು ಹೋರಾಡುತ್ತಿರುವ ಸಮಯದಲ್ಲಿ ಇಂತಹ ಗೌರವಗಳು ಅರ್ಥಹೀನವಾಗಿವೆ’ ಎಂದು ಹೇಳಿದ್ದರು.

ತಮ್ಮ ಪ್ರಶಸ್ತಿಗಳನ್ನು ಹಿಂದಿರುಗಿಸಲು ಶನಿವಾರ ಪ್ರಧಾನಿ ಕಚೇರಿ ಭೇಟಿಗೆ ಪ್ರಯತ್ನಿಸಿದರು. ಆದರೆ, ಪೊಲೀಸರು ಅವರನ್ನು ತಡೆದರು. ಪ್ರತಿಭಟನೆಯ ಸಂಕೇತವಾಗಿ ಪ್ರಶಸ್ತಿಗಳನ್ನು ಅವರು ಕರ್ತವ್ಯ ಪಥದ ಮಧ್ಯದಲ್ಲಿ ಇಟ್ಟು ತೆರಳಿದರು. ನಂತರ ದೆಹಲಿ ಪೊಲೀಸರು ಅವುಗಳನ್ನು ತೆಗೆದುಕೊಂಡು ಹೋದರು.

‘ಕುಸ್ತಿಪಟುಗಳ ಜೀವನವು ಮಹಿಳಾ ಸಬಲೀಕರಣ ಮತ್ತು ಉನ್ನತಿ ಬಗ್ಗೆ ಮಾತ ನಾಡುವ ಆಕರ್ಷಕ ಸರ್ಕಾರಿ ಜಾಹೀರಾತುಗಳಂತಲ್ಲ’ ಎಂದು ಎಕ್ಸ್‌ನಲ್ಲಿ ವಿನೇಶ್ ಬರೆದಿದ್ದಾರೆ. ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿರುವ ನಿಕಟಪೂರ್ವ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಆಪ್ತ ಸಂಜಯ್ ಸಿಂಗ್ ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದನ್ನು ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪೂನಿಯಾ ಅವರೊಂದಿಗೆ ಫೋಗಟ್ ವಿರೋಧಿಸಿದ್ದರು. ಸಾಕ್ಷಿ ಅವರು ಕುಸ್ತಿಗೆ ನಿವೃತ್ತಿ ಘೋಷಿಸಿದ್ದರು.

ಕುಸ್ತಿಪಟು ವಿನೇಶಾ ಫೋಗಾಟ್ ಅವರು ತಮ್ಮ ಅರ್ಜುನ ಮತ್ತು ಖೇಲ್ ರತ್ನ ಪ್ರಶಸ್ತಿಗಳನ್ನು ಕರ್ತವ್ಯ ಪಥದ ಮಧ್ಯದಲ್ಲಿ ಇಟ್ಟು ತೆರಳಿದರು. –ಪಿಟಿಐ ಚಿತ್ರ

ಕುಸ್ತಿ ಚಟುವಟಿಕೆ ಆರಂಭಿಸಿ: ಬಜರಂಗ್

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಇನ್ನು ಏಳು ತಿಂಗಳು ಮಾತ್ರ ಉಳಿದಿದ್ದು, ದೇಶದಲ್ಲಿ ಕುಸ್ತಿ ಚಟುವಟಿಕೆಗಳನ್ನು ಪುನರಾರಂಭಿಸುವಂತೆ ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಕ್ರೀಡಾ ಸಚಿವಾಲಯವನ್ನು ಒತ್ತಾಯಿಸಿದ್ದಾರೆ. ಈ ದೊಡ್ಡ ಕೂಟಕ್ಕೆ ನಡೆಸಬೇಕಾದ ಸಿದ್ಧತೆಯನ್ನು ಯಾರೂ ಗಂಭೀರವಾಗಿ ತೆಗೆದುಕೊಂಡಿಲ್ಲ ಎಂದು ಅವರು ಹೇಳಿದ್ದಾರೆ.

ಡಬ್ಲ್ಯುಎಫ್‌ಐ ಮಾಜಿ ಅಧ್ಯಕ್ಷ ಬ್ರಿಜ್ ಭೂಷನ್ ಶರಣ್ ಸಿಂಗ್ ವಿರುದ್ಧ ಕೆಲವು ಪ್ರಮುಖ ಕುಸ್ತಿಪಟುಗಳ ಪ್ರತಿಭಟನೆ ಮತ್ತು ನಂತರದ ಬೆಳವಣಿಗೆಯಿಂದಾಗಿ ಕೆಲವು ತಿಂಗಳಿಂದ ದೇಶದಲ್ಲಿ ಕುಸ್ತಿ ಚಟುವಟಿಕೆಗಳಿಗೆ ಗ್ರಹಣ ಹಿಡಿದಿದೆ.

‘ಕುಸ್ತಿ ಚಟುವಟಿಕೆ ಕೆಲವು ತಿಂಗಳಿಂದ ಸ್ಥಗಿತಗೊಂಡಿದೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಕುಸ್ತಿಪಟುಗಳನ್ನು ಸಜ್ಜುಗಳಿಸಲು ಯಾವುದೇ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಾಗಲಿ, ಶಿಬಿರಗಳಾಗಲಿ ನಡೆಯುತ್ತಿಲ್ಲ’ ಎಂದು ಬಜರಂಗ್ ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದ್ದಾರೆ. ಒಲಿಂಪಿಕ್ಸ್ ಸಿದ್ಧತೆಗೆ ತುರ್ತಾಗಿ ಗಮನಹರಿಸಬೇಕಾದ ಅಗತ್ಯವಿದೆ ಎಂದೂ ಅವರು ಹೇಳಿದ್ದಾರೆ. ‘ಒಲಿಂಪಿಕ್ಸ್ ಹತ್ತಿರ ಬಂದರೂ ಯಾರೊಬ್ಬರೂ ಗಂಭೀರವಾಗಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಕುಸ್ತಿ ನಮಗೆ ಪದಕಗಳನ್ನು ಗಳಿಸಿಕೊಟ್ಟಿದೆ’ ಎಂದಿದ್ದಾರೆ.

ಭಾರತ ತಂಡಕ್ಕೆ ಸವಿತಾ ನಾಯಕಿ

ಒಲಿಂಪಿಕ್ಸ್ ಕ್ವಾಲಿಫೈಯರ್ಸ್‌ಗೆ ಮಹಿಳಾ ಹಾಕಿ ತಂಡ ಪ್ರಕಟ

ಬೆಂಗಳೂರು (ಪಿಟಿಐ): ಅನುಭವಿ ಗೋಲ್‌ಕೀಪರ್ ಸವಿತಾ ಪೂನಿಯಾ ಅವರು ಜನವರಿ 13 ರಿಂದ 19ರವರೆಗೆ ರಾಂಚಿಯಲ್ಲಿ ನಡೆಯಲಿರುವ ಒಲಿಂಪಿಕ್ ಕ್ವಾಲಿಫೈರ್ಸ್ ಟೂರ್ನಿಯಲ್ಲಿ ಆಡುವ ಭಾರತ ತಂಡ ವನ್ನು ಮುನ್ನಡೆಸಲಿದ್ದಾರೆ. ವಂದನಾ ಕಟಾರಿಯಾ ಉಪನಾಯಕಿಯಾಗಿದ್ದಾರೆ.

ಹಾಕಿ ಇಂಡಿಯಾ 18 ಆಟಗಾರ್ತಿಯರ ತಂಡವನ್ನು ಶನಿವಾರ ಪ್ರಕಟಿಸಿದೆ. ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಒಂದನ್ನು ಪಡೆದು 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಭಾರತ ಎದುರು ನೋಡುತ್ತಿದೆ.

ಭಾರತ ತಂಡವು, ನ್ಯೂಜಿಲೆಂಡ್, ಇಟಲಿ ಮತ್ತು ಅಮೆರಿಕ ಜೊತೆ ‘ಬಿ’ ಗುಂಪಿನಲ್ಲಿದೆ. ಜರ್ಮನಿ, ಜಪಾನ್, ಚಿಲಿ ಮತ್ತು ಝೆಕ್ ರಿಪಬ್ಲಿಕ್ ತಂಡಗಳು ‘ಎ’ ಗುಂಪಿನಲ್ಲಿವೆ.

ಸವಿತಾ ಪೂನಿಯಾ

ಭಾರತ ತಂಡವು ಜನವರಿ 13ರಂದು ಅಮೆರಿಕ ವಿರುದ್ಧ ಪಂದ್ಯದೊಡನೆ ಅಭಿಯಾನ ಆರಂಭಿಸಲಿದೆ. 14ರಂದು ನ್ಯೂಜಿಲೆಂಡ್ ವಿರುದ್ಧ ಮತ್ತು 16ರಂದು ಗುಂಪಿನ ಕೊನೆಯ ಪಂದ್ಯವನ್ನು ಇಟಲಿ ವಿರುದ್ಧ ಆಡಲಿದೆ.

ತಂಡ ಇಂತಿದೆ: ಗೋಲ್ ಕೀಪರ್ಸ್: ಸವಿತಾ ಪೂನಿಯಾ (ನಾಯಕಿ), ಬಿಚು ದೇವಿ ಕರಿಬಮ್. ಡಿಫೆಂಡರ್ಸ್: ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಮೋನಿಕಾ. ಮಿಡ್‌ಫೀಲ್ಡರ್ಸ್: ನಿಶಾ, ವೈಷ್ಣವಿ ವಿಠ್ಠಲ್ ಫಾಲ್ಕೆ, ನೇಹಾ, ನವನೀತ್ ಕೌರ್, ಸಲೀಮಾ ಟೇಟೆ, ಸೋನಿಕಾ, ಜ್ಯೋತಿ, ಬ್ಯೂಟಿ ಡುಂಗ್‌ಡುಂಗ್, ಫಾರ್ವರ್ಡ್ಸ್: ಲಾಲ್ರೆಮ್ಸಿಯಾಮಿ, ಸಂಗೀತಾ ಕುಮಾರಿ, ದೀಪಿಕಾ ಮತ್ತು ವಂದನಾ ಕಟಾರಿಯಾ.

ಟೆನಿಸ್: ಮೇಘನಾ, ಯಶ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಯಶ್ ಪಂಚಾಕ್ಷರಿ 6–1, 6–1 ರಿಂದ ತೇಜ್ ಓಕ್ ಅವರನ್ನು ಸೋಲಿಸಿ ಫೋಕಸ್ ಟೆನಿಸ್ ಅಕಾಡೆಮಿ ಆಶ್ರಯದಲ್ಲಿ ನಡೆದ ವೆಂಕೋಬ್ ಅಖಿಲ ಭಾರತ ರ‍್ಯಾಂಕಿಂಗ್ ಟೆನಿಸ್ ಟೂರ್ನಿಯಲ್ಲಿ 16 ವರ್ಷದೊಳಗಿನವರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ನಾಗರಬಾವಿಯ ಸುಂಕದಕಟ್ಟೆಯಲ್ಲಿರುವ ಅಕಾಡೆಮಿ ಕೋರ್ಟ್ಸ್‌ನಲ್ಲಿ ಶುಕ್ರವಾರ ಮುಕ್ತಾಯಗೊಂಡ ಈ ಟೂರ್ನಿಯ ಬಾಲಕಿಯರ ಸಿಂಗಲ್ಸ್‌ನಲ್ಲಿ ಮೇಘನಾ ಜಿ.ಡಿ. 6–2, 1–6, 6–2 ರಿಂದ ಪೂಜಾ ನಾಗರಾಜ್ ಮೇಲೆ ಜಯಗಳಿಸಿ ಪ್ರಶಸ್ತಿ ಜಯಿಸಿದರು.

ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಅಭಿವಾದ್ಯ ಮಿಶ್ರಾ–ನಿಯಂತ್ ವಿಕಾಸ್ ಜೋಡಿ 6–3, 6–2 ರಿಂದ ಪ್ರತ್ಯುಷ್ ವಿಶ್ವನಾಥನ್–ಅಯಾನ್ ತರೀನ್ ಅವರನ್ನು ಸೋಲಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪ್ರೊ ಕಬಡ್ಡಿ: ಮುಂಬಾಗೆ ಸುಲಭ ಗೆಲುವು

ನೊಯ್ಡಾ: ಸಾಂಘಿಕ ಪ್ರದರ್ಶನ ನೀಡಿದ ಯು ಮುಂಬಾ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶನಿವಾರ ತೆಲುಗು ಟೈಟನ್ಸ್ ತಂಡವನ್ನು 52–34 ಪಾಯಿಂಟ್‌ಗಳಿಂದ ಸುಲಭವಾಗಿ ಸೋಲಿಸಿತು. ತನ್ಮೂಲಕ ಟೈಟನ್ಸ್ ಸೋಲಿನ ಸರಣಿ ಮುಂದುವರಿದಿದೆ.

ನೊಯ್ಡಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆ 24–17 ಪಾಯಿಂಟ್‌ಗಳಿಂದ ಮುಂದಿದ್ದ ಮುಂಬಾ ಪರ ದಾಳಿಯಲ್ಲಿ ಗುಮನ್ (10 ಪಾಯಿಂಟ್) ಮತ್ತು ಅಮೀರ್‌ಮೊಹಮ್ಮದ್ ಝಫರ್ ದಾನೇಶ್ (8) ಮಿಂಚಿದರು. ರಿಂಕು ಮತ್ತು ಸೋಮವೀರ್ ತಲಾ ಎಂಟು ಟ್ಯಾಕಲ್‌ಗಳೊಡನೆ ರಕ್ಷಣಾ ವಿಭಾಗದಲ್ಲಿ ಗಮನ ಸೆಳೆದರು. ಜೈ ಭಗವಾನ್ (8) ಅವರದ್ದು ಆಲ್‌ರೌಂಡ್ ಆಟ.

ಪ್ರಮುಖ ರೈಡರ್ ಪವನ್ ಸೆಹ್ರಾವತ್ ಗೈರಿನಲ್ಲಿ ಆಡಿದ ತೆಲುಗು ಟೈಟನ್ಸ್ ಪರ ರಜನೀಶ್ ದಲಾಲ್ (8), ರಾಬಿನ್ ಚೌಧರಿ (7), ಪ್ರಫುಲ್ ಝವೇರಿ (7) ಉತ್ತಮ ಆಟವಾಡಿದರು. ಆದರೆ ರಕ್ಷಣಾ ವಿಭಾಗ ಕೈಕೊಟ್ಟಿತು.

ಟೈಟನ್ಸ್ ಎಂಟು ಪಂದ್ಯಗಳಲ್ಲಿ ಒಂದು ಮಾತ್ರ ಗೆದ್ದು, ಉಳಿದ ಏಳರಲ್ಲಿ ಸೋಲನುಭವಿಸಿದ್ದು ಎಂಟು ಪಾಯಿಂಟ್‌ಗಳೊಡನೆ 12

ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಯು ಮುಂಬಾ ಮತ್ತು ತೆಲುಗು ಟೈಟನ್ಸ್ ತಂಡಗಳ ನಡುವೆ ಹಣಾಹಣಿ. –ಪಿಟಿಐ ಚಿತ್ರ

ತಂಡಗಳ ಪಟ್ಟಿಯಲ್ಲಿ ತಳದಲ್ಲಿದೆ. ಮುಂಬಾಗೆ ಇದು ಏಳು ಪಂದ್ಯಗಳಲ್ಲಿ ಐದನೇ ಗೆಲುವು. ಅದು 24 ಪಾಯಿಂಟ್‌ಗಳೊಡನೆ ಐದನೇ ಸ್ಥಾನಕ್ಕೆ ಏರಿತು.

ಡೆಲ್ಲಿಗೆ ಜಯ: ಆಶು ಮಲಿಕ್ ಅವರ ಸೂಪರ್ ಟೆನ್ (11 ಪಾಯಿಂಟ್) ನೆರವಿನಿಂದ ಡೆಲ್ಲಿ ದಬಾಂಗ್ ತಂಡದವರು ದಿನದ ಎರಡನೇ ಪಂದ್ಯದಲ್ಲಿ ಆತಿಥೇಯ ಯುಪಿ ಯೋಧಾಸ್ ತಂಡವನ್ನು 35–25 ಪಾಯಿಂಟ್‌ಗಳಿಂದ ಸೋಲಿಸಿತು.

ಆಶು ಕೊನೆಯ ರೈಡಿಂಗ್‌ನಲ್ಲಿ ಮೂವರನ್ನು ಔಟ್ ಮಾಡಿ, ಯುಪಿ ತಂಡವನ್ನು ಆಲೌಟ್ ಮಾಡಿದ್ದರಿಂದ ಡೆಲ್ಲಿ ಕೊನೆಯ ರೈಡ್‌ನಲ್ಲಿ ಐದು ಪಾಯಿಂಟ್ ಪಡೆಯಿತು.

ಯೋಧಾಸ್‌ನ ಸ್ಟಾರ್ ರೈಡರ್ ಪ್ರದೀಪ್ 7ಪಾಯಿಂಟ್ಸ್ ಮಾತ್ರ ಪಡೆಯಲು ಶಕ್ತರಾದರು.

ಡಿ.31ರಂದು ಗುಜರಾತ್ ಜೈಂಟ್ಸ್–ಬೆಂಗಾಲ್ ವಾರಿಯರ್ಸ್. ರಾತ್ರಿ–8

ತಮಿಳ್ ತಲೈವಾಸ್–ಬೆಂಗಳೂರು ಬುಲ್ಸ್ . ರಾತ್ರಿ 9

ಸಿ.ಕೆ. ನಾಯ್ಡು ಟ್ರೋಫಿ: ಸ್ಮರಣ್ ನಾಯಕ

ಬೆಂಗಳೂರು: ಆರ್. ಸ್ಮರಣ್ ಅವರನ್ನು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

ಜನವರಿ 7ರಿಂದ 10ರವರೆಗೆ ಮೈಸೂರಿನಲ್ಲಿ ಹೈದರಾಬಾದ್ ವಿರುದ್ಧ ಹಾಗೂ ಜ.14ರಿಂದ 17ರವರೆಗೆ ಉತ್ತರಪ್ರದೇಶದಲ್ಲಿ ನಡೆಯುವ ಪಂದ್ಯಗಳಲ್ಲಿ ತಂಡವು ಆಡಲಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪ್ರಕಟಿಸಿರುವ ತಂಡ ಇಂತಿದೆ: ಆರ್. ಸ್ಮರಣ್ (ನಾಯಕ), ಅನೀಶ್ವರ್ ಗೌತಮ್ (ಉಪನಾಯಕ), ಕೃತಿಕ್ ಕೃಷ್ಣ (ವಿಕೆಟ್‌ಕೀಪರ್), ವಿಶಾಲ್ ಓಣತ್, ರೋಹನ್ ಪಾಟೀಲ, ಮೆಕ್‌ನಿಲ್ ನೊರೊನಾ, ಕೆ.ವಿ. ಅನೀಶ್, ಮೊಹಸೀನ್ ಖಾನ್, ಪಾರಸ್ ಗುರುಭಕ್ಷ್ ಆರ್ಯ, ಎಲ್. ಮನ್ವಂತ್ ಕುಮಾರ್, ಯಶೋವರ್ಧನ್ ಪರಾಂತಪ್, ರಾಜವೀರ್ ವದ್ವಾ, ಮೊನಿಷ್ ರೆಡ್ಡಿ, ಅಕ್ಷಣ್ ಎಸ್ ರಾವ್, ಲೋಚನ್ ಗೌಡ (ವಿಕೆಟ್‌ಕೀಪರ್), ಯರೇಗೌಡ (ಕೋಚ್), ರೋಹಿತ್ ಸಬರ್‌ವಾಲ್ (ಸಹಾಯಕ ಕೋಚ್), ಪ್ರವೀಣ್ ಸಿಂಗ್ (ಮ್ಯಾನೇಜರ್), ಡಾ. ವಿಜಯ್ ಮುದ್ಗಲ್ (ಫಿಸಿಯೊ), ಇರ್ಫಾನುಲ್ಲಾ ಖಾನ್ (ಸ್ಟ್ರೆಂಥ್–ಕಂಡಿಷನಿಂಗ್), ಕಿರಣ್ ಕುಡತರ್ಕರ್ (ವಿಡಿಯೊ ವಿಶ್ಲೇಷಕ).

ಉದ್ದೀಪನ ಮದ್ದು: ಸಿಕ್ಕಿಬಿದ್ದ 20 ಕ್ರೀಡಾಪಟುಗಳು

ನವದೆಹಲಿ (ಪಿಟಿಐ); ಅಕ್ಟೋಬರ್–ನವೆಂಬರ್‌ನಲ್ಲಿ ಗೋವಾದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದ ಸಂದರ್ಭದಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ವಿವಿಧ ಕ್ರೀಡೆಗಳ 20ಕ್ಕೂ ಹೆಚ್ಚು ಕ್ರೀಡಾಪಟುಗಳು ನಿಷೇಧಿತ ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದಿದ್ದಾರೆ.

ಅಕ್ಟೋಬರ್ 25 ರಿಂದ ನವೆಂಬರ್ 9 ರವರೆಗೆ ನಡೆದ ಈ ಕೂಟದಲ್ಲಿ

ಭಾಗವಹಿಸಿದವರ ಮಾದರಿಗಳನ್ನು ಸಂಗ್ರಹಿಸಿದ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಏಜನ್ಸಿ (ನಾಡಾ) 20ಕ್ಕೂ ಹೆಚ್ಚು ಕ್ರೀಡಾಪಟುಗಳನ್ನು ತಾತ್ಕಾಲಿಕವಾಗಿ ಅಮಾನತುಗೊಳಿಸಿದೆ.

ಕ್ರೀಡಾಕೂಟದಲ್ಲಿ ಅನೇಕರು ಪದಕಗಳನ್ನು ಗೆದ್ದಿದ್ದಾರೆ. ಅದರಲ್ಲಿ ಕೆಲವು ಅಂತರರಾಷ್ಟ್ರೀಯ ಸ್ಪರ್ಧಿಗಳೂ ಇದ್ದರು. ಸಿಕ್ಕಿಬಿದ್ದಿರುವವರಲ್ಲಿ ಒಂಬತ್ತು ಅಥ್ಲೀಟುಗಳು ಹಾಗೂ ಏಳು ವೇಟ್‌ಲಿಫ್ಟರ್‌ಗಳು ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಏಳು ವೇಟ್‌ಲಿಫ್ಟರ್‌ಗಳ ಪೈಕಿ ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್‌ನಲ್ಲಿ ಡಬಲ್ ಕಂಚಿನ ಪದಕ ವಿಜೇತೆ ವಂದನಾ ಗುಪ್ತಾ ಸಹ ಇದ್ದಾರೆ.

ಉತ್ತರ ಪ್ರದೇಶದ 29 ವರ್ಷದ ವಂದನಾ, ಗೋವಾದಲ್ಲಿ ನಡೆದ ಮಹಿಳೆಯರ 76 ಕೆ.ಜಿ ವಿಭಾಗದಲ್ಲಿ ಒಟ್ಟು 207 ಕೆ.ಜಿ ಭಾರ ಎತ್ತುವ ಮೂಲಕ ಚಿನ್ನ ಗೆದ್ದಿದ್ದರು.

ನವೆಂಬರ್ 3 ರಂದು ಸಂಗ್ರಹಿಸಿದ ಮೂತ್ರದ ಮಾದರಿಯಲ್ಲಿ ನಿಷೇಧಿತ ಉದ್ದೀಪನ ಮದ್ದು ಸೇವಿಸಿರುವುದು ಕಂಡುಬಂದ ನಂತರ ಸೈಕ್ಲಿಸ್ಟ್ ಅನಿತಾ ದೇವಿ ಅವರನ್ನು ನಾಡಾ ಡಿಸೆಂಬರ್ 6 ರಂದು ತಾತ್ಕಾಲಿಕವಾಗಿ ಅಮಾನತುಗೊಳಿಸಿದೆ.

ಅತ್ಯಾಚಾರ ಪ್ರಕರಣ ಸಂದೀಪ್ ದೋಷಿ

ಕಠ್ಮಂಡು (ಪಿಟಿಐ): ನೇಪಾಳ ಕ್ರಿಕೆಟ್ ತಂಡದ ಮಾಜಿ ನಾಯಕ ಸಂದೀಪ್ ಲಮಿಚಾನೆ ಅವರ ಮೇಲಿದ್ದ ಅತ್ಯಾಚಾರ ಆರೋಪವು ಸಾಬೀತಾಗಿದೆ. ಅವರು ತಪ್ಪಿತಸ್ಥರು ಎಂದು ನ್ಯಾಯಾಲಯವು ತೀರ್ಮಾನಿಸಿದೆ.

ಹೋದ ವರ್ಷದ ಆಗಸ್ಟ್‌ನಲ್ಲಿ 18 ವರ್ಷದ ಹುಡುಗಿಯೊಬ್ಬಳ ಮೇಲೆ ಸಂದೀಪ್ ಹೋಟೆಲ್‌ವೊಂದರಲ್ಲಿ ಅತ್ಯಾಚಾರ ಎಸಗಿದ್ದರೆಂದು ಪೊಲೀಸ ಠಾಣೆಯಲ್ಲಿ ದೂರು ದಾಖಲಾಗಿತ್ತು. ನಂತರ ಅವರನ್ನು ಬಂಧಿಸಲಾಗಿತ್ತು. ಕಳೆದ ಜನವರಿಯವಲ್ಲಿ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ನೇಪಾಳದ ಪ್ರಮುಖ ಆಟಗಾರನಾಗಿದ್ದ ಸಂದೀಪ್ 2018ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಆಡಿದ್ದರು.

ಸಂದೀಪ್ ಪ್ರಕರಣದ ವಿಚಾರಣೆಯನ್ನು ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಶಿಶಿರ್ ರಾಜ್ ಧಾಕಲ್ ಅವರ ಏಕಸದಸ್ಯ ನ್ಯಾಯಪೀಠವು ನಡೆಸಿತು. ಕಳೆದ ಭಾನುವಾರದಿಂದಲೇ ವಿಚಾರಣೆಗಳು ನಡೆದಿದ್ದವು. ನ್ಯಾಯಾಧೀಶರು, ಸಂದೀಪ್ ಅವರು ತಪ್ಪೆಸಗಿದ್ದಾರೆಂಬ ಶುಕ್ರವಾರ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಕಠ್ಮಂಡು ಪೋಸ್ಟ್ ಪತ್ರಿಕೆಯು ವರದಿ ಮಾಡಿದೆ.

ಸಂತ್ರಸ್ತೆಯು ಗೌಶಾಲಾದ ಮೆಟ್ರೊಪಾಲಿಟನ್ ಪೊಲೀಸ್ ವೃತ್ತದ ಠಾಣೆಯಲ್ಲಿ 2022ರ ಸೆಪ್ಟೆಂಬರ್‌ನಲ್ಲಿ ದೂರು ದಾಖಲಿಸಿದ್ದರು.

ನ್ಯಾಯಾಲಯವು ಶೀಘ್ರದಲ್ಲಿಯೇ ಶಿಕ್ಷೆ ಪ್ರಕಟಿಸುವ ಸಾಧ್ಯತೆ ಇದೆ.

ಪ್ರಖರ್ ಚೆಂದದ ಬ್ಯಾಟಿಂಗ್

ಪ್ರಜಾವಾಣಿ ವಾರ್ತೆ

ಪ್ರಖರ್ ಚತುರ್ವೇದಿ

ಹುಬ್ಬಳ್ಳಿ: ಕೇವಲ ಮೂರು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡ ಪ್ರಖರ್ ಚತುರ್ವೇದಿ ಇಲ್ಲಿ ನಡೆಯುತ್ತಿರುವ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ಆಸರೆಯಾದರು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮಧ್ಯಪ್ರದೇಶದ 269 ರನ್‌ಗಳಿಗೆ ಉತ್ತರವಾಗಿ ಎರಡನೇ ದಿನವಾದ ಶನಿವಾರದ ಅಂತ್ಯಕ್ಕೆ ಕರ್ನಾಟಕ ತಂಡ 80 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 227 ರನ್ ಗಳಿಸಿತು.

71 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟ ದಲ್ಲಿದ್ದ ಸಂದರ್ಭದಲ್ಲಿ ಜತೆಗೂಡಿದ ಪ್ರಖರ್ ಮತ್ತು ಸಮಿತ್ ದ್ರಾವಿಡ್ ನಾಲ್ಕನೇ ವಿಕೆಟ್‌ಗೆ 84 ರನ್ ಸೇರಿಸಿ ತಂಡದ ಮೊತ್ತ ಹೆಚ್ಚಿಸಿದರು. ಈ ಜೋಡಿಯನ್ನು ವಿಷ್ಣು ಭಾರದ್ವಾಜ್ ಮುರಿದರು.

97 (159 ಎ, 14 ಬೌ, 1 ಸಿ) ರನ್ ಗಳಿಸಿದ್ದ ಪ್ರಖರ್, ಆಯುಷ್ ಆನಂದ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ತಾಳ್ಮೆಯಿಂದ ಆಡುತ್ತಿದ್ದ ಸಮಿತ್ 40 (115 ಎ) ಎಲ್‌ಬಿಡಬ್ಲು ಬಲೆಗೆ ಬಿದ್ದರು.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ ಮೊದಲ ಇನಿಂಗ್ಸ್: 101.1 ಓವರ್‌ಗಳಲ್ಲಿ 269 (ವಿಕಾಸ್ ಶರ್ಮಾ 106, ಆರ್ಯನ್ ತಿವಾರಿ 43, ಸೋಹಂ ಪಟವರ್ಧನ್ 31, ಧೀರಜ್ ಗೌಡ 77ಕ್ಕೆ 6, ಹಾರ್ದಿಕ್ ರಾಜ್ 71ಕ್ಕೆ 2). ಕರ್ನಾಟಕ ಮೊದಲ ಇನಿಂಗ್ಸ್ 80 ಓವರ್‌ಗಳಲ್ಲಿ 6 ವಿಕೆಟ್‌ಗೆ 227: (ಪ್ರಖರ್ ಚತುರ್ವೇದಿ 97, ಸಮಿತ್ ದ್ರಾವಿಡ್ 40, ಧ್ರುವ್ ಪ್ರಭಾಕರ್ 35, ವಿಷ್ಣು ಭಾರದ್ವಾಜ್ 45ಕ್ಕೆ 5).

ಟೆನಿಸ್ ಅಂಕಣದಲ್ಲಿ ವಿಷಕಾರಿ ಹಾವು

ಬ್ರಿಸ್ಬೇನ್ (ಎಎಫ್‌ಪಿ): ತೀವ್ರ ವಿಷಕಾರಿ ಹಾವೊಂದು ಅಂಕಣಕ್ಕೆ ನುಸುಳಿದ ಪರಿಣಾಮ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯಲ್ಲಿ ಆಸ್ಟ್ರಿಯಾದ ಡೊಮಿನಿಕ್ ಥೀಮ್ ಅವರು ಆಡುತ್ತಿದ್ದ ಅರ್ಹತಾ ಸುತ್ತಿನ ಪಂದ್ಯವನ್ನು ಶನಿವಾರ 40 ನಿಮಿಷ ತಡೆಹಿಡಿಯಬೇಕಾಯಿತು.

ಈ ವೇಳೆ ಥೀಮ್ ಅವರ ಎದುರಾಳಿ ಆಸ್ಟ್ರೇಲಿಯಾದ ಜೇಮ್ಸ್ ಮೆಕ್‌ಕ್ಯಾಬ್ ಅವರು ಮೊದಲ ಸೆಟ್ ಅನ್ನು 6–2 ರಿಂದ ಗೆದ್ದುಕೊಂಡಿದ್ದರು.

ಈ ಹಾವು ಆಸ್ಟ್ರೇಲಿಯಾದಲ್ಲಿ ಕಾಣಸಿಗುವ ‘ಈಸ್ಟರ್ನ್ ಬ್ರೌನ್ ಸ್ನೇಕ್’ ಎನ್ನಲಾಗಿದೆ. ಇದು ಅತ್ಯಂತ ಅಪಾಯಕಾರಿ. ಆಸ್ಟ್ರೇಲಿಯನ್ ಮ್ಯೂಸಿಯಂ ವೆಬ್‌ಸೈಟ್ ಪ್ರಕಾರ, ಈ ಹಾವು ಕಚ್ಚಿದರೆ ಕೆಲವೇ ಕ್ಷಣದಲ್ಲಿ ನರಮಂಡಲಕ್ಕೆ ಹಾನಿಯಾಗುತ್ತದೆ. ಜೊತೆಗೆ ಅನಿಯಂತ್ರಿತ ರಕ್ತಸ್ರಾವವಾಗುತ್ತದೆ. ಹಾವು ಹಿಡಿಯುವ ವ್ಯಕ್ತಿ ಬಂದು ಅದನ್ನು ಚೀಲದಲ್ಲಿ ಒಯ್ಯುವವರೆಗೆ ಆಟ ನಿಂತಿತ್ತು. ಹಾವು ಹೋದ ಮೇಲೆ ‘ಚೇತರಿಕೆ’ಯ ಆಟವಾಡಿದ ಥೀಮ್ ಟೈಬ್ರೇಕರ್‌ನಲ್ಲಿ ಎರಡನೇ ಸೆಟ್ ಗೆದ್ದು ಅಂತಿಮವಾಗಿ 2–6, 7–6 (7–4), 6–4 ರಿಂದ ಮೆಕ್‌ಕ್ಯಾಬ್ ಮೇಲೆ ಜಯಗಳಿಸಿದರು.

ಕೇಂದ್ರ ಗಾಜಾದ ಮೇಲೆ ಇಸ್ರೇಲ್ ಪಡೆಗಳ ವೈಮಾನಿಕ ದಾಳಿ

24 ಗಂಟೆಗಳಲ್ಲಿ 165 ಪ್ಯಾಲೆಸ್ಟೀನಿಯರ ಹತ್ಯೆ

ಗಾಜಾ ಪಟ್ಟಿ(ಎಪಿ): ಕೇಂದ್ರ ಗಾಜಾದ ಮೇಲೆ 24 ಗಂಟೆಗಳ ಅವಧಿಯಲ್ಲಿ ಇಸ್ರೇಲ್ ಪಡೆಗಳು ನಡೆಸಿರುವ ವೈಮಾನಿಕ ದಾಳಿಯಲ್ಲಿ 165 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದು, 250 ಮಂದಿ ಗಾಯಗೊಂಡಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

ಕೇಂದ್ರ ಗಾಜಾದ ನುಸಿರಾತ್ ಮತ್ತು ಬುರೇಜ್ ನಗರಗಳ ನಿರಾಶ್ರಿತರ ಶಿಬಿರಗಳ ಮೇಲೆ ಇಸ್ರೇಲ್ ಪಡೆಗಳು ವಾಯು ದಾಳಿ ತೀವ್ರಗೊಳಿಸಿದ್ದು, ನಾಗರಿಕರ ಸಾವು–ನೋವಿನ ಬಗ್ಗೆ ಜಾಗತಿಕ ಮಟ್ಟದಲ್ಲಿ ಕಳವಳ ವ್ಯಕ್ತವಾಗಿದೆ.

ಈ ನಡುವೆಯೇ ಅಮೆರಿಕದ ಜೋ ಬೈಡನ್ ಆಡಳಿತವು ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡಲು ಅನುಮೋದನೆ ನೀಡಿದೆ.

ಪ್ಯಾಲೆಸ್ಟೀನ್ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿರುವ ಹಮಾಸ್ ಬಂಡುಕೋರರನ್ನು ಪೂರ್ಣವಾಗಿ ಸದೆಬಡಿಯುವವರೆಗೂ ವೈಮಾನಿಕ ಮತ್ತು ಭೂದಾಳಿಯನ್ನು ದಾಳಿಯನ್ನು ಮುಂದುವರಿಸುವುದಾಗಿ ಇಸ್ರೇಲ್ ಹೇಳಿದೆ.

ಇಸ್ರೇಲ್‌ಗೆ ರಾಜತಾಂತ್ರಿಕವಾಗಿ ರಕ್ಷಣೆ ನೀಡುತ್ತಿರುವ ಅಮೆರಿಕ, ಶಸ್ತ್ರಾಸ್ತ್ರಗಳ ಮಾರಾಟವನ್ನು ಮುಂದುವರಿಸಿದೆ ಎಂದು ಮೂಲಗಳು ಹೇಳಿವೆ. ಈಗ ಯುದ್ಧ ನಿಲ್ಲಿಸಿದರೆ ಅದು ಹಮಾಸ್ ಬಂಡುಕೋರರಿಗೆ ಜಯ ಸಿಕ್ಕಂತೆ ಎಂದು ಇಸ್ರೇಲ್ ಹೇಳಿದೆ.

ನುಸಿರಾತ್‌ನಲ್ಲಿ ಪತ್ರಕರ್ತ ಜಾಬರ್ ಅಬು ಹದ್ರಾಜ್ ಎಂಬವರ ಮನೆಯನ್ನು ಗುರಿಯಾಗಿಸಿ ಇಸ್ರೇಲ್ ಪಡೆಗಳು ಶುಕ್ರವಾರ ವಾಯು ದಾಳಿ ನಡೆಸಿದ್ದು, ಈ ದಾಳಿಯಲ್ಲಿ ಜಾಬರ್ ಅಬು ಮತ್ತು ಅವರ ಕುಟುಂಬದ ಆರು ಮಂದಿ ಸದಸ್ಯರು ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಮಧ್ಯ ಗಾಜಾದಲ್ಲಿ ಇಸ್ರೇಲ್ ಪಡೆಗಳು ಶನಿವಾರ ನಡೆಸಿದ ವೈಮಾನಿಕ ದಾಳಿಗೆ ಕಟ್ಟಡಗಳು ಕುಸಿದಿವೆ –ಎಎಫ್‌ಪಿ ಚಿತ್ರ

ಇಮ್ರಾನ್ ಖಾನ್ ನಾಮಪತ್ರ ತಿರಸ್ಕೃತ



ಲಾಹೋರ್ (ಪಿಟಿಐ): ಲಾಹೋರ್ ಮತ್ತು ಮಿಯಾನ್‌ವಾಲಿ ಕ್ಷೇತ್ರಗಳಿಂದ ಸ್ಪರ್ಧಿಸಲು ಇಮ್ರಾನ್ ಖಾನ್ ಸಲ್ಲಿಸಿದ್ದ ನಾಮಪತ್ರಗಳನ್ನು ಚುನಾವಣಾ ಆಯೋಗ ಶನಿ ವಾರ ತಿರಸ್ಕರಿಸಿದೆ’ ಎಂದು ಲಾಹೋರ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ‘ಇಸ್ಲಾಮಾಬಾದ್ ಹೈಕೋರ್ಟ್ ಇಮ್ರಾನ್ ಶಿಕ್ಷೆಯನ್ನು ಅಮಾನತು ಮಾಡಿದರೂ, ಅನರ್ಹಗೊಳಿಸಿದ ಆದೇಶ ಇನ್ನೂ ಚಾಲ್ತಿಯಲ್ಲಿದೆ’ ಎಂದಿದ್ದಾರೆ.

ಪೂರ್ವಿಕಾ
ಹೊಸ ವರ್ಷದ
ವಿಶೇಷ ಮಾರಾಟ
Buy Smartphones from ₹10,000 to ₹25,000
Pay ₹799* & Get Calling Smartwatch worth ₹6,999
Buy Smartphones from ₹25,001 to ₹50,000
Pay ₹1399* & Get True Wireless worth ₹2,499
Upto ₹10,000* EXCHANGE BONUS
FREE SCREEN REPLACEMENT *On Selected Models
Buy above ₹5,000, Participate in Feedback contest & Get a chance to Win
Upto 100%* CASHBACK
*Offer Valid From 21st Dec 23 to 02nd Jan 24
WINNERS
₹7,500 Voucher
₹10,000 Voucher
Car Winner
8 GB RAM SMARTPHONE STARTS @ ₹7,499*
10%* CASH BACK HDB FINANCIAL SERVICES TVS CREDIT
SAMSUNG Galaxy A25 | A15 5G
My Kind of awesome
Starting at ₹ 19499*
SAMSUNG Galaxy Z Fold 5 | Z Flip 5
PAY ₹19,999 & GET SAMSUNG Galaxy Watch4 Classic LTE WORTH ₹42,999
Upto ₹ 9,000 UPGRADE BONUS + Upto ₹ 7,000 Bank Instant cashback
SAMSUNG Galaxy S23 Ultra 5G
₹10,000 UPGRADE BONUS ₹8,000 BANK INSTANT CASHBACK
SAMSUNG Galaxy S23 FE 5G
₹5,000 UPGRADE BONUS ₹5,000* BANK INSTANT CASHBACK
EFFECTIVE PRICE ₹ 49,999
vivo V29 5G
₹3,000 CASHBACK Get 45%* DISCOUNT ANKER TWS Worth ₹2,499
vivo Y200 5G
₹1,500 CASHBACK Get 85%* DISCOUNT Calling Smartwatch Worth ₹6,999
oppo Find N3 Flip 5G

Price(12GB+256GB)	₹ 94,999
Store Discount	₹ 4,001
Free TWS JBL Tune230NC	₹ 3,999
sbi Instant Cashback	₹ 7,000*
Effective Price	₹ 79,999*

FREE
Redmi 13C 5G
₹1,000 CASHBACK Get 85%* DISCOUNT Calling Smartwatch Worth ₹6,999
realme C67 5G
Get 85%* DISCOUNT Calling Smartwatch Worth ₹6,999
EMI ₹ 1,330
Apple Days

	iPhone 13	iPhone 15	iPhone 15 Plus
MRP 128 GB	₹ 69,900	₹ 79,900	₹ 89,900
Store Discount	₹ 12,910	₹ 3,000	₹ 3,000
HDFC Instant Cashback	₹ 1,000	₹ 4,000	₹ 4,000
Exchange Value	₹ 22,000*	₹ 22,000*	₹ 22,000*
Exchange Bonus	₹ 9,000*	₹ 9,000*	₹ 9,000*
Effective Price	₹ 24,990*	₹ 41,900*	₹ 51,900*

*Price after store discount, exchange value, exchange bonus & bank cashback
iPhone 15 Pro Max
₹ 3,000* Instant Cashback HDFC BANK
+ Upto ₹ 9,000* Exchange Bonus
FREE AirPods 2 Worth ₹ 14,900
Upto ₹ 8,000 Store Discount
iPad Wifi 10th Gen 10.9 inch (A14 Bionic chip+64GB)
₹ 44,900 Effective Price ₹ 35,990
EMI per day ₹ 54*
NOKIA G42 5G JUST PAY ₹1* Get 85%* DISCOUNT Calling Smartwatch Worth ₹6,999 EMI ₹ 2,833
itel P40 (4GB+128GB) SPECIAL PRICE ₹9,999 ₹5,999*
TECNO Camon 20s Pro 5G JUST PAY ₹1* Get 85%* DISCOUNT Calling Smartwatch Worth ₹6,999 EMI ₹ 1,667
oppo A59 5G 10% INSTANT CASHBACK Get 85%* DISCOUNT Calling Smartwatch Worth ₹6,999*
vivo Y56 5G JUST PAY ₹1* Get 85%* DISCOUNT Calling Smartwatch Worth ₹6,999 EMI ₹ 3,000
Redmi 12 (6GB+128GB) Get 85%* DISCOUNT Calling Smartwatch Worth ₹6,999 EMI ₹ 1,099
MACBOOK AIR M2 CHIP 15.3"
₹ 5,000 INSTANT DISCOUNT EXCHANGE BONUS ₹ 10,000*
• Apple M2 chip • Liquid Retina LED-backlit display • macOS Ventura
ASUS TUF GAMING F15 15.6" EMI ₹ 2,692*
• Intel Core i5-11260H • 8GB+512GB • NVIDIA GeForce RTX 2050
EXCLUSIVE @ POORVIKA
hp 15S FQ5185TU 15.6" EMI ₹ 2,105*
• Intel Core i3-1215U • Intel UHD Graphics • 8GB-512GB
DELL INSPIRON 3520 15.6" EMI ₹ 2,594*
• Intel Core i3-11th Gen • Intel UHD Graphics • 8GB-512GB
Lenovo LOQ GAMING 15.6" EMI ₹ 2,594*
• Intel Core i3-1215U • 8GB+512GB • Integrated Intel UHD Graphics
BUY NON GAMING LAPTOP FREE BAG + WirelessMouse + Mouse pad Worth ₹2,999
BUY GAMING LAPTOP FREE BAG + Gaming Keyboard & Mouse + Mat Worth ₹10,000
*Gift offer applicable for selected brand models only
*T&C Apply
xiaomi Smart TV 32" ₹ 14,999 ₹ 12,999*
Haier Smart TV 32" & 43" EMI ₹ 1,554*
Upto 7.5%* INSTANT CASHBACK
ZEBRONICS Zeb Yoga 2 Upto 40% Discount ₹ 999
Anker P25i Truewireless ₹ 2,499 ₹ 1,999
FIRE-BOLTT Atlas Smartwatch Upto 85% Discount ₹ 1,999
conekt Port RETINA DISPLAY Upto 70% Discount ₹ 3,699
ambrane AeroSync PB 10 10000 mAh Power Bank Upto 45% Discount ₹ 2,199
Watch Series 8 GPS 45mm SAVE ₹13,910 ₹ 48,900 Now@ ₹ 34,990
Hapi Pola Dynamite 160 Soundbar Upto 60% Discount ₹ 5,499
CP PLUS CP-E34A Security Camera Upto 55% Discount ₹ 1,999
• Anekal Town • Arekere • Attibele • Banashankari • Banaswadi • Basavanagudi • Basavanapura - KR Puram • Basaveshwara Nagar • BTM Layout 1st Stage • BTM Layout 2nd Stage • Chandapura • Chandra Layout • Channapatna
• City Market • CMH Road • Dasarahalli • Doddaballapura • Frazer Town • Garvebhavipalaya • Hebbagodi • Hongasandra • Horamavu • Hoskote • HSR layout • Jalahalli • Jaya Nagar - 9th Block • Jaya Nagar - Asha Arcade
• Jigani • JP Nagar • Kamakshipalya • Kammanahalli • Kanakapura • Kathriguppe • Kengeri • Kolar • Koramangala • KR Puram • Kumaraswamy layout • Madiwala • Mahalakshmi layout • Elements Mall • Malleswaram
• KEMP Port Mall • Mantri Square Mall • Marathahalli - Ashwanth Nagar • Mathikere • Moodalapalya • Nagarabhavi • Nelamangala • Peenya • Rajaji Nagar - 1st Block • Rajaji Nagar - 6th Block • Ramamurthy Nagar • Ramanagara
• RR Nagar • RT Nagar • Sahakara Nagar • Sanjay Nagar • Sarjapura • Sunkadakatte • Thanisandra • Thippasandra • Tiptur • Tumkur • Uttarahalli • Vidyaranyapura • Vignana Nagar • Vijaya Nagar • Yelachanahalli • Yelahanka
7.5% INSTANT DISCOUNT# SBI card
#Min. Trxn.: ₹20,000; Max. Discount: ₹2,500 per card. Valid only on EMI Trxns. Validity: 23 Dec 2023 - 28 Jan 2024. T&C Apply.
7.5% INSTANT DISCOUNT* On Credit card & Debit card EMIs
HDFC BANK *T&C Apply. #Min.Trxn: ₹15,000/-. Max discount upto ₹2,000. Offer valid from 23.12.2023 to 17.01.2024
5%* INSTANT DISCOUNT On Credit card EMIs YES BANK Bank of Baroda one card
7.5% INSTANT DISCOUNT* On Credit card EMIs IDFC FIRST Bank
SCAN QR CODE TO CHAT ONLINE
BAJAJ FINSERV IDFC FIRST Bank HDB FINANCIAL SERVICES TVS CREDIT HDFC BANK ICICI Bank kotak Pine Labs Paytm
*EMI OPTIONS AVAILABLE ON SELECTED SHOWROOM ONLY
Customer Helpline : 99406 88855
Shop online @ www.poorvika.com
POORVIKA